ಬುಧವಾರ, ಆಗಸ್ಟ್ 25, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹುಲಿ ವೇಷ
ಓಣಂ ಹಬ್ಬದ ಅಂಗವಾಗಿ ಕೇರಳದ ತ್ರಿಶ್ಯೂರ್‌ನಲ್ಲಿ ಕಲಾವಿದರೊಬ್ಬರು ಮಂಗಳವಾರ ಹುಲಿ ವೇಷ ತೊಟ್ಟು ಗಮನ ಸೆಳೆದರು



ಜನ ಹೇಳ್ತಾರೆ
''ಇಲ್ಲಿಂದ ಮುಂದೆ
ದಾರಿ ಇನ್ನೂ ಕಠಿಣ.''

ಆದರೆ ನಾನು ಹೇಳಿದೆ
''ಹೌದು, ನಾನೇನು
ಕಡಿಮೆಯಲ್ಲ.''

ಪ್ರಸ್ತುತವಿದೆ ಪ್ಲೆಟಿನಮ್ ಎವಾರಾ ಲೇಟೆಸ್ಟ್ ಕಲೆಕ್ಷನ್. ಅಪೂರ್ವ ಪ್ಲೆಟಿನಮ್‌ನಿಂದ ತಯಾರಿಸಲಾಗಿರುವ ಈ ಆಭರಣಗಳು ತನ್ನ ದಾರಿಯಲ್ಲಿ ಎದುರಾಗುವ ಎಲ್ಲಾ ಪರಿಸ್ಥಿತಿಗಳನ್ನೂ ಮೀರಿಸಿ ಮುನ್ನಡೆಯುವ ನಾರಿಗೆ ಸಮರ್ಪಿತ. ಆಕೆಯ ತಾಳ್ಮೆ ಎಲ್ಲವನ್ನೂ ಎದುರಿಸಲು ಆಕೆಗೆ ಸಹಾಯ ಮಾಡುತ್ತದೆ.

#RiseWithGrace

Pt
EVARA
PLATINUM BLESSINGS

Look for **PT950** - The assurance of 95% pure platinum, a mark of authenticity and purity.

For authentic platinum jewellery and assured buyback ask for your platinum purity assurance card. /PlatinumEvara Explore **www.ptevara.in**

Some PGI Authorised Retailers: Avenue Road: Davanam Jewellers 43438383 | Merlecha Diamonds 9845047251 | **Banashankari:** Tanishq 26691687 | **Bannerghatta:** Tanishq 45612222 | Malabar Gold & Diamonds 41489916 | **Basaveshwaranagar:** Mukesh Jewellers 23408685 | **Commercial Street:** C. Krishniah Chetty & Sons 25588731 | Davanam Jewellers 41418181 | Sri Krishna Diamonds 40301111 | **Dickenson Road:** AVR Swarna Mahal Jewellers 25540007 | Bhima Jewellers 25065075 | Jos Alukkas Jewellery 25552280 | Joyalukkas 25093916 | Kalyan Jewellers 25550533 | Malabar Gold & Diamonds 41283916 | ORRA 41130100 | Sulthan Diamonds & Gold 25596916 | Tanishq 25550907 | **HBR Layout:** Bhima Jewellers 25447711 | **Jayanagar:** AVR Swarna Mahal Jewellers 26547007 | Bhima Jewellers 41301761 | C. Krishniah Chetty & Sons 66379822 | GRT Jewellers 22450777 | Jos Alukkas Jewellery 32942120 | Josco Jewellers 41666842 | Joyalukkas 26634448 | Kalyan Jewellers 26647733 | Malabar Gold & Diamonds 41526916 | ORRA 22450916 | Prince Jewellery 42649999 | Reliance Jewels 41681808 | Sulthan Diamonds & Gold 26534916 | Tanishq 65606561 | **Kammanahalli:** GRT Jewellers 25461515 | Malabar Gold & Diamonds 25421916 | Tanishq 43078900 | **Koramangala:** Bhima Jewellers 25537762 | Malabar Gold & Diamonds 25522916 | Reliance Jewels 41244551 | Senco Gold & Diamonds 41141197 | Tanishq 45462222 | **M G Road:** Abaran 25328600 I Joyalukkas 25589916 | ORRA 41163022 | **Malleswaram:** Bhima Jewellers 49767711 | C. Krishniah Chetty Jewellers 41001869 | Davanam Jewellers 41416161 | GRT Jewellers 22921515 | Joyalukkas 23466916 | Kalyan Jewellers 23360533 | Tanishq 23465402 | **Marthahalli:** Bhima Jewellers 28546611 | GRT Jewellers 25401515 | Joyalukkas 25073800 | Kalyan Jewellers 46837079 | Malabar Gold & Diamonds 48514916 | Tanishq 43007773 | **Phoenix Market City:** Bhima Jewellers 67266618 | Joyalukkas 49626678 | Kalyan Jewellers 49626533 | Malabar Gold & Diamonds 32325916 | ORRA 67266377 | Senco Gold & Diamonds 67266340 | Tanishq 67266400 | **Rajaji Nagar:** Abaran 23598600 | Bhima Jewellers 23527712 | Jos Alukkas Jewellery 32956916 | Malabar Gold & Diamonds 49227916 | **Whitefield:** Tanishq 25018171 | **Yelahanka:** Tanishq 68137426

ವಿಮಾನ ನಿಲ್ದಾಣ ಹೋಲುವಂತೆ ವಿನ್ಯಾಸಗೊಳಿಸಿರುವ ಮೊದಲ ರೈಲು ನಿಲ್ದಾಣ

ಉದ್ಘಾಟನೆಗೆ ಕಾದಿರುವ ಬೈಯಪ್ಪನಹಳ್ಳಿ ಟರ್ಮಿನಲ್

• ವಿಜಯಕುಮಾರ್ ಎಸ್.ಕೆ.

ಸರ್ ಎಂ. ವಿಶ್ವೇಶ್ವರಯ್ಯ ನಿಲ್ದಾಣ ಎಂಬ ಫಲಕ ಹಾಕಿರುವುದು

ಪ್ರಜಾವಾಣಿ ವಿಶೇಷ

ಬೆಂಗಳೂರು: ವಿಮಾನ ನಿಲ್ದಾಣದ ಮಾದರಿಯ ಮೂಲಸೌಕರ್ಯದೊಂದಿಗೆ ಬೈಯಪ್ಪನಹಳ್ಳಿ ಬಳಿ ನಿರ್ಮಾಣವಾಗಿರುವ ಸರ್ ಎಂ. ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್ ಲೋಕಾರ್ಪಣೆಗೆ ಸಿದ್ಧವಾಗಿದೆ. ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಉದ್ಘಾಟನೆಗಾಗಿ ರೈಲ್ವೆ ಸಚಿವರಿಗಾಗಿ ಕಾದು ನಿಂತಿದೆ.

ಬೈಯಪ್ಪನಹಳ್ಳಿ ಹಳೇ ರೈಲು ನಿಲ್ದಾಣ ಮತ್ತು ಬಾಣಸವಾಡಿ ರೈಲು ನಿಲ್ದಾಣಗಳ ನಡುವೆ ದೊಡ್ಡ ಚಿಟ್ಟೆಯಾಕಾರದಲ್ಲಿ ನಿರ್ಮಾಣವಾಗಿರುವ ರೈಲು ನಿಲ್ದಾಣ ಬೆಂಗಳೂರಿನ ರೈಲ್ವೆ ಇತಿಹಾಸಕ್ಕೆ ಹೊಸ ಮೈಲಿಗಲ್ಲಾಗಿ ತಲೆ ಎತ್ತಿ ನಿಂತಿದೆ. ನೈರುತ್ಯ ರೈಲ್ವೆ ಇತಿಹಾಸದಲ್ಲಿ ಹಲವು ಪ್ರಥಮಗಳನ್ನು ದಾಖಲಿಸುತ್ತಿರುವ ಈ ಟರ್ಮಿನಲ್, ವಿಮಾನ ನಿಲ್ದಾಣವನ್ನು ಹೋಲುವಂತೆ ವಿನ್ಯಾಸಗೊಳಿಸಿದ ಮೊದಲ ರೈಲು ನಿಲ್ದಾಣ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ.

ನಿಲ್ದಾಣದ ಆವರಣ ಪ್ರವೇಶಿಸಿದ ಕೂಡಲೇ ವಿಶಾಲವಾದ ವಾಹನ ನಿಲುಗಡೆ ತಾಣ ಎದುರಾಗುತ್ತದೆ. 250 ಕಾರುಗಳು ಮತ್ತು ದ್ವಿಚಕ್ರ ವಾಹನಗಳ ನಿಲುಗಡೆಗೆ ಇಲ್ಲಿ ಅವಕಾಶ ಇದೆ. ಮುಂಭಾಗದಲ್ಲಿ ಸಣ್ಣ ಉದ್ಯಾನದ ಜೊತೆಗೆ ನೀರು ಚಿಮ್ಮುವ ಕಾರಂಜಿಯೊಂದು ನಿರ್ಮಾಣವಾಗಿದೆ. ಅದರ ಪಕ್ಕದಲ್ಲಿ 'ಐ ಲವ್ ಬೆಂಗಳೂರು' ಎಂಬ ಆಕರ್ಷಕವಾದ ಫಲಕ ಕೂಡ ಅಳವಡಿಸಲಾಗಿದೆ.

ಒಳಾಂಗಣ (ಕಾನ್ ಕೋರ್ಸ್) ಪ್ರವೇಶಿಸಿದರೆ ಮೊದಲ ಮಹಡಿಯಲ್ಲಿ ವಿಶ್ರಾಂತಿ ಕೊಠಡಿಗಳಿವೆ. ಅಲ್ಲಿಗೆ ತೆರಳಲು ಲಿಫ್ಟ್ ಮತ್ತು ಎಸ್ಕಲೇಟರ್ ವ್ಯವಸ್ಥೆ ಇದೆ. ಅಲ್ಲಿಯೇ ಕಾಫಿ, ತಿಂಡಿ ಮತ್ತು ಆಹಾರದ ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗಿದೆ. ರೈಲು ಗಾಡಿ ಎಲ್ಲಿದೆ, ಎಷ್ಟು ಗಂಟೆಗೆ ಬರಲಿದೆ ಎಂಬ ನೈಜ ಸಮಯದ ಮಾಹಿತಿ ಒದಗಿಸಲು ಡಿಜಿಟಲ್ ಫಲಕಗಳನ್ನು ಅಳವಡಿಸಲಾಗಿದೆ. ಎರಡೂ ಮಹಡಿಗಳಿಗೂ ಸಂಪೂರ್ಣ ಹವಾ ನಿಯಂತ್ರಿತ ವ್ಯವಸ್ಥೆ ಇದೆ.

ಪ್ರಯಾಣಿಕ ರೈಲುಗಳಿಗೆ 7 ಪ್ಲಾಟ್‌ಫಾರಂಗಳನ್ನು ನಿರ್ಮಿಸಲಾಗಿದೆ. ಒಂದು ಪ್ಲಾಟ್‌ಫಾರಂನಿಂದ ಇನ್ನೊಂದು ಪ್ಲಾಟ್‌ಫಾರಂ ತಲುಪಲು ಸಬ್‌ವೇ ಮತ್ತು ಪಾದಚಾರಿ ಮೇಲ್ಸೇತುವೆ ನಿರ್ಮಿಸಲಾಗಿದೆ. ಮೆಟ್ರೊ ರೈಲು ನಿಲ್ದಾಣಗಳ ಮಾದರಿಯಲ್ಲಿ ಎಲ್ಲ ಪ್ಲಾಟ್‌ಫಾರಂಗಳಿಗೂ ಲಿಫ್ಟ್ ಮತ್ತು ಎಸ್ಕಲೇಟರ್ ಸೌಲಭ್ಯ ಕಲ್ಪಿಸಲಾಗಿದೆ.

ಸುಸಜ್ಜಿತವಾಗಿ ನಿರ್ಮಾಣಗೊಂಡಿರುವ ನಿಲ್ದಾಣ ಸುತ್ತಮುತ್ತಲ ಜನರ ಪ್ರವಾಸಿ ತಾಣವಾಗಿ ಮಾರ್ಪಟ್ಟಿದೆ. 2015–16ನೇ ಸಾಲಿನಲ್ಲಿ ಈ ನಿಲ್ದಾಣಕ್ಕೆ ರೈಲ್ವೆ ಮಂಡಳಿ ಮಂಜೂರಾತಿ ನೀಡಿತ್ತು. 2017ರಿಂದ ಕಾಮಗಾರಿ ಆರಂಭವಾಗಿದ್ದು, ಬಹುತೇಕ ಪೂರ್ಣಗೊಂಡಿದೆ. ಉದ್ಘಾಟನೆಯಷ್ಟೇ ಆಗಬೇಕಿದ್ದು, ರೈಲ್ವೆ ಸಚಿವರ ದಿನಾಂಕಕ್ಕೆ ಅಧಿಕಾರಿಗಳು ಕಾದು ಕುಳಿತಿದ್ದಾರೆ.

ಬಿಜೆಪಿ ಕಾರ್ಯಕ್ರಮಕ್ಕೆ ಸದ್ಯದಲ್ಲೇ ರೈಲ್ವೆ ಸಚಿವರು ಬೆಂಗಳೂರಿಗೆ ಬರುವ ನಿರೀಕ್ಷೆ ಇದ್ದು, ಈ ಸಂದರ್ಭದಲ್ಲಿ ಬೈಯ್ಯಪ್ಪನಹಳ್ಳಿ ಟರ್ಮಿನಲ್ ಉದ್ಘಾಟನೆಯಾಗುವ ಸಾಧ್ಯತೆ ಇದೆ. ಕೋವಿಡ್ ಪೂರ್ವದಲ್ಲಿದ್ದ ಪ್ರಯಾಣಿಕರ ಒತ್ತಡ ಈಗ ಇಲ್ಲವಾಗಿದ್ದು, ವಿಳಂಬಕ್ಕೆ ಇದು ಕಾರಣ ಇರಬಹುದು ಎಂದು ರೈಲ್ವೆ ಹೋರಾಟಗಾರರು ಹೇಳುತ್ತಾರೆ.

'ಸಣ್ಣ ಪುಟ್ಟ ಕೆಲಸಗಳೂ ಅಂತಿಮ ಹಂತದಲ್ಲಿವೆ. ಉದ್ಘಾಟನೆಗೆ ರೈಲ್ವೆ ಸಚಿವರ ದಿನಾಂಕ ಇನ್ನೂ ಸಿಕ್ಕಿಲ್ಲ. ಅದಕ್ಕಾಗಿ ಕಾಯುತ್ತಿದ್ದೇವೆ' ಎಂದು ನೈರುತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಅನೀಶ್ ಹೆಗ್ಡೆ ತಿಳಿಸಿದರು.

'ಸಂಪರ್ಕ ರಸ್ತೆಯೇ ಇಲ್ಲ'

ವಿಶ್ವದರ್ಜೆಯ ರೈಲ್ವೆ ನಿಲ್ದಾಣಕ್ಕೆ ಈಗ ಸಂಪರ್ಕ ರಸ್ತೆಯದ್ದೇ ದೊಡ್ಡ ಸಮಸ್ಯೆ. ಹಳೇ ಮದ್ರಾಸ್ ರಸ್ತೆಯಿಂದ ಈ ಟರ್ಮಿನಲ್ ತಲುಪಲು ವಾಹನ ಸವಾರರು ಹರಸಾಹಸ ಪಡಬೇಕಿದೆ.

ಬಾಣಸವಾಡಿ ಮುಖ್ಯ ರಸ್ತೆ ಮತ್ತು ವಿವೇಕಾನಂದ ಮೆಟ್ರೊ ನಿಲ್ದಾಣದ ಕಡೆಯಿಂದ ಹೋಗಬಹುದಾದ ಎರಡು ರಸ್ತೆಗಳಿವೆ. ಆದರೆ, ಅವರೆಡೂ ಕಿರಿದಾದ ರಸ್ತೆಗಳು. ಬಾಣಸವಾಡಿ ಮುಖ್ಯ ರಸ್ತೆಯಿಂದ ರೈಲು ನಿಲ್ದಾಣಕ್ಕೆ ಇಳಿಯಲು ಮಾರ್ಗವೇ ಇಲ್ಲ. ಇರುವ ರಸ್ತೆಯಲ್ಲಿ ಕಾರುಗಳನ್ನು ಹೊರತುಪಡಿಸಿ ದೊಡ್ಡ ವಾಹನಗಳು ಸಂಚರಿಸಲು ಆಗುವುದೇ ಇಲ್ಲ ಎಂದು ಸ್ಥಳೀಯರು ಹೇಳುತ್ತಾರೆ.

ಟರ್ಮಿನಲ್ ಕಾಮಗಾರಿ ಆರಂಭವಾಗಿಯೇ ನಾಲ್ಕು ವರ್ಷ ಕಳೆದಿದೆ. ಈವರೆಗೆ ಅಲ್ಲಿಗೆ ರಸ್ತೆ ನಿರ್ಮಾಣ ಮಾಡುವ ಕೆಲಸ ಆರಂಭವಾಗಿಲ್ಲ. ಸಣ್ಣ ರಸ್ತೆಯಲ್ಲಿ ಅಲ್ಲಿಗೆ ತಲುಪುವುದೇ ಕಷ್ಟದ ವಿಷಯ ಎಂದು ರೈಲ್ವೆ ಹೋರಾಟಗಾರ ರಾಜಕುಮಾರ್ ದುಗಾರ್ ಹೇಳಿದರು.

ಈ ನಿಲ್ದಾಣದಿಂದಲೇ ರೈಲುಗಾಡಿಗಳ ಕಾರ್ಯಾಚರಣೆ ಆರಂಭವಾದರೆ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಲಿದೆ. ಅದಕ್ಕೆ ತಕ್ಕಂತೆ ವಾಹನಗಳು ಬಂದು ಹೋಗುವ ಅವಕಾಶ ಇಲ್ಲ ಎಂದರು.

ಸುದ್ದಿ 2 ನಿಮಿಷ

'ಒಕ್ಕೂಟ ವ್ಯವಸ್ಥೆಗೆ ಪೂರಕವಾದ ಶಿಕ್ಷಣ ನೀತಿ ಅಗತ್ಯ'

ಬೆಂಗಳೂರು: 'ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಸಂವಿಧಾನ ವಿರೋಧಿ. ಅಷ್ಟೇ ಅಲ್ಲ, ಸಾಮಾಜಿಕ ನ್ಯಾಯ, ಒಕ್ಕೂಟ ವ್ಯವಸ್ಥೆ ವಿರೋಧಿಯೂ ಆಗಿದೆ. ಶಿಕ್ಷಣವನ್ನು ಖಾಸಗೀಕರಣಗೊಳಿಸುವ ಬಿಜೆಪಿಯ ಗುಪ್ತ ಕಾರ್ಯಸೂಚಿ ಅನುಷ್ಠಾನದ ಹುನ್ನಾರವಿದು' ಎಂದು ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಗಂಭೀರ ಆರೋಪ ಮಾಡಿದ್ದಾರೆ.

'ರಾಜ್ಯ ಸರ್ಕಾರ ಈ ನೀತಿಯ ಅಧ್ಯಯನಕ್ಕೆ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ರಾಜ್ಯದ ಶಿಕ್ಷಣ ತಜ್ಞರು, ನಿವೃತ್ತ ಕುಲಪತಿಗಳು, ನಿವೃತ್ತ ಪ್ರಾಧ್ಯಾಕರನ್ನು ಒಳಗೊಂಡ ಸಮಿತಿ ರಚಿಸಬೇಕು. ಅಂತಿಮವಾಗಿ ವಿಕೇಂದ್ರೀಕರಣ ಒಕ್ಕೂಟ ವ್ಯವಸ್ಥೆಗೆ ಪೂರಕವಾದ ರಾಜ್ಯ ಶಿಕ್ಷಣ ನೀತಿ ಜಾರಿಗೊಳ್ಳಬೇಕು' ಎಂದು ಅವರು ಆಗ್ರಹಿಸಿದ್ದಾರೆ

'ಈ ನೀತಿಯನ್ನು ರೂಪಿಸಿದ ಸಮಿತಿಯಲ್ಲಿ ಸಂಘ ಪರಿವಾರದ ಪ್ರಭಾವವಿದೆ. ಹೀಗಾಗಿ, ಆರೆಸ್ಸೆಸ್ ಕಾರ್ಯಚೂಚಿಯನ್ನು ಈ ನೀತಿಯಲ್ಲಿ ಅಳವಡಿಸಲಾಗಿದೆ' ಎಂದು ದೂರಿದ ಅವರು, 'ಒಕ್ಕೂಟ ರಾಜ್ಯಗಳ ಸ್ವಾಯತ್ತತೆಗೆ ನೀತಿ ವಿರುದ್ಧವಾಗಿದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

'ರಾಜ್ಯ ಸರ್ಕಾರಗಳು ಮತ್ತು ಶಿಕ್ಷಣ ಹಕ್ಕುದಾರರೊಂದಿಗೆ ಸಮಾಲೋಚನೆ ನಡೆಸಿ, ಸಮಾನ ಶಿಕ್ಷಣ ವ್ಯವಸ್ಥೆಯ ಆಶಯಗಳಿಗೆ ಅನುಗುಣವಾಗಿ ರಾಜ್ಯಗಳಿಗೆ ಸಂವಿಧಾನದ ಆಶಯಗಳನ್ನು ಒಳಗೊಂಡ ಮಾರ್ಗಸೂಚಿಯನ್ನು ರೂಪಿಸಬೇಕು' ಎಂದೂ ಅವರು ಆಗ್ರಹಿಸಿದ್ದಾರೆ.

ವಿದ್ಯಾರ್ಥಿಗಳ ಹಾಜರಾತಿ ಹೆಚ್ಚಳ ಶಿಕ್ಷಣ ಸಚಿವ ನಾಗೇಶ್

ಬೆಂಗಳೂರು: 'ರಾಜ್ಯದಾದ್ಯಂತ 9 ಮತ್ತು 10ನೇ ತರಗತಿಯ ಆರಂಭಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಭೌತಿಕ ತರಗತಿಗಳಿಗೆ ಹಾಜರಾಗುತ್ತಿದ್ದಾರೆ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ವ್ಯಾಪ್ತಿಯ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೆ ಮಂಗಳವಾರ ಭೇಟಿ ನೀಡಿದ ಬಳಿಕ ಮಾತನಾಡಿದ ಸಚಿವರು, 'ಬೇಸಿಗೆ ರಜೆ ಬಳಿಕ ಶಾಲೆ ಆರಂಭದ ಮೊದಲ ದಿನ ಹಾಜರಾತಿ ಕಡಿಮೆಯೇ ಇರುತ್ತದೆ. ಆದರೆ, ಕೋವಿಡ್ ಸಂದರ್ಭದಲ್ಲಿ ವಿದ್ಯಾರ್ಥಿಗಳ ಹಾಜರಾತಿ ಕೆಲವು ಜಿಲ್ಲೆಗಳಲ್ಲಿ ಶೇ 76ಕ್ಕೂ ಹೆಚ್ಚಿದೆ. ಒಟ್ಟಾರೆ ಹಾಜರಾತಿ ಶೇ 41ಕ್ಕೂ ಹೆಚ್ಚಿದೆ' ಎಂದರು.

'ಆನ್‌ಲೈನ್ ತರಗತಿಗಳು ಹಲವು ಕಾರಣಗಳಿಂದ ಮಕ್ಕಳನ್ನು ತಲುಪುತ್ತಿರಲಿಲ್ಲ. ಹಲವೆಡೆ ನೆಟ್‌ವರ್ಕ್ ಸಮಸ್ಯೆ ಇತ್ತು. ಸಾಕಷ್ಟು ಮಕ್ಕಳಿಗೆ ಮನೆಯಲ್ಲಿ ಸ್ಮಾರ್ಟ್‌ಫೋನ್ ಇರಲಿಲ್ಲ. ಮತ್ತೆ ಕೆಲವೆಡೆ ಮೊಬೈಲ್ ಫೋನ್ ಮತ್ತು ನೆಟ್‌ವರ್ಕ್ ಇದ್ದರೂ ಬೇರೆ ಸಮಸ್ಯೆಗಳು ಎದುರಾಗಿದ್ದವು' ಎಂದರು.

ಸೀಟುಗಳ ಕೊರತೆ ಇಲ್ಲ: 'ಎಸ್ಸೆಸ್ಸೆಲ್ಸಿ ಉತ್ತೀರ್ಣ ಆಗಿರುವ ಎಲ್ಲರಿಗೂ ಕಾಲೇಜುಗಳಲ್ಲಿ ಪ್ರವೇಶ ಸಿಗಲಿದೆ. ಅಗತ್ಯ ಬಿದ್ದರೆ ಹೆಚ್ಚುವರಿಯಾಗಿ ತರಗತಿ ಆರಂಭಿಸಲು ಮೂಲಸೌಕರ್ಯ ಸೇರಿದಂತೆ ಅಗತ್ಯ ಸಂಪನ್ಮೂಲವನ್ನು ಮಂಜೂರು ಮಾಡಲಾಗುವುದು' ಎಂದು ಸಚಿವರು ತಿಳಿಸಿದರು.

ಅಂಚೆ ಇಲಾಖೆಯಿಂದ 'ಗುರುವಂದನಾ' ಸೇವೆ

ಬೆಂಗಳೂರು: ಕರ್ನಾಟಕ ಅಂಚೆ ಇಲಾಖೆಯು ಶಿಕ್ಷಕರ ದಿನಾಚರಣೆ ಅಂಗವಾಗಿ 'ಗುರುವಂದನಾ' ಎಂಬ ವಿಶೇಷ ಸೇವೆ ಆರಂಭಿಸಿದೆ.

ಶಿಕ್ಷಕರಿಗೆ ಕೃತಜ್ಞತೆ ಸಲ್ಲಿಸಲು ಬಯಸುವವರು ಗುರುಗಳಿಗೆ ತಾವು ರವಾನಿಸಬೇಕಿರುವ ಸಂದೇಶ ಹಾಗೂ ಕೊಡಲಿಚ್ಛಿಸುವ ಕಾಣಿಕೆಯನ್ನು ಆನ್‌ಲೈನ್‌ನಲ್ಲಿ ಆಯ್ಕೆ ಮಾಡಬೇಕು. ಆಯ್ದ ಸಂದೇಶ ಮತ್ತು ಕಿರುಕಾಣಿಕೆಯನ್ನು ಸ್ಪೀಡ್‌ಪೋಸ್ಟ್‌ನ ವಿಶೇಷ ಲಕೋಟೆಯ ಮೂಲಕ ಸಂಬಂಧಪಟ್ಟವರಿಗೆ ತಲುಪಿಸಲಾಗುತ್ತದೆ. ಇದಕ್ಕಾಗಿ ಆನ್‌ಲೈನ್ ಮೂಲಕವೇ ₹100 ಸೇವಾ ಶುಲ್ಕ ಪಾವತಿಸಬೇಕು.

https://www.karnatakapost.gov.in/Guru_Vandana ಅಥವಾ ಕರ್ನಾಟಕ ಪೋಸ್ಟಲ್ ಸರ್ಕಲ್ ಪೇಜ್‌ಗೆ ಭೇಟಿ ನೀಡಿ ಅಲ್ಲಿ ಗುರುವಂದನಾ ಎಂಬ ಲಿಂಕ್ ಕ್ಲಿಕ್ಕಿಸಿದರೆ ಕಿರುಕಾಣಿಕೆ ಹಾಗೂ ಸಂದೇಶಗಳ ವಿವರ ಲಭ್ಯವಾಗಲಿದೆ. ಈ ಸೇವೆಯು ಇದೇ 31ರವರೆಗೆ ಅಥವಾ ದಾಸ್ತಾನು ಮುಗಿಯುವವರೆಗೆ ಲಭ್ಯವಿರಲಿದೆ.

'ಸೆಪ್ಟೆಂಬರ್‌ನಲ್ಲಿ ದಿನವೂ 5ಲಕ್ಷ ಜನರಿಗೆ ಲಸಿಕೆ'

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದಲ್ಲಿ ಸೆಪ್ಟೆಂಬರ್‌ನಿಂದ ಪ್ರತಿ ದಿನ 5 ಲಕ್ಷ ಜನರಿಗೆ ಕೋವಿಡ್ ಲಸಿಕೆ ನೀಡಲು ಉದ್ದೇಶಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ರಾಜಭವನದಲ್ಲಿ ಯೋಜನೆ, ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಸುಸ್ಥಿರ ಗುರಿಗಳ ಸಹಕಾರ ಹಾಗೂ ಗೀವ್ ಇಂಡಿಯಾ ಪ್ರತಿಷ್ಠಾನದ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ ವ್ಯಾಕ್ಸಿನೇಟ್ ಇಂಡಿಯಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈಗ ಪ್ರತಿ ದಿನ 3.5 ರಿಂದ 4 ಲಕ್ಷ ಜನರಿಗೆ ಲಸಿಕೆ ನೀಡಲಾಗುತ್ತಿದೆ. ಕೇಂದ್ರ ಸರ್ಕಾರದಿಂದ 1.5 ಕೋಟಿ ಲಸಿಕೆ ಪೂರೈಕೆಯಾಗುವ ನಿರೀಕ್ಷೆ ಇದೆ ಎಂದು ಹೇಳಿದರು.

'ಬಡವರು, ದುರ್ಬಲ ವರ್ಗದವರಿಗೆ ಲಸಿಕೆ ನೀಡುವುದು ನಮ್ಮ ಸರ್ಕಾರದ ಆದ್ಯತೆ. ದಾನಿಗಳು ಮತ್ತು ಖಾಸಗಿ ಸಂಸ್ಥೆಗಳು ಸಿಎಸ್‌ಆರ್ ನಿಧಿಯ ಮೂಲಕ ಲಸಿಕೆ ನೀಡಲು ಮುಂದಾಗಬೇಕು. ಸರ್ಕಾರ ಮತ್ತು ಸಮಾಜ ಒಟ್ಟಾಗಿ ಕೋವಿಡ್ ವಿರುದ್ಧ ಹೋರಾಡಬೇಕಾಗಿದೆ' ಎಂದು ಬೊಮ್ಮಾಯಿ ಹೇಳಿದರು.

ವ್ಯಾಕ್ಸಿನೇಟ್ ಇಂಡಿಯಾಗೆ ಚಾಲನೆ ನೀಡಿದ ಉಪರಾಷ್ಟ್ರಪತಿ ವೆಂಕಯ್ಯನಾಯ್ಡು, 'ಕೋವಿಡ್ ಕಡಿಮೆ ಆಗಿದೆ ಎಂದು ಸಾರ್ವಜನಿಕರು ಮೈಮರೆಯಬಾರದು, ಕಡ್ಡಾಯವಾಗಿ ಆರು ಅಡಿ ಅಂತರ ಕಾಯ್ದುಕೊಳ್ಳಬೇಕು. ಮಾಸ್ಕ್ ಧರಿಸುವುದನ್ನು ಬಿಡಬಾರದು. ಲಸಿಕೆ ಹಾಕಿಸಿಕೊಳ್ಳುವುದು ಕಡ್ಡಾಯ. ಲಸಿಕೆಗೆ ಪರ್ಯಾಯ ಯಾವುದೂ ಇಲ್ಲ. ಜಂಕ್ ಫುಡ್ ಸೇವಿಸದೇ ಭಾರತೀಯ ಸಾಂಪ್ರದಾಯಿಕ ಆಹಾರ ಸೇವಿಸುವುದು ಉತ್ತಮ' ಎಂದು ಸಲಹೆ ನೀಡಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್, ಸಚಿವರಾದ ಡಾ.ಕೆ.ಸುಧಾಕರ, ಮುನಿರತ್ನ, ಸಂಸದ ಪಿ.ಸಿ.ಮೋಹನ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಹೆಚ್ಚು ಲಸಿಕೆ ಪೂರೈಕೆಗೆ ನಾಯ್ಡು ಶಿಫಾರಸು

'ರಾಜ್ಯಕ್ಕೆ ಹೆಚ್ಚು ಲಸಿಕೆಯ ಅಗತ್ಯವಿದ್ದು ಈ ಸಂಬಂಧ ಕೇಂದ್ರ ಆರೋಗ್ಯ ಸಚಿವರಿಗೆ ಒಂದು ಮಾತು ಹೇಳಬೇಕು' ಎಂದು ಮುಖ್ಯಮಂತ್ರಿ ಬೊಮ್ಮಾಯಿ ಅವರು ಉಪರಾಷ್ಟ್ರಪತಿ ವೆಂಕಯ್ಯನಾಯ್ಡು ಅವರಿಗೆ ಕಾರ್ಯಕ್ರಮದ ಬಳಿಕ ಮನವಿ ಮಾಡಿದರು.

ಮನವಿಗೆ ಸ್ಪಂದಿಸಿದ ವೆಂಕಯ್ಯನಾಯ್ಡು ಅವರು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವಿಯಾ ಅವರಿಗೆ ದೂರವಾಣಿ ಕರೆ ಮಾಡಿ ಕರ್ನಾಟಕಕ್ಕೆ ಹೆಚ್ಚು ಲಸಿಕೆ ಪೂರೈಕೆಗೆ ಮನವಿ ಮಾಡಿದರು. 'ಈಗ ನೀಡುತ್ತಿರುವುದಕ್ಕಿಂತ ಶೇ 20 ರಷ್ಟು ಹೆಚ್ಚುವರಿ ಲಸಿಕೆ ಪೂರೈಸುವುದಾಗಿ ಮಾಂಡವಿಯಾ ಭರವಸೆ ನೀಡಿದರು' ಎಂದು ನಾಯ್ಡು ಅವರು ಸಂಜೆ ರಾಜಭವನದಲ್ಲಿ ನಡೆದ ಚಹಾ ಕೂಟದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಅಂಕಿ-ಅಂಶಗಳು

3.79 ಕೋಟಿ — ರಾಜ್ಯದಲ್ಲಿ ಈವರೆಗೆ ನೀಡಿರುವ ಡೋಸ್‌ಗಳು

2.89 ಕೋಟಿ — ಮೊದಲ ಡೋಸ್ ಪಡೆದವರು

89.73 ಲಕ್ಷ — ಎರಡೂ ಡೋಸ್ ಪಡೆದವರು

3.36 ಲಕ್ಷ — ಮಂಗಳವಾರ ನೀಡಿದ ಡೋಸ್‌ಗಳು

2.75 ಲಕ್ಷ — ಪ್ರತಿನಿತ್ಯ ನೀಡುತ್ತಿರುವ ಸರಾಸರಿ ಡೋಸ್‌ಗಳು

437 — ಲಸಿಕೆ ನೀಡುತ್ತಿರುವ ಖಾಸಗಿ ಆಸ್ಪತ್ರೆಗಳು

4,784 — ಲಸಿಕೆ ನೀಡುತ್ತಿರುವ ಸರ್ಕಾರಿ ಆಸ್ಪತ್ರೆಗಳು

ಉಪರಾಷ್ಟ್ರಪತಿ ಎಂ.ವೆಂಕಯ್ಯನಾಯ್ಡು ಸಲಹೆ

ಸಂಸತ್ತು ಪ್ರವೇಶಕ್ಕೆ ಮೊದಲೇ ಅಲ್ಲಿ ಹೇಗೆ ನಡೆದುಕೊಳ್ಳಬೇಕು ಎಂದು ತಿಳಿದುಕೊಂಡಿರಬೇಕು. ಉತ್ತಮ ನಡವಳಿಕೆ ಪ್ರದರ್ಶಿಸುವುದಾಗಿ ಸಾರ್ವಜನಿಕರಿಗೆ ಭರವಸೆ ನೀಡಬೇಕು ಎಂದರು

'ರಾಜಕೀಯ ಪಕ್ಷಗಳೇ ಸದಸ್ಯರಿಗೆ ನೀತಿ ಸಂಹಿತೆ ರೂಪಿಸಲಿ'

ಬೆಂಗಳೂರು: ಸಂಸತ್ತಿನ ಕಲಾಪದ ವೇಳೆ ಸದಸ್ಯರು ಯಾವ ರೀತಿ ನಡೆದುಕೊಳ್ಳಬೇಕು ಎಂಬ ಬಗ್ಗೆ ನೀತಿ ಸಂಹಿತೆಯನ್ನು ರಾಜಕೀಯ ಪಕ್ಷಗಳು ರೂಪಿಸಬೇಕು ಎಂದು ಉಪರಾಷ್ಟ್ರಪತಿ ಎಂ.ವೆಂಕಯ್ಯನಾಯ್ಡು ಸಲಹೆ ನೀಡಿದರು.

ರಾಜಭವನದಲ್ಲಿ ಮಂಗಳವಾರ ಸುದ್ದಿಗಾರರಿಗೆ ಏರ್ಪಡಿಸಿದ್ದ ಚಹಾ ಕೂಟದ ಸಂದರ್ಭದಲ್ಲಿ ಅವರು ಮಾತನಾಡಿದರು.

ಈ ಕುರಿತು ರಾಜಕೀಯ ಪಕ್ಷಗಳಿಗೆ ಶಿಫಾರಸು ಮಾಡುವಿರಾ ಎಂಬ ಪ್ರಶ್ನೆಗೆ, ಇಲ್ಲ, ಇದು ನನ್ನ ಸಲಹೆ ಮಾತ್ರ ಆಗಿದ್ದು, ರಾಜಕೀಯ ಪಕ್ಷಗಳು ಈ ನಿಟ್ಟಿನಲ್ಲಿ ಚರ್ಚೆ ನಡೆಸಬಹುದು ಎಂದರು.

ಈ ಬಾರಿಯ ಮುಂಗಾರು ಅಧಿವೇಶನದಲ್ಲಿ 16 ದಿನವೂ ಕಲಾಪ ನಡೆಯಲು ಬಿಡಲಿಲ್ಲ. ಗದ್ದಲ ಎಬ್ಬಿಸಿದ್ದು ಮಾತ್ರವಲ್ಲದೇ ಸಚಿವರಿಂದ ಹೇಳಿಕೆಯ ಪ್ರತಿಯನ್ನು ಕಸಿದುಕೊಂಡು ಹರಿದು ಪೀಠಕ್ಕೆ ಎಸೆದರು. ಆಸನದ ಮೇಲೆ ಹತ್ತಿ ನರ್ತಿಸಿದರು. ಇದು ತಪ್ಪು ಎನ್ನುವುದಾದರೆ ನೂರು ಬಾರಿ ಈ ನಡವಳಿಕೆ ಪುನರಾವರ್ತಿಸಲು ಸಿದ್ಧ ಎಂಬುದಾಗಿ ಒಬ್ಬ ಸದಸ್ಯರು ಹೇಳಿದ್ದರು. ಯಾವುದೇ ವಿಷಯದ ಮೇಲೆ ಸರ್ಕಾರವನ್ನು ಟೀಕಿಸಲು, ಕಟುವಾಗಿ ವಿರೋಧ ವ್ಯಕ್ತಪಡಿಸಲು ಅವಕಾಶ ಇದೆ. ಆದರೆ, ಅದನ್ನು ಬಿಟ್ಟು ಕೆಟ್ಟದಾಗಿ ನಡೆದುಕೊಂಡಿದ್ದಾರೆ. ಎಲ್ಲ ಪಕ್ಷದವರು ಈ ರೀತಿ ಮಾಡಿದ್ದಾರೆ ಎನ್ನುವುದಿಲ್ಲ. ಕೆಲವು ಪಕ್ಷಗಳು ವಿರೋಧ ವ್ಯಕ್ತಪಡಿಸಿದ್ದರೂ ಕೆಟ್ಟ ವರ್ತನೆಗೆ ಇಳಿಯಲಿಲ್ಲ. ಈ ನಡವಳಿಕೆ ಬಗ್ಗೆ ಏನು ಮಾಡಬೇಕು ಎಂಬ ಚಿಂತನೆ ನಡೆಸಿದ್ದೇನೆ' ಎಂದರು.

'ಕೆಲವೇ ಸದಸ್ಯರ ಆರ್ಭಟಕ್ಕೆ ಹೆದರಿಲ್ಲ. ಬದಲಿಗೆ ಕಲಾಪದ ಗುಣಮಟ್ಟ ಕುಸಿತ ನೋಡಿ ವ್ಯಥೆಯಾಗಿದೆ. ಕೋವಿಡ್ ಸಂದರ್ಭದಲ್ಲಿ ಪ್ರಶ್ನೋತ್ತರ ಕಲಾಪ ಕೈಬಿಟ್ಟಾಗ ಸಂಸತ್ತಿನ ಕಗ್ಗೊಲೆ ನಡೆದಿದೆ ಎಂದವರು, ಈ ಬಾರಿ ಪ್ರಶ್ನೋತ್ತರ ನಡೆಸಲು ಬಿಡಲೇ ಇಲ್ಲ' ಎಂದು ವ್ಯಂಗ್ಯವಾಡಿದರು.

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಪ್ರತಿಪಾದನೆ

ಕಲಾಪಕ್ಕೆ ಅಡ್ಡಿ: ಕಾಯ್ದೆ ತಿದ್ದುಪಡಿ ಅಗತ್ಯ

ಬೆಂಗಳೂರು: 'ಕೆಲವೇ ಕೆಲವು ಸದಸ್ಯರ ಅನುಚಿತ ವರ್ತನೆ, ಗದ್ದಲದಿಂದ ಸಂಸತ್ತಿನ ಅಥವಾ ವಿಧಾನಮಂಡಲದ ಕಾರ್ಯ ಕಲಾಪಕ್ಕೆ ಪದೇ ಪದೇ ಅಡ್ಡಿ ಆಗುತ್ತಿದೆ. ಈ ರೀತಿ ಆಗದಂತೆ ಕಾಯ್ದೆಗೆ ಸೂಕ್ತ ತಿದ್ದುಪಡಿ ತರುವ ಅಗತ್ಯವಿದೆ' ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಪ್ರತಿಪಾದಿಸಿದರು.

ಉಪರಾಷ್ಟ್ರಪತಿ ಎಂ. ವೆಂಕಯ್ಯನಾಯ್ಡು ಅವರನ್ನು ರಾಜಭವನದಲ್ಲಿ ಮಂಗಳವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿದ ಅವರು, ಈ ಕುರಿತ ಅಭಿಪ್ರಾಯವನ್ನು ಹಂಚಿಕೊಂಡರು ಎಂದು ವಿಧಾನಸಭಾ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ರಾಜಭವನದಲ್ಲಿ ಉಪ ರಾಷ್ಟ್ರಪತಿ ಎಂ. ವೆಂಕಯ್ಯನಾಯ್ಡು ಅವರನ್ನು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಭೇಟಿ ಮಾಡಿದರು

ಇದರ ಜತೆಗೆ, ಪಕ್ಷಾಂತರ ಪಿಡುಗಿನ ನಿರ್ಮೂಲನೆಗೆ ಸಂವಿಧಾನದ ಹತ್ತನೇ ಪರಿಚ್ಛೇದಕ್ಕೆ ತಿದ್ದುಪಡಿ ತರಬೇಕಿದೆ' ಎಂದು ಅವರು ಮನವಿ ಮಾಡಿದರು.

'ಕೆಲವು ಸದಸ್ಯರ ವರ್ತನೆಯಿಂದಾಗಿ ಕಲಾಪದ ಚರ್ಚೆಯಲ್ಲಿ ಪಾಲ್ಗೊಳ್ಳಲು ಬಯಸುವ ಇತರ ಸದಸ್ಯರ ಹಕ್ಕಿಗೆ ಚ್ಯುತಿ ಆಗುತ್ತಿದೆ. ಈ ಅನುಚಿತ ವರ್ತನೆ 'ಪ್ರಜಾಪ್ರಭುತ್ವದ ದೇಗುಲ'ಗಳಾದ ಸಂಸತ್ತು ಮತ್ತು ವಿಧಾನಮಂಡಲದ ಘನತೆಗೆ ಕುಂದು ಉಂಟು ಮಾಡುತ್ತಿದೆ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

'ನಿಯಮಗಳಿಗೆ ಸೂಕ್ತ ತಿದ್ದುಪಡಿ ತರುವ ಮೂಲಕ ಇನ್ನು ಮುಂದೆ ಸದನದ ಕಾರ್ಯ ಕಲಾಪಗಳಿಗೆ ಅಡ್ಡಿಪಡಿಸದಂತೆ ತಡೆಯಬೇಕು' ಎಂದು ಪ್ರತಿಪಾದಿಸಿದ ಕಾಗೇರಿ, ರಾಜ್ಯ ವಿಧಾನಸಭೆ 'ಒಂದು ರಾಷ್ಟ್ರ, ಒಂದು ಚುನಾವಣೆ' ಹಾಗೂ ಭಾರತೀಯ ಸಂವಿಧಾನದ ಕುರಿತಂತೆ ಹಮ್ಮಿಕೊಂಡಿದ್ದ ಕಾರ್ಯಕ್ರಮಗಳ ಬಗ್ಗೆ ಉಪ ರಾಷ್ಟ್ರಪತಿಗೆ ವಿವರಿಸಿದರು.

ವೃದ್ಧ ದಂಪತಿ ಹತ್ಯೆ; ಬಾಡಿಗೆದಾರನೇ ಆರೋಪಿ

ಬೆಂಗಳೂರು: ಕುಮಾರಸ್ವಾಮಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ನಡೆದಿದ್ದ ವೃದ್ಧ ದಂಪತಿ ಹತ್ಯೆ ಪ್ರಕರಣ ಭೇದಿಸಿರುವ ಪೊಲೀಸರು, ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

'ನಾರಾಯಣಸ್ವಾಮಿ, ರಾಮಸ್ವಾಮಿ, ಆಸೀಫ್ ಹಾಗೂ ಗಂಗಾಧರ್ ಬಂಧಿತರು. ಬಿಎಂಟಿಸಿ ನಿವೃತ್ತ ನೌಕರ ಶಾಂತರಾಜು (65) ಹಾಗೂ ಅವರ ಪತ್ನಿ ಪ್ರೇಮಲತಾ (61) ಅವರನ್ನು ಆಗಸ್ಟ್ 20ರಂದು ಕೊಲೆ ಮಾಡಿ ಪರಾರಿಯಾಗಿದ್ದರು. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಹಾಗೂ ಇತರೆ ಸುಳಿವು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಅವರಿಂದ 193 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

10 ವರ್ಷ ಬಾಡಿಗೆಗಿದ್ದ ಆರೋಪಿ: 'ಕಾಶಿನಗರದಲ್ಲಿ ಶಾಂತರಾಜು ದಂಪತಿ ವಾಸವಿದ್ದರು. ತಮ್ಮ ಮಾಲೀಕತ್ವದ ಎರಡು ಮನೆಗಳನ್ನು ಬಾಡಿಗೆಗೆ ಕೊಟ್ಟಿದ್ದರು. ಆ ಪೈಕಿ ಒಂದು ಮನೆಯಲ್ಲಿ ಆರೋಪಿ ನಾರಾಯಣಪ್ಪ 10 ವರ್ಷ ಬಾಡಿಗೆಗೆ ಇದ್ದ. ಎರಡ್ಮೂರು ವರ್ಷಗಳ ಹಿಂದಷ್ಟೇ ಮನೆ ಖಾಲಿ ಮಾಡಿಕೊಂಡು ಹಿಂದೂಪುರಕ್ಕೆ ಹೋಗಿದ್ದ. ಆದರೆ, ಆಗಾಗ ಶಾಂತರಾಜು ಮನೆಗೆ ಬಂದು ಹೋಗುತ್ತಿದ್ದ. ಹಲವರ ಬಳಿ ಸಾಲ ಪಡೆದಿದ್ದ ನಾರಾಯಣಪ್ಪ, ವಾಪಸು ಕೊಟ್ಟಿರಲಿಲ್ಲ. ಸಾಲ ಕೊಟ್ಟವರು ನಿತ್ಯ ಮನೆ ಬಳಿ ಬಂದು ಗಲಾಟೆ ಮಾಡುತ್ತಿದ್ದರು. ಆ. 12ರಂದು ಶಾಂತರಾಜು ಮನೆಗೆ ಬಂದಿದ್ದ ನಾರಾಯಣಪ್ಪ, ಸಾಲ ತೀರಿಸಲು ಹಣದ ಸಹಾಯ ಮಾಡುವಂತೆ ಕೇಳಿದ್ದ. ಹಣ ನೀಡಲು ಶಾಂತರಾಜು ನಿರಾಕರಿಸಿದ್ದರು.'

'ದಂಪತಿ ಮನೆಯಲ್ಲಿ ಚಿನ್ನ ಹಾಗೂ ನಗದು ಇರುವುದು ಆರೋಪಿಗೆ ಗೊತ್ತಿತ್ತು. ಇಬ್ಬರನ್ನೂ ಕೊಂದು ಚಿನ್ನ, ನಗದು ದೋಚಲು ಸಂಚು ರೂಪಿಸಿದ್ದ. ಆ. 20ರಂದು ಶಾಂತರಾಜು ಮನೆಗೆ ಬಂದಿದ್ದ ಆರೋಪಿಗಳು, ಪುನಃ ಹಣ ಕೇಳಿದ್ದರು. ಶಾಂತರಾಜು ಹಣ ಕೊಟ್ಟಿರಲಿಲ್ಲ. ದಂಪತಿ ಮೇಲೆ ಆರೋಪಿಗಳು ದಾಳಿ ಮಾಡಿದ್ದರು. ಸ್ಕ್ರೂಡ್ರೈವರ್‌ನಿಂದ ಇರಿದು ವೈರ್‌ನಿಂದ ಕತ್ತು ಬಿಗಿದು ಕೊಂದಿದ್ದರು' ಎಂದೂ ಪೊಲೀಸ್ ಮೂಲಗಳು ಹೇಳಿವೆ.

'ನೀರಾವರಿ ಯೋಜನೆಗಳ ತ್ವರಿತ ಅನುಷ್ಠಾನಕ್ಕೆ ಆದ್ಯತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭೂಸ್ವಾಧೀನ ಪ್ರಕ್ರಿಯೆಗಳಿಗೆ ಆದ್ಯತೆ ನೀಡಿ, ನೀರಾವರಿ ಯೋಜನೆಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಬೇಕು' ಎಂದು ಇಲಾಖೆಯ ಅಧಿಕಾರಿಗಳಿಗೆ ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಸೂಚಿಸಿದರು.

ಕೃಷ್ಣಾಭಾಗ್ಯ ಜಲನಿಗಮ, ಕರ್ನಾಟಕ ನೀರಾವರಿ ನಿಗಮ, ಕಾವೇರಿ ನೀರಾವರಿ ನಿಗಮ ಮತ್ತು ವಿಶ್ವೇಶ್ವರಯ್ಯ ಜಲ ನಿಗಮಗಳ ಪ್ರಗತಿ ಪರಿಶೀಲನೆ ಮಂಗಳವಾರ ನಡೆಸಿದ ಅವರು, ಮೇಕೆದಾಟು ಯೋಜನೆಯ ಪ್ರಸ್ತುತ ಹಂತ ಹಾಗೂ ಕಾನೂನಾತ್ಮಕ ಕ್ರಮಗಳ ಕುರಿತು ಚರ್ಚಿಸಿದರು.

'ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3, ಭದ್ರಾ ಮೇಲ್ದಂಡೆ ಯೋಜನೆ, ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆ, ಮಹದಾಯಿ ಕಣಿವೆಯ ಕಳಸಾ ಮತ್ತು ಬಂಡೂರು ನಾಲಾ ತಿರುವು ಯೋಜನೆ, ನವಿಲೆ ಸಮತೋಲನಾ ಜಲಾಶಯ ನಿರ್ಮಾಣ ಯೋಜನೆಯ ಕಾಮಗಾರಿಗಳ ಪ್ರಸ್ತುತ ಹಂತ ಮತ್ತು ಆರ್ಥಿಕ ಪ್ರಗತಿಯ ಮಾಹಿತಿಯನ್ನು ಅಧಿಕಾರಿಗಳಿಂದ ಸಚಿವರು ಪಡೆದರು.

'ಭೂಸ್ವಾಧೀನ ಪ್ರಕರಣಗಳಲ್ಲಿ ಪರಿಹಾರ ನೀಡಲು ನಿಗಮಗಳಡಿ ಉದ್ದೇಶಿತ ನಿಧಿ ಸ್ಥಾಪಿಸುವ ಬಗ್ಗೆ ಪರಿಶೀಲಿಸಬೇಕು. ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಸಂಬಂಧಿತ ಅಧಿಕಾರಿ ವೃಂದದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಪ್ರಸ್ತಾವನೆ ಸಲ್ಲಿಸಬೇಕು. ಇನ್ನು ಮುಂದೆ ಏತ ನೀರಾವರಿ ಯೋಜನೆಗಳಲ್ಲಿ ಜಾಕ್‌ವೆಲ್ ಕಂ ಪಂಪ್ ಹೌಸ್‌ನ ಶೇ 50ರಷ್ಟು ಪ್ರಗತಿ ಸಾಧಿಸಿದ ಬಳಿಕ ಪೈಪ್‌ಲೈನ್ ಕಾಮಗಾರಿ ಆರಂಭಿಸಬೇಕು' ಎಂದು ಅವರು ಸೂಚಿಸಿದರು.

ಗೋವಿಂದ ಕಾರಜೋಳ

ಮೌಲ್ಯಮಾಪನಕ್ಕೆ ಸೂಚನೆ: ಕೆರೆ ತುಂಬಿಸುವ ಯೋಜನೆಗಳು ಮತ್ತು ಏತ ನೀರಾವರಿ ಯೋಜನೆಗಳ ಯಶಸ್ಸಿನ ಕುರಿತು ಯೋಜನೆಗಳ ಮೌಲ್ಯಮಾಪನ ಕೈಗೊಳ್ಳಲು ಅಧಿಕಾರಿಗಳಿಗೆ ತಿಳಿಸಿದ ಸಚಿವರು, ಈಗಾಗಲೇ ನೀರಾವರಿ ಸೌಲಭ್ಯ ಕಲ್ಪಿಸಿರುವ ಯೋಜನೆಗಳಡಿ ನೀರಾವರಿ ವಂಚಿತ ಪ್ರದೇಶಗಳನ್ನು ಗುರುತಿಸಿ ನೀರು ಪೂರೈಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಬಗ್ಗೆಯೂ ಸೂಚಿಸಿದರು.

ಎಂಜಿನಿಯರ್ ನೇಮಕಕ್ಕೆ ಪ್ರಸ್ತಾವ ಸಲ್ಲಿಸಲು ಸೂಚನೆ: ನಿಗಮಗಳ ಹಂತದಲ್ಲಿ ಯೋಜನಾವಾರು ಸೂಪರಿಂಟೆಂಡಿಂಗ್ ಎಂಜಿನಿಯರ್‌ಗಳ ವ್ಯಾಪ್ತಿಯಲ್ಲಿನ ವಿಭಾಗ, ಉಪ ವಿಭಾಗಗಳಡಿ ಖಾಲಿ ಇರುವ ಹುದ್ದೆಗಳಿಗೆ ತರಬೇತುದಾರ ಎಂಜಿನಿಯರ್‌ಗಳನ್ನು ನೇಮಿಸಿಕೊಳ್ಳಲು ಪ್ರಸ್ತಾವನೆ ಮಂಡಿಸಬೇಕು. ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಯೋಜನೆಯಡಿ ಅಂಗನವಾಡಿ ಕಟ್ಟಡ ಹಾಗೂ ವಸತಿ ನಿಲಯಗಳ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಆದ್ಯತೆ ನೀಡಬೇಕು ಎಂದೂ ಸಚಿವ ಗೋವಿಂದ ಕಾರಜೋಳ ಅವರು ಸಲಹೆ ನೀಡಿದರು.

ಮುಂಬರುವ ಅಧಿವೇಶನದಲ್ಲಿ ಮಂಡನೆ–ಸಿ.ಎಂ ಭರವಸೆ

ವಕೀಲರ ಹಿತರಕ್ಷಣೆಗೆ ಮಸೂದೆ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಕೀಲರ ಹಿತರಕ್ಷಣೆಗಾಗಿ ಮುಂಬರುವ ವಿಧಾನಮಂಡಲ ಅಧಿವೇಶನದಲ್ಲಿಯೇ ಮಸೂದೆ ಮಂಡಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಕೀಲ ವಾಹಿನಿ ಬಳಗದ 'ವಕೀಲ ವಾಹಿನಿ' ದ್ವಿಭಾಷಾ ಮಾಸ ಪತ್ರಿಕೆಯನ್ನು ಗೃಹ ಕಚೇರಿ ಕೃಷ್ಣಾದಲ್ಲಿ ಮಂಗಳವಾರ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, 'ಬೆಂಗಳೂರು ವಕೀಲರ ಸಂಘದ ಆಶಯದಂತೆ ಈ ಕಾಯ್ದೆ ತರಲಾಗುವುದು' ಎಂದು ಭರವಸೆ ನೀಡಿದರು.

'ಅಲ್ಲದೆ, ಬೆಂಗಳೂರು ವಕೀಲರ ಸಂಘ ಹೈಕೋರ್ಟ್‌ನಲ್ಲಿ ದಾಖಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಮೇಲೆ ಮುಖ್ಯ ನ್ಯಾಯಮೂರ್ತಿ ನೀಡಿರುವ ನಿರ್ದೇಶನದಂತೆ ವಕೀಲರಿಗೆ ಆರೋಗ್ಯ ವಿಮೆ ಜಾರಿಗೊಳಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ. ಶೀಘ್ರದಲ್ಲಿ ಆರೋಗ್ಯ ವಿಮೆ ಜಾರಿಗೊಳಿಸಲಾಗುವುದು' ಎಂದರು.

'ರಾಜ್ಯ ಸರ್ಕಾರ ರೂಪಿಸುವ ಕಾಯ್ದೆಗಳಲ್ಲಿರುವ ಸಣ್ಣಪುಟ್ಟ ಲೋಪಗಳಿಗೆ ತಿದ್ದುಪಡಿ ತರುವ ಅಗತ್ಯವಿದೆ. ಅದಕ್ಕೆ ನಿಮ್ಮೆಲ್ಲರ ಸಹಾಯ ಬೇಕಾಗಿದೆ' ಎಂದು ಹಿರಿಯ ವಕೀಲರಿಗೆ ಬೊಮ್ಮಾಯಿ ಹೇಳಿದರು.

'ವಕೀಲರು ಜನರ ಧ್ವನಿಯಾಗಿ ಕೆಲಸ ಮಾಡುವವರು. ನೀವು ಹೊರತರುವ 'ವಕೀಲ ವಾಹಿನಿ' ಮಾಸ ಪತ್ರಿಕೆ ಯಶಸ್ಸು ಕಾಣಲಿದೆ' ಎಂದೂ ಮುಖ್ಯಮಂತ್ರಿ ಆಶಿಸಿದರು.

ವಕೀಲ ವಾಹಿನಿ ಬಳಗದ 'ವಕೀಲ ವಾಹಿನಿ' ದ್ವಿಭಾಷಾ ಮಾಸ ಪತ್ರಿಕೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಲೋಕಾರ್ಪಣೆ ಮಾಡಿದರು. ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವಡಗಿ, ಮಾಜಿ ಅಡ್ವೊಕೇಟ್ ಜನರಲ್ ಅಶೋಕ್ ಹಾರನಹಳ್ಳಿ, ವಕೀಲ ಪರಿಷತ್ ಅಧ್ಯಕ್ಷ ಶ್ರೀನಿವಾಸ ಬಾಬು, ವಕೀಲ ಸಂಘದ ಅಧ್ಯಕ್ಷ ಎ.ಪಿ.ರಂಗನಾಥ್, ವಕೀಲರಾದ ಸಿ.ಎಚ್. ಹನುಮಂತರಾಯ, ಪತ್ರಿಕೆ ಸಂಪಾದಕ ಎಸ್.ಎನ್. ಪ್ರಶಾಂತ್ ಚಂದ್ರ, ವಕೀಲರಾದ ಎಂ.ಬಿ. ನರಗುಂದ ಇದ್ದರು.

ಸಚಿವ ಬಿ. ಶ್ರೀರಾಮುಲುಗೆ ಮನವಿ ಸಲ್ಲಿಸಿದ ಟಿ.ಎಸ್. ನಾಗಾಭರಣ

ಸಾರ್ವಜನಿಕ ಸಾರಿಗೆ: ಕನ್ನಡ ಬಳಕೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡದಲ್ಲಿ ಸಂವಹನ ಮಾಡುವ ಅನುವಾದಸೂಚಿ, ಘೋಷಣೆಗಳು ಹಾಗೂ ಕನ್ನಡಪರ ಬರಹಗಳನ್ನು ಸಾರ್ವಜನಿಕ ಸಾರಿಗೆಗಳಲ್ಲಿ ಬಳಸಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಆಗ್ರಹಿಸಿದೆ.

ಈ ಸಂಬಂಧ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಸಾರಿಗೆ ಸಚಿವ ಬಿ. ಶ್ರೀರಾಮುಲು ಅವರಿಗೆ ಮಂಗಳವಾರ ಮನವಿ ಪತ್ರವನ್ನು ಸಲ್ಲಿಸಿದರು. ಸಾರಿಗೆ ವಲಯದಲ್ಲಿ ಕನ್ನಡ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರವು ಮೂರು ದಿನಗಳ ಜಾಗೃತಿ ಅಭಿಯಾನವನ್ನು ಹಮ್ಮಿಕೊಂಡಿದೆ.

'ಮುಂಗಡ ಟಿಕೆಟ್ ಕಾಯ್ದಿರಿಸುವಿಕೆ ದೃಢೀಕರಣ, ರಶೀದಿಗಳು ಸೇರಿದಂತೆ ಇತರ ಪ್ರತಿಗಳಲ್ಲಿ ಕನ್ನಡಪರ ಹಾಗೂ ಕನ್ನಡ ಕಾಯಕ ವರ್ಷದ ಘೋಷಣೆಗಳು, ಬರಹಗಳನ್ನು ಮುದ್ರಿಸಬೇಕು. ಪ್ರಯಾಣಿಕರಿಗೆ ಕನ್ನಡದಲ್ಲಿ ಸಂವಹನ ಮಾಡುವ ಅನುವಾದ ಸೂಚಿ ಇರಬೇಕು. ಇದು ಅನ್ಯಭಾಷಿಕರಿಗೆ ಉಪಯುಕ್ತವಾಗಿರಬೇಕು. ವಾಹನಗಳಲ್ಲಿ ಕನ್ನಡ ಕಾಯಕ ವರ್ಷದ ಘೋಷ ವಾಕ್ಯಗಳಿರುವ ಫಲಕಗಳನ್ನು ಲಗತ್ತಿಸಬೇಕು' ಎಂದು ನಾಗಾಭರಣ ತಿಳಿಸಿದರು.

'ಇಲಾಖೆಗಳಲ್ಲಿನ ಜಾಲತಾಣ, ಸಾಮಾಜಿಕ ಮಾಧ್ಯಮಗಳ ಪುಟಗಳನ್ನು ಕನ್ನಡದಲ್ಲಿ ರೂಪಿಸಬೇಕು. ಸುತ್ತೋಲೆ, ಆದೇಶ, ಸೂಚನಾ ಪತ್ರಗಳು, ಅಧಿಸೂಚನೆಗಳೆಲ್ಲವೂ ಕಡ್ಡಾಯವಾಗಿ ಕನ್ನಡದಲ್ಲಿ ಇರಬೇಕು. ಟಿಕೆಟ್, ಬಸ್ ಸೇರಿದಂತೆ ಕೆಲವೊಂದು ಪದಗಳನ್ನು ಹೊರತುಪಡಿಸಿ ಉಳಿದ ಪದಗಳು ಕನ್ನಡದಲ್ಲಿಯೇ ಇರಬೇಕು' ಎಂದು ಒತ್ತಾಯಿಸಿದರು.

'ಸಾರಿಗೆ ವಲಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಮಟ್ಟದಲ್ಲಿ ಆಗಬೇಕಾದ ಕೆಲಸಗಳ ಅನುಷ್ಠಾನಕ್ಕೆ ಸರ್ವಪ್ರಯತ್ನ ಮಾಡಲಾಗುವುದು' ಎಂದು ಭರವಸೆ ನೀಡಿದ ಬಿ. ಶ್ರೀರಾಮುಲು, 'ಅಧಿಕಾರಿಗಳೊಂದಿಗಿನ ಸಭೆಯಲ್ಲಿ ಕನ್ನಡ ಅನುಷ್ಠಾನದ ವಿಷಯವನ್ನು ಪ್ರಮುಖವಾಗಿ ಚರ್ಚಿಸಲಾಗುವುದು' ಎಂದರು.

ಸಾರಿಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಕಳಸದ, ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ ಮತ್ತಿತರರು ಇದ್ದರು.

ಸಾರಿಗೆ ಇಲಾಖೆಯಲ್ಲಿ ಕನ್ನಡ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಟಿ.ಎಸ್. ನಾಗಾಭರಣ ಅವರು ಬಿ. ಶ್ರೀರಾಮುಲು ಅವರಿಗೆ ಮನವಿ ಸಲ್ಲಿಸಿದರು. ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ್ ಹಾನಗಲ್ಲ ಇದ್ದರು.

ಬುಧವಾರ, ಆಗಸ್ಟ್ 25, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 237 | ಪುಟ 18

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ

‘ಯೋಗಿಫ್ಶೈ’ ಹೆಸರಿನ ಯೋಗಮ್ಯಾಟ್, ಸಂವೇದಕಗಳನ್ನು ಬಳಸಿ, ಕೃತಕ ಬುದ್ಧಿಮತ್ತೆಯ ಸಹಾಯದಿಂದ ಯೋಗ ಕಲಿಸುತ್ತದೆ.



ಆಳ-ಅಗಲ

ರಾಷ್ಟ್ರೀಯ ಶಿಕ್ಷಣ ನೀತಿ... ನೆಲದೊಂದಿಗೆ ಬೆಸುಗೆಯೇ? ಆತುರದ ಜಾರಿಯೇ?

ಕಾಳಿಂಗ ಮೊಟ್ಟೆ ಮರಿ ಮಾಡಲು ಕೃತಕ ವಿಧಾನ 7

‘ಕೆನೆಪದರ ನಿಗದಿ: ವಾರ್ಷಿಕ ಆದಾಯವೇ ಮಾನದಂಡವಲ್ಲ’ 11

ಸೆನ್ಸೆಕ್ಸ್	ನಿಫ್ಟಿ	₹/$
55,958 ▲	16,624 ▲	74.19 ▲

ಉದ್ಧವ್ ಕೆನ್ನೆಗೆ ಬಾರಿಸುತ್ತೇನೆ ಎಂದಿದ್ದ ರಾಣೆ • 20 ವರ್ಷದಲ್ಲಿ ಸಚಿವರ ಸೆರೆ ಇದೇ ಮೊದಲು

ಕೇಂದ್ರ ಸಚಿವ ರಾಣೆಗೆ ಜಾಮೀನು

ಮುಂಬೈ (ಪಿಟಿಐ): ಕೇಂದ್ರ ಮತ್ತು ಮಹಾರಾಷ್ಟ್ರ ಸರ್ಕಾರದ ನಡುವೆ ಮತ್ತೊಂದು ಸುತ್ತಿನ ಸಂಘರ್ಷಕ್ಕೆ ಅಖಾಡ ಸಜ್ಜಾಗಿದೆ.

ನಾರಾಯಣ ರಾಣೆ

‘ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಕೆನ್ನೆಗೆ ಬಾರಿಸುತ್ತೇನೆ’ ಎಂದು ಹೇಳಿದ್ದಕ್ಕೆ ಬಂಧಿಸಲಾಗಿದ್ದ ಕೇಂದ್ರ ಸಚಿವ ನಾರಾಯಣ ರಾಣೆ ಅವರಿಗೆ ಮಂಗಳವಾರ ತಡರಾತ್ರಿ ಜಾಮೀನು ನೀಡಲಾಗಿದೆ.

ಬಂಧನ ಬಳಿಕ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ರಾಣೆ ಅವರನ್ನು ಹಾಜರು ಪಡಿಸಿದ ಪೊಲೀಸರು ಏಳು ದಿನ ತಮ್ಮ ವಶಕ್ಕೆ ನೀಡುವಂತೆ ಕೋರಿದ್ದರು. ರಾಣೆ ಪರ ವಕೀಲರು ಇದಕ್ಕೆ ವಿರೋಧ ವ್ಯಕ್ತಪಡಿಸಿದರು.

ರಾಣೆ ಅವರ ಆರೋಗ್ಯ ಸರಿ ಇಲ್ಲ. ಹೀಗಾಗಿ ಅವರಿಗೆ ಜಾಮೀನು ನೀಡಬೇಕೆಂದು ಮನವಿ ಮಾಡಿದರು. ಇದಕ್ಕೆ ಸಮ್ಮತಿಸಿದ ನ್ಯಾಯಾಧೀಶರು ಷರತ್ತಿನ ಮೇಲೆ ಜಾಮೀನು ಮಂಜೂರು ಮಾಡಿದರು. ಧ್ವನಿ ಪರೀಕ್ಷೆಗೆ ಮತ್ತು ವಿಚಾರಣೆಗೆ ಸಹಕರಿಸಬೇಕು ಎಂದು ನ್ಯಾಯಾಲಯ ರಾಣೆ ಅವರಿಗೆ ಸೂಚಿಸಿತು.

ನಾರಾಯಣ ರಾಣೆ ಅವರ ಮುಂಬೈನ ನಿವಾಸದ ಬಳಿ ಶಿವಸೇನಾ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಸಂಘರ್ಷ ತಪ್ಪಿಸಲು ಪೊಲೀಸರು ಹರಸಾಹಸಪಟ್ಟರು —ಎಎಫ್‌ಪಿ ಚಿತ್ರ

ರಾಜ್ಯದ ರತ್ನಗಿರಿ ಜಿಲ್ಲೆಯಲ್ಲಿ ಬಿಜೆಪಿಯ ಜನಾಶೀರ್ವಾದ ಯಾತ್ರೆ ನಡೆಸುತ್ತಿದ್ದ ರಾಣೆ ಅವರನ್ನು ವಶಕ್ಕೆ ಪಡೆದಿದ್ದ ಪೊಲೀಸರು, ನಂತರ ಸಂಗಮೇಶ್ವರ ಪೊಲೀಸ್ ಠಾಣೆಗೆ ಕರೆದೊಯ್ದಿದ್ದರು. 20 ವರ್ಷದಲ್ಲಿ ಕೇಂದ್ರ ಸಚಿವರೊಬ್ಬರನ್ನು ಬಂಧಿಸಿದ್ದು ಇದೇ ಮೊದಲು.

ಸೋಮವಾರ ಜನಾಶೀರ್ವಾದ ಯಾತ್ರೆಯ ಭಾಗವಾಗಿ ರಾಯಗಡ ಜಿಲ್ಲೆಯಲ್ಲಿ ಮಾತನಾಡಿದ್ದ ರಾಣೆ ಅವರು, ‘ಠಾಕ್ರೆ ಅವರು ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಷಣ ಮಾಡುವಾಗ, ದೇಶಕ್ಕೆ ಸ್ವಾತಂತ್ರ್ಯ ಬಂದು ಎಷ್ಟು ವರ್ಷ ಆಗಿದೆ ಎಂಬುದನ್ನೇ ಮರೆತು ಹೋದರು. ಪಕ್ಕದಲ್ಲಿ ಇರುವವರನ್ನು ಕೇಳಿ, ಭಾಷಣ ಮುಂದುವರಿಸಿದ್ದರು. ನಾನು ಅಲ್ಲಿ ಇದ್ದಿದ್ದರೆ, ಅವರ ಕೆನ್ನೆಗೆ ಬಾರಿಸುತ್ತಿದ್ದೆ’ ಎಂದು ಹೇಳಿದ್ದರು.

ಅವರ ಈ ಹೇಳಿಕೆಗೆ ಶಿವಸೇನಾ ತೀವ್ರ ಆಕ್ರೋಶ ವ್ಯಕ್ತಪಡಿಸಿತ್ತು.

12ನೇ ಪುಟ ನೋಡಿ

ನಾರಾಯಣ ರಾಣೆ ಅವರ ಹೇಳಿಕೆಯನ್ನು ನಾನು ಸಮರ್ಥಿಸಿಕೊಳ್ಳುವುದಿಲ್ಲ. ಹಾಗೆಯೇ ಅವರ ಹೇಳಿಕೆ ಬಗ್ಗೆ ನನಗೆ ವಿಷಾದವೂ ಇಲ್ಲ. ಈ ಬಂಧನ ಕಾನೂನು ಬಾಹಿರ

ಚಂದ್ರಕಾಂತ್ ಪಾಟೀಲ್
ಮಹಾರಾಷ್ಟ್ರ ಬಿಜೆಪಿ ಅಧ್ಯಕ್ಷ

ಜನಾಶೀರ್ವಾದ ಯಾತ್ರೆಗೆ ಬರುತ್ತಿರುವ ಸ್ಪಂದನಕ್ಕೆ ಹೆದರಿ ಶಿವಸೇನಾ ಹೀಗೆ ಮಾಡಿದೆ. ಈ ಬಂಧನವು ಸಂವಿಧಾನದ ಮೌಲ್ಯಗಳ ಉಲ್ಲಂಘನೆ

ಜೆ.ಪಿ.ನಡ್ಡಾ
ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

ಸಿಗದ ರಕ್ಷಣೆ, ಜಾಮೀನು

ತಮ್ಮ ವಿರುದ್ಧ ದಾಖಲಾಗಿರುವ ಮೂರು ಎಫ್‌ಐಆರ್‌ಗಳನ್ನು ರದ್ದುಪಡಿಸುವಂತೆ ರಾಣೆ ಅವರು ಬಾಂಬೆ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿಯನ್ನು ತಕ್ಷಣವೇ ವಿಚಾರಣೆಗೆ ಎತ್ತಿಕೊಳ್ಳಬೇಕು ಎಂದು ರಾಣೆ ಪರ ವಕೀಲರು ಹೈಕೋರ್ಟ್ ಪೀಠವನ್ನು ಒತ್ತಾಯಿಸಿದರು. ‘ತಮ್ಮನ್ನು ಬಂಧಿಸಬಾರದು ಮತ್ತು ಯಾವುದೇ ರೀತಿಯ ಕಾನೂನು ಕ್ರಮ ತೆಗೆದುಕೊಳ್ಳಬಾರದು ಎಂದು ಪೊಲೀಸರಿಗೆ ನಿರ್ದೇಶನ ನೀಡಿ’ ಎಂದು ರಾಣೆ ತಮ್ಮ ಅರ್ಜಿಯಲ್ಲಿ ಕೋರಿದ್ದರು.

ನ್ಯಾಯಮೂರ್ತಿಗಳಾದ ಎಸ್.ಎಸ್.ಶಿಂಧೆ ಮತ್ತು ಎನ್.ಜೆ.ಜಮಾದಾರ್ ಅವರಿದ್ದ ಪೀಠವು, ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಲು ನಿರಾಕರಿಸಿತ್ತು.

‘ಹೈಕೋರ್ಟ್ ರಿಜಿಸ್ಟ್ರಿಯಲ್ಲಿ ಮೊದಲು ಅರ್ಜಿ ಸಲ್ಲಿಸಿ, ತುರ್ತುವಿಚಾರಣೆಗೆ ಪಟ್ಟಿ ಮಾಡಿಸಿ. ಈ ಎಲ್ಲಾ ಪ್ರಕ್ರಿಯೆಗಳನ್ನು ಪಾಲಿಸಿ. ಆನಂತರ ವಿಚಾರಣೆ ನಡೆಸುತ್ತೇವೆ. ನೇರವಾಗಿ ಪೀಠಕ್ಕೆ ಬಂದರೆ ವಿಚಾರಣೆ ನಡೆಸಲು ಸಾಧ್ಯವಿಲ್ಲ. ರಿಜಿಸ್ಟ್ರಾರ್ ಮಾಡುವ ಕೆಲಸವನ್ನು ನಾವು ಮಾಡುವುದಿಲ್ಲ’ ಎಂದು ಪೀಠವು ಹೇಳಿದೆ.

ತಮ್ಮ ಬಂಧನದ ವಿರುದ್ಧ ನಿರೀಕ್ಷಣಾ ಜಾಮೀನು ನೀಡಿ ಎಂದು ರತ್ನಗಿರಿ ಜಿಲ್ಲಾ ನ್ಯಾಯಾಲಯಕ್ಕೂ ರಾಣೆ ಅವರು ಅರ್ಜಿ ಸಲ್ಲಿಸಿದ್ದರು. ಆದರೆ ಆ ಅರ್ಜಿಯನ್ನು ನ್ಯಾಯಾಲಯವು ತಿರಸ್ಕರಿಸಿತು.

ಗಡುವು ವಿಸ್ತರಿಸಲ್ಲ ಗುಡುಗಿದ ತಾಲಿಬಾನ್

ಕಾಬೂಲ್ (ರಾಯಿಟರ್ಸ್): ಎಲ್ಲ ವಿದೇಶಿಯರು ಇದೇ 31ರೊಳಗೆ ದೇಶ ತೊರೆಯಬೇಕು. ದೇಶ ಬಿಟ್ಟು ಹೋಗಲು ನೀಡಲಾದ 31ರ ಗಡುವನ್ನು ವಿಸ್ತರಿಸುವ ಪ್ರಶ್ನೆಯೇ ಇಲ್ಲ ಎಂದು ಅಫ್ಗಾನಿಸ್ತಾನವನ್ನು ವಶಕ್ಕೆ ಪಡೆದಿರುವ ತಾಲಿಬಾನ್ ಮಂಗಳವಾರ ಮತ್ತೆ ಗುಡುಗಿದೆ. ಜಿ-7 ದೇಶಗಳ ಮುಖಂಡರು ಸಭೆ ಸೇರಿ ಗಡುವು ವಿಸ್ತರಿಸಲು ಕೋರುವ ಚಿಂತನೆ ನಡೆಸಿದ್ದಾರೆ. ಆದರೆ, ಈ ಮನವಿಗೆ ಮನ್ನಣೆ ಸಿಗುವ ಸಾಧ್ಯತೆ ಇಲ್ಲ.

ಕಳೆದ 10 ದಿನಗಳಲ್ಲಿ ಸುಮಾರು 60 ಸಾವಿರ ಜನರನ್ನು ತೆರವು ಮಾಡಲಾಗಿದೆ. ಇನ್ನೂ ದೊಡ್ಡ ಸಂಖ್ಯೆಯ ಜನರು ಅಫ್ಗಾನಿಸ್ತಾನದಲ್ಲಿ ಉಳಿದಿದ್ದಾರೆ. ತೆರವಿನ ಗಡುವು ವಿಸ್ತರಣೆ ಆಗುವ ಸಾಧ್ಯತೆ ಸಂಪೂರ್ಣ ಮಸುಕಾಗಿದೆ. ಹಾಗಾಗಿ, ತೆರವು ಕಾರ್ಯಾಚರಣೆ ಬಿರುಸು ಪಡೆದಿದೆ.

‘ಗಡುವಿನೊಳಗೆ ಎಲ್ಲರನ್ನೂ ತೆರವು ಮಾಡುವುದಕ್ಕಾಗಿ ವಿದೇಶಿ ಪಡೆಗಳ ಪ್ರತಿಯೊಬ್ಬ ಸದಸ್ಯನೂ ಯುದ್ಧೋಪಾದಿಯಲ್ಲಿ ಕೆಲಸ ಮಾಡುತ್ತಿದ್ದಾನೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗಡುವಿನ ಬಳಿಕವೂ ಅಮೆರಿಕದ ಸೇನೆಯು ಅಫ್ಗಾನಿಸ್ತಾನದಲ್ಲಿ ಇರಲಿದೆ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಹೇಳಿದ್ದಾರೆ. ತೆರವು ಕಾರ್ಯಾಚರಣೆ ಅತ್ಯಂತ ಕ್ಲಿಷ್ಟಕರ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

‘ಅಫ್ಗಾನಿಸ್ತಾನದಲ್ಲಿ ಇರುವ ಅಮೆರಿಕನ್ನರ ಸಂಖ್ಯೆ ಅತ್ಯಂತ ಹೆಚ್ಚು. ಹಾಗಾಗಿ, ಗಡುವಿನೊಳಗೆ ಎಲ್ಲರ ತೆರವು ಸಾಧ್ಯವಿಲ್ಲ’ ಎಂದು ಅಮೆರಿಕದ ಜನಪ್ರತಿನಿಧಿ ಸಭೆಯ ಗುಪ್ತಚರ ಸಮಿತಿಯ ಅಧ್ಯಕ್ಷ ಆ್ಯಡಂ ಶಿಫ್ ಹೇಳಿದ್ದಾರೆ.

ಕಾಬೂಲ್ ವಿಮಾನ ನಿಲ್ದಾಣದಲ್ಲಿ ಜನದಟ್ಟಣೆ ಮುಂದುವರಿದಿದೆ. ದೇಶ ತೊರೆಯುವ ಧಾವಂತ ಹೆಚ್ಚಿದೆ. ಆದರೆ, ಜನರು ಭಯಪಡುವ ಅಗತ್ಯ ಇಲ್ಲ. ಎಲ್ಲರ ಸುರಕ್ಷತೆಯ ಖಾತರಿ ನೀಡಲಾಗುವುದು ಎಂದ ತಾಲಿಬಾನ್ ವಕ್ತಾರ ಝುಬೀವುಲ್ಲಾ ಹೇಳಿದ್ದಾರೆ.

ಅಫ್ಗಾನಿಸ್ತಾನದಿಂದ ತಂದ ಸಿಖ್ಖರ ಪವಿತ್ರ ಗ್ರಂಥ ಗುರು ಗ್ರಂಥ ಸಾಹಿಬ್ ಅನ್ನು ದೆಹಲಿಯ ವಿಮಾನ ನಿಲ್ದಾಣದಲ್ಲಿ ಮಂಗಳವಾರ ಸಿಖ್ ಸಮುದಾಯದವರು ಸ್ವೀಕರಿಸಿದರು —ಪಿಟಿಐ ಚಿತ್ರ

ಇನ್ನಷ್ಟು ಸುದ್ದಿಗಳು 11

ಜಿ.ಟಿ.ದೇವೇಗೌಡ ಕಾಂಗ್ರೆಸ್ ಸೇರ್ಪಡೆ ಸುಳಿವು

ಪ್ರಜಾವಾಣಿ ವಾರ್ತೆ

ಮೈಸೂರು: ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅವರು

ಕಾಂಗ್ರೆಸ್ ಸೇರುವ ಕುರಿತು ಮಂಗಳವಾರ ಸುಳಿವು ನೀಡಿದ್ದು, ಜೆಡಿಎಸ್ ಪಕ್ಷ ಕುರಿತಂತೆ ಅಸಮಾಧಾನವನ್ನು ಹೊರ ಹಾಕಿದ್ದಾರೆ.

ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಹುಣಸೂರು ಕ್ಷೇತ್ರದಿಂದ ನನ್ನ ಮಗ ಹರೀಶ್‌ಗೌಡನಿಗೆ ಟಿಕೆಟ್ ನೀಡಲಿಲ್ಲ. ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷನಾಗಿ ಆತ ಭೇಟಿ ಮಾಡಿದಾಗ ಎಚ್.ಡಿ.ಕುಮಾರಸ್ವಾಮಿ ಸರಿಯಾಗಿ ಸ್ಪಂದಿಸಲಿಲ್ಲ. ಪಾಲಿಕೆ ಚುನಾವಣೆ ಟಿಕೆಟ್ ಹಂಚಿಕೆ ಕುರಿತು ನನ್ನೊಂದಿಗೆ ಆಡಿದ ಮಾತುಗಳನ್ನು ಹೇಳಲಾರೆ. ಪ್ರತಿ ಹಂತದಲ್ಲೂ ನನಗೆ ಅವಮಾನವಾಗಿದೆ’ ಎಂದು ಅವರು ಬೇಸರ ವ್ಯಕ್ತಪಡಿಸಿದರು.

7ನೇ ಪುಟ ನೋಡಿ

ಅಂತರರಾಷ್ಟ್ರೀಯ ಡ್ರಗ್ಸ್ ಜಾಲ ಪ್ರಕರಣ

ರಾಗಿಣಿ, ಸಂಜನಾ ಡ್ರಗ್ಸ್ ಸೇವನೆ ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಡ್ರಗ್ಸ್ ಜಾಲ ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದ ನಟಿಯರಾದ ರಾಗಿಣಿ ದ್ವಿವೇದಿ, ಸಂಜನಾ ಗಲ್ರಾನಿ ಹಾಗೂ ಇತರರು ಮಾದಕ ವಸ್ತು ಸೇವನೆ ಮಾಡಿದ್ದ ಸಂಗತಿ ‘ಕೂದಲು ಮಾದರಿ’ ಪರೀಕ್ಷೆಯಿಂದ ದೃಢಪಟ್ಟಿದೆ.

ಅದರ ವರದಿ ಸಮೇತ ಹೆಚ್ಚುವರಿ ದೋಷಾರೋಪ ಪಟ್ಟಿಯನ್ನು ಸಿಸಿಬಿ ಪೊಲೀಸರು, ನ್ಯಾಯಾಲಯಕ್ಕೆ ಸೋಮವಾರ ಸಲ್ಲಿಸಿದ್ದಾರೆ.

ತಮ್ಮದೇ ಜಾಲ ರೂಪಿಸಿಕೊಂಡು ಪಾರ್ಟಿಗಳನ್ನು ಆಯೋಜಿಸುತ್ತಿದ್ದ ಆರೋಪಿಗಳು, ಡ್ರಗ್ಸ್ ಸೇವನೆ ಹಾಗೂ ಮಾರಾಟ ಮಾಡುತ್ತಿದ್ದರು. ಕೆಲ ನಟ-ನಟಿಯರು, ಉದ್ಯಮಿಗಳು, ವ್ಯಾಪಾರಿಗಳು ಹಾಗೂ ಗಣ್ಯ ವ್ಯಕ್ತಿಗಳು ಪಾರ್ಟಿಯಲ್ಲಿ ಪಾಲ್ಗೊಳ್ಳುತ್ತಿದ್ದರು. ಇಂಥ ಪಾರ್ಟಿ ಬಗ್ಗೆ ಮಾಹಿತಿ ಕಲೆಹಾಕಿದ್ದ ಸಿಸಿಬಿ ಪೊಲೀಸರು, ಚುರುಕಿನ ಕಾರ್ಯಾಚರಣೆ ನಡೆಸಿ ಡ್ರಗ್ಸ್ ಜಾಲ ಭೇದಿಸಿದ್ದರು.

ರಾಗಿಣಿ ದ್ವಿವೇದಿ

ಸಂಜನಾ

ವಿರೇನ್ ಖನ್ನಾ

ಆರೋಪಿಗಳಾದ ರಾಗಿಣಿ ದ್ವಿವೇದಿ, ಸಂಜನಾ ಗಲ್ರಾನಿ, ದೆಹಲಿಯ ವಿರೇನ್ ಖನ್ನಾ, ಮಾಜಿ ಸಚಿವ ಜೀವರಾಜ ಆಳ್ವ ಪುತ್ರ ಆದಿತ್ಯ ಆಳ್ವ, ಬಿ.ಕೆ. ರವಿಶಂಕರ್, ವಿನಯ್‌ಕುಮಾರ್, ಶ್ರೀನಿವಾಸ್ ಸುಬ್ರಮಣಿಯನ್, ರೂಪದರ್ಶಿ ನಿಯಾಜ್, ರಾಹುಲ್ ತೋನ್ಸೆ, ಲೊಮ್ ಪೆಪ್ಪರ್ ಸೇರಿದಂತೆ 16 ಮಂದಿಯನ್ನು ಪೊಲೀಸರು ಬಂಧಿಸಿದ್ದರು.

10ನೇ ಪುಟ ನೋಡಿ

ಆರಂಭದಲ್ಲಿ ಎಡವಿದ್ದ ಸಿಸಿಬಿ

ಆರೋಪಿಗಳ ಕೂದಲು ಮಾದರಿ ಸಂಗ್ರಹಿಸಲು ಮುಂದಾಗಿದ್ದ ಸಿಸಿಬಿ ಪೊಲೀಸರು, ಆರಂಭದಲ್ಲೇ ಎಡವಿದ್ದರು. ಅವೈಜ್ಞಾನಿಕವಾಗಿ ಆರೋಪಿಗಳ ಕೂದಲು ಸಂಗ್ರಹಿಸಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದರು.

ಮಾದರಿಯನ್ನು ವಾಪಸ್ ಕಳುಹಿಸಿದ್ದ ಪ್ರಯೋಗಾಲಯದ ತಜ್ಞರು, ‘ತಲೆ ಕೂದಲು ಮಾದರಿ ಕಳುಹಿಸಿರುವ ವಿಧಾನ ವೈಜ್ಞಾನಿಕವಾಗಿಲ್ಲ' ಎಂದು ಅಭಿಪ್ರಾಯಪಟ್ಟಿದ್ದರು. ತಪ್ಪು ತಿದ್ದಿಕೊಂಡ ಪೊಲೀಸರು, ಎರಡನೇ ಬಾರಿ ಆರೋಪಿಗಳ ಕೂದಲು ಮಾದರಿ ಸಂಗ್ರಹಿಸಿ ಕಳುಹಿಸಿದ್ದರು. ಈಗ ಅದೇ ವರದಿ ಪ್ರಕರಣಕ್ಕೆ ಪ್ರಮುಖ ಪುರಾವೆ ಆಗಿದೆ.

‘ಕುರ್ಚಿಯಲ್ಲಿ ಕೂರಿಸಿದ’ ಅಶೋಕ ಮತ್ತು ರಾಜೂಗೌಡ

‘ಆನಂದ’ ಇಲ್ಲದೇ ಸಿಂಗ್ ಅಧಿಕಾರ ಸ್ವೀಕಾರ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಬಲ ಖಾತೆಗಾಗಿ ಮುನಿಸಿಕೊಂಡು ಬೆಂಗಳೂರಿನತ್ತ ತಲೆ ಹಾಕದೇ ಹೊಸಪೇಟೆಯಲ್ಲೇ ಬೀಡು ಬಿಟ್ಟಿದ್ದ ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಅವರು ಮಂಗಳವಾರ ಮಧ್ಯಾಹ್ನ ‘ದಿಢೀರ್’ ಅಧಿಕಾರ ಸ್ವೀಕರಿಸಿದರು.

ಅಧಿಕಾರ ಸ್ವೀಕಾರ ಕ್ರಿಯೆಯೇ ಒಂದು ರೀತಿಯಲ್ಲಿ ಪ್ರಹಸನದಂತೆ ನಡೆಯಿತು. ಬಾಯಿ ಮಾತಿನಲ್ಲಿ ತಮಗೆ ಅಸಮಾಧಾನ ಇಲ್ಲ ಎಂದು ಹೇಳುತ್ತಲೇ ಒಲ್ಲದ ಮನಸ್ಸಿನಿಂದಲೇ ಆನಂದ್‌ಸಿಂಗ್ ಅಧಿಕಾರ ಸ್ವೀಕರಿಸಿದರು. ಪೂರ್ವ ನಿಗದಿಯಾದ ಯಾವುದೇ ‘ಕಾರ್ಯಕ್ರಮ’ಗಳಲ್ಲಿದೇ ಏಕಾಏಕಿ ಸಚಿವಗಿರಿ ಸ್ವೀಕರಿಸಿದರು.

ತಮ್ಮನ್ನು ಭೇಟಿ ಮಾಡಲು ಬಂದಿದ್ದ ಆನಂದ್‌ಸಿಂಗ್ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಯವಾಗಿಯೇ ತರಾಟೆ ತೆಗೆದುಕೊಂಡರು ಎಂದು ಮೂಲಗಳು ಹೇಳಿವೆ.

‘ನೀವು ಹಿರಿಯರು. ಕೊಟ್ಟಿರುವ ಖಾತೆಯನ್ನು ಚೆನ್ನಾಗಿ ನಿಭಾಯಿಸುವುದನ್ನು ಮೊದಲಿಗೆ ಕಲಿಯಬೇಕು. ಚೆನ್ನಾಗಿ ಕೆಲಸ ಮಾಡಿದ ಮೇಲೆ ಬೇರೆ ಖಾತೆಗಳನ್ನು ನಿಭಾಯಿಸಲು ಸಾಧ್ಯ. ಖಾತೆ ಹಂಚಿಕೆ ಆದ ಮೇಲೆ ಅಧಿಕಾರ ಸ್ವೀಕಾರ ಮಾಡದೇ ನಿಮ್ಮ ಊರಿನಲ್ಲಿ ಉಳಿದುಕೊಂಡಿರುವುದು ಸರಿಯೇ. ಮೊದಲಿಗೆ ಹೋಗಿ ಅಧಿಕಾರ ಸ್ವೀಕರಿಸಿ, ಕೆಲಸ ಆರಂಭಿಸಿ’ ಎಂದು ಬೊಮ್ಮಾಯಿ ಸೂಚಿಸಿದರು.

‘ಖಾತೆ ಹಂಚಿಕೆಯಲ್ಲಿ ನನ್ನ ಪಾತ್ರ ಏನೂ ಇಲ್ಲ. ವರಿಷ್ಠರ ತೀರ್ಮಾನದ ಪ್ರಕಾರ ಖಾತೆ ಹಂಚಿಕೆ ಆಗಿದೆ. ನಾಳೆ ದೆಹಲಿಗೆ ಹೋಗುತ್ತಿದ್ದೇನೆ. ಅಲ್ಲಿ ನಿಮ್ಮ ಭಾವನೆಯನ್ನು ಹೇಳುತ್ತೇನೆ. ಮುಂದೇನಾಗುತ್ತದೆಯೋ ನೋಡೋಣ’ ಎಂದು ಹೇಳಿದರು ಎಂದು ಮೂಲಗಳು ವಿವರಿಸಿವೆ.

ಇದರಿಂದ ಆನಂದ್‌ಸಿಂಗ್ ಸಮಾಧಾನಗೊಳ್ಳಲಿಲ್ಲ. ಆಗ ಕಂದಾಯ ಸಚಿವ ಆರ್.ಅಶೋಕ ಮತ್ತು ಶಾಸಕ ರಾಜೂಗೌಡ ಅವರು ಸಿಂಗ್ ಅವರನ್ನು ಕರೆದುಕೊಂಡು ವಿಕಾಸಸೌಧಕ್ಕೆ ಬಂದರು. ಅಧಿಕಾರ ಸ್ವೀಕಾರ ಮಾಡುವವರೆಗೂ ಜತೆಗೆ ಇದ್ದರು. ಬೇಸರದಲ್ಲಿರುವ ಸಿಂಗ್ ರಾಜೀನಾಮೆ ನೀಡಿ ಮುಜುಗರ ಉಂಟು ಮಾಡಬಹುದು ಎಂಬ ಕಾರಣಕ್ಕೇ ಇವರಿಬ್ಬರೂ ಸಿಂಗ್ ಜತೆಗೆ ಬಂದಿದ್ದರು ಎಂದು ಮೂಲಗಳು ಹೇಳಿವೆ.

ಮುಖ್ಯಮಂತ್ರಿ ಭೇಟಿಯ ಬಳಿಕ ಆನಂದ್‌ಸಿಂಗ್ ಅವರು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರನ್ನು ಭೇಟಿ ಮಾಡಿದರು. ಕಟೀಲ್ ಕೂಡಾ ಸಚಿವರಾಗಿ ಅಧಿಕಾರ ಸ್ವೀಕರಿಸುವಂತೆ ಸಲಹೆ ನೀಡಿದರು.

ನಾಟಕ ಆಡ್ತಾ ಇಲ್ಲ: ಸಿಂಗ್

‘ನನ್ನ ನಿಲುವನ್ನು ಮುಖ್ಯಮಂತ್ರಿಯವರಿಗೆ ತಿಳಿಸಲೆಂದು ಭೇಟಿ ಮಾಡಿದೆ. ನನ್ನ ಖಚಿತ ಅಭಿಪ್ರಾಯವನ್ನು ಅವರಿಗೆ ಹೇಳಿದ್ದೇನೆ. ಅವರು ಕೂಡ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ರಾಜ್ಯಾಧ್ಯಕ್ಷರನ್ನೂ ಭೇಟಿ ಮಾಡಿ ನನ್ನ ಬೇಡಿಕೆಯನ್ನು ಅವರ ಗಮನಕ್ಕೆ ತಂದಿದ್ದೇನೆ. ಇಬ್ಬರೂ ನನ್ನ ಬೇಡಿಕೆ ಪರಿಗಣಿಸುತ್ತಾರೆ ಎಂಬ ವಿಶ್ವಾಸವಿದೆ. ನಾನು ಯಾವುದೇ ನಾಟಕ ಆಡುತ್ತಿಲ್ಲ’ ಎಂದು ಆನಂದ್‌ಸಿಂಗ್ ಸುದ್ದಿಗಾರರಿಗೆ ತಿಳಿಸಿದರು. ಕಂದಾಯ ಸಚಿವ ಆರ್. ಅಶೋಕ ಮಾತನಾಡಿ, ‘ಆನಂದ್‌ಸಿಂಗ್ ಅವರು ಒಳ್ಳೆಯ ಮುಹೂರ್ತಕ್ಕೆ ಕಾಯುತ್ತಿದ್ದರು. ಈ ಹಿಂದೆ ಅವರನ್ನು ಭೇಟಿ ಮಾಡಿದಾಗ ಅವರು ತಮ್ಮ ಸಮಸ್ಯೆ ಹೇಳಿಕೊಂಡಿದ್ದರು. ಅದನ್ನು ಮುಖ್ಯಮಂತ್ರಿಯವರ ಜತೆಗೂ ಚರ್ಚಿಸಿದ್ದೇವೆ. ಮುಖ್ಯಮಂತ್ರಿಯವರು ದೆಹಲಿ ಭೇಟಿಯ ಸಂದರ್ಭದಲ್ಲಿ ವರಿಷ್ಠರ ಗಮನಕ್ಕೆ ತರುತ್ತಾರೆ. ಪಕ್ಷದಲ್ಲಿ ಯಾರಿಗೂ ಅಸಮಾಧಾನವಿಲ್ಲ’ ಎಂದು ಹೇಳಿದರು.

ಪಠ್ಯ ಪುಸ್ತಕ ವಿತರಣೆ: ಹೈಕೋರ್ಟ್ ಅತೃಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕ ಪೂರೈಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಪಠ್ಯ ಪುಸ್ತಕ ನೀಡಿದರೆ ಮಾತ್ರ ವಿದ್ಯಾರ್ಥಿಗಳ ಹಾಜರಾತಿ ಮತ್ತು ಸರ್ಕಾರ ನೀಡುತ್ತಿರುವ ಶಿಕ್ಷಣಕ್ಕೆ ಅರ್ಥ ಬರಲಿದೆ ಎಂದು ನ್ಯಾಯಮೂರ್ತಿ ಬಿ.ವಿ.ನಾಗರತ್ನ ಮತ್ತು ನ್ಯಾಯಮೂರ್ತಿ ಪಿ. ಕೃಷ್ಣಭಟ್ ಅವರಿದ್ದ ವಿಭಾಗೀಯ ಪೀಠ ಅಭಿಪ್ರಾಯಪಟ್ಟಿತು.

9ರಿಂದ 12ನೇ ತರಗತಿ ತನಕ ಭೌತಿಕ ತರಗತಿ ಆರಂಭಿಸಲಾಗಿದ್ದು, ಕ್ರಮೇಣ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದೆ. 1ರಿಂದ 8ನೇ ತರಗತಿ ವರೆಗಿನ ಶಾಲೆ ಆರಂಭಿಸುವ ವಿಷಯದಲ್ಲಿ ಆ.30ರಂದು ನಡೆಯಲಿರುವ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಸರ್ಕಾರದ ವಕೀಲರು ಮಾಹಿತಿ ಸಲ್ಲಿಸಿದರು.

ಪಠ್ಯ ಪುಸ್ತಕವನ್ನು ಹಂತ-ಹಂತವಾಗಿ ವಿತರಿಸಲಾಗುತ್ತಿದ್ದು, ಸೆ.30ರೊಳಗೆ ಎಲ್ಲರಿಗೂ ತಲುಪಿಸಲಾಗುವುದು. ಪಿಡಿಎಫ್ ರೂಪದಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ ತಾಲ್ಲೂಕು ಮಟ್ಟದ ಅಧಿಕಾರಿಗಳು ರವಾನಿಸಿದ್ದಾರೆ ಎಂದು ವಿವರಿಸಿದರು.

ಪಠ್ಯ ಪುಸ್ತಕ ವಿಷಯದಲ್ಲಿ ಸರ್ಕಾರ ಸಲ್ಲಿಸಿರುವ ಹೇಳಿಕೆ ತೃಪ್ತಿಕರವಾಗಿಲ್ಲ ಎಂದು ಅಭಿಪ್ರಾಯಪಟ್ಟ ಪೀಠ, ಇದೇ 30ರೊಳಗೆ ಸ್ಥಿತಿಗತಿ ವರದಿ ಸಲ್ಲಿಸಬೇಕು ಎಂದು ತಿಳಿಸಿತು.

ರಾಜ್ಯ ಕೋವಿಡ್

೨೦೩-೨೦೫

29,41,026 ▲	ಒಟ್ಟು ಸೋಂಕಿತರು (29,39,767 ನಿನ್ನೆಯ ವಿವರ)
19,784 ▼	ಸಕ್ರಿಯ ಪ್ರಕರಣಗಳು
28,84,032 ▲	ಗುಣಮುಖರಾದವರು
37,184 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,259	▲
ಗುಣಮುಖ	1,701	▲
ಸಾವು	29	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕಬಿನಿಯಲ್ಲಿ 24 ಸ್ನೇಹಿತರ ಜೊತೆ ತಂಗಿರುವ ಜಂಗಲ್ ಲಾಡ್ಜಸ್ ಅಧ್ಯಕ್ಷ ಅಪ್ಪಣ್ಣ- ಆರೋಪ

ಅಧ್ಯಕ್ಷರ ಜೊತೆ ಸ್ನೇಹಿತರಿಗೆ ಉಚಿತ ವಾಸ್ತವ್ಯ?

ಪ್ರಜಾವಾಣಿ ವಾರ್ತೆ

ಮೈಸೂರು: ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ (ಜೆಎಲ್‌ಆರ್) ಅಧ್ಯಕ್ಷ ಎಂ.ಅಪ್ಪಣ್ಣ ಅವರು ತಮ್ಮ ಸ್ನೇಹಿತರು, ಬೆಂಬಲಿಗರು ಹಾಗೂ ರಾಜಕಾರಣಿಗಳಿಗೆ ಸರ್ಕಾರಿ ಸ್ವಾಮ್ಯದ ಲಾಡ್ಜ್‌ಗಳಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಿ ಹಣ ಪಾವತಿಸುತ್ತಿಲ್ಲ ಎಂಬ ಆರೋಪ ಕೇಳಿಬಂದಿದೆ.

ಮಂಗಳವಾರ (ಆ.24) ಕೂಡ ಎಚ್.ಡಿ.ಕೋಟೆ ತಾಲ್ಲೂಕಿನಲ್ಲಿರುವ ಜೆಎಲ್‌ಆರ್‌ಗೆ ಸೇರಿದ ಕಬಿನಿ ರಿವರ್ ಲಾಡ್ಜ್‌ನಲ್ಲಿ 25 ಮಂದಿ ವಾಸ್ತವ್ಯ ಹೂಡಿದ್ದು, ಸಫಾರಿ ಹಾಗೂ ಇನ್ನಿತರ ಸೌಲಭ್ಯ ಪಡೆದುಕೊಂಡಿದ್ದಾರೆ. ಇಷ್ಟು ಮಂದಿಗೆ ಕೊಠಡಿ, ಸಫಾರಿ, ಆಹಾರ ಸೇರಿ ಒಂದು ದಿನಕ್ಕೆ ₹ 2 ಲಕ್ಷಕ್ಕೂ ಅಧಿಕ ಶುಲ್ಕವಾಗಬಹುದು ಎಂದು ಅಂದಾಜಿಸಲಾಗಿದೆ.

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಲಾಡ್ಜ್‌ನ ಅಧಿಕಾರಿಯೊಬ್ಬರು, ‘ಮಂಗಳವಾರ ಲಾಡ್ಜ್‌ಗೆ ಬಂದು ಸೌಲಭ್ಯ ಬಳಸಿಕೊಂಡಿದ್ದಾರೆ. ಅಧ್ಯಕ್ಷರ ಕಚೇರಿಯಿಂದಲೇ ಬುಕ್ಕಿಂಗ್ ಮಾಡಲಾಗಿದ್ದು, ಇದುವರೆಗೆ ಬಿಲ್ ಪಾವತಿಯಾಗಿಲ್ಲ’ ಎಂದರು.

ಸ್ನೇಹಿತರ ಜೊತೆ ತಂಗಿರುವ ವಿಷಯವನ್ನು ಬೆಂಗಳೂರಿನ ಜೆಎಲ್‌ಆರ್ ಮೂಲಗಳು ಖಚಿತಪಡಿಸಿವೆ.

ಹಿಂದೆಯೂ ಪಾವತಿಸಿಲ್ಲ: ‘ಪರಿಶೀಲನೆ ನೆಪದಲ್ಲಿ ಈ ಹಿಂದೆ ಕೂಡ ಬೆಂಬಲಿಗರೊಂದಿಗೆ ಭೇಟಿ ನೀಡಿ ಸಂಸ್ಥೆಯ ಹಲವು ಲಾಡ್ಜ್‌ಗಳಲ್ಲಿ ವಾಸ್ತವ್ಯ ಮಾಡಿದ್ದಾರೆ. ಆಗಲೂ ಶುಲ್ಕ ಪಾವತಿಸಿರಲಿಲ್ಲ. ಅದರಿಂದ ಸಂಸ್ಥೆಯ ಬೊಕ್ಕಸಕ್ಕೆ ನಷ್ಟವಾಗುತ್ತಿದೆ. ಈ ಪ್ರಕರಣದಲ್ಲೂ ಇದುವರೆಗೆ ಹಣ ನೀಡಿಲ್ಲ’ ಎಂದು ಸಂಸ್ಥೆಯ ಮೂಲಗಳು ಹೇಳಿವೆ.

‘ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು ಬಂದಾಗ ಕೂಡ ಬಿಲ್ ಪಾವತಿಸದೆ ಅವರ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಿಸಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಅಧ್ಯಕ್ಷರಿಗೆ ಉಚಿತ: ‘ಕಬಿನಿಯಲ್ಲಿ ಒಂದು ದಿನಕ್ಕೆ ಕನಿಷ್ಠ ಒಬ್ಬ ವ್ಯಕ್ತಿಗೆ ಊಟ, ಸಫಾರಿ ಸೇರಿ ₹ 8 ಸಾವಿರದಿಂದ 15 ಸಾವಿರದವರೆಗೆ ಶುಲ್ಕ ನಿಗದಿಯಾಗಿದೆ. ಜೆಎಲ್‌ಆರ್ ಅಧ್ಯಕ್ಷರು ಅಧಿಕೃತ ಕಾರ್ಯಕ್ರಮಗಳಿದ್ದಾಗ ಬಂದು ಉಚಿತವಾಗಿ ವಾಸ್ತವ್ಯ ಮಾಡಬಹುದು. ಅವರ ಕುಟುಂಬ, ಬೆಂಬಲಿಗರು, ರಾಜಕಾರಣಿಗಳಿಗೆ ಉಚಿತ ಅವಕಾಶ ಇಲ್ಲ’ ಎಂದು ಹೆಸರು ಹೇಳಲು ಬಯಸದ ಸಂಸ್ಥೆಯ ಅಧಿಕಾರಿಯೊಬ್ಬರು ತಿಳಿಸಿದರು.

ಹಿಂದಿನ ಅರಣ್ಯ ಸಚಿವ ಶಂಕರ್ ಅವರ ಬೆಂಬಲಿಗರು ವಾಸ್ತವ್ಯ ಮಾಡಿ ಹಣ ಪಾವತಿಸದೆ ಇದ್ದದ್ದು ತೀವ್ರ ಟೀಕೆಗೆ ಗುರಿಯಾಗಿತ್ತು.

ಜೆಎಲ್‌ಆರ್‌ನಿಂದ ರಾಜ್ಯದಲ್ಲಿ 24 ಕಡೆ ರೆಸಾರ್ಟ್ ನಡೆಸಲಾಗುತ್ತಿದೆ. ಕೋವಿಡ್ ಲಾಕ್‌ಡೌನ್ ಸಮಯದಲ್ಲಿ ವಾಸ್ತವ್ಯಕ್ಕೆ ನಿರ್ಬಂಧ ಹೇರಿದ್ದರಿಂದ ಆದಾಯಕ್ಕೆ ಹೊಡೆತ ಬಿದ್ದಿತ್ತು.

ಲಲಿತಮಹಲ್‌ನಲ್ಲೂ ಉಚಿತ ವಾಸ್ತವ್ಯ

ಸಚಿವರು, ರಾಜಕೀಯ ವ್ಯಕ್ತಿಗಳು ಮೈಸೂರಿಗೆ ಭೇಟಿ ನೀಡಿದಾಗ ಲಲಿತಮಹಲ್ ಪ್ಯಾಲೇಸ್ ಹೋಟೆಲ್‌ನಲ್ಲಿ ಉಚಿತ ವಾಸ್ತವ್ಯ, ಸಭೆಗೆ ವ್ಯವಸ್ಥೆ ಮಾಡಲಾಗುತ್ತಿದೆ ಎಂಬ ಆರೋಪವೂ ಕೇಳಿಬಂದಿದೆ.

ಈ ಕುರಿತು ಹೋಟೆಲ್‌ನ ಮ್ಯಾನೇಜರ್ ಮಂಜುನಾಥ್ ಅವರನ್ನು ಸಂಪರ್ಕಿಸಿದಾಗ, ‘ಈ ವಿಚಾರಕ್ಕೆ ನಾನು ಪ್ರತಿಕ್ರಿಯಿಸುವಂತಿಲ್ಲ’ ಎಂದಷ್ಟೇ ಹೇಳಿದರು.

ಗಣ್ಯ ವ್ಯಕ್ತಿ ಹಾಗೂ ಅವರ ಕಡೆಯವರು ಉಳಿದುಕೊಂಡಿದ್ದು, ಅದಕ್ಕೆ ಬಿಲ್ ಇದೆ. ಸಫಾರಿಯಲ್ಲಿ ಒಬ್ಬರಿಗೇ ಪ್ರತ್ಯೇಕವಾಗಿ ವಾಹನ ಕಳುಹಿಸುವುದಿಲ್ಲ. ಬಸ್ಸಿನಲ್ಲಿ ಬಂದ 25 ಮಂದಿ ನನ್ನ ಕಡೆಯವರಲ್ಲ. ಜಿಲ್ಲಾ ಉಸ್ತುವಾರಿ ಸಚಿವರು ಒಮ್ಮೆ ಲಲಿತಮಹಲ್ ಹಾಗೂ ಕಬಿನಿಯಲ್ಲಿ ತಂಗಿದ್ದರು. ಅವರ ಬಳಿ ಹಣ ಕೇಳಲು ಸಾಧ್ಯವೇ?’. ಆರೋಪ ಸತ್ಯಕ್ಕೆ ದೂರವಾಗಿದೆ. ಸ್ನೇಹಿತರನ್ನೇ ಕರೆದುಕೊಂಡು ಹೋಗಿಲ್ಲ. ಕೆಲ ಅಧಿಕಾರಿಗಳನ್ನು ಹದ್ದುಬಸ್ತಿನಲ್ಲಿಟ್ಟಿರುವುದರಿಂದ ಸುಳ್ಳು ಆರೋಪ ಮಾಡುತ್ತಿದ್ದಾರೆ

ಎಂ.ಅಪ್ಪಣ್ಣ, ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಅಧ್ಯಕ್ಷ

ಒಟ್ಟು 25 ಮಂದಿ ಮಂಗಳವಾರ ಬಂದು ಲಾಡ್ಜ್‌ನಲ್ಲಿ ವಾಸ್ತವ್ಯ ಹೂಡಿದ್ದಾರೆ

ಕಬಿನಿ ರಿವರ್ ಲಾಡ್ಜ್ ಅಧಿಕಾರಿ

ಸಿಗ್ನಲ್ ಜಂಕ್ಷನ್‌ಗಳ 25 ಮೀಟರ್ ವ್ಯಾಪ್ತಿಯಲ್ಲಿ ಹೋರ್ಡಿಂಗ್ ಸ್ಥಾಪಿಸಲು ಅವಕಾಶ ಇಲ್ಲ

ಪೊಲೀಸ್ ಚೌಕಿ: ಜಾಹೀರಾತು ನಿಯಮ ಉಲ್ಲಂಘನೆ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಡಿಜಿಟಲ್ ಹೋರ್ಡಿಂಗ್ ಒಳಗೊಂಡ ಪೊಲೀಸ್ ಚೌಕಿಗಳನ್ನು ನಗರದ ಪ್ರಮುಖ ಜಂಕ್ಷನ್‌ಗಳಲ್ಲಿ ಸ್ಥಾಪಿಸಲಾಗುತ್ತಿದ್ದು, ಇದರಿಂದಾಗಿ ಬಿಬಿಎಂಪಿಗೆ ಭಾರಿ ಪ್ರಮಾಣದಲ್ಲಿ ಜಾಹೀರಾತು ವರಮಾನ ನಷ್ಟವಾಗುತ್ತಿದೆ. ಇನ್ನೊಂದೆಡೆ, ಇವು 2018ರ ಬಿಬಿಎಂಪಿಯ ಜಾಹೀರಾತು ಉಪವಿಧಿಗಳನ್ನು ಹಾಗೂ 2020ರ ಜಾಹೀರಾತು ನಿಯಮಗಳನ್ನೂ ಉಲ್ಲಂಘಿಸುತ್ತಿವೆ. ಇಷ್ಟಾದರೂ ಪಾಲಿಕೆ ಇದಕ್ಕೂ ತನಗೂ ಸಂಬಂಧವೇ ಇಲ್ಲದಂತೆ ಕಣ್ಮುಚ್ಚಿ ಕುಳಿತಿದೆ.

ನಗರದ ಜಂಕ್ಷನ್‌ಗಳಲ್ಲಿ ಕರ್ತವ್ಯ ನಿರ್ವಹಿಸುವ ಸಂಚಾರ ಪೊಲೀಸರಿಗೆ ಅನುಕೂಲ ಕಲ್ಪಿಸಲು ಬಿಬಿಎಂಪಿ ವತಿಯಿಂದ ಒಟ್ಟು 389 ಕಡೆ ಪೊಲೀಸ್ ಚೌಕಿಗಳನ್ನು ನಿರ್ಮಿಸಲು 2018ರ ಮಾರ್ಚ್ 3ರಂದು ಟೆಂಡರ್ ಆಹ್ವಾನಿಸಲಾಗಿತ್ತು. 194 ಚೌಕಿ ಅಳವಡಿಸುವ ಪ್ಯಾಕೇಜ್ ಬಿ ಮತ್ತು 195 ಚೌಕಿಗಳನ್ನು ಅಳವಡಿಸುವ ಪ್ಯಾಕೇಜ್ ಸಿಯ ಟೆಂಡರ್‌ಗಳಲ್ಲಿ ಮೆ. ಸೈನ್‌ಪೋಸ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆ ಮಾತ್ರ ಭಾಗವಹಿಸಿತ್ತು. ಪ್ರತಿ ಪ್ಯಾಕೇಜ್‌ಗೆ ಕನಿಷ್ಠ ₹ 9.55 ಲಕ್ಷ ವಾರ್ಷಿಕ ಮೊತ್ತವನ್ನು ಪಾಲಿಕೆ ನಿಗದಿಪಡಿಸಿತ್ತು. ಈ ಸಂಸ್ಥೆಯು ಪ್ರತಿ ಪ್ಯಾಕೇಜ್‌ಗೂ ವಾರ್ಷಿಕ ₹ 10.18 ಲಕ್ಷ ಬಿಡ್ ಮೊತ್ತ ನಮೂದಿಸಿತ್ತು. ಗುತ್ತಿಗೆ ಅವಧಿ 20 ವರ್ಷ. ಬಿಡ್ ಮೊತ್ತದ ಜೊತೆ ವಾರ್ಷಿಕ ಜಾಹೀರಾತು ತೆರಿಗೆಯನ್ನೂ ಗುತ್ತಿಗೆದಾರ ಕಂಪನಿ ಪಾವತಿಸಬೇಕಿದೆ. ಬಿಬಿಎಂಪಿ ಕೌನ್ಸಿಲ್ ಸಭೆಯಲ್ಲಿ ಅಂಗೀಕಾರಗೊಂಡಿದ್ದ ಈ ಪ್ರಸ್ತಾವನೆಯನ್ನು ಬಿಬಿಎಂಪಿ ಜಾಹೀರಾತು ಬೈಲಾಗಳ ಷರತ್ತಿಗೆ ಒಳಪಟ್ಟು ಜಾರಿಗೊಳಿಸಬೇಕು ಎಂದು ಆಯುಕ್ತರು ಅನುಮೋದನೆ ನೀಡಿದ್ದರು.

ಮೂಲ ಬೆಲೆ ನಿಗದಿಯಲ್ಲೇ ನಷ್ಟ: ಗುತ್ತಿಗೆ ಪಡೆದ ಕಂಪನಿ ಸ್ಥಾಪಿಸಿರುವ ಚೌಕಿಯು ಕಿಯಾಸ್ಕ್ ಫೈಬರ್ ರಿ ಇನ್ಫೋರ್ಸ್ಡ್ ಪ್ಲಾಸ್ಟಿಕ್‌ನಿಂದ ನಿರ್ಮಿಸಿದ್ದು. ಇದರ ಬೆಲೆ ಹೆಚ್ಚೆಂದರೆ ₹ 1.60 ಲಕ್ಷ. ವಾರ್ಷಿಕ ಶೇ 18ರಷ್ಟು ಬಡ್ಡಿ ಲೆಕ್ಕ ಹಾಕಿದಾಗ ಗುತ್ತಿಗೆದಾರ ಸಂಸ್ಥೆಗೆ ಒಟ್ಟು ₹ 5.70 ಲಕ್ಷ, ಅಂದರೆ, ಪ್ರತಿ ತಿಂಗಳಿಗೆ ಬಂಡವಾಳ ಹಂಚಿಕೆ ₹ 2,800 ಆಗಲಿದೆ. ಶೇ 10ರಷ್ಟು ಓವರ್ ಹೆಡ್ ಹಾಗೂ ಶೇ 10ರಷ್ಟು ಲಾಭಾಂಶ ಲೆಕ್ಕ ಹಾಕಿದರೂ ಪ್ರತಿ ತಿಂಗಳಿಗೆ ಪ್ರತಿ ಕಿಯಾಸ್ಕ್‌ಗೆ ₹ 8204.74 ವೆಚ್ಚ ತಗಲುತ್ತದೆ. ಆದರೆ, ಈ ಕಿಯಾಸ್ಕ್‌ನಲ್ಲಿ 12 ಗಂಟೆ ಜಾಹೀರಾತು ಪ್ರದರ್ಶನಕ್ಕೆ ಸಂಸ್ಥೆಯು ₹14 ಸಾವಿರ ದರ ನಿಗದಿ ಮಾಡಿದೆ.

ಪ್ರಜಾವಾಣಿ ವಿಶೇಷ

ಆದರೆ, ಪ್ಯಾಕೇಜ್–ಸಿ ಅಡಿ ಅವಕಾಶ ಕಲ್ಪಿಸಿರುವ 194 ಪೊಲೀಸ್ ಚೌಕಿಗಳಿಂದ ಪಾಲಿಕೆಗೆ ವಾರ್ಷಿಕ ₹ 10.18 ಲಕ್ಷ, ಅಂದರೆ ಪ್ರತಿ ಚೌಕಿಯಿಂದ ತಿಂಗಳಿಗೆ ₹ 437.28 ವರಮಾನ ಮಾತ್ರ ಬಿಬಿಎಂಪಿಗೆ ಬರುತ್ತದೆ. ಇದು ನೆಲದ ಬಾಡಿಗೆಯ ಮೊತ್ತಕ್ಕೂ ಸಮವಲ್ಲ ಎನ್ನುತ್ತವೆ ಬಿಬಿಎಂಪಿ ಮೂಲಗಳು.

ಟೆಂಡರ್‌ನಲ್ಲಿ ಒಂದೇ ಸಂಸ್ಥೆ ಭಾಗವಹಿಸಿದ್ದರಿಂದ ಮರು ಟೆಂಡರ್ ಕರೆಯಬಹುದಿತ್ತು. ಆದರೆ, ಅದೇ ಸಂಸ್ಥೆಗೆ ಗುತ್ತಿಗೆ ನೀಡುವಂತಹ ತುರ್ತು ಏನಿತ್ತು ಎಂಬುದು ಕೂಡಾ ಯಕ್ಷಪ್ರಶ್ನೆ.

ಬಿಬಿಎಂಪಿ ಹೊರಾಂಗಣ ಜಾಹೀರಾತುಗಳು ಮತ್ತು ಸೈನೇಜ್‌ಗಳ ಬೈಲಾದ ಪ್ರಕಾರ ನಗರದಲ್ಲಿ ಎಲೆಕ್ಟ್ರಾನಿಕ್ಸ್ ಜಾಹೀರಾತು ಅಳವಡಿಸುವುದಕ್ಕೆ ಅವಕಾಶ ಇಲ್ಲ. 2020ರ ಬಿಬಿಎಂಪಿ ಜಾಹೀರಾತು ನಿಯಮ 18– (13) ಎ (iv) ಪ್ರಕಾರ ಪೊಲೀಸ್ ಚೌಕಿಗಳಲ್ಲಿ ಅದರ ಗಾತ್ರದ ಶೇ 25ಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಜಾಹೀರಾತು ಇರುವಂತಿಲ್ಲ. ಈ ನಿಯಮವೂ ಉಲ್ಲಂಘನೆಯಾಗುತ್ತಿದೆ.

ಅಪಾಯಕ್ಕೂ ಆಹ್ವಾನ

ಸಂಚಾರ ಸಿಗ್ನಲ್ ಮತ್ತು ಜಂಕ್ಷನ್‌ಗಳ ಬಳಿ ಎಲ್‌ಇಡಿ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿದರೆ ಅದು ವಾಹನ ಚಾಲಕರ ಹಾಗೂ ರಸ್ತೆ ದಾಟುವ ಪಾದಚಾರಿಗಳ ಗಮನ ಸೆಳೆಯುತ್ತದೆ. ಇದು ಅಪಾಯಕ್ಕೆ ಆಹ್ವಾನ ನೀಡಿದಂತೆ. ಆದರೂ ನಗರದಲ್ಲಿ ನೂರಾರು ಕಡೆ ಇಂತಹ ಹೋರ್ಡಿಂಗ್‌ಗಳನ್ನು ಅಳವಡಿಸುವ ಮೂಲಕ ವಾಹನ ಚಾಲಕರ, ಪ್ರಯಾಣಿಕರ ಹಾಗೂ ಪಾದಚಾರಿಗಳ ಜೀವವನ್ನು ಪಣಕ್ಕಿಡಲಾಗಿದೆ.

2020ರ ಜಾಹೀರಾತು ನಿಯಮಗಳ ಪ್ರಕಾರ ಹಲವಾರು ರಸ್ತೆಗಳು ಸೇರುವ ಸಂಚಾರ ದ್ವೀಪಗಳ ಹಾಗೂ ಸಿಗ್ನಲ್ ಜಂಕ್ಷನ್‌ಗಳ 25 ಮೀ ವ್ಯಾಪ್ತಿಯಲ್ಲಿ ಹೋರ್ಡಿಂಗ್ ಸ್ಥಾಪಿಸಲು ಅವಕಾಶ ಇಲ್ಲ. ಪೊಲೀಸ್ ಚೌಕಿಗಳ ಜಾಹೀರಾತು ಈ ನಿಯಮಗಳಿಗೂ ವಿರುದ್ಧ. ಹಾಗಿದ್ದರೂ ಪೊಲೀಸ್ ಚೌಕಿಗಳ ಬಳಿ ಡಿಜಿಟಲ್ ಹೋರ್ಡಿಂಗ್ ಅಳವಡಿಸುವ ಕಾರ್ಯ ಎಗ್ಗಿಲ್ಲದೇ ಸಾಗಿದೆ.

ಬಸವೇಶ್ವರ ವೃತ್ತದ ಬಳಿ ಸ್ಥಾಪಿಸಿರುವ ಪೊಲೀಸ್ ಚೌಕಿ ಮತ್ತು ಡಿಜಿಟಲ್ ಹೋರ್ಡಿಂಗ್– ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಸ್ಮಿತಾ ಹರಿಕೃಷ್ಣಗೆ ಹಳೇ ದರದಲ್ಲೇ ನಿವೇಶನ ನೀಡಲು ಸೂಚನೆ

ಬೆಂಗಳೂರು: ಕ್ರಿಕೆಟ್ ಆಟಗಾರ್ತಿ ಸ್ಮಿತಾ ಹರಿಕೃಷ್ಣ ಅವರಿಗೆ 2008ರಲ್ಲಿ ಇದ್ದ ದರದಲ್ಲೇ ನಿವೇಶನ ನೀಡಬೇಕು ಎಂಬ ಹೈಕೋರ್ಟ್ ಏಕ ಸದಸ್ಯ ಪೀಠದ ಆದೇಶ ಪ್ರಶ್ನಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ) ಸಲ್ಲಿಸಿದ್ದ ಮೇಲ್ಮನವಿಯನ್ನು ಹೈಕೋರ್ಟ್ ತಿರಸ್ಕರಿಸಿದೆ.

ಕ್ರಿಕೆಟ್ ಆಟದಲ್ಲಿ ಅವರು ದೇಶಕ್ಕೆ ನೀಡಿದ ಕೊಡುಗೆ ಪರಿಗಣಿಸಿ 2008ರಲ್ಲಿ ಸ್ಮಿತಾ ಅವರಿಗೆ ಬಿಡಿಎ ನಿವೇಶನವನ್ನು ಸರ್ಕಾರ ಮಂಜೂರು ಮಾಡಿತ್ತು. ಆದರೆ, ನಿವೇಶನ ಹಂಚಿಕೆ ಆಗಿರಲಿಲ್ಲ. ಸ್ಮಿತಾ ಅವರು ಮೂರು ಬಾರಿ ಮನವಿ ಸಲ್ಲಿಸಿ ನಿವೇಶನ ಹಂಚಿಕೆ ಮಾಡಲು ಕೋರಿದ್ದರು. ಬಳಿಕ 2020ರಲ್ಲಿ ಹಂಚಿಕೆ ಮಾಡಿದ ಬಿಡಿಎ, ₹77.22 ಲಕ್ಷ ದರ ನಿಗದಿ ಮಾಡಿತು.

ಇದನ್ನು ಪ್ರಶ್ನಿಸಿ ಅವರು ಹೈಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿ ಆಧರಿಸಿ 2008ರ ದರದಲ್ಲೇ ನಿವೇಶನ ಹಂಚಿಕೆ ಮಾಡಬೇಕು ಎಂದು ಏಕ ಸದಸ್ಯ ಪೀಠ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ದ್ವಿಸದಸ್ಯ ಪೀಠಕ್ಕೆ ಬಿಡಿಎ ಮೇಲ್ಮನವಿ ಸಲ್ಲಿಸಿತ್ತು.

ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ, 2008ರಲ್ಲೇ ಮಂಜೂರು ಮಾಡಿದರೂ, ಈ ತನಕ ಹಂಚಿಕೆ ಮಾಡಿಲ್ಲ ಏಕೆ ಎಂದು ಪ್ರಶ್ನಿಸಿತು. 'ಕಡತ ಕಾಣೆಯಾಗಿದೆ ಎಂಬ ಬಿಡಿಎ ಅಧಿಕಾರಿಗಳ ನೆಪ ಆಘಾತಕಾರಿ. ಬಿಡಿಎ ಮಾಡಿರುವ ತಪ್ಪಿಗೆ ಆಟಗಾರ್ತಿಯನ್ನು ದೂಷಿಸಲು ಆಗುವುದಿಲ್ಲ. ಏಕ ಸದಸ್ಯ ಪೀಠದ ಆದೇಶದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ' ಎಂದು ಪೀಠ ತಿಳಿಸಿತು.

ಸಚಿವೆ ಶಶಿಕಲಾ ಜೊಲ್ಲೆ ವಿರುದ್ಧ ಮಾಣಿಪ್ಪಾಡಿ ಆಕ್ರೋಶ

ಬೆಂಗಳೂರು: 'ವಕ್ಫ್ ಮತ್ತು ಹಜ್ ಸಚಿವೆ ಶಶಿಕಲಾ ಜೊಲ್ಲೆ ಅವರು ಮುಸ್ಲಿಮರ ಸರ್ವಾಂಗೀಣ ಅಭಿವೃದ್ಧಿಗೆ ಆಧಾರವಾಗಬೇಕಿದ್ದ ವಕ್ಫ್ ಆಸ್ತಿಯ ವಸ್ತುನಿಷ್ಠ ವಿವರಗಳನ್ನು ತಿರುಚಿ, ವಿರೋಧಾಬಾಸದ ಹೇಳಿಕೆ ನೀಡುತ್ತಿರುವುದು ಸರಿಯಲ್ಲ. ಆ ಮೂಲಕ ಅವರು ಪಕ್ಷದ ಘನತೆಗೆ ಚ್ಯುತಿ ತರುತ್ತಿದ್ದಾರೆ. ಅವರನ್ನು ಈ ಖಾತೆಯ ಸಚಿವೆಯನ್ನಾಗಿ ನೇಮಿಸಿರುವುದು ದೊಡ್ಡ ದುರಂತ' ಎಂದು ಬಿಜೆಪಿ ಸಹ ವಕ್ತಾರ ಅನ್ವರ್ ಮಾಣಿಪ್ಪಾಡಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿರುವ ಅವರು, 'ತಾನು ಅನ್ವರ್ ಮಾಣಿಪ್ಪಾಡಿ ವರದಿಯನ್ನು ಓದಿಲ್ಲ. ಅದನ್ನು ನೋಡಿಯೂ ಇಲ್ಲ. ಆ ವರದಿಯ ಕುರಿತು ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ ಎಂದು ಶಶಿಕಲಾ, ಮಾಧ್ಯಮಗಳ ಎದುರು ತಪ್ಪು ಮಾಹಿತಿಗಳನ್ನು ನೀಡುತ್ತಿರುವುದು ಸರಿಯಲ್ಲ' ಎಂದಿದ್ದಾರೆ.

'ವಕ್ಫ್‌ನ ಒಟ್ಟು ಆಸ್ತಿ 54 ಸಾವಿರ ಎಕರೆ. ಈ ಪೈಕಿ ₹2.30 ಲಕ್ಷ ಕೋಟಿ ಮೌಲ್ಯದ 29 ಸಾವಿರ ಎಕರೆ ಜಮೀನು ಕಬಳಿಕೆಯಾಗಿದೆ. ಆದರೆ, ಶಶಿಕಲಾ ಅವರು ವಕ್ಫ್ ಆಸ್ತಿ ಕೇವಲ 32 ಸಾವಿರ ಎಕರೆ ಎಂದು ತಿಳಿಸಿದ್ದಾರೆ. ಈ ಪೈಕಿ 8,400 ಎಕರೆ ಮಾತ್ರ ಕಬಳಿಕೆಯಾಗಿದೆ ಎಂದು ಹೇಳಿದ್ದಾರೆ. ಇದು ಸಂಪೂರ್ಣ ತಪ್ಪು ಮಾಹಿತಿ. ವಕ್ಫ್‌ನ ನಿಜವಾದ ಆಸ್ತಿ ಎಷ್ಟು ಎಂಬುದು ಸಚಿವೆಗೂ ಗೊತ್ತಿದೆ. ಅವರು ಉದ್ದೇಶಪೂರ್ವಕವಾಗಿಯೇ ತಪ್ಪು ಮಾಹಿತಿ ನೀಡುತ್ತಿದ್ದಾರೆ. ಆ ಮೂಲಕ ಮುಸ್ಲಿಮರಿಗೆ ಅನ್ಯಾಯವೆಸಗುತ್ತಿದ್ದಾರೆ' ಎಂದು ಕಿಡಿಕಾರಿದ್ದಾರೆ.

'ಕೋವಿಡ್ ಮೂರನೇ ಅಲೆ ನಿರೀಕ್ಷೆ ಸದ್ಯಕ್ಕೆ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೂರನೇ ಅಲೆ ಬಂದರೆ, ಅದು ಕೊರೋನಾ ವೈರಾಣುವಿನ ಹೊಸ ರೂಪಾಂತರ ತಳಿಯಿಂದ ಎಂದು ತಜ್ಞರು ತಿಳಿಸಿದ್ದಾರೆ. ಉದಾಹರಣೆಗೆ ಬೆಂಗಳೂರಿನಲ್ಲಿ ಡೆಲ್ಟಾ ಪ್ಲಸ್ ತಳಿಯಿಂದ ಸೋಂಕು ಹರಡುವಿಕೆ ಹೆಚ್ಚಾದರೆ ಅದು ಮೂರನೇ ಅಲೆ ಎಂದರ್ಥ. ಸದ್ಯಕ್ಕೆ ಕೊರೋನಾ ಮೂರನೇ ಅಲೆಯ ನಿರೀಕ್ಷೆ ಇಲ್ಲ' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಿ. ರಂದೀಪ್ ಸ್ಪಷ್ಟಪಡಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಎಲ್ಲ ವಲಯಗಳಲ್ಲಿ ಕೋವಿಡ್ ಪರೀಕ್ಷೆಗೆ ಬಂದ ಶೇ 10ರಷ್ಟು ಮಾದರಿಗಳನ್ನು ವೈರಾಣುವಿನ ರೂಪಾಂತರಿ ತಳಿ ಪತ್ತೆ ಹಚ್ಚುವ ಸಲುವಾಗಿ ಜೀನೋಮ್ ಸೀಕ್ವೆನ್ಸಿಂಗ್‌ಗೆ ಒಳಪಡಿಸುತ್ತಿದ್ದೇವೆ. ಈ ವೇಳೆ ಶೇ 75ರಷ್ಟು ವೈರಾಣುವಿನ ಡೆಲ್ಟಾ ರೂಪಾಂತರಿ ಕಂಡುಬಂದಿದೆ. ಡೆಲ್ಟಾ ಪ್ಲಸ್ ರೂಪಾಂತರಿ ಮೂರು ಪ್ರಕರಣದಲ್ಲಿ ಮಾತ್ರ ಲಭಿಸಿದೆ. ಇದರ ಸೋಂಕು ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದರೆ ಮೂರನೇ ಅಲೆ ಕಾಣಿಸಿಕೊಂಡಿದೆ ಎನ್ನಬಹುದು. ಸದ್ಯಕ್ಕೆ ಮೂರನೇ ಅಲೆ ಶುರುವಾಗಿದೆ ಎನ್ನಲು ಯಾವುದೇ ಆಧಾರವಿಲ್ಲ' ಎಂದು ವಿವರಿಸಿದರು.

'ಕೋವಿಡ್ ಮೂರನೇ ಅಲೆ ಕಾಣಿಸಿಕೊಳ್ಳುವ ಸಮಯದ ಬಗ್ಗೆ ಖಚಿತತೆ ಇಲ್ಲ. ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ಕಂಡುಬರಬಹುದು ಅಥವಾ ಸೆಪ್ಟೆಂಬರ್ ಅಂತ್ಯದಲ್ಲೂ ಕಾಣಿಸಿಕೊಳ್ಳಬಹುದು. ನಾವು ಅದರ ಬದಲು ಸನ್ನದ್ಧತೆಗೆ ಗಮನ ಕೇಂದ್ರೀಕರಿಸಿದ್ದೇವೆ. ಆಸ್ಪತ್ರೆಗಳಲ್ಲಿ ಮಕ್ಕಳ ಚಿಕಿತ್ಸೆಗೆ ಎಷ್ಟು ಹಾಸಿಗೆ ಲಭ್ಯವಿದೆ, ಸಾಮಾನ್ಯ ಹಾಸಿಗೆಗಳು ಎಷ್ಟಿವೆ, ಆಮ್ಲಜನಕ ಪೂರೈಕೆ ವ್ಯವಸ್ಥೆ ಹೊಂದಿರುವ ಹಾಸಿಗೆಗಳು ಎಷ್ಟಿವೆ, ನಮ್ಮದೇ ಆದ ಹೊಸ ಸೌಕರ್ಯಗಳಲ್ಲಿ ಹಾಸಿಗೆಗಳು ಹಾಗೂ ಕೋವಿಡ್ ಆರೈಕೆ ಕೇಂದ್ರಗಳು ಸನ್ನದ್ಧವಾಗಿದೆಯೇ ಎಂಬುದನ್ನು ಪರಿಶೀಲಿಸುತ್ತಿದ್ದೇವೆ' ಎಂದರು.

'ಚಿಕಿತ್ಸೆಗೆ 700 ಐಸಿಯು ಲಭ್ಯ'

'ಬಿಬಿಎಂಪಿಯ ಜೆಜೆಆರ್ ಆಸ್ಪತ್ರೆ, ಗೋವಿಂದರಾಜ ನಗರದ ಸಂಗೊಳ್ಳಿ ರಾಯಣ್ಣ ಆಸ್ಪತ್ರೆಗಳಲ್ಲಿ ಮಕ್ಕಳ ಚಿಕಿತ್ಸೆಗೆ ಐಸಿಯು ವ್ಯವಸ್ಥೆ ಕಲ್ಪಿಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 700 ಐಸಿಯು ಲಭ್ಯವಿದೆ. ಆರಂಭಿಕ ಹಂತದಲ್ಲೇ ಚಿಕಿತ್ಸೆ ಕೊಡಿಸಿದರೆ ಐಸಿಯುವಿನ ಅಗತ್ಯವೇ ಬೀಳುವುದಿಲ್ಲ' ಎಂದು ರಂದೀಪ್ ಹೇಳಿದರು.

'ಎರಡನೇ ಅಲೆಯಲ್ಲಿ ಕೆಲವರು ಎಂಟು– ಒಂಬತ್ತು ದಿನಗಳ ಬಳಿಕ ಆರೋಗ್ಯ ಬಿಗಡಾಯಿಸಿ ನೇರವಾಗಿ ಆಸ್ಪತ್ರೆಗೆ ಬಂದರು. ಅವರ ಚಿಕಿತ್ಸೆಗೆ ವೆಂಟಿಲೇಟರ್‌ಗಳನ್ನು ಏಕಾಏಕಿ ಸಜ್ಜುಗೊಳಿಸಲು ಸಾಧ್ಯವಾಗದೇ ಸಾವಿನ ಸಂಖ್ಯೆ ಹೆಚ್ಚಾಯಿತು. ಸೋಂಕಿತರು ತಡವಾಗಿ ಅಥವಾ ಪರಿಸ್ಥಿತಿ ಕೈ ಮೀರಿದ ಹಂತದಲ್ಲಿ ಆಸ್ಪತ್ರೆಗೆ ದಾಖಲಾಗುವುದನ್ನು ತಪ್ಪಿಸಲು ಕ್ರಮ ಕೈಗೊಂಡಿದ್ದೇವೆ. ಈಗ ಹೆಚ್ಚಿನವರು ಕೋವಿಡ್ ಲಸಿಕೆ ಪಡೆದಿದ್ದಾರೆ. ಸೋಂಕಿತರಿಗೆ ಚಿಕಿತ್ಸೆಯ ಅಗತ್ಯತೆ ನಿರ್ಧರಿಸಲು ಭೌತಿಕವಾಗಿ ವೈದ್ಯಕೀಯ ಪರೀಕ್ಷೆ ನಡೆಸಲಾಗುತ್ತಿದೆ. ವೈದ್ಯರು ಸೋಂಕಿತರು ಇರುವಲ್ಲಿಗೇ ತೆರಳಿ, ಅವರು ಮನೆ ಚಿಕಿತ್ಸೆಗೆ ಅರ್ಹರೇ, ಅವರಿಗೆ ಇತರ ರೋಗವಿದೆಯೇ ಎಂಬುದನ್ನು ಪರಿಶೀಲಿಸುತ್ತಾರೆ. ಹಾಗಾಗಿ ಮೂರನೇ ಅಲೆಯು ಎರಡನೇ ಅಲೆಯಷ್ಟು ತೀವ್ರವಾಗಿ ಇರಲಿಕ್ಕಿಲ್ಲ' ಎಂದರು.

ಕೋವಿಡ್ ಎರಡನೇ ಅಲೆಯಲ್ಲಿ ದಿನದಲ್ಲಿ ಗರಿಷ್ಠ 23 ಸಾವಿರ ಪ್ರಕರಣಗಳು ಕಾಣಿಸಿಕೊಂಡಿದ್ದವು. ಈಗಲೂ ಅಷ್ಟೇ ಪ್ರಕರಣಗಳು ಕಂಡುಬಂದರೂ ಎದುರಿಸುವಷ್ಟು ಸನ್ನದ್ಧತೆ ಮಾಡಿಕೊಂಡಿದ್ದೇವೆ.

ಡಿ.ರಂದೀಪ್, ವಿಶೇಷ ಆಯುಕ್ತ (ಆರೋಗ್ಯ), ಬಿಬಿಎಂಪಿ

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,35,601 ▲ ಒಟ್ಟು ಸೋಂಕಿತರು (12,35,306 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
7,582 ▼	12,12,048 ▲	15,970 ▲

ದಿನದ ಏರಿಕೆ

ಹೊಸ ಪ್ರಕರಣ	295 ▲
ಗುಣಮುಖ	371 ▲
ಸಾವು	11 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಮಕ್ಕಳಿಗೆ ರೋಗ ನಿರೋಧಕ ಲಸಿಕೆ ನೀಡುವ ಕಾರ್ಯ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ತಿಂಗಳ ಒಳಗೆ ಮೂರನೇ ಅಲೆ ಬಂದರೂ ಅದನ್ನು ಎದುರಿಸಲು ಮಕ್ಕಳನ್ನು ಸಜ್ಜುಗೊಳಿಸಲು ಬಿಬಿಎಂಪಿ ಮುಂದಾಗಿದೆ. ಮಕ್ಕಳಿಗೆ ಕೋವಿಡ್ ಲಸಿಕೆ ನೀಡಲು ಸಾಧ್ಯವಾಗದ ಕಾರಣ ಇತರ ರೋಗನಿರೋಧಕ ಲಸಿಕೆಗಳನ್ನು ನೀಡುವ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲು ಪಾಲಿಕೆ ತಯಾರಿ ನಡೆಸಿದೆ.

ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಿ.ರಂದೀಪ್, 'ಮಕ್ಕಳಿಗೆ ಸದ್ಯಕ್ಕೆ ಕೋವಿಡ್ ಲಸಿಕೆ ಹಾಕುತ್ತಿಲ್ಲ. ಅದರ ಬದಲು ಎಂದಿನಂತೆ ರೋಗನಿರೋಧಕ ಶಕ್ತಿ ಹೆಚ್ಚಿಸುವ ಲಸಿಕಾ ಕಾರ್ಯಕ್ರಮ ಹಮ್ಮಿಕೊಳ್ಳುತ್ತೇವೆ. ಕೋವಿಡ್ ಕಾರಣದಿಂದಾಗಿ ನಾಲ್ಕೈದು ತಿಂಗಳುಗಳಲ್ಲಿ ಮಕ್ಕಳಿಗೆ ರೋಗನಿರೋಧಕ ಲಸಿಕೆ ನೀಡಲು ಸಾಧ್ಯವಾಗಿರಲಿಲ್ಲ. ಹಾಗಾಗಿ ಈ ಲಸಿಕಾ ಕಾರ್ಯಕ್ರಮದಲ್ಲಿ ಶೇ 45ರಷ್ಟು ಮಾತ್ರ ಗುರಿ ಸಾಧನೆ ಆಗಿದೆ. ಇದಕ್ಕೆ ಮರು ಚಾಲನೆ ನೀಡುತ್ತಿದ್ದೇವೆ. ವಿಶೇಷ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಲಿದ್ದೇವೆ' ಎಂದು ಸುದ್ದಿಗಾರರಿಗೆ ಮಂಗಳವಾರ ತಿಳಿಸಿದರು.

'ಆಗಸ್ಟ್‌ನಲ್ಲಿ ನಾಲ್ಕು ಸಲ ವಿಶೇಷ ಲಸಿಕಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಮಕ್ಕಳಿಗೆ ಲಸಿಕೆ ನೀಡಲು ಕಟ್ಟಡ ನಿರ್ಮಾಣ ಸ್ಥಳಗಳು ಮತ್ತು ಕೊಳೆಗೇರಿಗಳ ಬಳಿ ತಲಾ ಎರಡು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮಕ್ಕಳಿಗೆ ಪ್ರತಿ ಮಂಗಳವಾರ ಗುರುವಾರ ರೋಗನಿರೋಧಕ ಲಸಿಕೆ ನೀಡಬೇಕು ಎಂದು ವೈದ್ಯಾಧಿಕಾರಿಗಳಿಗೆ ಸೂಚಿಸಿದ್ದೇವೆ. ಗರ್ಭಿಣಿಯರು ಮತ್ತು 1 ವರ್ಷದೊಳಗಿನ ಮಕ್ಕಳು, 1ರಿಂದ 5ವರ್ಷದೊಳಗಿನ ಮಕ್ಕಳು ಹಾಗೂ 5ರಿಂದ 10 ವರ್ಷದೊಳಗಿನ ಮಕ್ಕಳು ಸೇರಿ ಮೂರು ವರ್ಗಗಳಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ನ್ಯೂಮೊಕೋಕಲ್, ಧನುರ್ವಾಯು, ಪೋಲಿಯೊ... ಮೊದಲಾದ ಲಸಿಕೆಗಳನ್ನು ನೀಡಲಾಗುತ್ತದೆ' ಎಂದು ವಿವರಿಸಿದರು.

2 ಲಕ್ಷ ಮಕ್ಕಳಿಗೆ ರೋಗ ನಿರೋಧಕ ಲಸಿಕೆ: 'ಖಾಸಗಿ ಆಸ್ಪತ್ರೆಗೆ ಹೋಗುವ ಶಕ್ತಿ ಇಲ್ಲದ ಪೋಷಕರ ಮಕ್ಕಳು ಸೇರಿದಂತೆ ಸುಮಾರು 2 ಲಕ್ಷ ಮಕ್ಕಳಿಗೆ ರೋಗನಿರೋಧಕ ಲಸಿಕೆ ನೀಡುವ ಗುರಿ ಹೊಂದಿದ್ದೇವೆ. ಇದುವರೆಗೆ ಇಂತಹ ಶೇ 48 ಮಕ್ಕಳಿಗೆ ಮಾತ್ರ ಲಸಿಕೆ ನೀಡಲಾಗಿದೆ. ಇದನ್ನು ಶೇ 80ಕ್ಕೆ ಹೆಚ್ಚಿಸಲು ಸೂಚನೆ ನೀಡಿದ್ದೇನೆ' ಎಂದರು.

ವರದಿ ವಿಳಂಬ: ಲ್ಯಾಬ್‌ಗಳ ಶುಲ್ಕಕ್ಕೆ ಕತ್ತರಿ

'ಕೋವಿಡ್ ಪರೀಕ್ಷೆ ಸಕಾಲದಲ್ಲಿ ಸಿಗಬೇಕು ಎಂಬ ಕಾರಣಕ್ಕೆ ಪ್ರಯೋಗಾಲಯಗಳಿಗೆ, ಅವರ ಕಾರ್ಯನಿರ್ವಹಣೆಯ ಆಧಾರದಲ್ಲಿ ಬಿಲ್ ಪಾವತಿ ಮಾಡುತ್ತಿದ್ದೇವೆ. 24 ಗಂಟೆಗಳ ಅವಧಿಯೊಳಗೆ ಪರೀಕ್ಷಾ ಫಲಿತಾಂಶದ ವರದಿಗಳನ್ನು ಒದಗಿಸದವರಿಗೆ ಶೇ 15ರಷ್ಟು ಬಿಲ್ ಕಡಿತ ಮಾಡಲಾಗುತ್ತಿದೆ' ಎಂದು ರಂದೀಪ್ ತಿಳಿಸಿದರು.

'ಕೋವಿಡ್ ಪರೀಕ್ಷೆಗೆ ಸಂಬಂಧಿಸಿ ಸುಳ್ಳು ವರದಿ ನೀಡಿದ, ಒಂದೇ ಸಂಖ್ಯೆಯನ್ನು ನಾಲ್ಕೈದು ಮಾದರಿಗಳಿಗೆ ಹಾಕಿ ಕಳುಹಿಸಿದ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ಮೂರು– ನಾಲ್ಕು ಪ್ರಯೋಗಾಲಯಗಳಿಗೆ ಶೋಕಾಸ್ ನೋಟಿಸ್ ಜಾರಿಗೊಳಿಸಿದ್ದೇನೆ. ಕೆಲವು ಪ್ರಯೋಗಾಲಯಗಳಿಗೆ ಗಂಟಲ ದ್ರವದ ಮಾದರಿ ಕಳುಹಿಸುವುದನ್ನೇ ನಿಲ್ಲಿಸಿದ್ದೇವೆ. ರಾಷ್ಟ್ರೀಯ ಪ್ರಕೃತಿ ವಿಕೋಪ ನಿರ್ವಹಣೆ ಕಾಯ್ದೆಯಡಿ (ಎನ್‌ಡಿಎಂಎ) ಕ್ರಮಕ್ಕೂ ಶಿಫಾರಸು ಮಾಡಿದ್ದೇವೆ' ಎಂದು ಅವರು ಮಾಹಿತಿ ನೀಡಿದರು.

ಲಕ್ಷದ ಸನಿಹ ಲಸಿಕೆ ವಿತರಣೆ

ಬೆಂಗಳೂರು: ನಗರದಲ್ಲಿ ಕೋವಿಡ್ ಲಸಿಕೆ ವಿತರಣೆ ಪ್ರಮಾಣವು ಸೋಮವಾರ 1 ಲಕ್ಷದ ಸನಿಹಕ್ಕೆ ತಲುಪಿದೆ. ಸೋಮವಾರ ಒಟ್ಟು 99,021 ಮಂದಿಗೆ ಕೋವಿಡ್ ಲಸಿಕೆ ನೀಡಲಾಗಿದೆ.

ಕಳೆದ ವಾರದವರೆಗೂ ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಲಸಿಕೆ ವಿತರಣೆಯ ದೈನಂದಿನ ಸರಾಸರಿ 44,400ರಷ್ಟಿತ್ತು. ಸರ್ಕಾರ ಬಿಬಿಎಂಪಿಗೆ ಪೂರೈಕೆ ಮಾಡುವ ಲಸಿಕೆ ಪ್ರಮಾಣವನ್ನು ಹೆಚ್ಚಿಸಿದೆ. ಹಾಗಾಗಿ ಪಾಲಿಕೆಯು ಕೋವಿಡ್ ಲಸಿಕೆ ವಿತರಣೆಯ ಸಂಖ್ಯೆಯನ್ನೂ ಹೆಚ್ಚಿಸಿದೆ. ಕಳೆದ ಶನಿವಾರ 89,075 ಮಂದಿಗೆ, ಭಾನುವಾರ 56,953 ಮಂದಿಗೆ ಲಸಿಕೆ ನೀಡಲಾಗಿತ್ತು.

'ಲಸಿಕೆಯ ಎರಡನೇ ಡೋಸ್ ಪಡೆಯುವವರ ಸಂಖ್ಯೆ ಹೆಚ್ಚಿದೆ. ಸರ್ಕಾರವೂ ಬಿಬಿಎಂಪಿಗೆ ಲಸಿಕೆ ಹಂಚಿಕೆ ಪ್ರಮಾಣವನ್ನು ಹೆಚ್ಚಿಸಿದ್ದರಿಂದ ಲಸಿಕೆ ವಿತರಣೆಯಲ್ಲಿ ಗೊಂದಲ ಸೃಷ್ಟಿಯಾಗುವುದು ಸದ್ಯಕ್ಕೆ ತಪ್ಪಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	21.37 ಕೋಟಿ ▲	3.25 ಕೋಟಿ ▲
ಸಕ್ರಿಯ ಪ್ರಕರಣ	1.77 ಕೋಟಿ ▼	3.17 ಲಕ್ಷ ▼
ಗುಣಮುಖ	19.14 ಕೋಟಿ ▲	3.16 ಕೋಟಿ
ಸಾವು	44.60 ಲಕ್ಷ ▲	4.35 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	5.22 ಲಕ್ಷ ▲	37,606 ▲
ಗುಣಮುಖ	5.73 ಲಕ್ಷ ▲	33,969 ▲
ಸಾವು	7,653 ▼	647 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)



ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

1.36 ಲಕ್ಷ	ಮಹಾರಾಷ್ಟ್ರ
34,761 ▲	ತಮಿಳುನಾಡು
25,079	ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

64.32	ಮಹಾರಾಷ್ಟ್ರ ▲
38.51	ಕೇರಳ ▲
26.04	ತಮಿಳುನಾಡು ▲

ಹೃದಯ ಸೇರಿದಂತೆ ವಿವಿಧ ಸಮಸ್ಯೆಗೆ ಗಿಡಮೂಲಿಕೆ ಔಷಧ

ಬೆಂಗಳೂರು: ಹೃದಯ ಸೇರಿದಂತೆ ದೇಹದ ವಿವಿಧ ಭಾಗಗಳಲ್ಲಿ ರಕ್ತ ಹೆಪ್ಪುಗಟ್ಟುವಿಕೆಯಿಂದ ಉಂಟಾಗುವ ಸಮಸ್ಯೆಗಳನ್ನು ತಡೆಯಲು ನಿಸರ್ಗ ಆಯುರ್ವೇದಿಕ್ ಮೆಡಿಸಿನ್ ರಿಸರ್ಚ್ ಸೆಂಟರ್ ಗಿಡಮೂಲಿಕೆಗಳಿಂದ ನಿಸರ್ಗ ಹಾರ್ಟ್–ವೆರಿಕೋಸ್ ವೇನ್ಸ್ ಕೇರ್ ಔಷಧ ಆವಿಷ್ಕಾರ ಮಾಡಿದೆ.

ಗಿಡಮೂಲಿಕೆಗಳನ್ನು ಶೇಖರಿಸಿ ಔಷಧ ತಯಾರಿಸಲಾಗಿದೆ. ಮನುಷ್ಯನ ದೇಹವು ವಾತ, ಪಿತ್ತ ಹಾಗೂ ಕಫದಿಂದ ಕೂಡಿರುತ್ತದೆ. ಶರೀರದಲ್ಲಿ ಇವುಗಳು ವ್ಯತ್ಯಾಸವಾದಾಗ ಹಲವಾರು ರೋಗ ಲಕ್ಷಣಗಳು ಉದ್ಭವಿಸುತ್ತವೆ. ಇದನ್ನು ಮನಗಂಡ ಡಾ.ವಿ. ಅಶೋಕ್ ಕುಮಾರ್ ಈ ಔಷಧ ಸಿದ್ಧಪಡಿಸಿದ್ದಾರೆ ಎಂದು ಕೇಂದ್ರ ತಿಳಿಸಿದೆ.

'ರಕ್ತನಾಳಗಳಲ್ಲಿ ರಕ್ತ ಚಲನೆ ಸರಿಯಾಗಿ ಆಗದಿದ್ದರೆ ಹೃದಯಾಘಾತ ಆಗುವ ಸಾಧ್ಯತೆ ಇರುತ್ತದೆ. ಅದೇ ರೀತಿ, ತಲೆಯ ನೆತ್ತಿಯಿಂದ ಕಾಲಿನ ಹೆಬ್ಬೆಟ್ಟಿನವರೆಗೂ ಎಲ್ಲಿ ಬೇಕಾದರೂ ನರಗಳಲ್ಲಿ ಬ್ಲಾಕೇಜ್ ಆಗಬಹುದು. ಹೃದಯದಲ್ಲಿ, ಸೊಂಟದ ಕೆಳಭಾಗದಲ್ಲಿ ಹಾಗೂ ಕಾಲಿನ ರಕ್ತನಾಳದಲ್ಲಿ ರಕ್ತ ಹೆಪ್ಪುಗಟ್ಟುವಿಕೆಯಿಂದ ಸಮಸ್ಯೆಯಾಗುತ್ತದೆ. ಕಾಲುಗಳಲ್ಲಿ ರಕ್ತ ಚಲನೆ ಇಲ್ಲದೆ ನರಗಳಲ್ಲಿ ಊತ ಕಾಣಿಸಿಕೊಂಡು ಗಟ್ಟಿಯಾಗುತ್ತದೆ. ನಿರ್ಲಕ್ಷ್ಯ ವಹಿಸಿದರೆ ನಂತರದ ದಿನಗಳಲ್ಲಿ ಗ್ಯಾಂಗ್ರೀನ್ (ಕೊಳೆಯುವಿಕೆ) ಆಗುವ ಸಾಧ್ಯತೆ ಹೆಚ್ಚು. ಇವೆಲ್ಲ ಸಮಸ್ಯೆಗಳಿಗೆ ಈ ಔಷಧ ಪರಿಹಾರ' ಎಂದು ಅಶೋಕ್ ಕುಮಾರ್ ಹೇಳಿದ್ದಾರೆ.

ಹೆಚ್ಚಿನ ಮಾಹಿತಿಗೆ 9845071610

ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ವಿಶೇಷ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಟ್ ರಿಫ್ಲೆಕ್ಟ್ಸ್ ಅಕಾಡೆಮಿಯು ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಚಿತ್ರಕಲೆ, ಸಂಗೀತ, ವೇಷಭೂಷಣ, ನೃತ್ಯ ಹಾಗೂ ಇತರ ವಿಶೇಷ ಸ್ಪರ್ಧೆಗಳನ್ನು ಹಮ್ಮಿಕೊಂಡಿದೆ.

ಆನ್‌ಲೈನ್‌ನಲ್ಲಿ ನಡೆಯುವ ಈ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲು ಇಚ್ಛಿಸುವವರು 3 ನಿಮಿಷದ ವಿಡಿಯೊ ಕಳಿಸಬೇಕು. ಇದಕ್ಕೆ ವಯಸ್ಸಿನ ಮಿತಿ ಇಲ್ಲ. ಭಾಗವಹಿಸುವ ಎಲ್ಲರಿಗೂ ಬಹುಮಾನ ಸಿಗಲಿದೆ.

ಆಸಕ್ತರು ಇದೇ 25ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ 9380671947.

ರಾಷ್ಟ್ರೋತ್ಥಾನ ಪರಿಷತ್‌ನಿಂದ ಐಸಿಯು ಹಾಸಿಗೆ ಸೌಲಭ್ಯ

ಬೆಂಗಳೂರು: ರಾಷ್ಟ್ರೋತ್ಥಾನ ಪರಿಷತ್, ನಾಸ್ಕಾಂ ಫೌಂಡೇಷನ್ ಹಾಗೂ ಐಬಿಎಂ ಸಹಯೋಗದೊಂದಿಗೆ ಸರ್.ಸಿ.ವಿ. ರಾಮನ್ ಸರ್ಕಾರಿ ಆಸ್ಪತ್ರೆಯಲ್ಲಿ ಐಸಿಯು ಹಾಸಿಗೆ ಸೌಲಭ್ಯ ಕಲ್ಪಿಸಿದೆ.

ಕೋವಿಡ್ ಮೂರನೇ ಅಲೆಯಲ್ಲಿ ಮಕ್ಕಳಿಗೆ ಹೆಚ್ಚಿನ ತೊಂದರೆಯಾಗಬಹುದು ಎಂದು ತಜ್ಞರು ಎಚ್ಚರಿಸಿದ್ದಾರೆ. ಮೂರನೇ ಅಲೆಯನ್ನು ಸಮರ್ಥವಾಗಿ ಎದುರಿಸುವ ಉದ್ದೇಶದಿಂದ ತುರ್ತು ನಿಗಾ ಘಟಕಗಳಿಗೆ (ಐಸಿಯು) ಅಗತ್ಯ ವೈದ್ಯಕೀಯ ಉಪಕರಣಗಳನ್ನು ಪೂರೈಸಲು ಪರಿಷತ್ ಮುಂದಾಗಿದೆ.

'ಪರಿಷತ್ ವತಿಯಿಂದ ಇಂದಿರಾನಗರದ ಸಿ.ವಿ.ರಾಮನ್ ಹಾಗೂ ಜಯನಗರದ ಸೇವಾಶ್ರಮ ಆಸ್ಪತ್ರೆಗಳಲ್ಲಿ ಮಕ್ಕಳ ಆರೈಕೆಗಾಗಿ 45 ಐಸಿಯು ಹಾಸಿಗೆಗಳ ವ್ಯವಸ್ಥೆ ಮಾಡಲಾಗಿದೆ. ನಾಸ್ಕಾಂ ಹಾಗೂ ಐಬಿಎಂ ಈ ಕಾರ್ಯಕ್ಕೆ ಕೈಜೋಡಿಸಿವೆ' ಎಂದು ರಾಷ್ಟ್ರೋತ್ಥಾನ ಪರಿಷತ್ ಉಪಾಧ್ಯಕ್ಷ ಎ.ಆರ್. ದ್ವಾರಕಾನಾಥ್ ತಿಳಿಸಿದ್ದಾರೆ.

'ನಗರದಲ್ಲಿ ವೈದ್ಯಕೀಯ ಸೌಕರ್ಯಗಳ ಬಲವರ್ಧನೆ ಹಾಗೂ ಐಸಿಯುಗಳಿಗೆ ಅಗತ್ಯವಿರುವ ವೈದ್ಯಕೀಯ ಉಪಕರಣಗಳನ್ನು ಪೂರೈಸುವ ನಿಟ್ಟಿನಲ್ಲಿ ಪರಿಷತ್ ಈಗಾಗಲೇ ಕಾರ್ಯಪ್ರವೃತ್ತವಾಗಿದೆ. ಮುಂದಿನ ದಿನಗಳಲ್ಲಿ ಸೇವಾ ಆಸ್ಪತ್ರೆ ಆರಂಭಿಸುವ ಆಲೋಚನೆಯೂ ಇದೆ' ಎಂದು ಪರಿಷತ್ ಅಧ್ಯಕ್ಷ ಎಂ.ಪಿ. ಕುಮಾರ್ ಹೇಳಿದ್ದಾರೆ.

ಕೋವಿಡ್ ಎರಡನೇ ಅಲೆಯ ವೇಳೆ ಬೆಂಗಳೂರಿನಲ್ಲಿ ಉದ್ಭವಿಸಿದ್ದ ಆರೋಗ್ಯ ತುರ್ತುಪರಿಸ್ಥಿತಿ ನಿಭಾಯಿಸಲು ರಾಷ್ಟ್ರೋತ್ಥಾನ ಪರಿಷತ್, ನಗರದ ವಿವಿಧ ಭಾಗಗಳಲ್ಲಿ 5 ಕೋವಿಡ್ ಆರೈಕೆ ಕೇಂದ್ರಗಳನ್ನು ಪ್ರಾರಂಭಿಸಿತ್ತು. 300 ಹಾಸಿಗೆಗಳಿದ್ದ ಈ ಕೇಂದ್ರಗಳಲ್ಲಿ 800 ಮಂದಿ ರೋಗಿಗಳು ಚಿಕಿತ್ಸೆ ಪಡೆದು ಗುಣಮುಖರಾಗಿದ್ದರು. 51 ರೋಗಿಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೇರೆಡೆಗೆ ಸ್ಥಳಾಂತರಿಸುವ ವ್ಯವಸ್ಥೆಯನ್ನೂ ಮಾಡಲಾಗಿತ್ತು.

ಕಾಲೇಜು ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ

ಬೆಂಗಳೂರು: ಉತ್ಥಾನ ಮಾಸಪತ್ರಿಕೆ ಕಾಲೇಜು ವಿದ್ಯಾರ್ಥಿಗಳಿಗಾಗಿ 'ಭಾರತದ ಸ್ವಾತಂತ್ರ್ಯ ಹೋರಾಟದ ಮಜಲುಗಳು' ಎಂಬ ವಿಷಯದ ಕುರಿತು ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ ಏರ್ಪಡಿಸಿದೆ.

ಈ ಪ್ರಬಂಧ ಸ್ಪರ್ಧೆಗೆ ಸಂಬಂಧಿಸಿದಂತೆ ರಾಷ್ಟ್ರೋತ್ಥಾನ ಪರಿಷತ್‌ನಲ್ಲಿ ಸೋಮವಾರ ಭಿತ್ತಿಪತ್ರ ಬಿಡುಗಡೆ ಮಾಡಲಾಯಿತು. ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ದಿನೇಶ್ ಹೆಗ್ಡೆ ಮತ್ತು ವಿವಿಧ ವಿಶ್ವವಿದ್ಯಾಲಯಗಳ ಕುಲಪತಿಗಳು ಈ ಸಂದರ್ಭದಲ್ಲಿ ಹಾಜರಿದ್ದರು.

ಈ ಸ್ಪರ್ಧೆಯಲ್ಲಿ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಭಾಗವಹಿಸಬಹುದು. ಪ್ರಬಂಧವನ್ನು ಕನ್ನಡದಲ್ಲಿಯೇ ಬರೆಯಬೇಕು. 1500 ಪದಗಳನ್ನು ಮೀರದಂತೆ utthanacompetitions@gmail.com ಗೆ ಅಥವಾ ಸಂಪಾದಕರು, 'ಉತ್ಥಾನ' ವಾರ್ಷಿಕ ಪ್ರಬಂಧ ಸ್ಪರ್ಧೆ - 2021, 'ಕೇಶವ ಶಿಲ್ಪ', ಕೆಂಪೇಗೌಡನಗರ, ಬೆಂಗಳೂರು 560 004 ಇಲ್ಲಿಗೆ ನ.10 ರೊಳಗೆ ಕಳುಹಿಸಬೇಕು.

ಮೊದಲ ಬಹುಮಾನ ₹10 ಸಾವಿರ, ಎರಡನೇ ಬಹುಮಾನ ₹7 ಸಾವಿರ, ಮೂರನೇ ಬಹುಮಾನ ₹5 ಸಾವಿರ, ಮೆಚ್ಚುಗೆಯ ಹತ್ತು ಬಹುಮಾನಗಳು ತಲಾ ₹2 ಸಾವಿರ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗಾಗಿ 7795441894 ಸಂಪರ್ಕಿಸುವುದು.

ನಗರದಲ್ಲಿ ಇಂದು

ಲಸಿಕಾ ಕಾರ್ಯಕ್ರಮ: 'ವ್ಯಾಕ್ಸಿನೇಷನ್ ಆನ್ ವೀಲ್ಸ್', ಚಾಲನೆ: ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ಡಾ. ದೇವಿಪ್ರಸಾದ್ ಶೆಟ್ಟಿ, ಆಯೋಜನೆ: ನಾರಾಯಣ ಹೆಲ್ತ್, ವೋಲ್ವೊ ಗ್ರೂಪ್ ಇಂಡಿಯಾ, ಸ್ಥಳ: ಕೃಷ್ಣ, ಕುಮಾರಕೃಪಾ, ಮಧ್ಯಾಹ್ನ 12

ನೃತ್ಯೋತ್ಸವ: ಅಹರ್ನಿಷಿ-2021, ಅತಿಥಿಗಳು: ಆರ್. ವೇಣುಗೋಪಾಲ್, ಸೌಂದರ್ಯ ಶ್ರೀವತ್ಸ, ಭರತನಾಟ್ಯ: ಸಂಗೀತಾ ಅನಂತನಾರಾಯಣ, ಸಮೂಹ ಭರತನಾಟ್ಯ: ಅನನ್ಯ ಕಲಾನಿಕೇತನ ಸಂಸ್ಥೆ, ಆಯೋಜನೆ: ಅನನ್ಯ ಕಲಾನಿಕೇತನ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 4

ಗ್ರಾಫಿಕ್ಸ್ ಕಲಾ ಪ್ರದರ್ಶನ: ಉದ್ಘಾಟನೆ: ಪ್ರೊ. ಶ್ರೀನಿವಾಸ ಬಳ್ಳಿ, ಪ್ರಮಾಣ ಪತ್ರ ವಿತರಣೆ: ಚೂಡಾಮಣಿ ನಂದಗೋಪಾಲ್, ಉಪಸ್ಥಿತಿ: ಆರ್. ಚಂದ್ರಶೇಖರ್, ಅಧ್ಯಕ್ಷತೆ: ಡಿ. ಮಹೇಂದ್ರ, ಆಯೋಜನೆ: ಕರ್ನಾಟಕ ಲಲಿತಕಲಾ ಅಕಾಡೆಮಿ, ಸ್ಥಳ: ವರ್ಣ ಆರ್ಟ್ ಗ್ಯಾಲರಿ, ಕನ್ನಡ ಭವನ, ಸಂಜೆ 4

ಸಂಗೀತಾ

'ದರ್ಪಣ' ಸಾಕ್ಷ್ಯಚಿತ್ರ ಪ್ರದರ್ಶನ: 'ಸುಗತ ಕುಮಾರಿ', ನಿರ್ದೇಶನ: ಎಂ.ಆರ್. ರಾಜನ್, ಆಯೋಜನೆ ಮತ್ತು ಸ್ಥಳ: ಸಾಹಿತ್ಯ ಅಕಾಡೆಮಿ, ಸೆಂಟ್ರಲ್ ಕಾಲೇಜು ಆವರಣ, ಸಂಜೆ 5

ಸಂವಿಧಾನ ಓದು ಹಿನ್ನೋಟ– ಮುನ್ನೋಟ: ಚಾಲನೆ: ಎಚ್.ಎನ್. ನಾಗಮೋಹನ ದಾಸ್, ಉಪಸ್ಥಿತಿ: ಎಂ.ಜಿ. ಹೆಗಡೆ, ಆಯೋಜನೆ: ಸಮುದಾಯ ಸಹಯಾನಿ, ಸಂಜೆ 7 (ಆನ್‌ಲೈನ್ ಕಾರ್ಯಕ್ರಮ)

ಸರ್ಕಾರಿ ಜಾಗದಲ್ಲಿ ವಾಣಿಜ್ಯ ಕಟ್ಟಡ: ಗ್ರಾಮಸ್ಥರ ದೂರು

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಸರ್ಕಾರದಿಂದ ಸಾಗುವಳಿಗಾಗಿ ಪಡೆದ ಜಾಗದಲ್ಲಿ ಕಾನೂನು ಉಲ್ಲಂಘಿಸಿ ವಾಣಿಜ್ಯ ಕಟ್ಟಡ ನಿರ್ಮಿಸಿದ್ದಾರೆ ಎಂದು ಶ್ಯಾನುಭೋಗನಹಳ್ಳಿ ಗ್ರಾಮದ ಗ್ರಾಮಸ್ಥರು ದೂರಿದ್ದಾರೆ.

'ಗ್ರಾಮದ ಸರ್ವೆ ನಂ 14 ಸರ್ಕಾರಿ ಜಮೀನಾಗಿದ್ದು, ಅಮ್ಮಯಮ್ಮ ಬಿನ್ ಹನುಮಯ್ಯ ಅವರು ಸಾಗುವಳಿ ಚೀಟಿಯ ಮೂಲಕ 38 ಗುಂಟೆ ಜಾಗ ಪಡೆದಿದ್ದರು. ಮಂಜೂರಾಗಿ ಪಡೆದು ಪೋಡಿ ಮಾಡಿಸಿದ ನಂತರ ಸರ್ವೆ ನಂ 109/1 ಆಗಿದೆ. ರಾಮಯ್ಯ ಬಿನ್ ಹನುಮಯ್ಯ ಅವರು ಈ ಜಾಗವನ್ನು ಅಮ್ಮಯಮ್ಮ ಅವರ ದಾನ ಪತ್ರದ ಮೂಲಕ ಪಡೆದಿದ್ದರು. ಈಗ ಈ ಜಮೀನಿನಲ್ಲಿ ಕಾನೂನನ್ನು ಉಲ್ಲಂಘಿಸಿ ಅಕ್ರಮವಾಗಿ ವಾಣಿಜ್ಯ ಕಟ್ಟಡ ನಿರ್ಮಿಸಲಾಗಿದೆ' ಎನ್ನುತ್ತಾರೆ ಗ್ರಾಮದ ನಿವಾಸಿ, ದೂರುದಾರ ಎಸ್.ಆರ್.ರಾಜಣ್ಣ.

'ಮೂರು ಮಹಡಿಯ ಕಟ್ಟಡದಲ್ಲಿ 50 ಜನ ಏಕಕಾಲದಲ್ಲಿ ವಾಸವಿದ್ದಾರೆ. ಕಟ್ಟಡಕ್ಕೆ ಸರ್ಕಾರಿ ಹಳ್ಳವನ್ನು ಮುಚ್ಚಿ ಕಾಂಕ್ರೀಟ್ ರಸ್ತೆಯನ್ನು ಮಾಡಲಾಗಿದೆ. ಅಲ್ಲದೇ ಸರ್ಕಾರಿ ಅನುದಾನ ಬಳಕೆ ಮಾಡಲಾಗಿದೆ. ಈಗ ಮತ್ತೆ 3 ಮಹಡಿಯ ಕಟ್ಟಡ ಕಟ್ಟುತ್ತಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿಲ್ಲ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

'ಕಟ್ಟಡಕ್ಕೆ ಸಂಬಂಧಿಸಿದ್ದಂತೆ ಯಾವುದೇ ಭೂ ಪರಿವರ್ತನೆ ಆಗಿಲ್ಲ. ಅಕ್ರಮ ವಿದ್ಯುತ್ ಸಂಪರ್ಕ ಪಡೆದಿದ್ದಾರೆ. ಗ್ರಾಮಸ್ಥರ ಸುರಕ್ಷತೆಗಾಗಿ ಮತ್ತು ಸರ್ಕಾರಿ ಭೂಮಿಯನ್ನು ಕಾಪಾಡಲು ಕ್ರಮ ಕೈಗೊಳ್ಳಬೇಕು' ಎಂದು ಗ್ರಾಮದ ನಿವಾಸಿ ನಾರಾಯಣ ಸ್ವಾಮಿ ಎಂ ಮನವಿ ಮಾಡಿದರು.

ಯಲಹಂಕ ತಹಶೀಲ್ದಾರ್ ನರಸಿಂಹಮೂರ್ತಿ ಪ್ರತಿಕ್ರಿಯಿಸಿ, 'ಈ ಬಗ್ಗೆ ದೂರು ಬಂದಿದ್ದು, ಸ್ಥಳ ಪರಿಶೀಲನೆ ಮಾಡಿ ಅಗತ್ಯ ಕ್ರಮ ಕೈಗೊಳ್ಳುತ್ತೇನೆ' ಎಂದರು.

ಸರ್ಕಾರಿ ಜಾಗದಲ್ಲಿ ನಿರ್ಮಿಸಿರುವ ಅಕ್ರಮ ಕಟ್ಟಡ

ಬಾಯ್ಲರ್ ಸ್ಫೋಟ ಪ್ರಕರಣ ಆಸ್ಪತ್ರೆಯಲ್ಲಿ ಮತ್ತಿಬ್ಬರು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಗಡಿ ರಸ್ತೆಯ ಗೋಪಾಲಪುರ ಬಳಿಯ 'ಎಂ.ಎಂ. ಫುಡ್ಸ್ ಪ್ರೊಡಕ್ಟ್' ಕಾರ್ಖಾನೆಯಲ್ಲಿ ಬಾಯ್ಲರ್ ಸ್ಫೋಟದಿಂದ ಗಾಯಗೊಂಡಿದ್ದ ಮತ್ತಿಬ್ಬರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಸ್ಪಂದಿಸದೇ ಮಂಗಳವಾರ ನಸುಕಿನಲ್ಲಿ ಅಸುನೀಗಿದ್ದಾರೆ.

'ಕಾರ್ಖಾನೆ ಪಾಲುದಾರ ಸಚಿನ್ (35) ಹಾಗೂ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಧನಲಕ್ಷ್ಮಿ (42) ಮೃತರು. ಇನ್ನೊಬ್ಬ ಗಾಯಾಳು ಶಾಂತಾ ಅವರ ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಸೋಮವಾರ ಮಧ್ಯಾಹ್ನ ಸಂಭವಿಸಿದ್ದ ಬಾಯ್ಲರ್ ಸ್ಫೋಟದಲ್ಲಿ ಕಾರ್ಮಿಕರಾದ ಸೌರವ್ ಕುಮಾರ್ ಹಾಗೂ ಮನೀಶ್ ಕುಮಾರ್ ಎಂಬುವರು ಸ್ಥಳದಲ್ಲೇ ಸಜೀವವಾಗಿ ದಹನವಾಗಿದ್ದರು. ತೀವ್ರ ಗಾಯಗೊಂಡಿದ್ದ ಸಚಿನ್, ಧನಲಕ್ಷ್ಮಿ ಹಾಗೂ ಶಾಂತಾ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಈ ಪೈಕಿ ಸಚಿನ್ ಹಾಗೂ ಧನಲಕ್ಷ್ಮಿ ಸಹ ಮೃತಪಟ್ಟಿದ್ದು, ಸಾವಿನ ಸಂಖ್ಯೆ 4ಕ್ಕೆ ಏರಿದೆ' ಎಂದೂ ತಿಳಿಸಿದರು.

ಆರೋಪಿಗಳು ನಾಪತ್ತೆ: 'ಅನಧಿಕೃತವಾಗಿ ಕಾರ್ಖಾನೆ ತೆರೆದು, ಬೇಕರಿ ತಿನಿಸುಗಳನ್ನು ತಯಾರಿಸಲಾಗುತ್ತಿತ್ತು. ಅವೈಜ್ಞಾನಿಕವಾಗಿ ಬಾಯ್ಲರ್ ಬಳಕೆ ಮಾಡಲಾಗುತ್ತಿತ್ತು. ಜಾಗದ ಮಾಲೀಕ ಹಾಗೂ ಕಾರ್ಖಾನೆ ಮಾಲೀಕನ ನಿರ್ಲಕ್ಷ್ಯದಿಂದಲೇ ಅವಘಡ ಸಂಭವಿಸಿದೆ' ಎಂದು ಅಧಿಕಾರಿ ಹೇಳಿದರು.

'ಜಾಗದ ಮಾಲೀಕ ನರೇಂದ್ರ, ಕಾರ್ಖಾನೆ ಮಾಲೀಕ ವಿಜಯ್ ಮೆಹ್ತಾ ಹಾಗೂ ಪಾಲುದಾರ ಸಚಿನ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಆರೋಪಿಯೇ ಆಗಿದ್ದ ಸಚಿನ್ ಮೃತಪಟ್ಟಿದ್ದಾರೆ. ಉಳಿದ ಇಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದೂ ಅಧಿಕಾರಿ ತಿಳಿಸಿದರು.

'ಕಾರ್ಮಿಕರಾದ ಬಿಹಾರದ ಸೌರವ್ ಹಾಗೂ ಮನೀಶ್ ದೇಹಗಳು ಗುರುತು ಸಿಗದ ರೀತಿಯಲ್ಲಿ ಸುಟ್ಟಿವೆ. ಸಾವಿನ ಬಗ್ಗೆ ಸಂಬಂಧಿಕರಿಗೆ ಮಾಹಿತಿ ನೀಡಲಾಗಿದೆ' ಎಂದೂ ಹೇಳಿದರು.

ಮದುವೆಗೆ ಒಪ್ಪದಿದ್ದಕ್ಕೆ ಯುವತಿ ತಂದೆಯ ಕೊಲೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ನಗರದಲ್ಲಿ ನಾಗಪ್ಪ ಬಾರ್ಕಿ (49) ಎಂಬುವರನ್ನು ಕೊಲೆ ಮಾಡಲಾಗಿದ್ದು, ಅವರ ಮಗಳ ಸ್ನೇಹಿತನೇ ಪ್ರಮುಖ ಆರೋಪಿ ಎಂಬುದು ನೆಲಮಂಗಲ ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

'ಬಳ್ಳಾರಿಯ ನಾಗಪ್ಪ, 30 ವರ್ಷಗಳ ಹಿಂದೆಯೇ ನೆಲಮಂಗಲಕ್ಕೆ ಬಂದು ಕುವೆಂಪುನಗರದಲ್ಲಿ ವಾಸವಿದ್ದರು. ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಪತ್ನಿ ಹಾಗೂ ಇಬ್ಬರು ಮಕ್ಕಳ ಜೊತೆ ವಾಸವಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಂಗಳವಾರ ಬೆಳಿಗ್ಗೆ 5 ಗಂಟೆ ಸುಮಾರಿಗೆ ನಾಗಪ್ಪ ಅವರು ಕೆಲಸಕ್ಕೆ ಹೋಗಲು ಬಸ್ ನಿಲ್ದಾಣಕ್ಕೆ ತೆರಳಿದ್ದರು. ಅದೇ ಸಂದರ್ಭದಲ್ಲೇ ಅವರ ಮೇಲೆ ದಾಳಿ ಮಾಡಿದ್ದ ಆರೋಪಿಗಳು, ಕಬ್ಬಿಣದ ರಾಡ್‌ನಿಂದ ತಲೆಗೆ ಹೊಡೆದು ಪರಾರಿಯಾಗಿದ್ದಾರೆ. ರಸ್ತೆಯಲ್ಲಿ ನರಳುತ್ತ ಬಿದ್ದಿದ್ದ ನಾಗಪ್ಪ ಅವರನ್ನು ಸ್ಥಳೀಯರೇ ಆಸ್ಪತ್ರೆಗೆ ಕರೆದೊಯ್ದಿದ್ದರು. ಅಲ್ಲಿ ಚಿಕಿತ್ಸೆಗೆ ಸ್ಪಂದಿಸದೇ ಅವರು ಅಸುನೀಗಿದ್ದಾರೆ' ಎಂದೂ ತಿಳಿಸಿವೆ.

'ಸ್ಥಳೀಯ ನಿವಾಸಿ ಆಗಿರುವ ನರೇಶ್ ಹಾಗೂ ಆತನ ಸ್ನೇಹಿತರೇ ಕೊಲೆ ಮಾಡಿರುವ ಅನುಮಾನವಿದೆ. ಸದ್ಯ ಅವರು ತಲೆಮರೆಸಿಕೊಂಡಿದ್ದಾರೆ' ಎಂದೂ ಮೂಲಗಳು ಹೇಳಿವೆ.

ನಾಗಪ್ಪ

ಆರೋಪಿ ನರೇಶ್

ಪ್ರೀತಿ, ಮದುವೆಗೆ ನಿರಾಕರಣೆ: 'ನಾಗಪ್ಪ ಅವರ ಮನೆ ಬಳಿಯೇ ಆರೋಪಿ ನರೇಶ್ ಕುಟುಂಬ ವಾಸವಿತ್ತು. ನಾಗಪ್ಪ ಅವರ ಮಗಳ ಜೊತೆ ಸ್ನೇಹ ಬೆಳೆಸಿದ್ದ ನರೇಶ್, ಪ್ರೀತಿಸುವುದಾಗಿ ಹೇಳಿದ್ದ. ಅದಕ್ಕೆ ಯುವತಿ ಒಪ್ಪಿರಲಿಲ್ಲ. ಅದೇ ಕಾರಣಕ್ಕೆ ಸೋಮವಾರ ಬೆಳಿಗ್ಗೆ ಯುವತಿಯ ಕಾಲೇಜು ಬಳಿ ಹೋಗಿ ಆರೋಪಿ ಗಲಾಟೆ ಮಾಡಿದ್ದ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

'ಅಂದು ರಾತ್ರಿ 8 ಗಂಟೆ ಸುಮಾರಿಗೆ ಕುಡಿದ ಮತ್ತಿನಲ್ಲಿ ನಾಗಪ್ಪ ಮನೆಗೆ ಹೋಗಿದ್ದ ಆರೋಪಿ, 'ನಿಮ್ಮ ಮಗಳನ್ನು ಪ್ರೀತಿಸುತ್ತಿದ್ದೇನೆ. ಆಕೆಯನ್ನು ನನ್ನ ಜೊತೆ ಮದುವೆ ಮಾಡಿಕೊಡಿ' ಎಂದು ಕೂಗಾಡಿದ್ದ. ಆತನಿಗೆ ಎಚ್ಚರಿಕೆ ನೀಡಿದ್ದ ನಾಗಪ್ಪ, 'ಮಗಳು ವಿದ್ಯಾಭ್ಯಾಸ ಮಾಡುತ್ತಿದ್ದು, ಸದ್ಯ ಮದುವೆ ಮಾಡುವುದಿಲ್ಲ. ವಿದ್ಯಾಭ್ಯಾಸ ಮುಗಿದ ನಂತರ, ನಮ್ಮ ಸಂಬಂಧದಲ್ಲಿ ಮದುವೆ ಮಾಡುತ್ತೇವೆ' ಎಂದಿದ್ದರು. ಇಬ್ಬರ ನಡುವೆಯೂ ಮಾತಿನ ಚಕಮಕಿ ಆಗಿತ್ತೆಂದು ಸಂಬಂಧಿಕರು ಹೇಳಿಕೆ ನೀಡಿದ್ದಾರೆ' ಎಂದು ಮೂಲಗಳು ಹೇಳಿವೆ.

'ಮದುವೆಗೆ ಒಪ್ಪಲಿಲ್ಲವೆಂದು ಸಿಟ್ಟಾದ ನರೇಶ್, ತನ್ನ ಸ್ನೇಹಿತರ ಜೊತೆ ಸೇರಿ ನಾಗಪ್ಪ ಅವರನ್ನು ಕೊಂದಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಆರೋಪಿಗಳು ಸಿಕ್ಕ ನಂತರ ಮತ್ತಷ್ಟು ಮಾಹಿತಿ ತಿಳಿಯಲಿದೆ' ಎಂದೂ ಪೊಲೀಸ್ ಮೂಲಗಳು ವಿವರಿಸಿವೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED QUALIFIED Experienced D.Ed /B.Sc /M.Sc /MA /B.Ed. Head Mistress /Teachers for Infant's Indian Primary, High School, Austin Town. Kannada /Hindi /Maths /Social /Office Assistant / MBA. Contact Immediately - 9845199606

MAX MULLER PUBLIC SCHOOL
BEML Layout, Basaveshwara Nagar Bengaluru-560079 Ph: 080-23233455.
REQUIRED
M.Sc or B.Sc, B.Ed Candidate to take 10th Physics and 9th Maths.
Required Kannada, Hindi Typist.

KARNATAKA REDDYJANA SANGHA®
REQUIRES for
I. Vemana Institute of Technology
1) Professors: Civil - 1; ECE-1; ISE-1; CSE -1
2) Associate Professors: Civil - 5; ECE - 3; ISE-3; Physics - 2.
II. RJS - Institute Of Management Studies
English Lecturer - 1
III. RJS Polytechnic College
Lecturer: Comp. Science & Engg. - 1
IV. RJS First Grade College:
Lecturers: Comp. Science - 1 Bio-Tech - 1
V. DBM & RJS School, Koramangala
1. Primary School Teachers: a) Maths - 1; b) English - 1
2. High School Teachers: a) Maths -1; b) P.E. Master- 1 Male Attender - 1.
VI. RJS School, Rupenaagrahara
High School: English Teacher - 1
Primary School Teachers: a) Maths - 1; b) English - 1
Salary as per KRJS / AICTE Norms
Apply to: The General Secretary, KRJS, #1, Mahayogi Vemana Road, 3rd Block, Koramangala, Bangalore -34 by post / Email.
For more details visit: www.reddyjanasangha.org
Ph: 080-25534194. E-Mail: krjsestablishment@gmail.com

CHIRANTHANA REQUIRES Special Educators Qualification: Diploma/ Graduate/ B.Ed in Special Education Work Experience: Minimum 1-year Computer knowledge isa must. Contact:9900163939 bheemasi@gmail.com

TEACHERS NEEDED for all subjects & English for CLASS 1 to 5 for Chitrakoota CBSE School in Nagarbhavi, Kengeri Ring Road, with high Salary. Immediately or for the next academic year. Call: 7829647333 chitrakootajobs@gmail.com

PRIMARY SCHOOL Trained & Experienced Teachers required. 1) Sanskrit cum Kannada. 2) English cum Social Science. 3) Drawing. 4) Art & Craft. Apply immediately to Hon. Secretary, Poornaprajna Education Centre, CA Site No. 48, New Thippasandra, HAL 3rd Stage, Bangalore- 75. Ph. 080- 25292930.

ST SOPHIA'S International School, Nagarabhavi, Mallathahalli, requires Experienced Female PRINCIPAL for Primary School & Science CBZ teachers for High School (Immediate Appointment) yogeshbk18@gmail.com Contact: 9243031872

BRILLIANCE ENGLISH School Jayanagar 3rd Block Bangalore-11 Required: D.Ed English & General Subjects Contact: 080-26630237 9845178331

HM/PRINCIPAL VACANCY
QUALIFICATION: M.A. / M.SC. + B.ED
EXPERIENCE: Teaching 5+ years & Administration 5+years
Excellent Fluency in English & Kannada. Good Computer Knowledge. Age Preference: 30-45 years. CTC: 25K to 35K + Benefits (Negotiable) Interested Candidates can apply:
9743 209 185
Email: nh.hskt@gmail.com
(Karnataka State Board-Nursery to 10th)
(Shortlisted Candidates will be contacted)
To, The Admin Dept.
New Horizon School
Teachers Colony, Sir M.V.Extn. Hoskote, Bangalore - 562 114.
M: 87222 75205

"REQUIRED QUALIFIED Teachers in Phy Eng for ICSE. Endeavour's International School, Sarjapur. Contact: 8722140020/ 9945058552

RMS PU COLLEGE Requires PRINCIPAL: Experience 5 years as Principal (PUC Only) & ACCOUNTANT: Experience 5 years. Near METRO Cash & Carry. Kanakapura Road, Bengaluru. ashokmv@ymail.com, 9606798188, 9606416534

WANTED LECTURERS in Computer Science (Full Time), Mathematics, Economics and Sociology (Part time) Apply within 10 days. To the Correspondent St.Anne's PU College for Girls, Ramamurthy nagar, Bangalore - 560016.

REQUIRED ENGLISH Teachers for High School & PU College. Contact: Oriental High School & PU College, J.P Nagar, Bangalore-560078. 9036715767/ 9590018926

I T

MCB CORPORATION Require for Bangalore Office at J.P. Nagar Software Developers Knowing ASP. NET, C#, C++, C, JAVA and WEB application Designers with HTML, CSS, JAVASCRIPT, PHP, SQL Server, (2019) OR Apache HTTP Server OR Oracle I Planet. Send details to Email : wintreat@gmail.com , Mobile: 9611850338

1) VB.NET/ C# /ASP.NET Developers 2) Software Support executives. 3) Database enthusiasts. Freshers welcome. Location at Malleswaram. Send bio-data to: careers@maitri.net.in

LOGO DISPLAY AD

Deccan Herald all Karnataka and Prajavani Bangalore

Two BHK for rent ground floor at xxxxxxxxxxxx xxxxxxxxxx Bangalore Contact: xxxxxxxxx xxxxxxxxxxxxxxxx

3cm (W) x 4cm (H)
@ Just Rs.2000/-* only

For Advertisement Booking contact:
Mob: 9880856233 / 9731821077 / 9845114560 / 9606912256 / 9886213331

Engg/ Production Technical

power-one Micro Systems Pvt.Ltd.
A leading Manufacturers of UPS Systems Requires
Customer Support Manager: Degree / Diploma with 3-4 years experience in Electronics/ Electrical with Good Communication Skills.
Service Engineers: ITI / Diploma in Electronics / Electrical with 1-2 years experience.
Trainee Engineer: Fresher ITI / Diploma in Electronics / Electrical.
Wiring Technician: ITI / Diploma with 1-2 years of experience in Electrical Wiring.
Powerone Micro Systems Pvt. Ltd. GF-3 & 12, KSSIDC Building, 5th Cross, 1st Stage, Peenya, Bangalore, 560058
E-mail: careers@poweroneups.com

MAISONETTE GROUP at Infantry Road Require Architects / CAD Operators / Civil Engineers (willing to Travel) Call - 9611850338. Email : wintreat@gmail.com

Marketing & Sales

WANTED SALES REPS with Two Wheeler and Sales Experience
For GI Wires, Chain link, Barbed Wire, Weld Mesh & Binding Wire
Contact MALU WIRES - Mr. Aditya Vikram Malu Mobile: +91 8197733777

power-one Micro Systems Pvt.Ltd.
A leading Manufacturers of ONLINE UPS upto 800 KVA Requires the following posts.
Sr. Marketing Manager: With 5-6 years experience in Selling ONLINE UPS Systems.
Marketing Manager: With 5-6 years experience in Selling ONLINE UPS Systems.
Sr. Marketing Executive: With 3-4 years experience in Selling ONLINE UPS Systems.
Sales Engineer (Trainee): Degree/Diploma in any Faculty with Good Communication Skills.
Powerone Micro Systems Pvt. Ltd. GF-3 & 12, KSSIDC Building, 5th Cross, 1st Stage, Peenya, Bangalore, 560058
E-mail: careers@poweroneups.com

power-one Micro Systems Pvt.Ltd.
A leading Manufacturers of Solar Inverters and Power Plants Requires
Sr. Marketing Manager with 5 to 6 Years Experience in Selling Solar Inverters or Solar Power Plants or Solar Panels.
Powerone Micro Systems Pvt. Ltd. GF-3 & 12, KSSIDC Building, 5th Cross, 1st Stage, Peenya, Bangalore, 560058
E-mail: careers@poweroneups.com

FIELD EXECUTIVE required for Charitable Trust. Male, Female. SSLC. Salary 15k + incentive. 9019043325

URGENT STOCK MARKET ANALYST required with experience in equity trading and portfolio management. +919900064364. email: armaan@hilltopgranite.com

WANTED MARKETING Executives For Private Limited Company Bangalore, Age Below 40 with Good Communication Skill fluent In English, Kannada, Hindi Contact: 9108458798/ 23384085

EXPERIENCED SALESEXECUTIVES for INDUSTRIAL Water Treatment Chemicals with two Wheeler Contact Amit Industries 9341330383

Walk-in

HYUNDAI We are Hiring
"Do you have passion for Cars" Come join us as Sales Managers, Team Leaders, Senior Sales Consultants , Sales Consultants - We are looking to onboard young and enthusiastic professionals at our outlets in Bangalore, Mysore, Mangalore, Hassan, Coorg and Kolar.
• Salary and attractive Incentives .
• For Bangalore showrooms Candidates can Walk-In for Interview.
• Candidates applying for other locations can mail your resume.
ADVAITH HYUNDAI Caring for you...always
Walk-In Interview
12, Shama Rao Compound, Mission Road, Bangalore-560 027
Date : 1st to 4th Sept 2021 Time : 10am to 4pm
Contact : 9620229889 / 9741018380
E-mail your Resume: careers@advaithgroup.com

Receptionist/ Secretary

MERIDIAN GROUP Office at Bangalore Central Require Office SECRETARY M/ F Knowledge of Kannada and Highend English Hard working growth Oriented, young, Talented Candidates shall apply to wintreat@gmail.com Call 9611850338.

Wanted

WANTED EXPERIENCED persons for Data Entry/ Management for a reputed American Company. +919900064364. email: armaan@hilltopgranite.com

General

HIRING DELIVERY BOYS All Over Karnataka. Work near your place and earn upto Rs. 20,000. TO JOIN CALL: 7204418753 /8123237913

MANAGER FOR OLD AGE HOME
Shanthidham is old age home (not for profit), located on Kanakapura road near Art of Living. Applications are invited from a couple who has inclination to serve and live in the campus. Love, Understanding and compassion is prerequisite to qualify for the job. Preferred age 55-60 or younger. Please apply with photographs and brief resume for consideration. On the following address.
SHANTHIDHAM
73, Chitra Court, above Girias showroom Basvanagudi, Bangaluru-560004.
Contact: + 9148581600
Mail id: mnsrinivas@sankhlapolymers.com

Part-Time Jobs

JOBS WOMEN@RELIANCE Capital,Malleswaram Age 30yrs above (Degree) Fixed Salary-18k to 23k+PF+ESI: 9343349670

MARKETING EXECUTIVES REQUIRED For Reputed Laminate Sheet Distributor.Good Salary+Incentives. Immediate Appointment. CONTACT:- 9945826948

Multiple Vacancy

WANTED EXPERIENCED 1. Advocate with strong knowledge in civil conveyance with legal Opinion, Minimum of 5years of Experience 2. Civil Engineers for Residential Layout projects 3. Accountant Minimum 5year Experience Equinox Global Shelters Office @ Yelahanaka New Town, Attractive salary 8217482988, egsadm159@gmail.com

REQUIRED IMMEDIATELY HR, Administration, Manager, Accounts, Supervisor, technical Mechanical, Electronics, Electrical, Computer Engineers -7676760299/ 7676760399

WANTED OFFICE Boys (Field Work), DTP Operator, Office Assistant for Advt. Agency near Hanumathnagar- 41618530, 6361942572

INDIANOIL & ICICI_associate need COMPUTER OPERATORS for Insurance services at Petrol Pumps in Bangalore. 9742149598.

MERIDIAN GROUP, Bangalore Central Office Requires Office Executive M/ F willing to Travel in and out of Bangalore Should Read and Write English, Kannada able to speak Hindi. Call 9611850338. Email: wintreat@gmail.com

Accounts & Finance

LOOKING FOR well Experience Male/ Female Typist cum tally Candidate, if Interest Contact: 9449830304 080-41628074

WANTED EXPERIENCED ACCOUNTANT & ACCOUNTS ASSISTANT.Walk-in Interview:- Maharaja Agrasen Hospital,15th Main,17th Cross, Padmanabhanagar, Bangalore-70. Phone- 7847810010

GRADUATES FOR Invoice Processing having SAP Knowledge with 1-3 years experience for Corporate Client.9900263508

Hospital & Medical Jobs

NABH & NABL Accredited P.D. Hinduja Sindhi Multispeciality Hospital, Bangalore
• Deputy Director (Medical), Doctor with hospital Management Qualification, min 10 yrs Exp, Age 50 to 60 years.
• Dermatologist
• Junior Physician M.D / DNB (Medicine)
• Medical Officers MBBS
• Psychologist
• Medical Records Technician
Mail Resume to sandhya@hindujasindhihospital.com
Ph: 7411017190 / 49030307

Hotel

NEED EXECUTIVE CHEF and SOUS CHEF for Pub near Vega City Mall, Contact: 8867255121.

REAL ESTATE SELLING

Sites

Arkavathi Layout

ARAKAVATHY BDA Layout Sale 30X40 site, 19th Block, Kalyannagar, South facing, 40 feet. Road, compounded, clean documents. Contact Owner: 6366523699

Bannerghatta Road

SALE OFF Bhannerghatta Road, Gottigere Doctors Layout 5100. sft. BBMP 'B' Katha East Facing Site. Contact: 9535773366, 9448360286

Basavanagudi

SALE 35X76 East Facing Adjecent to N.R.Colony Very Close to Jain Temple and Sai Baba Temple Call Aswath 9845074355

Kumaraswamy Layout

BDA 30X40 Intermediate Vacant 2nd Stage, Near 15F/G Last Stop, ISKCON South Samaruddi, Genuine Buyers Call 9972095359 Brokers Excuse.

REAL ESTATE BUYING

Agricultural Land

Out-Station

MEDANI GROUP at Bangalore Looking for Large Scale Agriculture, Convertible Lands upto 500 Acres outside Bangalore, Tumkur, Hassan, Belgaum, Dharwad, Hubli, Karwar, Birur, Kadur, Chitradurga, Hosur, Dharmapuri. Call 8073837220. Email zudithzen@gmail.com

RENTAL PROPERTIES

Accommodation Available

Commercial

6000 SQFT With /Without Fit-Out at SR Complex, 2nd Floor, Tavarekere Main Road, SG Palya, Near Forum Mall. Contact : 9880448321, 080 - 41290053

BUILDERS ESSENTIAL

Interior/Exterior

WALL PAPERS, Wall Pictures, Window Netlons, Vynle Flooring, with fixing Services Contact: 9342410224, 8660514834 WALLDECOR

BUSINESS

Business to Business

Finance

"URGENT LOAN. Avail @ 3.5% p.a Personal, Business, Projects all types Loans in 5 days. Small Finance Ltd, Call & WhatsApp ::8826494700."

Business Offers

Finance

NRI'S INVESTMENT And Finance AvailableOn LowInterest AgainstProperties, Land& Building,Sites,Flats, Converted& AgricultureLandsCall: 7411265189

EDUCATIONAL

Admission

ONE SITTING: B.Tech/ Diploma/ MBA/MCA/M.Sc/ M.Com/BBA/BCA/B.Sc/B.Com /LL.B/D.Pharm/ B.Pharm/ B.Ed. Recognised Govt. Genuine students need contact.Asha Institute, Bangalore. Ph:9448460103/ 7093438248

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

EDUCATION CORNER

R.E.S. POLYTECHNIC
Recognised by Govt. of Karnataka & Approved by AICTE
Inst. Code: 450 Estd: 1986
SPOT ADMISSION FOR MANAGEMENT & Merit / Govt. QUOTA STARTED FOR 10th PASS or PUC FAIL / PASS
3 Years Diploma for - 10th Pass
2 Years Diploma for - PUC / 12th / ITI Pass
CS | IS | EC | EE | Civil | Mech | Auto | CP | FT
5, Sunkadakatte, Magadi Main Road, Hegganahalli Cross, B'lore-91 Phone: 080-23484814, 99166 46466, 99166 39466
RES-21203

PUBLIC NOTICE

CENTURY CLUB
No.1, Seshadri Road, Bangalore-560 001.
Ph: 22214121 / 22215122
TENDER NOTIFICATION
Sealed Tenders are invited from reputed Beauty Parlours & Salons to provide service for both Gentlemen and Lady members of Century Club.
Tender Forms costing Rs.2,000/- along with Terms & Conditions may be obtained from the Club Office during working hours from dt.25.08.2021. The last date for purchase of Tender Forms is 5 pm on dt.31.08.2021. Last date for receipt of duly completed Tender Forms is 5 pm on dt. 06.09.2021.
Tenders will be opened at 6.30 p.m. on the same day.
E. G. Jaideep
Hon.Secretary

I, MEER Mohamed Nayeemulla aged About 53 years, S/o L. Abdul Wahab, R/at #10, Subbaraya Shetty Street, Near Marikamba Temple Ward No.11, Malur, Kolar, Karnataka, Pin-563130 have changed my name to MOHAMMED NAYEEMULLA vide affidavit dated 24.08.2021 before notary L. Gopalakrishna, Bangalore

I, K.SELVI residing No.10/1A, 3rd Cross, Behind Skyline Aprtment, Nisarga Layout, Chandra Layout, Nagarabhavi, Bangalore-560072 have changed my name to K.LATHA vide affidavit dated 31/07/2021 sworn before notary H.S.Sakalesh Aradhya, Bangalore.

I, SATAPATHY ASWINI KUMAR., R/at No.4143, Janapriya Sai Darshan Apts, Saibaba Ashram Road, Seegehalli, Bangalore-560067, have changed my name to ASWIN KUMAR SATPATHY vide affidavit dated: 24/8/2021 Before Notary Kundan Babu. M Bangalore.

PERSONAL

Change of Name

14816062F- HAV/MT- NAKKA NARAYANA at MT Wing, ASC TRG CENTRE, 2ATC, Bangalore, changed my minor daughter's name from VISHNU PRIYA to NAKKA VISHNU PRIYA, notary KV Mani, Bangalore.

RAMA CHANDRUDU F/o 14816062F- HAV/MT- NAKKA NARAYANA Allinagaram, Prakasam, Andhra Pradesh changed name from RAMA CHANDRUDU to NAKKA RAMACHANDRUDU notary KV Mani, Bangalore.

I, SRINIVASA BABU VENKATESH residing at No.2313, Manjula Nilaya, Coconut Garden, T.Dasarahalli, Bangalore-560057 have changed my name to SRINIVAS BABU DASARAHALLI VENKATESH affidavit dated 13.08.2021 before notary V.Anjanappa, Bangalore.

ANUPAMA CHANDRAN spouse of No.15327893N L/Nk PRADEEP R Residing at Naduvilakkara, West Kallada(Po), Kollam, Kerala-691500 hava changed my name from ANUPAMA PRADEEP to ANUPAMA CHANDRAN vide affidavit dated 24/08/2021 before AR.Muneer Ahmed, Bangalore.

I, APARNA w/o Amar Shivaji Shinde have changed my minor son's name from SWAROOP SHINDE to SHASHANKA vide affidavit dated 12-07-2021 before Notary Vyshali.K, Bangalore

PROPERTY CORNER

INDUSTRIAL LAND FOR SALE AT THANDYA INDUSTRIAL AREA
16.32 Acres land with 30,000 Sq.ft Industrial warehouse with compound wall is available for sale at Thandavpura Industrial area.
Call: 82966 58879



ರಾಯರ ಆರಾಧನೆ

ನಿರ್ಮಾಣ್ ಶೆಲ್ಟರ್ಸ್ ವತಿಯಿಂದ ನಂದನವನ ಬಡಾವಣೆಯಲ್ಲಿ ಸ್ಥಾಪಿಸಿರುವ ಶ್ರೀ ಪ್ರಸನ್ನ ವೀರಾಂಜನೇಯ ಸ್ವಾಮಿ ದೇವಾಲಯ ಹಾಗೂ ಮೂಲಮೃತ್ತಿಕಾ ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನದ ಸನ್ನಿಧಿಯಲ್ಲಿ ಶ್ರೀ ರಾಘವೇಂದ್ರ ಸ್ವಾಮಿಯವರ 350ನೇ ಆರಾಧನಾ ಮಹೋತ್ಸವದ ಅಂಗವಾಗಿ ಸ್ವಾಮಿಯವರಿಗೆ ವಿಶೇಷ ಪೂಜೆ, ಪಂಚಾಮೃತ ಅಭಿಷೇಕ, ಅಲಂಕಾರ ಪೂಜೆ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಸಂಸ್ಥೆಯ ಸಂಸ್ಥಾಪಕ ಹಾಗೂ ವ್ಯವಸ್ಥಾಪಕ ನಿರ್ದೇಶಕ ಪಿ.ಲಕ್ಷ್ಮೀನಾರಾಯಣ ಹಾಗೂ ದೇವಾಲಯದ ವಿಶ್ವಸ್ಥ ಮಂಡಳಿಯ ವಿಶ್ವಸ್ಥರ ಸಹಭಾಗಿತ್ವದಲ್ಲಿ ಪೂಜಾ ಕಾರ್ಯಗಳು ನೆರವೇರಿದವು

ಅಕ್ರಮ ನಡೆದಿಲ್ಲ– ಸರ್ಕಾರಿ ಸಂಸ್ಥೆಯಿಂದಲೇ ಸ್ವೆಟರ್ ಖರೀದಿ: ಬಿಬಿಎಂಪಿ ಶಿಕ್ಷಣ ವಿಭಾಗ ಸ್ಪಷ್ಟನೆ

ವಿದ್ಯಾರ್ಥಿಗಳಿಗೆ ಸ್ವೆಟರ್ ನೀಡದೇ ವಂಚನೆ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಸ್ವೆಟರ್ ನೀಡದೇ ವಂಚನೆ ಮಾಡಲಾಗಿದೆ ಎಂದು ಆರೋಪಿಸಿರುವ ಕರ್ನಾಟಕ ದಲಿತ ಸಂಘರ್ಷ ಸಮಿತಿಯು ಈ ಬಗ್ಗೆ ಸಮಗ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದೆ.

'ಸ್ವೆಟರ್ ಖರೀದಿಯನ್ನು ತನಿಖೆಗೆ ಒಪ್ಪಿಸುವಂತೆ ಗಮನ ಸೆಳೆಯಲು ಸಂಘಟನೆಯು ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿ ಮಂಗಳವಾರ ತಮಟೆ ಚಳುವಳಿ ನಡೆಸಿತು. ಪ್ರತಿಭಟನಕಾರರು ಸ್ವೆಟರ್ ಮಾರಾಟ ಮಾಡಿದರು. ಅದರಿಂದ ಬಂದ ಹಣವನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಸಮರ್ಪಣೆ ಮಾಡುವುದಾಗಿ ಸಂಘಟನೆಯ ಸಂಸ್ಥಾಪಕ ಅಧ್ಯಕ್ಷ ಡಾ.ಸಿ.ಎಸ್.ರಘು ತಿಳಿಸಿದರು.

'ಬಿಬಿಎಂಪಿ ಶಾಲಾ, ಕಾಲೇಜುಗಳ ವಿದ್ಯಾರ್ಥಿಗಳಿಗೆ ಸ್ವೆಟರ್‌ಗಳನ್ನು ಕರ್ನಾಟಕ ಕೈಮಗ್ಗ ನಿಗಮದಿಂದ (ಕೆಎಚ್‌ಡಿಸಿ) ಖರೀದಿಸಲಾಗಿದೆ. ಕೆಟಿಪಿಪಿ ಕಾಯ್ದೆಯ 4ಜಿ ಸೆಕ್ಷನ್ ಅಡಿ ವಿನಾಯಿತಿ ಪಡೆದು ಟೆಂಡರ್ ಕರೆಯದೆಯೇ ಸ್ವೆಟರ್ ಖರೀದಿಸುವ ಮೂಲಕ ಅಕ್ರಮ ನಡೆಸಲಾಗಿದೆ. ಕೊರೊನಾ ಕಾರಣದಿಂದ ಬಿಬಿಎಂಪಿ ಶಾಲಾ, ಕಾಲೇಜುಗಳಲ್ಲಿ ತರಗತಿಗಳು ನಡೆದಿರಲಿಲ್ಲ. ಆದರೂ ಸ್ವೆಟರ್‌ಗಳನ್ನು ವಿದ್ಯಾರ್ಥಿಗಳಿಗೆ ನೀಡಲಾಗಿದೆ ಎಂದು ₹ 1.76 ಕೋಟಿ ಹಣ ಪಾವತಿ ಮಾಡಲಾಗಿದೆ' ಎಂದು ರಘು ಆರೋಪಿಸಿದರು.

ಅಕ್ರಮ ನಡೆದಿಲ್ಲ- ಸ್ಪಷ್ಟನೆ: '2020-21ನೇ ಸಾಲಿನಲ್ಲಿ ಬಿಬಿಎಂಪಿ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಗುಣಮಟ್ಟದ ಸ್ವೆಟರ್‌ಗಳನ್ನು ಸರ್ಕಾರದ ಅಧೀನದ ಕೆಎಚ್‌ಡಿಸಿಯಿಂದಲೇ ಖರೀದಿಸಿ ವಿತರಿಸುವ ಕುರಿತು ಬಿಬಿಎಂಪಿಯ ಶಿಕ್ಷಣ ಸ್ಥಾಯಿ ಸಮಿತಿಯು 2020ರ ಮಾ.10ರಂದು ನಿರ್ಣಯ ಕೈಗೊಂಡಿತ್ತು. ಸರ್ಕಾರಿ ಅಧೀನದ ಸಂಸ್ಥೆಯಿಂದಲೇ ಸ್ವೆಟರ್ ಖರೀದಿಸಲಾಗಿದ್ದು, ಇದರಲ್ಲಿ ಯಾವುದೇ ಅಕ್ರಮ ನಡೆದಿಲ್ಲ' ಎಂದು ಬಿಬಿಎಂಪಿ ಶಿಕ್ಷಣ ವಿಭಾಗವು ಮುಖ್ಯ ಆಯುಕ್ತರಿಗೆ ನೀಡಿದ ವರದಿಯಲ್ಲಿ ಸ್ಪಷ್ಟಪಡಿಸಿದೆ.

'2020ರ ಡಿ.23ರಂದು ಶಿಕ್ಷಣ ಇಲಾಖೆ ಹೊರಡಿಸಿದ ಸುತ್ತೋಲೆಯಂತೆ 6ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗೆ ಆಫ್‌ಲೈನ್ ತರಗತಿಗಳು ಹಾಗೂ ಎಸ್ಸೆಸ್ಸೆಲ್ಸಿ ಮತ್ತು ಪಿ.ಯು ಕಾಲೇಜು ವಿದ್ಯಾರ್ಥಿಗಳಿಗೆ 2021ರ ಜನವರಿಯಿಂದ ಏಪ್ರಿಲ್‌ವರೆಗೆ ತರಗತಿಗಳು ನಡೆದಿವೆ. ಆಗ ತರಗತಿಗೆ ಹಾಜರಾದ ವಿದ್ಯಾರ್ಥಿಗಳಿಗೆ ಮಾತ್ರ ಸ್ವೆಟರ್‌ಗಳನ್ನು ವಿತರಿಸಲಾಗಿದೆ. ನಂತರ ಮತ್ತೆ ಲಾಕ್‌ಡೌನ್ ಜಾರಿಯಾಗಿತ್ತು. ತರಗತಿಗೆ ಗೈರಾದ ವಿದ್ಯಾರ್ಥಿಗಳಿಗೆ ಲಾಕ್‌ಡೌನ್ ಮುಗಿದ ನಂತರ ಸ್ವೆಟರ್ ವಿತರಿಸಲಾಗುತ್ತದೆ ಎಂದು ಶಾಲಾ ಕಾಲೇಜುಗಳ ಮುಖ್ಯಸ್ಥರು ತಿಳಿಸಿದ್ದರು' ಎಂದು ಶಿಕ್ಷಣ ವಿಭಾಗದ ಸಹಾಯಕ ಆಯುಕ್ತರು ವರದಿಯಲ್ಲಿ ತಿಳಿಸಿದ್ದಾರೆ.

'ತೋಳು ಇರದ (ಸ್ಲೀವ್ ಲೆಸ್) ಒಂದು ಹಾಗೂ ಪೂರ್ತಿ ತೋಳು ಇರುವ (ವಿತ್ ಸ್ಲೀವ್) ಒಂದು ಸ್ವೆಟರ್‌ನಂತೆ ಪ್ರತಿ ವಿದ್ಯಾರ್ಥಿಗೆ ಎರಡು ಸ್ವೆಟರ್ ಖರೀದಿಸಲಾಗಿದೆ. ಒಟ್ಟು 16,167 ಸೆಟ್ ಸ್ವೆಟರ್‌ಗಳನ್ನು ಶಾಲಾ- ಕಾಲೇಜುಗಳ ವಿದ್ಯಾರ್ಥಿಗಳ ದಾಖಲಾತಿ ಆಧಾರದಲ್ಲಿ ವಿತರಿಸಲಾಗಿದೆ. ಅವುಗಳಲ್ಲಿ ಎಷ್ಟು ಸ್ವೆಟರ್‌ಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆ. ವಿತರಣೆ ಎಷ್ಟು ಬಾಕಿ ಇದೆ ಎಂಬ ವಿವರ ಶಾಲಾ-ಕಾಲೇಜುಗಳ ಮುಖ್ಯಸ್ಥರಿಂದ ಇನ್ನಷ್ಟೇ ಬರಬೇಕಿದೆ' ಎಂದು ವಿವರಿಸಿದ್ದಾರೆ.

'ಸ್ವೆಟರ್ ಖರೀದಿಸುವ ಪ್ರಸ್ತಾವಕ್ಕೆ ಮುಖ್ಯಆಯುಕ್ತರು ಅನುಮೋದನೆ ನೀಡಿದ್ದರು. ಕೆಎಚ್‌ಡಿಸಿಯು ತೋಳು ಇರುವ ಹಾಗೂ ತೋಳುಇರದ ಎರಡು ಸ್ವೆಟರ್‌ಗಳಿಗೆ ₹ 1090ರಿಂದ ₹ 1280ರವರೆಗೆ ದರ ನಿಗದಿಪಡಿಸಿತ್ತು. ಸ್ವೆಟರ್ ಪೂರೈಕೆದ ಕೆಎಚ್‌ಡಿಸಿಗೆ ₹ 1,68,66,741 ಪಾವತಿಸಲಾಗಿದೆ. ಪೂರೈಕೆಯಾದ ಸ್ವೆಟರ್‌ಗಳ ಗುಣಮಟ್ಟವನ್ನು ಕೇಂದ್ರ ಸರ್ಕಾರದ ಜವಳಿ ಸಚಿವಾಲಯದ ಅಧೀನದ 'ರೀಜನಲ್ ಲ್ಯಾಬೊರೇಟರಿ ಟೆಕ್ಸ್‌ಟೈಲ್ಸ್ ಕಮಿಟಿ'ಯ ಜವಳಿ ಪರೀಕ್ಷೆ ಸೇವೆಯ ಪ್ರಯೋಗಾಲಯದಿಂದ ಪರೀಕ್ಷೆಗೆ ಒಳಪಡಿಸಲಾಗಿದೆ. ಈ ಕಮಿಟಿಯು ಸ್ವೆಟರ್‌ಗಳ ಬಗ್ಗೆ ತೃಪ್ತಿದಾಯಕ ವರದಿ ನೀಡಿದೆ' ಎಂದು ಅವರು ವರದಿಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ದಲಿತ ಸಂಘರ್ಷ ಸಮಿತಿಯವರು ಬಿಬಿಎಂಪಿ ಕೇಂದ್ರ ಕಚೇರಿ ಬಳಿ ಸ್ವೆಟರ್‌ಗಳನ್ನು ಮಾರಾಟ ಮಾಡಿ ಮಂಗಳವಾರ ಪ್ರತಿಭಟನೆ ನಡೆಸಿದರು

ಬಿಬಿಎಂಪಿ ಶಾಲಾ ಕಾಲೇಜು ವಿದ್ಯಾರ್ಥಿಗಳ ವಿವರ (2020–21ನೇ ಸಾಲಿನಲ್ಲಿ)

ಶಿಕ್ಷಣ ಸಂಸ್ಥೆ	ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ
ಪ್ರಾಥಮಿಕ ಶಾಲೆ	16	2,146
ಪ್ರೌಢ ಶಾಲೆ	33	5,807
ಪದವಿ ಪೂರ್ವ	15	4,712
ಪದವಿ, ಸ್ನಾತಕೋತ್ತರ ಪದವಿ	06	1,232

ಜನ 'ಕಲ್ಯಾಣ' ಯೋಜನೆಗೆ ಸೆ. 17ಕ್ಕೆ ಚಾಲನೆ– ಸೇಡಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲ್ಯಾಣ ಕರ್ನಾಟಕ ಭಾಗದ ಪ್ರತಿ ಹಳ್ಳಿಯಲ್ಲಿ 'ಪ್ರಗತಿ ಕೇಂದ್ರ' ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ 'ಕೌಶಲ ಕೇಂದ್ರ' ತೆರೆದು ಮೂರು ಲಕ್ಷ ಉದ್ಯೋಗ ಸೃಷ್ಟಿಸುವ ಯೋಜನೆ ರೂಪಿಸಲಾಗಿದೆ' ಎಂದು ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಮತ್ತು ಸಾಂಸ್ಕೃತಿಕ ಸಂಘದ ಅಧ್ಯಕ್ಷ ಬಸವರಾಜ ಪಾಟೀಲ ಸೇಡಂ ತಿಳಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಗೃಹ ಕಚೇರಿ ಕೃಷ್ಣಾದಲ್ಲಿ ಮಂಗಳವಾರ ಭೇಟಿ ಮಾಡಿದ ಸೇಡಂ, ಈ ಯೋಜನೆಗಳನ್ನು ಸೆ. 17ರಂದು ಕಲ್ಯಾಣ ಕರ್ನಾಟಕ ಉತ್ಸವದಲ್ಲಿ ಲೋಕಾರ್ಪಣೆ ಮಾಡುವಂತೆ ಮನವಿ ಮಾಡಿದರು.

ಬಳಿಕ ಮಾತನಾಡಿದ ಅವರು, ಮಹಿಳೆಯರಿಗೆ ಸ್ವಾವಲಂಬಿ ಜೀವನ, ಮಕ್ಕಳಲ್ಲಿ ಸಾತ್ವಿಕ ಹಾಗೂ ರಚನಾತ್ಮಕ ಚಿಂತನೆ ಬೆಳೆಸುವ ಎರಡು ವಿಶಿಷ್ಟ ಯೋಜನೆಗಳನ್ನು ಸಿದ್ಧಪಡಿಸಲಾಗಿದೆ' ಎಂದರು.

'ಪ್ರಗತಿ ಕೇಂದ್ರ' ಮಕ್ಕಳಿಗೆ ಸಂಜೆ ಶಾಲೆಯ ರೂಪದಲ್ಲಿ ನಡೆಯಲಿವೆ. ಸಾಂಸ್ಕೃತಿಕ, ಐತಿಹಾಸಿಕ ಪರಂಪರೆ, ಹಾಡು, ಸಂಗೀತ-ನೃತ್ಯದ ಮೂಲಕ ಕಲಿಕೆ, ಸಕಾರಾತ್ಮಕ ಚಿಂತನೆ ಬೆಳೆಸುವುದು ಈ ಕೇಂದ್ರದ ಆಶಯ. 'ಕೌಶಲ ಕೇಂದ್ರ'ದ ಮೂಲಕ 6,400 ಸ್ವಸಹಾಯ ಗುಂಪುಗಳಿಗೆ ವಿವಿಧ ವೃತ್ತಿ ತರಬೇತಿ, ಬಡ ಮಹಿಳೆಯರಿಗೆ ಸ್ವಯಂ ಉದ್ಯೋಗಕ್ಕೆ ಬೇಕಾದ ಕೌಶಲ ಕಲಿಸಿ ತಲಾ ₹ 5 ಸಾವಿರದಿಂದ ₹ 1 ಲಕ್ಷವರೆಗೆ ಸಾಲ ನೀಡಲು ಯೋಜನೆ ರೂಪಿಸಲಾಗಿದೆ ಎಂದು ಸೇಡಂ ತಿಳಿಸಿದರು.

ಬಸವ ಕಲ್ಯಾಣದಲ್ಲಿ ತಲೆ ಎತ್ತಲಿರುವ 'ಅನುಭವ ಮಂಟಪ' ನಿರ್ಮಾಣ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರೂ ಆದ ಸೇಡಂ, ಯೋಜನೆಯ ಪ್ರಗತಿಯನ್ನು ಮುಖ್ಯಮಂತ್ರಿಗೆ ವಿವರಿಸಿದರು.

'ಅನುಭವ ಮಂಟಪ' ಬಸವ ಧರ್ಮಕ್ಕೆ ಸೀಮಿತವಲ್ಲ, ಪ್ರಧಾನಿ ನರೇಂದ್ರ ಮೋದಿಯವರ ಅಪೇಕ್ಷೆಯಂತೆ ವಿಶ್ವದರ್ಜೆ ಕೇಂದ್ರವಾಗಿ ರೂಪುಗೊಳ್ಳಬೇಕು ಎಂದು ಬೊಮ್ಮಾಯಿ ಆಶಿಸಿದರು. 'ಅನುಭವ ಮಂಟಪ'ಕ್ಕೆ ಹೊಂದಿಕೊಂಡ ತ್ರಿಪುರಾಂತ ಕೆರೆ ಅಭಿವೃದ್ಧಿಗೆ ₹ 27 ಕೋಟಿ ಬೇಕೆಂಬ ಮನವಿಗೆ ಮುಖ್ಯಮಂತ್ರಿ ಒಪ್ಪಿಗೆ ನೀಡಿದರು ಎಂದು ಸೇಡಂ ಹೇಳಿದರು.

'ವಿಶ್ವದ ಮೊದಲ ಸಂಸತ್ತು ಎಂಬ ಖ್ಯಾತಿಗೆ ತಕ್ಕಂತೆ ತಂತ್ರಜ್ಞಾನದ ಸ್ಪರ್ಶದೊಂದಿಗೆ 'ಅನುಭವ ಮಂಟಪ' ಹಾಗೂ ಅದರ ಪೂರಕ ಕಾಮಗಾರಿಗಳಿಗೆ ₹ 600 ಕೋಟಿ ವೆಚ್ಚದ ಯೋಜನಾ ವರದಿ ಸಿದ್ಧವಾಗಿದೆ. ಅನುಷ್ಠಾನ ಸಮಿತಿ ಸಭೆಯಲ್ಲಿ ಚರ್ಚಿಸಿ, ಅಂತಿಮ ಅನುಮೋದನೆಗೆ ಸರ್ಕಾರಕ್ಕೆ ಕಳುಹಿಸಲಾಗುವುದು. ಆಡಳಿತಾತ್ಮಕ, ತಾಂತ್ರಿಕ ಅನುಮೋದನೆ ನೀಡಿದ ಬಳಿಕ ಟೆಂಡರ್ ಕರೆಯಲಾಗುವುದು. ಮೂರು ವರ್ಷಗಳ ಕಾಲಮಿತಿ ಇದ್ದರೂ ಇನ್ನಷ್ಟು ಕಾಲಾವಕಾಶ ಬೇಕಾಗಬಹುದು' ಎಂದು ಸೇಡಂ ತಿಳಿಸಿದರು.



ಕಲಬುರ್ಗಿಯ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಮತ್ತು ಸಾಂಸ್ಕೃತಿಕ ಸಂಘದ ಅಧ್ಯಕ್ಷ ಹಾಗೂ ಮಾಜಿ ಸಂಸದ ಬಸವರಾಜ ಪಾಟೀಲ ಸೇಡಂ ನೇತೃತ್ವದ ನಿಯೋಗವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಮಂಗಳವಾರ ಬೆಂಗಳೂರಿನಲ್ಲಿ ಭೇಟಿ ಮಾಡಿತು. ಈ ವೇಳೆ, ಬೊಮ್ಮಾಯಿ ಅವರಿಗೆ ಕಲಾಕೃತಿ ನೀಡಿ ಗೌರವಿಸಿದ ಬಸವರಾಜ ಪಾಟೀಲ ಸೇಡಂ

ವೀಲಿಂಗ್: ಎಂಟು ಮಂದಿ ವಿರುದ್ಧ ಪ್ರಕರಣ

ಬೆಂಗಳೂರು: ವೀಲಿಂಗ್ ಮಾಡುತ್ತಾ ಸಾರ್ವಜನಿಕರಿಗೆ ಕಿರಿಕಿರಿ ಉಂಟುಮಾಡುತ್ತಿದ್ದವರ ಪತ್ತೆಗಾಗಿ ಇದೇ 16ರಿಂದ 22ರ ಅವಧಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿದ್ದ ಬೆಂಗಳೂರು ನಗರ ಸಂಚಾರ ವಿಭಾಗದ ಪೊಲೀಸರು ಒಟ್ಟು 8 ಮಂದಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಈ ಪೈಕಿ ಇಬ್ಬರು 16 ವರ್ಷದವರಾಗಿದ್ದಾರೆ.

'ಎಂಟು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದ್ದು, ಅವುಗಳ ಮಾಲೀಕರ ವಿರುದ್ಧವೂ ಕಾನೂನಿನ ಅನ್ವಯ ಕ್ರಮ ಕೈಗೊಳ್ಳಲಾಗಿದೆ. ಅಪ್ರಾಪ್ತ ವಯಸ್ಸಿನ ಚಾಲಕರ ತಂದೆ ತಾಯಿ ವಿರುದ್ಧವೂ ಕ್ರಮ ಜರುಗಿಸಲಾಗುತ್ತದೆ' ಎಂದು ಪೊಲೀಸರು ಹೇಳಿದ್ದಾರೆ.

'ಕೆ.ಆರ್.ಪುರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ನಾಲ್ಕು, ಬ್ಯಾಟರಾಯನಪುರ ಠಾಣಾ ವ್ಯಾಪ್ತಿಯಲ್ಲಿ ಎರಡು ಹಾಗೂ ಪುಲಕೇಶಿನಗರ ಮತ್ತು ಬಾಣಸವಾಡಿ ಠಾಣಾ ವ್ಯಾಪ್ತಿಯಲ್ಲಿ ತಲಾ ಒಂದು ಪ್ರಕರಣ ದಾಖಲಾಗಿದೆ. ಎಂಟು ಜನರ ಚಾಲನಾ ಪರವಾನಗಿಯನ್ನು ರದ್ದುಪಡಿಸಲಾಗುತ್ತದೆ. ಸಾರ್ವಜನಿಕರ ಹಿತದೃಷ್ಟಿಯಿಂದ ಮುಂದಿನ ದಿನಗಳಲ್ಲೂ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತದೆ' ಎಂದೂ ತಿಳಿಸಿದ್ದಾರೆ.

ಚಿತ್ರಾವಳಿ

ಕೆ.ಆರ್.ಪುರ ಸಮೀಪದ ಗುಂಜೂರಿನ ಆಫ್ ರೋಡ್ ಪಾರ್ಕ್ ನಲ್ಲಿ ಯುನೈಟೆಡ್ ಮೋಟಾರ್ಸ್ ಸ್ಪೋರ್ಟ್ಸ್ ಮತ್ತು ಚೇತನ್ ಶಿವರಾಮ್ ಮೋಟಾರ್ಸ್ ಸಹಭಾಗಿತ್ವದಲ್ಲಿ ಆಟೋ ಕ್ರಾಸ್ ಫಾಸ್ಟೆಸ್ಟ್ ಡ್ರೈವರ್ಸ್ ಸ್ಪರ್ಧೆಯಲ್ಲಿ ವಿಜೇತರಾದ ಸ್ಪರ್ಧಾರ್ಥಿಗಳಿಗೆ ರಾಜ್ಯ ಬಿಜೆಪಿ ಕಾರ್ಯಕಾರಿಣಿ ಸದಸ್ಯ ಜಯಚಂದ್ರರೆಡ್ಡಿ ಬಹುಮಾನ ವಿತರಿಸಿದರು. ಆಯೋಜಕ ನಿಖಿಲ್, ಮುಖಂಡರಾದ ಮನೋಹರ್ ರೆಡ್ಡಿ, ರಾಜಾರೆಡ್ಡಿ, ವೆಂಕಟಸ್ವಾಮಿರೆಡ್ಡಿ, ಚನ್ನಸಂದ್ರ ಚಂದ್ರಶೇಖರ್ ಇದ್ದರು

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಮಂಗಳವಾರ ಭೇಟಿ ಮಾಡಿ ಎಲ್ಲ ಕ್ಷೇತ್ರಗಳಲ್ಲೂ ಕನ್ನಡಕ್ಕೆ ಪ್ರಾಧಾನ್ಯ ನೀಡಬೇಕೆಂದು ಮನವಿ ಮಾಡಿದರು. ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಪದ್ಮರಾಜ ದಂಡಾವತಿ ಹಾಗೂ ಕೆ. ರಾಜಕುಮಾರ್ ಇದ್ದರು

ಪರಿಷತ್ ಚುನಾವಣೆ: ಸೆ. 4, 5ರಂದು ಕಾಂಗ್ರೆಸ್ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ನ 25 ಸದಸ್ಯರ ಅವಧಿ 2022ರ ಜನವರಿ 5ರಂದು ಹಾಗೂ ನಾಲ್ವರು ಸದಸ್ಯರ ಅವಧಿ ಜುಲೈ 4ರಂದು ಕೊನೆಯಾಗಲಿದ್ದು, ಖಾಲಿಯಾಗುವ ಈ ಸ್ಥಾನಗಳಿಗೆ ನಡೆಯಲಿರುವ ಚುನಾವಣೆಗೆ ಈಗಿನಿಂದಲೇ ಸಿದ್ಧತೆ ಆರಂಭಿಸಲು ಕೆಪಿಸಿಸಿ ಮುಂದಾಗಿದೆ. ಈ ಸಂಬಂಧ ಸೆ. 4 ಮತ್ತು 5ರಂದು ಪೂರ್ವಭಾವಿ ಸಭೆ ಹಮ್ಮಿಕೊಂಡಿದೆ.

'ಸ್ಥಳೀಯ ನಗರ ಸಂಸ್ಥೆಗಳು, ಪಂಚಾಯತ್‌ರಾಜ್ ಸಂಸ್ಥೆಗಳು ಹಾಗೂ ಸಂಸದೀಯ ಜನಪ್ರತಿನಿಧಿಗಳಿಂದ ಆಯ್ಕೆಯಾದ 25 ಮತ್ತು ಪದವೀಧರರ ಮತ್ತು ಶಿಕ್ಷಕರ ಕ್ಷೇತ್ರಗಳಿಂದ ಆಯ್ಕೆಯಾದ ನಾಲ್ಕು ಸದಸ್ಯ ಸ್ಥಾನಗಳು ಖಾಲಿ ಆಗಲಿವೆ. ಈ ಚುನಾವಣೆಗಳಿಗೆ ಸಿದ್ಧತೆ ನಡೆಸಲು ಜಿಲ್ಲಾ ಕಾಂಗ್ರೆಸ್ ಘಟಕಗಳ ಅಧ್ಯಕ್ಷರು, ಸಂಸದರು, ಮಾಜಿ ಸಂಸದರು, ಶಾಸಕರು, ಮಾಜಿ ಶಾಸಕರು, 2018 ಮತ್ತು 2019ರ ವಿಧಾನಸಭೆ, ಲೋಕಸಭೆ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದ ಅಭ್ಯರ್ಥಿಗಳ ಸಭೆ ಆಯೋಜಿಸಲಾಗಿದೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ತಿಳಿಸಿದ್ದಾರೆ.

'ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆಯಲಿರುವ ಈ ಸಭೆಯಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ ಮತ್ತು ಕೆಪಿಸಿಸಿ ಕಾರ್ಯಾಧ್ಯಕ್ಷರು ಭಾಗವಹಿಸಲಿದ್ದಾರೆ. ಆಯಾ ವಿಧಾನ ಪರಿಷತ್ ಕ್ಷೇತ್ರಗಳ ವ್ಯಾಪ್ತಿಯ ಜಿಲ್ಲೆಗಳ ನಾಯಕರ ಸಭೆಯನ್ನು ಈ ಎರಡೂ ದಿನ ಪ್ರತ್ಯೇಕವಾಗಿ ಆಯೋಜಿಸಲಾಗಿದೆ' ಎಂದೂ ಅವರು ಹೇಳಿದ್ದಾರೆ.

'ನಗರದ ಶುಚಿತ್ವಕ್ಕಾಗಿ ನಾಗರಿಕರ ಪಾಲ್ಗೊಳ್ಳುವಿಕೆ'– ಇಂದು ಚಾಲನೆ

ಬೆಂಗಳೂರು: 'ಕಸ ನಿರ್ವಹಣೆ ನಿಯಮಗಳು-2016'ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ನಗರದ ಸಮಾನ ಮನಸ್ಕ ಸ್ವಚ್ಛತಾ ಸ್ವಯಂಸೇವಕರ ಜೊತೆಗೂಡಿ 'ನಗರದ ಶುಚಿತ್ವಕ್ಕಾಗಿ ನಾಗರೀಕರ ಪಾಲ್ಗೊಳ್ಳುವಿಕೆ' ಎಂಬ ಕಾರ್ಯಕ್ರಮವನ್ನು ಬಿಬಿಎಂಪಿಯು ರೂಪಿಸಿದೆ.

'ನಮ್ಮ ನಡೆ, ಸ್ವಚ್ಛತೆಯ ಕಡೆ' ಎಂಬ ಗುರಿ ಹಾಗೂ 'ನಮ್ಮ ಕಸ, ನಮ್ಮ ಜವಾಬ್ದಾರಿ' ಎಂಬ ಧ್ಯೇಯವಾಕ್ಯದೊಂದಿಗೆ ಜಾರಿಯಾಗುವ ಈ ಕಾರ್ಯಕ್ರಮಕ್ಕೆ ರಾಜ್ಯ ಮಟ್ಟದ ಕಸ ನಿರ್ವಹಣೆ ಉಸ್ತುವಾರಿ ಸಮಿತಿಯ ಅಧ್ಯಕ್ಷರಾಗಿರುವ ನಿವೃತ್ತ ನ್ಯಾಯಮೂರ್ತಿ ಸುಭಾಷ್ ಬಿ.ಅಡಿ, ಅಭಿವೃದ್ಧಿ ಆಯುಕ್ತರಾದ ವಂದಿತಾ ಶರ್ಮ, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಇದೇ 25ರಂದು ಬೆಳಿಗ್ಗೆ 11ಕ್ಕೆ ಪುರಭವನದ ಬಳಿ ಚಾಲನೆ ನೀಡಲಿದ್ದಾರೆ.

'ಈ ಕಾರ್ಯಕ್ರಮದಡಿ ನಗರದ ಪ್ರತಿಯೊಂದು ಬೀದಿಗೂ ಸ್ವಯಂಸೇವಕರನ್ನು, ಪ್ರತಿ ಬ್ಲಾಕ್‌ಗೂ ಶುಚಿ ಮಿತ್ರರನ್ನು, ವಾರ್ಡ್ ಮತ್ತು ವಿಭಾಗೀಯ ಮಟ್ಟದಲ್ಲಿ ಸಂಯೋಜಕರನ್ನು ಹಾಗೂ ವಲಯ ಮಟ್ಟದಲ್ಲಿ ಅಪೆಕ್ಸ್ ಸಂಯೋಜಕರನ್ನು ನಿಯೋಜಿಸಲಾಗುತ್ತದೆ. ಕಸ ನಿರ್ವಹಣೆ ವಿಚಾರದಲ್ಲಿ ಇವರು ಪಾಲಿಕೆಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಲಿದ್ದಾರೆ. ತಮಗೆ ವಹಿಸಲಾದ ಬೀದಿ, ಬ್ಲಾಕ್, ವಾರ್ಡ್, ವಿಭಾಗ ಅಥವಾ ವಲಯ ಮಟ್ಟದಲ್ಲಿ ಸಂಪರ್ಕ ಕಾರ್ಯಕರ್ತರೊಂದಿಗೆ ಮನೆ ಮನೆಗೆ ತೆರಳಿ ಜಾಗೃತಿ ಮೂಡಿಸಲಿದ್ದಾರೆ. ಸಾಮೂಹಿಕ ಪ್ರಚಾರ ಕಾರ್ಯಗಳನ್ನೂ ಕೈಗೊಳ್ಳಲಿದ್ದಾರೆ. ಕಸವನ್ನು ಮೂಲದಲ್ಲಿಯೇ ವಿಂಗಡಿಸಿ ಸಂಗ್ರಹಿಸುವುದರ ಮಹತ್ವದ ಬಗ್ಗೆ ಹಾಗೂ ನಗರವನ್ನು ಸ್ವಚ್ಛವಾಗಿಟ್ಟುಕೊಳ್ಳುವ ಬಗ್ಗೆ ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಿ ತಂತ್ರಜ್ಞರ ಸಹಾಯದಿಂದ ಪರಿಹಾರಗಳನ್ನು ಒದಗಿಸಲು ನೆರವಾಗಲಿದ್ದಾರೆ' ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ನಕಲಿ ಬಸ್ ಪಾಸ್: ಅಪರಾಧಿಗೆ ಮೂರು ವರ್ಷ ಶಿಕ್ಷೆ

ಬೆಂಗಳೂರು: ನಕಲಿ ಪಾಸ್ ಸೃಷ್ಟಿಸಿಕೊಂಡು ಬಿಎಂಟಿಸಿ ಬಸ್‌ನಲ್ಲಿ ಉಚಿತವಾಗಿ ಸಂಚರಿಸಿ ವಂಚಿಸಿದ್ದ ಅಪರಾಧಿ ಮಹಮ್ಮದ್ ವಸೀಂ (29) ಎಂಬಾತನಿಗೆ ಮೂರು ವರ್ಷಗಳ ಶಿಕ್ಷೆ ವಿಧಿಸಿ 11ನೇ ಎಸಿಎಂಎಂ ನ್ಯಾಯಾಲಯ ಆದೇಶ ಹೊರಡಿಸಿದೆ.

ಪುಲಿಕೇಶಿನಗರ ಠಾಣೆ ವ್ಯಾಪ್ತಿಯಲ್ಲಿದಾಖಲಾಗಿದ್ದಪ್ರಕರಣದವಿಚಾರಣೆಯನ್ನುನ್ಯಾಯಾಧೀಶಮಲಕಾರಿರಾಮಪ್ಪ ಒಡೆಯರ್ ಅವರು ನಡೆಸಿದ್ದರು. ಹಿರಿಯ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ಸವಿತಾ ರತನ್ ವಾದಿಸಿದ್ದರು.

ನಾಗವಾರ ಸಾರಾಯಿಪಾಳ್ಯದ ನಿವಾಸಿ ಮಹಮ್ಮದ್ ವಸೀಂ, 2010ರ ಜನವರಿ 13ರಂದು ಬಿಎಂಟಿಸಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದರು. ಬಿಎಂಟಿಸಿ ತನಿಖಾ ದಳದ ಸಹಾಯಕ ಸಂಚಾರ ನಿಯಂತ್ರಕರಾದ ಬಿ.ಎಂ. ವಿಜಯಲಕ್ಷ್ಮಿ ಹಾಗೂ ಮಮತಾ ಅವರು ತಪಾಸಣೆಗೆಂದು ಬಸ್ ಹತ್ತಿದ್ದರು. ಅವರಿಗೆ ಅಪರಾಧಿ ತೋರಿಸಿದ್ದ, ಬಸ್ ಪಾಸ್ ನಕಲಿ ಎಂಬುದನ್ನು ಪತ್ತೆ ಮಾಡಿದ್ದ ನಿಯಂತ್ರಕರು, ಈತನನ್ನು ಪುಲಿಕೇಶಿನಗರ ಪೊಲೀಸರ ವಶಕ್ಕೆ ನೀಡಿದ್ದರು. ಪ್ರಕರಣ ದಾಖಲಾಗಿ 11 ವರ್ಷಗಳ ನಂತರ ಅಪರಾಧಿಗೆ ಶಿಕ್ಷೆ ಆಗಿದೆ.

11 ಕೆ.ಜಿ. ಗಾಂಜಾ ವಶ

ಬೆಂಗಳೂರು: ಅಕ್ರಮವಾಗಿ ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರನ್ನು ಬಂಧಿಸಿರುವ ಕೆ.ಪಿ.ಅಗ್ರಹಾರ ಪೊಲೀಸರು ಅವರಿಂದ 11 ಕೆ.ಜಿ. 492 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಆರೋಪಿಗಳು ಗಾಂಜಾ ಮಾರಾಟ ಮಾಡುತ್ತಿರುವ ಕುರಿತ ಮಾಹಿತಿ ಆಧರಿಸಿ ದಾಳಿ ನಡೆಸಿದ ಇನ್‌ಸ್ಪೆಕ್ಟರ್ ಎಂ.ಸದಾನಂದ ನೇತೃತ್ವದ ತಂಡ ಸಲ್ಮಾನ್ ಖಾನ್ ಹಾಗೂ ಇಬ್ರಾಹಿಂ ಖಾನ್ ಅವರನ್ನು ಬಂಧಿಸಿದೆ. ಇವರ ವಿರುದ್ಧ ಪ್ರಕರಣ ಕೂಡ ದಾಖಲಾಗಿದೆ.

ಕೇಬಲ್ ತೆರವಿಗೆ ತಿಂಗಳ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ರಸ್ತೆ, ಪಾದಚಾರಿ ಮಾರ್ಗ, ರಸ್ತೆ ಪಕ್ಕದ ಮರಗಳು ಮತ್ತು ವಿದ್ಯುತ್ ಕಂಬಗಳ ಮೇಲೆ ಅನಧಿಕೃತವಾಗಿ ನೇತುಹಾಕಿರುವ ಟಿ.ವಿ ಕೇಬಲ್ ಹಾಗೂ ಆಪ್ಟಿಕ್ ಫೈಬರ್ ಕೇಬಲ್‌ಗಳನ್ನು (ಒಎಫ್‌ಸಿ) ತೆರವುಗೊಳಿಸಬೇಕು ಎಂದು ಬಿಬಿಎಂಪಿಯು ಕೇಬಲ್ ಆಪರೇಟರ್‌ಗಳಿಗೆ ಹಾಗೂ ಇಂಟರ್ನೆಟ್ ಸೇವೆ ಒದಗಿಸುವ ಸಂಸ್ಥೆಗಳಿಗೆ ಸೂಚಿಸಿದೆ. ಅನಧಿಕೃತ ಕೇಬಲ್‌ಗಳನ್ನು ತೆರವುಗೊಳಿಸಲು ಒಂದು ತಿಂಗಳ ಗಡುವು ವಿಧಿಸಿದೆ.

ನಗರದಲ್ಲಿ ಅನಧಿಕೃತವಾಗಿ ನೇತುಹಾಕಿರುವ ಕೇಬಲ್‌ಗಳನ್ನು ತೆರವುಗೊಳಿಸುವಂತೆ ಹೈಕೋರ್ಟ್ 2021ರ ಫೆ.24ರಂದು ಹಾಗೂ ಆ. 3ರಂದು ಆದೇಶ ಮಾಡಿತ್ತು. ಹೈಕೋರ್ಟ್ ಚಾಟಿ ಬೀಸಿದ ಬಳಿಕ ಎಚ್ಚೆತ್ತುಕೊಂಡಿರುವ ಬಿಬಿಎಂಪಿ ಕೇಬಲ್ ತೆರವಿಗೆ ಸಂಬಂಧಿಸಿ ಮಂಗಳವಾರ ಸಾರ್ವಜನಿಕ ಪ್ರಕಟಣೆಯನ್ನು ನೀಡಿದೆ.

'ಅನಧಿಕೃತವಾಗಿ ಅಳವಡಿಸಿರುವ ಎಲ್ಲಾ ಟಿ.ವಿ. ಕೇಬಲ್, ಒಎಫ್‌ಸಿ ಹಾಗೂ ಇತರೆ ಕೇಬಲ್‌ಗಳನ್ನು ಈ ತಿಳಿವಳಿಕೆ ಪತ್ರ ಪ್ರಕಟಣೆಯಾದ ದಿನದಿಂದ ಒಂದು ತಿಂಗಳ ಒಳಗೆ ತೆರವುಗೊಳಿಸದೇ ಹೋದರೆ, ಸಂಬಂಧಪಟ್ಟ ಕೇಬಲ್ ಆಪರೇಟರ್‌ಗಳು, ಇಂಟರ್ನೆಟ್ ಸೇವೆ ಒದಗಿಸುವ ಸಂಸ್ಥೆಗಳು ಹಾಗೂ ಸಂಬಂಧಪಟ್ಟ ಇತರ ಸಂಸ್ಥೆಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಎಚ್ಚರಿಕೆ ನೀಡಿದ್ದಾರೆ.

'ಅನಧಿಕೃತ ಕೇಬಲ್‌ಗಳನ್ನು ಅಳವಡಿಸಿದ ಸಂಸ್ಥೆಗಳೇ ಅವುಗಳನ್ನು ತೆರವುಗೊಳಿಸದಿದ್ದರೆ, ಬಿಬಿಎಂಪಿಯು ಯಾವುದೇ ಮುನ್ಸೂಚನೆ ನೀಡದೆ ತೆರವುಗೊಳಿಸಲಿದೆ' ಎಂದೂ ಅವರೂ ತಿಳಿಸಿದ್ದಾರೆ.

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಮಹಾನಗರ ಆಯುಕ್ತರ ಕಛೇರಿ, ಬಿ.ಎಂ.ಆರ್.ಡಿ.ಎ., ನಂ.01, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560 052
ದೂರವಾಣಿ ಸಂಖ್ಯೆ: 080–22263479

ಸಂಖ್ಯೆ : STRRPA/TP/CLU/27/2021-22 **ಪ್ರಕಟಣೆ** ದಿನಾಂಕ: 24.08.2021

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು "ವ್ಯವಸಾಯ" ವಲಯದಿಂದ "ವಸತಿ" ಭೂಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಅನುಮೋದಿತ ಮಹಾ ಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
(1)	(2)	(3)	(4)	(5)	(6)	(7)	(8)	(9)
1.	ಶ್ರೀ ಮುತ್ಯಾಲಪ್ಪ– ಮುನಿಶಾಮಪ್ಪ	ದೇವನಹಳ್ಳಿ	ಚನ್ನರಾಯಪಟ್ಟಣ	ಸೊಮತ್ತನಹಳ್ಳಿ	230	2–20	ವ್ಯವಸಾಯ	ವಸತಿ
2.	ಶ್ರೀ ಶಂಕರ್ ಬಿನ್ ಮುನಿವೆಂಕಟರಮಣಪ್ಪ ಶ್ರೀ ಎಂ.ಸುಬ್ರಮಣಿ ಬಿನ್ ಮುನಿವೆಂಕಟರಮಣಪ್ಪ ಸಾಕಮ್ಮ ಬಿನ್ ನಾಗಪ್ಪ	ದೇವನಹಳ್ಳಿ	ಚನ್ನರಾಯಪಟ್ಟಣ	ಸೊಮತ್ತನಹಳ್ಳಿ	231	2–19	ವ್ಯವಸಾಯ	ವಸತಿ

ಷರಾ:– ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಸತಿ ಬಡಾವಣೆಗಳು ಬಂದಿದ್ದು/ಬರುತ್ತಿದ್ದು, ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ವಿನ್ಯಾಸವನ್ನು ಅಭಿವೃದ್ಧಿಪಡಿಸಿ, ಸುತ್ತಮುತ್ತಲು ಅಭಿವೃದ್ಧಿ ಬೆಳವಣಿಗೆಗಳು ಬಂದಿರುವುದರಿಂದ ನಮ್ಮ ಸ್ವಂತ ಜಮೀನನ್ನು ಸಹ ಅಭಿವೃದ್ಧಿಪಡಿಸಿ ಕಟ್ಟಡ ನಿರ್ಮಾಣ ಮಾಡುವ ಸಲುವಾಗಿ ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾಸಾಸಂಇ/ಬೆಂ.ನ/ಜಿಎ/1291/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರೈಲು ಭೂಮಿ ಅಭಿವೃದ್ಧಿ ಪ್ರಾಧಿಕಾರ

(ಭಾರತ ಸರ್ಕಾರದ ರೈಲ್ವೆ ಸಚಿವಾಲಯ ಅಡಿಯಲ್ಲಿನ ಒಂದು ಶಾಸನಬದ್ಧ ಪ್ರಾಧಿಕಾರ)
ಯೂನಿಟ್ ನಂ. 702–ಬಿ, 7ನೇ ಮಹಡಿ, ಕನ್ಸೆಕ್ಸ್ ಟವರ್–2, ಡಿಎಂಆರ್‌ಸಿ ಬಿಲ್ಡಿಂಗ್, ಅಜ್ಮೇರಿ ಗೇಟ್, ನವದೆಹಲಿ–110002, ಫೋನ್: + 91–11–23232854, ಫ್ಯಾಕ್ಸ್: +91–11–23232835

ಭಾರತೀಯ ರೈಲ್ವೆಯ ವಿವಿಧ ವಲಯಗಳಲ್ಲಿ ಸ್ಥಿತಗೊಂಡಿರುವ 08 ಕ್ರೀಡಾ ಸಮುಚ್ಚಯಗಳ/ಸ್ಟೇಡಿಯಂಗಳ ಆದಾಯ ವರ್ಧನೆಗಾಗಿ ಪೂರ್ವ ಕಾರ್ಯಸಾಧ್ಯತೆ ಅಧ್ಯಯನ, ಮಾರ್ಕೆಟಿಂಗ್ ಮತ್ತು ಟ್ರಾನ್ಸಾಕ್ಷನ್ ಅಡ್ವೈಸರಿ ಸೇವೆಗಳಿಗಾಗಿ ಸಮಾಲೋಚಕರನ್ನು ತೊಡಗಿಸಿಕೊಳ್ಳಲು ಪ್ರಸ್ತಾವಣೆಗೆ ಮನವಿ (ಆರ್‌ಎಫ್‌ಪಿ).

ಸದರಿ 08 ಕ್ರೀಡಾ ಸಮುಚ್ಚಯಗಳ/ಸ್ಟೇಡಿಯಂಗಳ ಹೆಸರು:– ಇಂದೂರ್ ಸ್ಟೇಡಿಯಂ ಮತ್ತು ಕ್ರಿಕೆಟ್ ಮೈದಾನ, ಪರೇಲ್, ಮುಂಬೈ (ಸಿಆರ್), ಸ್ಟೇಡಿಯಂ, ಭುವನೇಶ್ವರ (ಇಸಿಒಆರ್) ಸ್ಟೇಡಿಯಂ, ಬೆಹಲಾ, ಕೊಲ್ಕತಾ (ಇಆರ್), ಸ್ಪೋರ್ಟ್ಸ್ ಕಾಂಪ್ಲೆಕ್ಸ್, ಚೆನ್ನೈ, (ಐಸಿಎಫ್), ಕ್ರಿಕೆಟ್ ಸ್ಟೇಡಿಯಂ, ಯಲಹಂಕ, ಬೆಂಗಳೂರು (ಆರ್‌ಡಬ್ಲು ಎಫ್), ...

... www.rlda.indianrailways.gov.in ... /RLDA. ... (ಜಾಹೀರಾತು 87505 54811)

ಶಿಡ್ಲಘಟ್ಟ ಯೋಜನಾ ಪ್ರಾಧಿಕಾರ

ಸಂ:ಶಿಯೋಪ್ರಾ/ಮಹಾಯೋಜನೆ/2019–20

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 10(1) ರನ್ವಯ ಚಿಕ್ಕಬಳ್ಳಾಪುರ ಜಿಲ್ಲೆ, ಶಿಡ್ಲಘಟ್ಟ ತಾಲ್ಲೂಕು, ಶಿಡ್ಲಘಟ್ಟ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ...

ಸಹಿ/– ಸದಸ್ಯ ಕಾರ್ಯದರ್ಶಿ, ಶಿಡ್ಲಘಟ್ಟ ಯೋಜನಾ ಪ್ರಾಧಿಕಾರ, ಶಿಡ್ಲಘಟ್ಟ
ಸಹಿ/– ಅಧ್ಯಕ್ಷರು, ಶಿಡ್ಲಘಟ್ಟ ಯೋಜನಾ ಪ್ರಾಧಿಕಾರ, ಶಿಡ್ಲಘಟ್ಟ

ಕರ್ನಾಟಕ ಮುನಿಸಿಪಲ್ ಡೇಟಾ ಸೊಸೈಟಿ

6ನೇ ಮಹಡಿ, ನಂ. 1–4, ಐ ಟಿ ಪಾರ್ಕ್, ರಾಜಾಜಿನಗರ ಕೈಗಾರಿಕಾ ವಸಾಹತು, ಬೆಂಗಳೂರು–560010. KMDS

No.30676/DMA/77/KMDS/2020-21 Date. 25-08-2021

ಅಲ್ಪಾವಧಿ ಟೆಂಡರ್ ಅಧಿಸೂಚನೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ಮುನಿಸಿಪಲ್ ಡೇಟಾ ಸೊಸೈಟಿ ಇವರು ಡೆಸ್ಕ್ ಟಾಪ್ ಗಳು, ಲ್ಯಾಪ್ ಟಾಪ್ ಗಳು, ಪ್ರಿಂಟರ್‌ಗಳು, ಸ್ಕ್ಯಾನರ್‌ಗಳು, ಪ್ಲಾಟರ್ ಮತ್ತು ನೆಟ್ ವರ್ಕ್ ಸ್ವಿಚ್‌ಗಳಿಗಾಗಿ ಇ–ಆಡಳಿತ ಇಲಾಖೆಯ ಇ–ಪ್ರೊಕ್ಯೂರ್‌ಮೆಂಟ್ https://www.eproc.karnataka.gov.in ವೇದಿಕೆ ಮೂಲಕ ಸಮಗ್ರ ವಾರ್ಷಿಕ ನಿರ್ವಹಣಾ ಗುತ್ತಿಗೆಗಾಗಿ ಅರ್ಹ ಬಿಡ್ಡರ್‌ಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಬಿಡ್‌ಗಳ ಪ್ರಕ್ರಿಯೆ ದಿನಾಂಕಗಳು ಈ ಕೆಳಗಿನಂತಿದೆ: ಪ್ರಿ–ಬಿಡ್ ಮೀಟಿಂಗ್ : 01.09.2021 ಬೆಳಿಗ್ಗೆ 11.30 ಗಂಟೆಗೆ. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 15.09.2021, ಸಂಜೆ 5.30 ಗಂಟೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 16.09.2021. ಟೆಂಡರ್ ಸಲ್ಲಿಸಲು ದಯಮಾಡಿ ವೆಬ್‌ಸೈಟ್ https://www.eproc.karnataka.gov.in ಗೆ ಭೇಟಿಕೊಡಿ.

ಸಹಿ/–
ಜಂಟಿ ನಿರ್ದೇಶಕರು (ಆರ್)
DIPR/DDU/Zen/RO-1281/2021-22 ಕರ್ನಾಟಕ ಮುನಿಸಿಪಲ್ ಡೇಟಾ ಸೊಸೈಟಿ, ಬೆಂಗಳೂರು

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

PUBLIC NOTICE

It has come to the notice of Biofi Medical Healthcare India Private Limited (Company) that, Mr. Ravikumar Rajendraprasad and his wife Mrs. Amuthadevi Ravikumar, though are neither the Director/s, Employee/s nor the shareholder/s of the Company have fabricated an Assignment Deed dated 30.07.2021 and have filed Amendment Applications using the same for the Change of Proprietor from the name of the Company to their individual names through Smt. Bindu Sharma, Origiin IP Solutions LLP, #213, Sobha Aquamarine Sarjapur, Outer Ring Road, Bellandur Bangalore 560103. Further, at the time of fabrication of the Assignment Deed, both Mr. Ravikumar Rajendraprasad and Mrs. Amuthadevi Ravikumar having been relieved from their employment, were no longer associated with the Company in any manner whatsoever. The Assignment Deed dated 30.07.2021 having been drawn by Mr. Ravikumar Rajendraprasad subsequent to his resignation on 09/06/2021, the said deed is not only unauthorized but also a non-est and hence not-binding on the Company. The Trademark applications mentioned in the Schedule herein thus having been fraudulently filed by the aforesaid persons without the consent or authority from the Company, with the mala fide intention to defalcate the Intellectual Properties belonging to the Company and to get the same transferred in the names of Mr. Ravikumar Rajendraprasad and Mrs. Amuthadevi Ravikumar.

The general public is hereby cautioned not to deal/transact with anyone with respect to the Trademarks mentioned in the Schedule herein or any other Intellectual Properties belonging to the Company and if they proceed with any transaction, they will be doing so at their own risk, cost and our Company will not be bound by such transactions. Further, our Company reserves its rights to proceed against them in accordance with law.

SCHEDULE

Sl. No.	Application No.	Class	Trademark
1.	4299301	10	GLITE
2.	4299302	10	GLITE-AI
3.	4299303	10	HLITE
4.	4299304	10	HLITE-AI
5.	4555959	11	UVEE
6.	4750592	11	UVEE AIRPRO
7.	4750593	11	UVEE HIGHVAC
8.	4750594	11	UVEE POWERTON
9.	4750595	11	UVEE FLOWPRO
10.	4750596	11	UVEE AC PRO
11.	4750597	11	UVEE 360
12.	4750598	11	UVEE XCONVEYOR
13.	4750599	11	UVEE TRON
14.	4750600	11	UVEE TANKPRO
15.	4750601	11	UVEE SIP

BIOFI MEDICAL HEALTHCARE INDIA PRIVATE LIMITED
Having its address at, 2nd Floor, Pixel-A Block, North Wing, PES South Campus, Electronic City Bengaluru- 560 100

Place : Bengaluru
Date : 24/08/2021





ಯೋಗಕ್ಕೆ 'ಮಾಯಾ' ಮ್ಯಾಟ್‌ನ ಯೋಗ

> 'ಯೋಗಿಫೈ' ಎಂಬ ಹೆಸರಿನ ಈ ಸ್ವಂತ ಬುದ್ಧಿಯ ಯೋಗಮ್ಯಾಟ್, ಸಂವೇದಕಗಳನ್ನು (ಸೆನ್ಸರ್) ಬಳಸಿ, ಕೃತಕ ಬುದ್ಧಿಮತ್ತೆಯ ಸಹಾಯದಿಂದ ನಮಗೆ ಯೋಗವನ್ನು ಕಲಿಸುತ್ತದೆ.

ಕ್ಷಮಾ ವಿ. ಭಾನುಪ್ರಕಾಶ್

ಭಾರತವೆಂದರೆ ಹಾವಾಡಿಗರ, ಅನಕ್ಷರಸ್ಥರ, ಮಂತ್ರವಾದಿಗಳ ದೇಶ ಎಂಬ ಕಲ್ಪನೆ ಇತ್ತಂತೆ ಪಾಶ್ಚಾತ್ಯರಲ್ಲಿ; ಆದರೆ ಇಲ್ಲಿನ ವೈಜ್ಞಾನಿಕ, ಸಾಹಿತ್ಯಿಕ, ಸಂಶೋಧನಾತ್ಮಕ, ಆರ್ಥಿಕ, ಆಧ್ಯಾತ್ಮಿಕ ಬೆಳವಣಿಗೆಗಳು ಜಗತ್ತಿಗೆ ಭಾರತದ ವಿಶಿಷ್ಟತೆಯನ್ನು ಸಾರಿದವು. ಹೀಗೆ ಭಾರತದಿಂದ ಜಗತ್ತು ಪಡೆದ ಪ್ರೀತಿಯ ಕೊಡುಗೆಯೇ ಯೋಗ.

ಯೋಗ ಎಂಬ ಪದಕ್ಕೆ ವಿಸ್ತೃತ ಅರ್ಥವಿದ್ದರೂ 'ಯೋಗಾಸನ' ಎಂಬ ಅರ್ಥದಲ್ಲಿ ಎಲ್ಲೆಲ್ಲೂ ಪ್ರಚಲಿತ. ಮೈಮನಸ್ಸನ್ನು ಸರಿದಾರಿಗೆ ತರುವ ಯೋಗವನ್ನು ಕಲಿಯಲು ಏನೇನು ಬೇಕು? ಮುಖ್ಯವಾಗಿ ಯೋಗವನ್ನು ಕಲಿಸಲು ಗುರು ಬೇಕು; ಒಂದು ಜಮಖಾನವೋ ಯೋಗಮ್ಯಾಟೋ ಬೇಕು ಅಂತೀರಾ? ಈಗಂತೂ ಯೋಗಗುರುಗಳು ಟಿ.ವಿ. ಪರದೆಯ ಮೂಲಕವೇ ತರಬೇತಿಯನ್ನು ನೀಡುತ್ತಿದ್ದಾರೆ. ಫೋನ್ ಆ್ಯಪ್‌ಗಳಲ್ಲಿಯೂ ಪ್ರತ್ಯಕ್ಷರಾಗುತ್ತಿದ್ದಾರೆ. ಇನ್ನು ಮ್ಯಾಟ್ ಬೇಕಾದ್ರೆ ಇದ್ದೇ ಇವೆಯಲ್ಲ, ಡೆಕಥ್ಲಾನ್, ಅಮೆಜಾನ್!

ಈ ಕೋವಿಡ್ ಕೊಡಮಾಡಿದ ಅನಿವಾರ್ಯ ಕರ್ಮವಾದ ಲಾಕ್‌ಡೌನ್‌ನಲ್ಲಿ ಬಹುಶಃ ಎರಡೇ ವಸ್ತುಗಳು ಹೆಚ್ಚು ಮಾರಾಟವಾದಂತೆ ತೋರುತ್ತದೆ; ಎರಡೂ ವಿರುದ್ಧ ದಿಕ್ಕಿನವು. ಎಂದರೆ, ನಿಮ್ಮನ್ನು ದಪ್ಪ ಮಾಡುವ ಝೊಮ್ಯಾಟೋ, ಸ್ವಿಗ್ಗಿಗಳ ಬಗೆಬಗೆಯ ತಿನಿಸುಗಳು; ಮತ್ತೊಂದು ನಿಮ್ಮನ್ನು ತೆಳ್ಳಗಾಗಿಸೋ ಸೈಕಲ್‌ಗಳು, ಯೋಗಚಾಪೆಗಳು. ಆದರೂ ಯೋಗವನ್ನು ಮಾಡುವಾಗ ಪ್ರತಿಯೊಬ್ಬರಿಗೂ ಒಂದಲ್ಲ ಒಂದು ಸಲವಾದರೂ 'ಯೋಗಾಸನದ ಭಂಗಿ ಸರಿಯಿದೆಯೇ? ಕೈ ಎಷ್ಟು ನೀಳ ಚಾಚಬೇಕು? ತಲೆ ಎಷ್ಟು ಬಗ್ಗಿಸಬೇಕು?' – ಮುಂತಾದ ಪ್ರಶ್ನೆಗಳು ತಲೆಹೊಕ್ಕಿರುತ್ತವೆ. ಯೋಗವನ್ನು ಮಾಡುತ್ತ ಮಾಡುತ್ತ ಎದುರಿಗಿರುವ ಅಥವಾ ಟಿ.ವಿ. ಪರದೆಯ ಮೇಲಿರುವ ಯೋಗಗುರುವನ್ನು ನೋಡುತ್ತಾ ಯೋಗಾಸನದ ಭಂಗಿಯನ್ನು ಸರಿಪಡಿಸಿಕೊಳ್ಳುವುದು ಒಂದು ಸರ್ಕಸ್ಸೇ ಸರಿ. ಈ ಸಮಸ್ಯೆಗೆ ಉತ್ತರವಾಗಿ ಬಂದಿರುವುದೇ ಸ್ಮಾರ್ಟ್ ಯೋಗಮ್ಯಾಟ್.



'ಯೋಗಿಫೈ' (YogiFi) ಎಂಬ ಹೆಸರಿನ ಈ ಸ್ವಂತ ಬುದ್ಧಿಯ ಯೋಗಮ್ಯಾಟ್, ಸಂವೇದಕಗಳನ್ನು (ಸೆನ್ಸರ್) ಬಳಸಿ, ಕೃತಕ ಬುದ್ಧಿಮತ್ತೆಯ ಸಹಾಯದಿಂದ ನಮಗೆ ಯೋಗವನ್ನು ಕಲಿಸುತ್ತದೆ. ಜೊತೆಗೆ, ನಮ್ಮ ಯೋಗಾಭ್ಯಾಸದ ಅಭಿವೃದ್ಧಿಯನ್ನು ದಾಖಲಿಸಿ, ವಿಶ್ಲೇಷಿಸುತ್ತದೆ ಕೂಡ. ಅದು ಹೇಗೆ ಸಾಧ್ಯ ಅಂತೀರಾ? ನಾವು ಧರಿಸುವ ಸ್ಮಾರ್ಟ್ ಸಾಧನಗಳಲ್ಲಿರುವಂತೆಯೇ ಇದರಲ್ಲೂ ಸೆನ್ಸಾರ್‌ಗಳು, ವಿದ್ಯುನ್ಮಾನ ಭಾಗಗಳೂ ಇರುತ್ತವೆ. ಅವು ನಮ್ಮ ಶಕ್ತಿ, ಸಮತೋಲನ, ಬಾಗಿ ಬಳುಕಲು ನಮಗಿರುವ ನಮ್ಯತೆ(ಫ್ಲೆಕ್ಸಿಬಿಲಿಟಿ) ಯಂತಹ ಅನೇಕ ಅಂಶಗಳನ್ನು ದಾಖಲಿಸುತ್ತದೆ. ಜೊತೆಗೆ, ನಾವು ಹೇಗೆ ನಮ್ಮ ಯೋಗಾಭ್ಯಾಸವನ್ನು ಉತ್ತಮಗೊಳಿಸಬಹುದು ಎಂಬುದನ್ನೂ ಮಾತಿನ ರೂಪದಲ್ಲಿ ಅಂದರೆ, ವರ್ಚುವಲ್ ಇನ್‌ಸ್ಟ್ರಕ್ಷನ್ ಮೂಲಕ ತಿಳಿಸುತ್ತದೆ.

ಹೌದು! ಇದು ಮಾತಾಡುವ ಮಾಯಾವಿ ಚಾಪೆಯೇ ಸರಿ. ಕೃತಕ ಬುದ್ಧಿಮತ್ತೆಯ ಸಹಾಯದಿಂದ ರೂಪಿತ 'ಯೋಗಿಫೈ' ಮ್ಯಾಟ್ ಅನ್ನು ಪ್ಲೇಸ್ಟೋರ್ /ಆ್ಯಪ್ ಸ್ಟೋರ್ಸ್‌ನ ಮೂಲಕ ಡೌನ್‌ಲೋಡ್ ಮಾಡಲಾದ ಯೋಗಿಫೈ ಆ್ಯಪ್‌ನೊಂದಿಗೆ ಬೆಸೆದರೆ ಸಾಕು – ನಿಮ್ಮ ಯೋಗಗುರು, ಯೋಗಸಾಥಿ ಮತ್ತು ಯೋಗಮ್ಯಾಟ್ – ಎಂದರೆ 'ತ್ರೀ ಇನ್ ಒನ್' - ತಯಾರೆಂದೇ ಅರ್ಥ. ನಿಮ್ಮ ಯೋಗಾಸನಗಳ ಭಂಗಿ ಹೇಗಿರಬೇಕು, ಯಾವ ಆಸನ ಹೇಗೆ ಮಾಡಿದರೆ ಸರಿ, ನಿಮ್ಮ ಎತ್ತರ, ತೂಕ, ಆರೋಗ್ಯಸ್ಥಿತಿ, ಹೃದಯದ ಗತಿಗೆ ತಕ್ಕ ಹಾಗೆ ಯಾವ ಯೋಗಾಸನ ಸರಿ ಮತ್ತು ಅದರಿಂದ ಆಗಬಹುದಾದ ಅನುಕೂಲ – ಹೀಗೆ ಎಲ್ಲವನ್ನೂ ತಿಳಿಸಿ ಹೇಳುತ್ತದೆ, ಈ ಯೋಗಿಫೈ ಮ್ಯಾಟ್. ಪುರಾತನ ಜ್ಞಾನ ಮತ್ತು ನವೀನ ತಂತ್ರಜ್ಞಾನದ ಮಿಳಿತ ಎಂದು ಯೋಗಿಫೈ ಮ್ಯಾಟನ್ನು ಬಣ್ಣಿಸುತ್ತದೆ, ಇದನ್ನು ತಯಾರಿಸಿದ ಅಮೆರಿಕಾ ಮೂಲದ ಸ್ಟಾರ್ಟ್‌ಅಪ್ ಸಂಸ್ಥೆ. ಈ ಸಂಸ್ಥೆ, ತನ್ನ ಪರಿಸರಪ್ರಿಯ ರೀತಿನೀತಿಗಳಿಂದ ಹೊಸ ಆಶಾಕಿರಣವನ್ನು ಮೂಡಿಸಿದೆ.

ಯೋಗಿಫೈಮ್ಯಾಟ್ ಅನ್ನು ತಯಾರಿಸಲು ನೈಸರ್ಗಿಕ ರಬ್ಬರ್ ಅನ್ನೇ ಬಳಸಿರುವ ಈ ಸಂಸ್ಥೆ, ಈ ಪ್ರಾಡಕ್ಟ್ ಅನ್ನು ಪ್ಯಾಕ್ ಮಾಡಿ ನಿಮಗೆ ತಲುಪಿಸುವುದು ಕೂಡ ಪರಿಸರಸ್ನೇಹಿ ಸಾಮಗ್ರಿಯೊಳಗೇ. ಹೆಣ್ಣು ಅಥವಾ ಗಂಡಿನ ದನಿಯಲ್ಲಿ ಮಾತಾಡಬಲ್ಲ ಈ ಮ್ಯಾಟ್ ಅನ್ನು ನೀವು ನಿಮ್ಮ ಈಗಾಗಲೇ ಬಳಕೆಯಲ್ಲಿರುವ ಫಿಟ್ನೆಸ್ ಆ್ಯಪ್‌ಗಳು, ಗಾರ್ಮಿನ್, ಫಿಟ್ಬಿಟ್, ಎಮ್ಐ ಬ್ರ್ಯಾಂಡ್‌ಗಳಂತಹ ಸಾಧನಗಳೊಂದಿಗೆ ಬೆಸುಗೆ ಮಾಡಿಕೊಂಡು ಬಳಸಬಹುದು. ನಿಮಗೆ ಬೇಕಾದ ಸ್ಥಳೀಯ ಭಾಷೆಯಲ್ಲಿ ಕೂಡ ನಿಮ್ಮೊಂದಿಗೆ ಸಂವಹನ ನಡೆಸಿ, ಯೋಗಾಭ್ಯಾಸ ಮತ್ತು ಆರೋಗ್ಯ ಕಾಪಾಡಿಕೊಳ್ಳುವುದು ಸುಲಿದ ಬಾಳೆಯ ಹಣ್ಣಿನಂತೆ ಸುಲಭ ಎನಿಸುವಂತೆ ಮಾಡುತ್ತದೆ, ಯೋಗಿಫೈ ಮ್ಯಾಟ್.

ಇಷ್ಟೆಲ್ಲಾ ಪ್ರಯೋಜನಗಳನ್ನೊಳಗೊಂಡ ಯೋಗಮ್ಯಾಟ್ ಬೆಲೆ ಎಷ್ಟಿರಬಹುದು? ಇತರ ಯೋಗ ಮ್ಯಾಟ್‌ಗಳ ಬೆಲೆಗೇ ಸಿಗುವ ಈ ಸ್ಮಾರ್ಟ್ ಚಾಪೆಯು ನೋಡಲೂ ಹಾಗೇ ಇದ್ದು, ಅವುಗಳಂತೆಯೇ ಸುತ್ತಿ ಇಡಬಹುದಾಗಿದೆ ಕೂಡ. ಇದರಲ್ಲಿರುವ ಸಂವೇದಕಗಳು ಕಾರ್ಯನಿರ್ವಹಿಸಬೇಕಾದ್ದರಿಂದ, ಚಾರ್ಜ್ ಮಾಡಬೇಕಷ್ಟೇ. ಭಾರತವೂ ಸೇರಿದಂತೆ 17 ದೇಶಗಳಲ್ಲಿ ಈಗಾಗಲೇ ಲಭ್ಯವಿರುವ ಈ ಚತುರ ಚಾಪೆಯು, ಯೋಗಾಭ್ಯಾಸದ ಪಯಣವನ್ನು ನವನವೀನವಾಗಿಸಿದೆ. ಹೆಚ್ಚಿನ ವಿವರಗಳಿಗೆ ನೋಡಿ: https://www.yogifi.fit/in/

ಪಾತ್ರೆ ತೊಳೆಯಲು ಯಂತ್ರದ ಕೈಗಳು

ಪೃಥ್ವಿರಾಜ್

ಬಟ್ಟೆಗಳನ್ನು ಒಗೆಯುವುದು, ಪಾತ್ರೆಗಳನ್ನು ತೊಳೆಯುವುದು ಅನಿವಾರ್ಯ. ಆದರೆ ಯಾರೂ ಈ ಕೆಲಸಗಳನ್ನು ಬಯಸಲಾರರು. ತಂತ್ರಜ್ಞಾನದ ನೆರವಿನಿಂದ ಈಗಾಗಲೇ ಹಲವರಿಗೆ ಬಟ್ಟೆ ಒಗೆಯುವ ಕೆಲಸದಿಂದ ಮುಕ್ತಿ ಸಿಕ್ಕಿದೆ. ಪಾತ್ರೆ ತೊಳೆಯುವುದರಿಂದಲೂ ತಂತ್ರಜ್ಞಾನದ ನೆರವಿನಿಂದ ಹಲವರು ಮುಕ್ತಿಯನ್ನು ಪಡೆದಿದ್ದಾರೆ. ಪ್ರಸ್ತುತ ಮಾರುಕಟ್ಟೆಗೆ ಲಗ್ಗೆ ಇಡುತ್ತಿರುವ ಪಾತ್ರೆ ತೊಳೆಯುವ ಯಂತ್ರಗಳು (ಡಿಷ್ ವಾಷರ್ಸ್) ಸ್ಮಾರ್ಟ್ ತಂತ್ರಜ್ಞಾನದಿಂದ ಈ ಕೆಲಸವನ್ನು ಮತ್ತಷ್ಟು ಸಲೀಸು ಮಾಡುತ್ತಿವೆ. ಸ್ಮಾರ್ಟ್‌ಫೋನ್ ನೆರವಿನಿಂದ ಆ್ಯಪ್ ಮೂಲಕ ನಿಯಂತ್ರಿಸಬಹುದಾದ ಡಿಷ್ ವಾಷರ್ಸ್‌ಗಳೂ ಬಂದಿವೆ.

ಶಾರ್ಪ್ ಕ್ಯೂಡಬ್ಲ್ಯೂ

ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಿರುವ ಈ ಡಿಷ್ ವಾಷರ್‌ನಲ್ಲಿ ಹಲವು ವೈಶಿಷ್ಟ್ಯಗಳಿವೆ. ಮುಖ್ಯವಾಗಿ ಇದರಲ್ಲಿನ 'ಇಂಟೆಲ್ಲಿವಾಷ್' ತಂತ್ರಜ್ಞಾನದಿಂದ ಪಾತ್ರೆ ತೊಳೆಯಲು ನೀರಿನ ಉಷ್ಣಾಂಶ, ವೇಗವನ್ನು ಸ್ವಯಂಚಾಲಿತವಾಗಿ

ನಿಯಂತ್ರಿಸಿಕೊಳ್ಳಬಹುದು. 'ಎಕೊ ವಾಷ್' ತಂತ್ರಜ್ಞಾನದ ನೆರವಿನಿಂದ ವಿದ್ಯುತ್ ಹಾಗೂ ನೀರಿನ ಉಳಿತಾಯವನ್ನೂ ಮಾಡಬಹುದು. ಬ್ಯಾಕ್ಟೀರಿಯಾಗಳನ್ನು ಕೊಲ್ಲಬಲ್ಲ ಹೈಜಿನ್ ಸಿಸ್ಟಂ ಕೂಡ ಇದರಲ್ಲಿದೆ.

ಬಾಷ್ ಸಿರೀಸ್ 8

ಕೆಲಸ ಬೇಗ ಆಗಬೇಕು ಎಂದು ಇಚ್ಛಿಸುವವರಿಗೆ ಈ ಡಿಷ್ ವಾಷರ್ ಒಪ್ಪುತ್ತದೆ. ಅನುಕೂಲಕ್ಕೆ ತಕ್ಕಂತೆ ಜೋಡಿಸಬಹುದಾದ ಟಾಪ್ ರ್‍ಯಾಕ್ ವೈಶಿಷ್ಟ್ಯದ ಜೊತೆಗೆ 60 ನಿಮಿಷಗಳಲ್ಲಿ ಪಾತ್ರೆ ತೊಳೆಯುವಂಥ ಕ್ವಿಕ್ ವಾಷ್ ಮೋಡ್ ಕೂಡ ಇದೆ. ತೊಳೆದ ನಂತರ ಪಾತ್ರೆಗಳನ್ನು ಪರಿಪೂರ್ಣವಾಗಿ ಒಣಗಿಸಲು 'ಪರ್ಫೆಕ್ಟ್ ಡ್ರೈ ಟೆಕ್ನಾಲಜಿ'ಯನ್ನು ಅಳವಡಿಸಲಾಗಿದೆ. ಈ ತಂತ್ರಜ್ಞಾನದಿಂದ ಡಿಷ್ ವಾಷರ್‌ನಲ್ಲಿ ಉಷ್ಣಾಂಶ ಸೃಷ್ಟಿಸಿಯಾಗುತ್ತದೆ. ಇದು ಪಾತ್ರೆಗಳನ್ನು ಸ್ವಚ್ಛಗೊಳಿಸಲು ನೆರವಾಗುತ್ತದೆ.

ಸ್ಮೆಗ್ 50'ಸ್ ರೆಟ್ರೊ

ಈ ಡಿಷ್ ವಾಷರ್ ತುಸು ದುಬಾರಿ. ಆದರೆ ಇದರ ವಿನ್ಯಾಸ ಹಾಗೂ ಬಣ್ಣ ಅಡುಗೆಮನೆಗೆ ಮೆರಗನ್ನು ನೀಡುತ್ತದೆ. ಶೀಘ್ರವಾಗಿ ಪಾತ್ರೆಗಳನ್ನು ತೊಳೆಯುವುದು ಇದರ ಮುಖ್ಯ ವೈಶಿಷ್ಟ್ಯಗಳಲ್ಲಿ ಒಂದು.

ಕೇವಲ 27 ನಿಮಿಷಗಳಲ್ಲಿ ಪಾತ್ರೆಗಳನ್ನು ತೊಳೆಯಬಹುದಾದ ಕ್ವಿಕ್ ವಾಷ್ ಮೋಡ್ ಇದರಲ್ಲಿದೆ. ಇದರಲ್ಲಿ 'ಪ್ಲಾನೆಟೇರಿಯಂ ವಾಟರ್ ಜೆಟ್ ಸಿಸ್ಟಂ' ಎಂಬ ತಂತ್ರಜ್ಞಾನ ಅಳವಡಿಸಲಾಗಿದೆ.

ಸ್ಯಾಮ್‌ಸಂಗ್ ಡಬ್ಲ್ಯೂ

ಬೇಗ ಪಾತ್ರೆ ತೊಳೆಯಲು ನೆರವಾಗುವ 30 ಮಿನಿಟ್ ಕ್ವಿಕ್ ವಾಷ್ ಮೋಡ್‌ನೊಂದಿಗೆ ತಯಾರಿಸಿರುವ ಈ ಡಿಷ್‌ವಾಷರ್‌ನಲ್ಲಿ ಸ್ಪೂನ್, ಫೋರ್ಕ್ ಹಾಗೂ ಚಾಕೂ, ಚೂರಿಗಳನ್ನು ವ್ಯವಸ್ಥಿತವಾಗಿ ಜೋಡಿಸಿ ಇಡಲು ರ್‍ಯಾಕ್‌ನಲ್ಲಿ ಸೌಲಭ್ಯ ಕಲ್ಪಿಸಲಾಗಿದೆ. 'ಆ್ಯಂಟಿ ಫ್ಲಡ್' ತಂತ್ರಜ್ಞಾನ ಇದರ ಮತ್ತೊಂದು ವೈಶಿಷ್ಟ್ಯವಾದರೆ, ಗರಿಷ್ಠ 70 ಡಿಗ್ರಿ ಉಷ್ಣಾಂಶದಲ್ಲಿ ನೀರನ್ನು ಹಾಯಿಸಿ ಪಾತ್ರೆಗಳನ್ನು ಸ್ವಚ್ಛಗೊಳಿಸುವಂತೆ ತಯಾರಿಸಲಾಗಿದೆ. ಸುಲಭ ಕಾರ್ಯ ನಿರ್ವಹಣೆಗೆ ಟಚ್ ಪ್ಯಾನೆಲ್ ನೆರವಾಗುತ್ತದೆ.

ಮೀಲೆ ಜಿ66

ಗರಿಷ್ಠ ಬಾಳಿಕೆ ಅವಧಿಯನ್ನು ಗಮನದಲ್ಲಿಟ್ಟುಕೊಂಡು ಈ ಡಿಷ್ ವಾಷರನ್ನು ತಯಾರಿಸಲಾಗಿದೆ. ಇದರಲ್ಲಿ ಉತ್ತಮ 'ಗ್ಲಾಸ್ ಕೇರ್ ಪ್ರೋಗ್ರಾಮ್'ಅನ್ನು ಅಳವಡಿಸಲಾಗಿದ್ದು, ಗಾಜಿನಂಥ ನಾಜೂಕು ವಸ್ತುಗಳು ಒಡೆಯದಂಥ ಉತ್ತಮವಾಗಿ ಸ್ವಚ್ಛಗೊಳಿಸಲು ನೆರವಾಗುತ್ತದೆ. ಇದರಲ್ಲಿ ಆಟೊ ಓಪನ್ ಡ್ರೈಯಿಂಗ್ ಸಿಸ್ಟಂ ಕೂಡ ಇದ್ದು, ಪಾತ್ರೆಗಳನ್ನು ತೊಳೆಯುವ ಕೊನೆಯ ಅವಧಿಯಲ್ಲಿ ಕೊಂಚ ಪ್ರಮಾಣದಲ್ಲಿ ಇದರ ಮುಚ್ಚಳ ತೆರೆದುಕೊಂಡು, ಹೊರಗಿನ ಗಾಳಿಯನ್ನು ಎಳೆದುಕೊಳ್ಳುತ್ತವೆ. ಇದರಿಂದ ಪಾತ್ರೆಗಳು ಬೇಗ ಒಣಗಲು ನೆರವಾಗುತ್ತದೆ.

ವರ್ಲ್‌ಪೂಲ್ ಡಬ್ಲ್ಯೂಎಫ್‌ಸಿ

ಕಂಪನಿಯವರು ಇದರಲ್ಲಿ 'ಸಿಕ್ಸ್ತ್ ಸೆನ್ಸ್' ತಂತ್ರಜ್ಞಾನವನ್ನು ಅಳವಡಿಸಿರುವುದು ವಿಶೇಷ. ಈ ಸೆನ್ಸರ್ ತಂತ್ರಜ್ಞಾನ ನೆರವಿನಿಂದ

ಪಾತ್ರೆಗಳು ಹಾಗೂ ತಟ್ಟೆಗಳಲ್ಲಿನ ಕೊಳಕನ್ನು ಪತ್ತೆಹಚ್ಚಿ ಪರಿಪೂರ್ಣವಾಗಿ ಸ್ವಚ್ಛಗೊಳಿಸಬಹುದಾಗಿದೆ. ಸಮಯ, ವಿದ್ಯುಚ್ಛಕ್ತಿ ಹಾಗೂ ನೀರನ್ನು ಮಿತವಾಗಿ ಬಳಸಿಕೊಳ್ಳಲು ನೆರವಾಗುವಂತೆ ಈ ಡಿಷ್ ವಾಷರ್ ತಯಾರಿಸಲಾಗಿದೆ. ಇದರಲ್ಲಿ ಪವರ್ ಕ್ಲೀನ್ ಪ್ರೋ ಎಂಬ ಮತ್ತೊಂದು ವೈಶಿಷ್ಟ್ಯವಿದೆ. ಇದರ ಶಕ್ತಿಯುತ ಜೆಟ್‌ಗಳ ನೆರವಿನಿಂದ ಪಾತ್ರೆಗಳ ಪೂರ್ಣವಾಗಿ ಸ್ವಚ್ಛಗೊಳ್ಳಲು ಸಾಧ್ಯ.

ಸಿಇಟಿ ದಿಕ್ಸೂಚಿ

Chemistry- Redox Reaction & Hydrogen and its Compounds

1. For the redox reaction $xMnO_4^- + yH_2C_2O_4 + zH^+ \rightarrow mMn^{2+} + nCO_2 + pH_2O$. The values of x, y, m and n are
(1) 10, 2, 5, 2 (2) 2, 5, 2, 10 (3) 6, 4, 2, 5 (4) 3, 5, 2, 10

2. A Lewis acid 'X' reacts with $LiAlH_4$ in ether medium to give a highly toxic gas. The gas when heated with NH_3 gives a compound commonly known as inorganic benzene. The gas is
(1) $B_3N_3H_6$ (2) B_2O_3 (3) BF_3 (4) B_2H_6

3. The oxide of potassium that does not exist is
(1) K_2O_2 (2) K_2O (3) K_2O_3 (4) KO_2

4. The oxidation number of nitrogen atoms in NH_4NO_3 are
(1) +3, – 5 (2) + 5, + 5 (3) – 3, – 3 (4) –3, + 5

5. Phosphorous pentachloride
(1) has all the five equivalent bonds
(2) on hydrolysis gives an oxo acid of phosphorus which is tribasic.
(3) exists as an ionic acid solid in which cation has octahedral structure and anion has tetrahedral structure.
(4) on hydrolysis gives an oxo acid of phosphorus which is a good reducing agent.

6. 50 cm^3 of 0.2 N HCl is titrated against 0.1 N NaOH solution. The titration was discontinued after adding 50 cm^3 of NaOH. The remaining titration is completed by adding 0.5 N KOH. The volume of KOH required for completing the titration is
(1) 12 cm^3 (2) 10 cm^3 (3) 21.0 cm^3 (4) 16.2 cm^3

7. In the reaction, $2FeSO_4 + H_2SO_4 + H_2O_2 \rightarrow Fe_2(SO_4)_3 + 2H_2O$, the oxidizing agent is
(1) $FeSO_4$ (2) H_2SO_4 (3) H_2O_2 (4) Both H_2SO_4 and H_2O_2

8. The number of moles of electron required to reduce 0.2 mole of $Cr_2O_7^{-2}$ to Cr^{+3}
(1) 6 (2) 1.2 (3) 0.6 (4) 12

9. $3ClO^-_{(aq)} \rightarrow ClO^- + 2Cl^-$ is an example of
(1) Oxidation reaction
(2) Reduction reaction
(3) Disproportionation reaction
(4) Decomposition reaction

10. The volume of 0.1 M oxalic acid that can be completely oxidized by 20 ml of 0.025 M $KMnO_4$ solution is
(1) 125 ml (2) 25 ml (3) 12.5 ml (4) 37.5 ml

11. H_2O_2 is
(1) An oxidizing Agent
(2) A reducing agent
(3) Both oxidizing and reducing agent
(4) Neither oxidizing nor reducing agent

12. Which of the following ions will cause hardness in water?
(1) Ca^{2+} (2) Na^+ (3) Cl^- (4) K^+

13. The metal that produces H_2 with both dil HCl and NaOH (aq) is
(1) Ca (2) Zn (3) Fe (4) Mg

14. The species that is not hydrolysed in water is
(1) BaO_2 (2) CaC_2 (3) P_4O_{10} (4) Mg_3N_2

15. In the manufacture of hydrogen from water gas $(CO+H_{(2)}$, which of the following is correct statement?
(1) CO is oxidized to CO_2 with steam in the presence of a catalyst followed by absorption of CO_2 in alkali
(2) CO and H_2 are separated based on difference in their densities.
(3) Hydrogen is isolated by diffusion.
(4) H_2 is removed by occlusion with pd.

16. H_2O_2 cannot oxidise
(1) PbS (2) Na_2SO_3 (3) O_3 (4) KI

17. Water softening by Clark's process uses
(1) $CaHCO_3$ (2) $NaHCO_3$ (3) Na_2CO_3 (4) $Ca(OH)_2$ s

Answers

1. Answer (2)
Solution: The balanced redox reaction is
$$5H_2C_2O_{4(aq)} + 2MnO^-_{4(aq)} + 6H^+_{(aq)} \rightarrow 10CO_2 + 2Mn^{+2}_{(aq)} + 8H_2O_{(l)}$$

2. Answer (4)
Solution:
$$BF_3 + LiAlH_4 \rightarrow \underset{(gas)}{B_2H_6} \xrightarrow{NH_3} B_3N_3H_6$$

3. Answer (3)
Solution: Conceptual

4. Answer (4)
Solution: $\overset{-3}{N}H_4\overset{+5}{N}O_3$

5. Answer (2)
Solution:
$$PCl_5 + 5H_2O \rightarrow POCl_3 + 2HCl$$
$$POCl_3 + 3H_2O \rightarrow H_3PO_4 + 2HCl$$
It is tribasic acid & not good redusing agent

6. Answer (2)
Solution: No. of equivalent of HCl remaining after adding 50cm^3 of 0.1 N
$$NaOH = \frac{0.2\times 50 - 0.1\times 50}{100} = \frac{0.5}{100}$$
Volume of 0.5N KOH $V = \frac{0.5}{100} \times \frac{1000}{0.5} = 10cm^3$

7. Answer (3)
Solution: $H_2O_2 \rightarrow H_2O$ (Reduction)
Hence H_2O_2 is oxidizing agent

8. Answer (2)
Solution: $Cr_2^{+6}O_7^{2-} \rightarrow 2Cr^{+3}$
Here one mole $Cr_2O_7^{2-}$ requires 6 mole of electrons 0.2 mol requires = 1.2 mole of electrons.

9. Answer (2)
Solution:
$3ClO^-_{(aq)} \rightarrow ClO- + 2Cl-$
The oxidation state of chlorine changes from +1 to – 1.
This reaction is an example of a reduction reaction.

10. Answer (3)
Solution:
$$2KMnO_4 + 5(COOH)_2 + 3H_2SO_4 \rightarrow K_2SO_4 + 2MnSO_4 + 10CO_2 + 8H_2O$$

11. Answer (3)
Solution:
H_2O_2 can act as both oxidising as well as reducing agent

12. Answer (1)
Solution:
Calcium and magnesium bicarbonate, carbonates, chlorides and sulphates causes hardness in water.

13. Answer (2)
Solution:
Zn is amphoteric
$$Zn + 2HCl \rightarrow ZnCl_2 + H_2$$
$$Zn + 2NaOH \rightarrow Na_2ZnO_2 + H_2$$

14. Answer (1)
Solution: BaO_2 is not hydrolyses in water

15. Answer (1)
Solution:
$$A\ CO(g) + H_2O(g) \xrightarrow{670K} CO_2(g) + H_2(g)$$
The reaction shown above is the reaction of the manufacturing of hydrogen from water gas. Here
CO is oxidized to CO_2 with steam in the presence of a catalyst. Then the absorption of CO_2 in alkali takes place.
So, the answer is CO is oxidized to CO_2.

16. Answer (3)
Solution: H_2O_2 oxidising $PbS \rightarrow PbSO_4$, $Na_2SO_3 \rightarrow Na_2SO_4$ $KI \rightarrow I_2$

17. Answer (4)
Solution: Clarks process uses $Ca(OH)_2$ for water softening
$$Ca(OH)_2 + Ca(HCO_3)_2 \rightarrow 2CaCO_3 + 2H_2O$$

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್ ಬೆಂಗಳೂರು)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ -47

629. ಕೆಳಗಿನವುಗಳಲ್ಲಿ ಯಾವುದು ಅತ್ಯಂತ ಹಗುರವಾದ ಲೋಹ?
ಎ) ಪಾದರಸ ಬಿ) ಸೀಸ
ಸಿ) ಬೆಳ್ಳಿ ಡಿ) ಲೀಥಿಯಂ

630. ಹೈದರಾಬಾದ್‌ನಲ್ಲಿ ಇರುವ ರಾಷ್ಟ್ರೀಯ ಪೊಲೀಸ್ ಅಕಾಡೆಮಿಯ ಹೆಸರೇನು?
ಎ) ಸರ್ದಾರ್ ವಲ್ಲಭಬಾಯ್ ರಾಷ್ಟ್ರೀಯ ಪೊಲೀಸ್ ಅಕಾಡೆಮಿ
ಬಿ) ಸುಭಾಸ್‌ಚಂದ್ರ ಬೋಸ್ ರಾಷ್ಟ್ರೀಯ ಪೊಲೀಸ್ ಅಕಾಡೆಮಿ
ಸಿ) ಭಗತ್‌ಸಿಂಗ್ ರಾಷ್ಟ್ರೀಯ ಪೊಲೀಸ್ ಅಕಾಡೆಮಿ
ಡಿ) ಇಂದಿರಾಗಾಂಧಿ ರಾಷ್ಟ್ರೀಯ ಪೊಲೀಸ್ ಅಕಾಡೆಮಿ

631. ಯಾವ ರಕ್ತದ ಗುಂಪು 'ಯುನಿವರ್ಸಲ್ ರಿಸೀವರ್' ಆಗಿದೆ?
ಎ) ಒ ನೆಗೆಟಿವ್ ಬಿ) ಬಿ ನೆಗೆಟಿವ್
ಸಿ) ಎಬಿ ಪಾಸಿಟಿವ್ ಡಿ) ಎಬಿ ನೆಗೆಟಿವ್

632. ರಾಸುಗಳಲ್ಲಿ ಕಾಲುಬಾಯಿ ರೋಗ ಯಾವುದರಿಂದ ಬರುತ್ತದೆ?
ಎ) ಬ್ಯಾಕ್ಟೀರಿಯಾ
ಬಿ) ವೈರಾಣು
ಸಿ) ಫಂಗಸ್
ಡಿ) ಪ್ರೊಟೊಝೋವಾ

633. ಭಾರತದ ಸಂವಿಧಾನದ ಯಾವ ವಿಧಿಯು ಸಾಂವಿಧಾನಿಕ ಪರಿಹಾರದ ಹಕ್ಕಿಗೆ ಸಂಬಂಧಿಸಿದೆ?
ಎ) 23 ಬಿ) 24 ಸಿ) 30 ಡಿ) 32

634. ಸೂಪರ್ ನೋವಾ ಇದು ಏನು?
ಎ) ಅಳಿವಿನಂಚಿನಲ್ಲಿರುವ ಕ್ಷುದ್ರಗ್ರಹ
ಬಿ) ಅಳಿವಿನಂಚಿನಲ್ಲಿರುವ ನಕ್ಷತ್ರ
ಸಿ) ಅಳಿವಿನಂಚಿನಲ್ಲಿರುವ ಕಪ್ಪುರಂಧ್ರ
ಡಿ) ಅಳಿವಿನಂಚಿನಲ್ಲಿರುವ ಧೂಮಕೇತು

635. ಯಾವುದನ್ನು 'ಬಂಗಾರದ ನಾರು' ಎಂದು ಕರೆಯುತ್ತಾರೆ?
ಎ) ರೇಷ್ಮೆ
ಬಿ) ಹತ್ತಿ
ಸಿ) ಸೆಣಬು
ಡಿ) ನೈಲಾನ್

636. ನೀಲಗಿರಿ ಯಾವುದರ ಭಾಗವಾಗಿದೆ?
ಎ) ಪಶ್ಚಿಮ ಘಟ್ಟಗಳು
ಬಿ) ಪೂರ್ವ ಘಟ್ಟಗಳು
ಸಿ) ಕರಾವಳಿ ಪ್ರದೇಶ
ಡಿ) ಸೂಚಿಪರ್ಣ ಕಾಡುಗಳು

637. ಯಾವ ರಾಜ್ಯದಲ್ಲಿ ಖಜುರಾಹೋ ಮಂದಿರವಿದೆ?
ಎ) ಉತ್ತರಪ್ರದೇಶ
ಬಿ) ಮಧ್ಯಪ್ರದೇಶ
ಸಿ) ಬಿಹಾರ
ಡಿ) ಮಹಾರಾಷ್ಟ್ರ

638. ಕೆಳಗಿನವುಗಳಲ್ಲಿ ಯಾವ ಬುಡಕಟ್ಟು ಪಂಗಡವು ಮಧ್ಯ ಭಾರತದಲ್ಲಿ ಕಂಡುಬರುವುದಿಲ್ಲ?
ಎ) ಗೊಂಡರು ಬಿ) ತೋಡರು
ಸಿ) ಭಿಲ್ಲರು ಡಿ) ಮುಂಡರು

639. 'ಪರಮೇಶ್ವರ' ಎಂಬ ಬಿರುದಾಂಕಿತನಾಗಿದ್ದ ದೊರೆ ಯಾರು?
ಎ) ಹರ್ಷವರ್ಧನ
ಬಿ) ಪುಲಿಕೇಶಿ II
ಸಿ) ವಿಕ್ರಮಾದಿತ್ಯ
ಡಿ) ವಿನಯಾದಿತ್ಯ

640. ಅಂಜನಾದ್ರಿ ಬೆಟ್ಟ ಯಾವ ಜಿಲ್ಲೆಯಲ್ಲಿದೆ?
ಎ) ಬಳ್ಳಾರಿ
ಬಿ) ರಾಯಚೂರು
ಸಿ) ಕೊಪ್ಪಳ
ಡಿ) ಯಾದಗಿರಿ

641. ಯಾವ ವರ್ಷ ಹೈದರಾಬಾದ್ ಭಾರತ ಒಕ್ಕೂಟದಲ್ಲಿ ವಿಲೀನವಾಯಿತು?
ಎ) 1947 ಬಿ) 1948
ಸಿ) 1949 ಡಿ) 1951

642. ಕರ್ನಾಟಕ ಏಕೀಕರಣವಾದಾಗ ರಾಜ್ಯದ ಮುಖ್ಯಮಂತ್ರಿ ಯಾರಾಗಿದ್ದರು?
ಎ) ಬಿ.ಡಿ.ಜತ್ತಿ
ಬಿ) ಎಸ್.ಆರ್.ಕಂಠಿ
ಸಿ) ವೀರೇಂದ್ರ ಪಾಟೀಲ
ಡಿ) ಎಸ್.ನಿಜಲಿಂಗಪ್ಪ

643. ಕರ್ನಾಟಕ ವಿಧಾನಪರಿಷತ್ ಸದಸ್ಯರ ಸಂಖ್ಯೆ ಎಷ್ಟು?
ಎ) 224 ಬಿ) 225
ಸಿ) 75 ಡಿ) 100

644. ವಿಸ್ತೀರ್ಣದಲ್ಲಿ ಕರ್ನಾಟಕ ದೇಶದಲ್ಲಿ ಎಷ್ಟನೇ ಸ್ಥಾನ ಪಡೆದಿದೆ?
ಎ) 6 ಬಿ) 7
ಸಿ) 8 ಡಿ) 9

645. ಆಡಳಿತದಲ್ಲಿ ಕನ್ನಡವನ್ನು ಮೊದಲಿಗೆ ಉಪಯೋಗಿಸಿದ ದೊರೆಗಳು ಯಾರು?
ಎ) ಕದಂಬರು ಬಿ) ಶಾತವಾಹನರು
ಸಿ) ಗಂಗರು ಡಿ) ಚಾಲುಕ್ಯರು

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ–46 ರ ಉತ್ತರ: 616. ಎ, 617. ಡಿ, 618. ಎ, 619. ಸಿ, 620. ಡಿ, 621. ಬಿ, 622. ಎ, 623. ಸಿ, 624. ಸಿ, 625. ಎ, 626. ಎ, 627. ಬಿ, 628. ಎ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	120.10	4,538	5,545
ಹಾರಂಗಿ	2,859	2,857.87	2,317	1,850
ಕಬಿನಿ	2284.00	2,283.22	3,171	5,000
ಹೇಮಾವತಿ	2,922	2,918.78	2,402	4,920
ಲಿಂಗನಮಕ್ಕಿ	1,819	1,812.65	5,640	-
ಸೂಪಾ (ಮೀ)	564	554.76	2,757	1,897
ಮಾಣಿ	594	585.72	629	-
ತುಂಗಭದ್ರಾ	1,633	1,632.84	7,513	14,099
ಮಲಪ್ರಭಾ	2079.5	2,078.10	2,091	494
ಘಟಪ್ರಭಾ	2175	2,175.00	1,886	1,886
ಭದ್ರಾ	186	185	3929	3616
ಆಲಮಟ್ಟಿ (ಮೀ)	519.6	519.60	22,026	22,026
ನಾರಾಯಣಪುರ (ಮೀ)	492.25	492.14	20,000	13,000

* ನೆಲಮಟ್ಟದಿಂದ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪರಿಸರ ಪ್ರಿಯರ ಆಕ್ಷೇಪ • ನಿಸರ್ಗ ನಿಯಮಕ್ಕೆ ವಿರುದ್ಧ ಎಂದು ಪ್ರತಿಪಾದನೆ

ಕಾಳಿಂಗ ಮೊಟ್ಟೆ ಮರಿ ಮಾಡಲು ಕೃತಕ ವಿಧಾನ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಆಗುಂಬೆಯ 'ಕಾಳಿಂಗ ಸೆಂಟರ್ ಫಾರ್ ರೈನ್ ಫಾರೆಸ್ಟ್ ಎಕೊಲಜಿ' ತಂಡ ಈಚೆಗೆ ಕಾಳಿಂಗ ಸರ್ಪಗಳ ಮೊಟ್ಟೆಗಳನ್ನು ಕೃತಕ ವಿಧಾನದ ಮೂಲಕ ಮರಿ ಮಾಡಿ, ಕಾಡಿಗೆ ಬಿಟ್ಟಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ.

ಕಾಳಿಂಗ ಸರ್ಪಗಳ 30 ಮೊಟ್ಟೆಯನ್ನು ಸಂರಕ್ಷಿಸಿ, 85 ದಿನಗಳ ಕೃತಕ ಉಷ್ಣಾಂಶ ನಿರ್ವಹಣೆ ಮೂಲಕ ಮರಿ ಮಾಡಿ ಕಾಡಿಗೆ ಬಿಟ್ಟಿರುವ ಚಿತ್ರ ಮತ್ತು ಮಾಹಿತಿಯನ್ನು ಸಂಸ್ಥೆಯ ಮುಖ್ಯಸ್ಥ ಗೌರಿ ಶಂಕರ್ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

ಚಿತ್ರಗಳನ್ನು, ಶಿವಮೊಗ್ಗ ಅರಣ್ಯ ಇಲಾಖೆ, ಸರ್ಕಾರೇತರ ಸಂಸ್ಥೆ ವೈಲ್ಡ್ ಕ್ಯಾಟ್‌-ಸಿ ಸಹಕಾರದಲ್ಲಿ ಈ ಕಾರ್ಯ ಮಾಡಿರುವುದಾಗಿ ಹೇಳಿಕೊಂಡಿದ್ದಾರೆ. ಚಿತ್ರ ಮತ್ತು ಬರಹ ಪ್ರಕಟಗೊಳ್ಳುತ್ತಿದ್ದಂತೆ ವಿರೋಧವೂ ತೀವ್ರಗೊಂಡಿದೆ.

'ಯಾವುದೇ ಜೀವಿಯನ್ನು ಕೃತಕವಾಗಿ ಸೃಷ್ಟಿ ಮಾಡುವುದು ನಿಸರ್ಗ ನಿಯಮಕ್ಕೆ ವಿರುದ್ಧ. ಅದರಲ್ಲೂ ಕಾಳಿಂಗ ಸರ್ಪಗಳನ್ನು ಕೃತಕವಾಗಿ ಮರಿ ಮಾಡುವುದು ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧ. ಕಾಳಿಂಗ ಸರ್ಪಗಳು ಅರಣ್ಯ ಸಂರಕ್ಷಣಾ ಕಾಯ್ದೆ–1972ರ ಪರಿಚ್ಛೇದ IIರ ಅಡಿಯಲ್ಲಿ ಬರುತ್ತವೆ.



ಕೃತಕ ವಿಧಾನದ ಮೂಲಕ ಹೊರಬಂದ ಕಾಳಿಂಗ ಸರ್ಪದ ಮರಿಗಳು

ಹೀಗಿದ್ದರೂ ಈ ಸಂಶೋಧನಾ ಕೇಂದ್ರದವರಿಗೆ ಇಂತಹ ಹೀನಕೃತ್ಯ ಮಾಡುವುದಕ್ಕೆ ಹೇಗೆ ಅನುಮತಿ ನೀಡಲಾಗಿದೆ? ಅರಣ್ಯ ಇಲಾಖೆ ಸಹಕಾರ ನೀಡಿರುವುದು ಖಂಡನೀಯ' ಎನ್ನುತ್ತಾರೆ ಚಿಕ್ಕಮಗಳೂರಿನ ಪರಿಸರ ಕಾರ್ಯಕರ್ತ ನಾಗರಾಜ ಕೂವೆ.

'ಪಶ್ಚಿಮ ಘಟ್ಟಗಳ ಸಂರಕ್ಷಣೆಯ ಹೆಸರಿನಲ್ಲಿ ಈ ರೀತಿಯ ತಲೆಹರಟೆಗಳು ದಿಗಿಲು ಹುಟ್ಟಿಸುತ್ತಿದೆ. ಮೊದಲೇ ಜಾಗತಿಕ ತಾಪಮಾನ ಹೆಚ್ಚಳದಿಂದ ಕಂಗೆಟ್ಟಿರುವ ಮಳೆಕಾಡುಗಳಿಗೆ ಸಂರಕ್ಷಣೆಯ ಹೆಸರಿನ ಮಾನವನ ಅನಪೇಕ್ಷಿತ ಹಸ್ತಕ್ಷೇಪ ತಲ್ಲಣ ಮೂಡಿಸಿದೆ. ಅದಕ್ಕೆ ಅಲ್ಲಿನ ವನ್ಯಜೀವಿಗಳು ಮತ್ತು ನೆಲಮೂಲದ ಪರಿಸರ ಸ್ನೇಹಿ ಬದುಕು ಬಲಿ ಆಗುತ್ತಿದೆ. ನಿರುಪದ್ರವಿಗಳು ಬಲಿಯಾಗುತ್ತಿವೆ' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

'ಕೃತಕವಾಗಿ ಮೊಟ್ಟೆಗಳನ್ನು ಮರಿ ಮಾಡುವುದು ಆಹಾರ ಸರಪಳಿಯ ಏರುಪೇರಿಗೆ ಕಾರಣವಾಗುತ್ತದೆ' ಎನ್ನುತ್ತಾರೆ ಪರಿಸರವಾದಿ ಅಖಿಲೇಶ್ ಚಿಪ್ಳಿ ಅವರು. 'ಯಾವುದೇ ಒಂದು ಸಂತತಿ ಮಿತಿಮೀರುವುದು ಪರಿಸರಕ್ಕೆ ಅಪಾಯ. ಆಹಾರ ಸರಪಳಿ ಪ್ರಕೃತಿ ಕೊಡುಗೆ. ಒಂದು ಕಾಳಿಂಗ ಸರ್ಪ 30ರಿಂದ 60 ಮೊಟ್ಟೆ ಇಡುತ್ತದೆ. ಸ್ವತಃ ಕಾಳಿಂಗ ಸರ್ಪಗಳೇ ಹಲವು ಮರಿಗಳನ್ನು ತಿಂದು ಹಾಕುತ್ತವೆ. ನವಿಲು ಮತ್ತಿತರ ಪಕ್ಷಿಗಳಿಗೂ ಮೊಟ್ಟೆ ಆಹಾರವಾಗುತ್ತವೆ. ಮೊಟ್ಟೆ ಒಡೆದು ಹೊರ ಬಂದ ಮರಿಗಳು ಬದುಕುವುದು ಹೆಚ್ಚೆಂದರೆ ಐದಾರು. ಅವುಗಳಿಗೆ ಕೆರೆ ಹಾವುಗಳೇ ಪ್ರಮುಖ ಆಹಾರ. ಕಾಳಿಂಗ ಸಂತತಿ ಮಿತಿ ಮೀರಿದರೆ ಕೆರೆ ಹಾವುಗಳು ಇಲ್ಲವಾಗುತ್ತವೆ. ಕೆರೆ ಹಾವುಗಳಿಗೆ ಇಲಿಗಳೇ ಪ್ರಮುಖ ಆಹಾರ. ಅವುಗಳ ಸಂತತಿ ನಾಶವಾದರೆ ಇಲಿಗಳ ಸಂತತಿ ಹೆಚ್ಚಳವಾಗುತ್ತದೆ' ಎಂದರು.

ಮಳೆ: ಹಳ್ಳದಲ್ಲಿ ಕೊಚ್ಚಿಹೋದ ಟ್ರ್ಯಾಕ್ಟರ್

ಪ್ರಜಾವಾಣಿ ವಾರ್ತೆ

ಯಲಬುರ್ಗಾ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಕರಮುಡಿ, ಬಂಡಿಹಾಳ ಹಾಗೂ ಸುತ್ತಲಿನ ಪ್ರದೇಶದಲ್ಲಿ ಮಂಗಳವಾರ ಮಧ್ಯಾಹ್ನದಿಂದ ಸಂಜೆವರೆಗೂ ಮಳೆ ಸುರಿಯಿತು.

ಹಳ್ಳಗಳು ತುಂಬಿ ಹರಿದವು. ದುಡಿಯಲು ಹೋಗಿದ್ದ ಕಾರ್ಮಿಕರು ಹೊಲಗಳಲ್ಲಿಯೇ ಉಳಿಯಬೇಕಾಯಿತು.

'ಕಾರ್ಮಿಕರನ್ನು ಕರೆತಂದಿದ್ದ ಟ್ರ್ಯಾಕ್ಟರ್ ಹಳ್ಳದಲ್ಲಿ ಕೊಚ್ಚಿ ಹೋಯಿತು. ಬಹುತೇಕ ಕಾರ್ಮಿಕರು ಭಯಗೊಂಡು ಟ್ರ್ಯಾಕ್ಟರ್ ಹತ್ತದೆ ದಡದಲ್ಲಿ ಉಳಿದುಕೊಂಡಿದ್ದರಿಂದ ಪ್ರಾಣಾಪಾಯ ಸಂಭವಿಸಲಿಲ್ಲ. ಚಾಲಕ ಹಾರಿ ದಡ ಸೇರಿದ್ದಾನೆ' ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಯಲಬುರ್ಗಾ ಪಿಎಸ್‌ಐ ಶಿವಕುಮಾರ ಮುಗ್ಗಳ್ಳಿ ಹಾಗೂ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ, ಅಗ್ನಿಶಾಮಕ ಸಿಬ್ಬಂದಿ ಸಹಾಯ ಪಡೆದು ಕಾರ್ಮಿಕರನ್ನು ಹಳ್ಳ ದಾಟಿಸಲು ನೆರವಾದರು.

ಜಾತಿ ಜನಗಣತಿ– 26ರಂದು ಚರ್ಚೆ: ಕೆ.ಎಸ್‌.ಈಶ್ವರಪ್ಪ

ಚಿಕ್ಕಮಗಳೂರು: 'ಜಾತಿ ಗಣತಿಯ ವರದಿಯು ಸಿದ್ಧವಾಗಿದ್ದರೂ ಅದನ್ನು ಯಾಕೆ ಬಿಡುಗಡೆ ಮಾಡಲಿಲ್ಲ ಎಂದು ಸಿದ್ದರಾಮಯ್ಯ ಮತ್ತು ಸಮ್ಮಿಶ್ರ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಎಚ್‌.ಡಿ. ಕುಮಾರಸ್ವಾಮಿ ಹೇಳಬೇಕು' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಕೆ. ಕಾಂತರಾಜ್ ಅವರು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಅವಧಿಯಲ್ಲಿ, ಜಾತಿ ಜನಗಣತಿ ನಡೆಸಲು ಆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚಿಸಿದ್ದರು. ವರದಿಗೆ ಸಮಿತಿಯ ಮೂವರು ಸಹಿ ಹಾಕಿಲ್ಲ ಎಂಬ ಮಾಹಿತಿ ಇದೆ. ಸಹಿ ಹಾಕಿರದಿದ್ದರೆ ವರದಿಗೆ ಏನು ಬೆಲೆ ಇರುತ್ತದೆ. ಬಿಜೆಪಿಗೆ ಜಾತಿ ಜನಗಣತಿ, ಮೀಸಲಾತಿ ಬಗ್ಗೆ ಆಸಕ್ತಿ ಇಲ್ಲ ಎಂದು ಸಿದ್ದರಾಮಯ್ಯ ಹೇಳಿರುವುದು ರಾಜಕೀಯ ಕುತಂತ್ರ' ಎಂದು ಲೇವಡಿ ಮಾಡಿದರು.

'ಜಾತಿ ಜನಗಣತಿ ವಿಚಾರಕ್ಕೆ ಸಂಬಂಧಿಸಿದಂತೆ ಇದೇ 26ರಂದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ ಹೆಗ್ಡೆ ಅವರ ಜತೆ ಚರ್ಚಿಸುತ್ತೇನೆ. ಏನಾಗಿದೆ ಎಂಬುದನ್ನು ತಿಳಿದುಕೊಳ್ಳುತ್ತೇನೆ' ಎಂದು ಉತ್ತರಿಸಿದರು.

ವಿಜೇತರ ವಿವರಗಳನ್ನು ತಿಳಿಯಲು ಕೆಳಕಂಡ ಲಿಂಕ್‌ಗೆ ಭೇಟಿ ಕೊಡಿ

ಪ್ರಜಾವಾಣಿ ಇದ್ದರೆ ಗಮನ... ಗೆಲ್ಲುತ್ತೀರಿ ಬಹುಮಾನ!

ಸ್ಪೆಷಲ್ ಅಂಕಣಗಳ ಸಿಂಪಲ್ ಪ್ರಶ್ನೆ!

www.bit.ly/gamanawinners

ಅಂದದ ಚಂದದ ವರಮಹಾಲಕ್ಷ್ಮಿ ಅಲಂಕಾರ

www.bit.ly/lakshmiwinners

ವಿಶ್ವ ಛಾಯಾಗ್ರಹಣ ದಿನ

www.bit.ly/pvphotowinners

ಜಿ.ಟಿ.ದೇವೇಗೌಡ ಕಾಂಗ್ರೆಸ್ ಸೇರ್ಪಡೆ ಸುಳಿವು

ಒಂದನೇ ಪುಟದಿಂದ

'ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಅವರನ್ನು ಇತ್ತೀಚೆಗೆ ಭೇಟಿಯಾಗಿ ಪಕ್ಷ ತೊರೆಯುವ ಬಗ್ಗೆ ತಿಳಿಸಿದ್ದೇನೆ. ತಮ್ಮ ಜತೆಗೆ ಇರಲು ಕೋರಿದರು. ಆಗದು ಎಂದು ಕ್ಷಮೆ ಕೋರಿದೆ. ಈಗಾಗಲೇ ಕಾಂಗ್ರೆಸ್‌ನ ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರೊಂದಿಗೆ ಮಾತನಾಡಿರುವುದಾಗಿಯೂ ತಿಳಿಸಿದೆ' ಎಂದರು.

'ಬಿಜೆಪಿ ಕಡೆಗೆ ಹೋಗಬೇಡಿ ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಕಾಂಗ್ರೆಸ್ ಸೇರಿದರೆ ನಾನು ಹಾಗೂ ನನ್ನ ಮಗ ಜಿ.ಡಿ.ಹರೀಶ್‌ಗೌಡರಿಗೆ ಟಿಕೆಟ್ ನೀಡಬೇಕಾಗುತ್ತದೆ ಎಂದು ಸ್ಪಷ್ಟಪಡಿಸಿದ್ದೇನೆ. ನಾನು ಪಕ್ಷಕ್ಕೆ ಸೇರಿದರೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ತಾವು ಮತ್ತೆ ಸ್ಪರ್ಧಿಸುವುದಿಲ್ಲ ಎಂದು ಸಿದ್ದರಾಮಯ್ಯ ಕೂಡಾ ಹೇಳಿದ್ದಾರೆ' ಎಂದು ತಿಳಿಸಿದರು.

'ಎಚ್‌ಡಿಕೆ ಬೆಂಬಲವಿಲ್ಲದೇ ಶಾಸಕ ಸಾ.ರಾ.ಮಹೇಶ್ ತಮ್ಮ ಶಕ್ತಿ ತೋರಿಸಲಿ. ಕುಮಾರಸ್ವಾಮಿ ಮುಖವಾಣಿಯಾಗಿಟ್ಟುಕೊಂಡು ಅವರು ಸಿಂಗಲ್ ಲೀಡರ್ ಆಗುತ್ತಿದ್ದಾರೆ. ಹೀಗಾಗಿ ಪಕ್ಷದ ಕಾರ್ಯಕ್ರಮಗಳಿಗೆ ನನ್ನನ್ನು ಕರೆಯುತ್ತಿಲ್ಲ' ಎಂದರು.

'ಶೌಚಾಲಯ ಯೋಜನೆಗೆ ಮೋದಿ ಹೆಸರಿಡಿ'

ಚಿಕ್ಕಮಗಳೂರು: 'ಗ್ರಾಮೀಣ ಭಾಗದಲ್ಲಿ ಶೌಚಾಲಯ ನಿರ್ಮಾಣ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಹೆಸರಿಡಲು ಕ್ರಮವಹಿಸಬೇಕು' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಶಾಸಕ ಸಿ.ಟಿ. ರವಿ ಮನವಿ ಮಾಡಿದರು. ಗ್ರಾಮ ಪಂಚಾಯಿತಿಗಳ ಅಧ್ಯಕ್ಷ, ಉಪಾಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಕಾರ್ಯಾಗಾರದಲ್ಲಿ ಮಾತನಾಡಿದರು.

ನಿಧನ ವಾರ್ತೆ

ಉಪ್ಪಂಗಳ ರಾಮ ಭಟ್

ಉಡುಪಿ: ಸಾಹಿತಿ, ವಿದ್ವಾಂಸ ಡಾ. ಉಪ್ಪಂಗಳ ರಾಮ ಭಟ್ಟ (81) ಮಂಗಳವಾರ ನಿಧನರಾದರು. ಮೃತರಿಗೆ ಪತ್ನಿ ಶಂಕರಿ ಆರ್. ಭಟ್ ಹಾಗೂ ಓರ್ವ ಪುತ್ರ ಇದ್ದಾರೆ.

ಎಂಜಿಎಂ ಕಾಲೇಜಿನ ನಿವೃತ್ತ ಕನ್ನಡ ಪ್ರಾಧ್ಯಾಪಕರಾಗಿದ್ದ ರಾಮಭಟ್ಟರು ಶ್ರೇಷ್ಠ ವ್ಯಾಕರಣ ವಿದ್ವಾಂಸರಾಗಿದ್ದರು. ಕನ್ನಡ ಸಾಹಿತ್ಯ ಲೋಕಕ್ಕೆ ಹಲವು ಕೃತಿಗಳನ್ನು ನೀಡಿದ್ದಾರೆ. 1986ರಲ್ಲಿ 'ಅಕಲಂಕ ಪ್ರತಿಷ್ಠಾನ' ಸ್ಥಾಪಿಸಿ ಹಲವು ಕೃತಿಗಳನ್ನು ಹೊರತಂದಿದ್ದರು. ಶ್ರೇಷ್ಠ ಕೃತಿಗಳನ್ನು ಗುರುತಿಸಿ ಪ್ರತಿವರ್ಷ 'ಅಕಲಂಕ ಪ್ರಶಸ್ತಿ' ನೀಡಿ ಗೌರವಿಸುತ್ತಾ ಬಂದಿದ್ದರು.

ಉಪ್ಪಂಗಳ ಅವರ ಸಾಹಿತ್ಯ ಕೃಷಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಡಾ.ಹಾ.ಮಾ.ನಾ ದತ್ತಿ ಪ್ರಶಸ್ತಿ, ಅತ್ತಿಮಬ್ಬೆ ಪ್ರತಿಷ್ಠಾನದ ರನ್ನ ಸಾಹಿತ್ಯ ಪ್ರಶಸ್ತಿ, ಕಡೆಂಗೋಡ್ಲು ಕಾವ್ಯ ಪ್ರಶಸ್ತಿಗಳು ಸಂದಿವೆ. ಅಂತ್ಯಕ್ರಿಯೆಯು ಬುಧವಾರ ಉಡುಪಿಯ ಬೀಡಿನಗುಡ್ಡೆ ರುದ್ರಭೂಮಿಯಲ್ಲಿ ನಡೆಯಲಿದೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ.16 ಸಿ-1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560 052.
ದೂರವಾಣಿ : 080-22268677/78/79 ಫ್ಯಾಕ್ಸ್ : 080-22268667
ಇ-ಮೇಲ್: kerc-ka@nic.in ವೆಬ್‌ಸೈಟ್: www.karunadu.karnataka.gov.in/kerc
ಸಂಖ್ಯೆ: ಕವಿನಿಆ/ಜೆಟಿಸಿ/ಕವಿಪ್ರನಿ ಸಂಪರ್ಕ ಒಪ್ಪಂದ/2019-20/669 ದಿನಾಂಕ :

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ವಿಷಯ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ರಾಜ್ಯದೊಳಗಿನ ಪ್ರಸರಣಾ ಜಾಲಕ್ಕೆ ಸಂಪರ್ಕ ಹೊಂದುವಲ್ಲಿನ ಕರಡು ಒಪ್ಪಂದದ ಸಾರ್ವಜನಿಕ ವಿಚಾರಣೆ ಬಗ್ಗೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ರಾಜ್ಯದೊಳಗಿನ ಪ್ರಸರಣಾ ಜಾಲಕ್ಕೆ ಸಂಪರ್ಕ ಹೊಂದುವಲ್ಲಿನ ಕರಡು ಒಪ್ಪಂದ ಪ್ರಕಟಿಸಿತ್ತು. ಒಬ್ಬ ವ್ಯಕ್ತಿಯು ತಮ್ಮ ಅನಿಸಿಕೆ/ಅಭಿಪ್ರಾಯ/ಸಲಹೆಗಳನ್ನು ಲಿಖಿತ ರೂಪದಲ್ಲಿ ಆಯೋಗಕ್ಕೆ ಸಲ್ಲಿಸಿರುತ್ತಾರೆ. ಈ ವಿಷಯದಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಮುನ್ನ ಆಯೋಗವು **ದಿನಾಂಕ:03.09.2021ರಂದು ಬೆಳಿಗ್ಗೆ 11.00 ಗಂಟೆಗೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ನ್ಯಾಯಾಂಗ ಸಭಾಂಗಣ (ನಂ.16ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560 052)**ದಲ್ಲಿ ಸಾರ್ವಜನಿಕ ವಿಚಾರಣೆಯನ್ನು ಆಯೋಜಿಸಿದೆ. ಆಸಕ್ತರು, ಸದರಿ ಕರಡು ಒಪ್ಪಂದದ ಬಗ್ಗೆ ತಮ್ಮ ಅನಿಸಿಕೆ/ಅಭಿಪ್ರಾಯ/ಸಲಹೆಗಳು ಏನಾದರೂ ಇದ್ದಲ್ಲಿ ಆಯೋಗಕ್ಕೆ ವಿಚಾರಣಾ ದಿನದಂದು ಮುಂದೆ ಬಂದು ಸಲ್ಲಿಸಬಹುದು. ಕರಡು ಒಪ್ಪಂದದ ಅಧಿಸೂಚನೆಯನ್ನು ಕ.ವಿ.ನಿ.ಆ.ದ ವೆಬ್‌ಸೈಟ್: **https://karunadu.karnataka.gov.in/kerc/Pages/home.aspx.** ನಲ್ಲಿ ಲಭ್ಯವಿರಿಸಲಾಗಿದೆ.

ಸಹಿ/- ಕಾರ್ಯದರ್ಶಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ಮೈಸೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ (ಪೂ), ಸಯ್ಯಾಜಿರಾವ್ ರಸ್ತೆ ಮೈಸೂರು - 570024
ಸಂಖ್ಯೆ: ಮೈನಪಾ/ಕಾಇಂ(ಪೂ)/ಟಿಎನ್–33/21–22 ದಿನಾಂಕ: 23–08–2021

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಗೂಡ್ಸ್ ಮಿನಿ ಟಿಪ್ಪರ್ ಹಾಗೂ ಟ್ರಾಕ್ಟರ್ ವಾಹನಗಳಿಗೆ ಚಾಲಕರನ್ನು ಹೊರ ಗುತ್ತಿಗೆ ಆಧಾರದಲ್ಲಿ ಪಡೆಯುವ ಬಗ್ಗೆ ಮೇಲೆ ಕಾಣಿಸಿದ ಉಲ್ಲೇಖದನ್ವಯ ಟೆಂಡರನ್ನು ಆಹ್ವಾನಿಸಲಾಗಿದ್ದು, ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಮುಂದುವರೆದು ಕಾಮಗಾರಿಗಳ ಹೆಸರು, ಟೆಂಡರ್‌ಗಿಟ್ಟ ಮೊತ್ತ ಹಾಗೂ ಇ.ಎಂ.ಡಿ ಹಾಗೂ ಇನ್ನಿತರೆ ಷರತ್ತುಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಚೇರಿಯಿಂದ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ: **23–08–2021**ರ ನಂತರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್‌ನಲ್ಲಿ **https://eproc.karnataka.gov.in** ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ತಮ್ಮ ಬಿಡ್ಡನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಳಿಗೆ ಬಿಡ್ಡನ್ನು ಸಲ್ಲಿಸುವ ಕೊನೆಯ ದಿನಾಂಕ: **01–09–2021** ಹಾಗೂ ಬಿಡ್ಡನ್ನು ತೆರೆಯುವ ದಿನಾಂಕ: **02–09–2021** ಇನ್ನಿತರೆ ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರರು (ಪೂ) ಕಚೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್(ಪೂ) ಮೈ.ನ.ಪಾ. ಮೈಸೂರು
ಸಹಿ/– ಉಪ ಆಯುಕ್ತರು (ಅಭಿವೃದ್ಧಿ) ಮೈ.ನ.ಪಾ. ಮೈಸೂರು
DIPR/MYS/YC/427/2021-22

ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ

ಕಾರ್ಯಪಾಲಕ ಇಂಜಿನಿಯರ್, ನಂ–2, ಕಟ್ಟಡಗಳ ವಿಭಾಗ, 1ನೇ ಮಹಡಿ, ಲೋ.ಇ, ಪೂರಕ ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು
ದೂ: 080–22122856. ವೆಬ್‌ಸೈಟ್: www.kpwd.gov.in
ಸಂಖ್ಯೆ:27/2021–22 ದಿನಾಂಕ:21.08.2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ)

ಕಾರ್ಯಪಾಲಕ ಇಂಜಿನಿಯರ್, ನಂ–2 ಕಟ್ಟಡಗಳ ವಿಭಾಗ, ಬೆಂಗಳೂರು ರವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅದಿನಿಯಮ–2000ರನ್ವಯ ಕೆಡಬ್ಲ್ಯೂಗೆ ನಿಯಮಗಳಂತೆ ಈ ಕೆಳಕಂಡ ಕಾಮಗಾರಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (**https://eproc.karnataka.gov.in**) ಪಿಡಬ್ಲ್ಯೂಡಿಯಲ್ಲಿ ನೋಂದಣಿ ಮಾಡಿರುವ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ಪ್ರೊಸೆಸ್ಸಿಂಗ್ ಬೆಲೆಯನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

ಕಾಮಗಾರಿಯ ಹೆಸರು: ಬೆಂಗಳೂರಿನಲ್ಲಿರುವ ನೃಪತುಂಗ ರಸ್ತೆಯಲ್ಲಿ ಸಿಎಂಎಂ ನ್ಯಾಯಾಲಯದ ಬಹುಮಹಡಿ ವಾಹನ ನಿಲುಗಡೆಯ ಕಟ್ಟಡದ ಮೇಲ್ಭಾಗಕ್ಕೆ 4 ರಿಂದ 6ನೇ ಅಂತಸ್ತುಗಳಲ್ಲಿ ನ್ಯಾಯಾಲಯ ಕೊಠಡಿಗಳ ನಿರ್ಮಾಣ ಕಾಮಗಾರಿ. KPWD/2019-20/BD/Work_Indent114282/Call-3. **ಅಂದಾಜು ಮೊತ್ತ : ರೂ.** 28,12,50,000.01. **ಇಎಂಡಿ ಮೊತ್ತ : ರೂ.** 28,12,500/- (Rs. 1,00,000/- through E-payment and Rs. 27,12,500/- through Bank Guarantee). **ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಗೊಳಿಸಿರುವ ಕಾಲಾವದಿ(ಮಳೆಗಾಲ ಸೇರಿ):** 24 ತಿಂಗಳು. **ಗುತ್ತಿಗೆದಾರರ ದರ್ಜೆ:** 1ನೇ ದರ್ಜೆ.

1) ಟೆಂಡರ್ ಡಾಕ್ಯೂಮೆಂಟನ್ನು ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ಯಿಂದ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿರುವ **ದಿನಾಂಕ: 21.08.2021 ರಿಂದ 20.09.2021**ರ ವರೆಗೆ. 2) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ: 20.09.2021 ಸಂಜೆ 4:00 ಗಂಟೆಯವರೆಗೆ.** 3) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ **ದಿನಾಂಕ: 22.09.2021 ರಂದು ಸಂಜೆ 4:00ಕ್ಕೆ** ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪಡೆಯಬಹುದಾಗಿದೆ ಹಾಗೂ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ನಂ–2, ಕಟ್ಟಡಗಳ ವಿಭಾಗ, ಬೆಂಗಳೂರು.
ವಾಸಾಸಂಇ/ಬೆಂನ/ಜಿಎ/1277/2021–22

ಕೋವಿಡ್-19 ರಿಂದ ಉಂಟಾಗುವ ಮರಣ ತಡೆಗಟ್ಟಲು ಆರಂಭಿಕ ಹಂತದಲ್ಲೇ ರೋಗ ಪತ್ತೆಹಚ್ಚುವುದು ಅತಿಮುಖ್ಯ, ಸಹಾಯಕ್ಕಾಗಿ ಕರೆ ಮಾಡಿ, ಆಪ್ತಮಿತ್ರ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿ–585105,

ಪೋ.ನಂ 08472–278634/256944 Email:eerwssglb14@gmail.com
ಸಂ.ಕಾ.ನಿ.ಅ/ಗ್ರಾ.ಕು.ನೀ&ನೈ/.ವಿ.ಕ/ ತಾ .ಶಾ /2021–22/1095 ದಿನಾಂಕ : 23–08–2021

ಅಲ್ಪಾವಧಿ ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ e-procurement portal ನಡಿಯಲ್ಲಿ ಮಾತ್ರ) (ದ್ವಿಲಕೋಟೆಯಲ್ಲಿ)

ಕರ್ನಾಟಕ ಘನತೆವೆತ್ತ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.

1) ಕಾಮಗಾರಿಯ ವಿವರ : **ಕಲಬುರಗಿ ತಾಲೂಕಿನ–01 (Indent No-34371),** 2) ಟೆಂಡರಿಗಿಟ್ಟ ಮೊತ್ತ : ಕನಿಷ್ಠ 1,84,82,065/-, ಗರಿಷ್ಠ 1,84,82,065/-, 3) ಲೆಕ್ಕ ಶೀರ್ಷಿಕೆ : Jal Jeevan Mission 2020-21, 4) ಗುತ್ತಿಗೆದಾರರ ಅರ್ಹತೆ : 2ನೇ ದರ್ಜೆ ಗುತ್ತಿಗೆದಾರರು & ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ : 21–08–2021 ರಿಂದ 29–08–2021, 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ : ಇ–ಪ್ರೋಕ್ಯೂರಮೆಂಟ್ ಪ್ರಕಾರ, 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ : 29–08–2021 ಸಾಯಂಕಾಲ 4:00 ಗಂಟೆವರೆಗೆ, 8) ಪ್ರೀ ಬಿಡ್ಡ್ ಸಭೆ ದಿನಾಂಕ : 25–08–2021 ಬೆ. 11.00 ಗಂಟೆಯ ನಂತರ, 9) ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ : 30–08–2021 ಸಾಯಂಕಾಲ 4:01 ಗಂಟೆವರೆಗೆ, 10) ಆರ್ಥಿಕ ಬಿಡ್ಡ ತೆರೆಯುವ ದಿನಾಂಕ : 01–09–2021 ಬೆ. 11.00 ಗಂಟೆಯ ನಂತರ, 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಮೊದಲನೆ ಮಹಡಿ, ಕುಸನೂರ ರೋಡ, ಕಲಬುರಗಿ, 12) ಅಂತರಜಾಲ ತಾಣದ ವಿಳಾಸ : www.eproc.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/562/ಎಂ.ಸಿ&ಎ/2021–22

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಅಭಿಯಂತರರು(ವಿ)ಕಾರ್ಯ ಮತ್ತು ಪಾಲನಾ ವೃತ್ತ, ಶಿವಗಂಗಾ ಲೇಔಟ್., ಹು.ವಿ.ಸ.ಕಂ.ನಿ, ಹುಬ್ಬಳ್ಳಿ–23
ದೂರವಾಣಿ ಸಂಖ್ಯೆ: 0836-2364144 / ಫ್ಯಾಕ್ಸ್ ಸಂಖ್ಯೆ : 0836-2366184
Email.ID: seehbl.hescom@gmail.com
GST NO: 29AABCH3176JEZZ (CIN) : U31401KA2002SGC030437
No: HESCOM/SEE/EEE(O)/AEE-1/2021-22/2411-13 Date: 24.08.2021

ಟೆಂಡರ್ ಪ್ರಕಟಣೆ (ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ)

ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ & ಪಾಲನೆ ವೃತ್ತ, ಹೆಸ್ಕಾಂ, ಹುಬ್ಬಳ್ಳಿ ಇವರು ಹುಬ್ಬಳ್ಳಿ ವೃತ್ತದ ಹುಬ್ಬಳ್ಳಿ ಗ್ರಾಮೀಣ ವಿಭಾಗದ ಕುಂದಗೋಳ ಹಾಗೂ ನವಲಗುಂದ ಉಪವಿಭಾಗಗಳ ವ್ಯಾಪ್ತಿಯಲ್ಲಿನ 2021–22ನೇ ಸಾಲಿನ ಎಸ್.ಸಿ.ಪಿ & ಟಿ.ಎಸ್.ಪಿ ಯೋಜನೆ ಅಡಿಯಲ್ಲಿ ವಿದ್ಯುತ್ ಜಾಲಬಲವರ್ಧನೆ ಕಾಮಗಾರಿಗೆ ಭಾಗಶ: ಗುತ್ತಿಗೆ ಆಧಾರದಲ್ಲಿ ಟೆಂಡರಗಳನ್ನು ಈ ಕೆಳಕಂಡ ಇಂಡೆಂಟ್‌ಗಳ ಅನ್ವಯ ಆಹ್ವಾನಿಸಿರುತ್ತಾರೆ.

1.HESCOM/2021-22/EL/WORK_INDENT5171
2.HESCOM/2021-22/EL/WORK_INDENT5172

ಹೆಚ್ಚಿನ ಮಾಹಿತಿಗಾಗಿ **www.eproc.karnataka.gov.in.** ವೆಬ್‌ಸೈಟ್‌ನಲ್ಲಿ ನೋಡಬಹುದಾಗಿದೆ. ಸ್ಪಷ್ಟೀಕರಣ ಬೇಕಾದಲ್ಲಿ, ಕಛೇರಿ ಸಮಯದಲ್ಲಿ ಈ ಕಛೇರಿಗೆ ಸಂಪರ್ಕಿಸಬಹುದಾಗಿದೆ.

ಸಹಿ/– ಅಧೀಕ್ಷಕ ಇಂಜಿನೀಯರರು (ವಿ), ಕಾ & ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ
ವಾ.ಸಾ.ಇ./ದಾ/445/2021–22/ದೇಶಪಾಂಡೆಪಬ್ಲಿಸಿಟಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಯೋಜನೆ ವಿಭಾಗ, ಪಶ್ಚಿಮ ವಲಯ, ಜಂಟಿ ಆಯುಕ್ತರು (ಪಶ್ಚಿಮ)ರವರ ಕಛೇರಿ ಆವರಣ, 2ನೇ ಮಹಡಿ, ಸಂಪಿಗೆ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು–560 020
ನಂ.: ಕಾಪಾಅ(ಯೋ–ಪ)/ಪಿಆರ್/363/2021–22 ದಿನಾಂಕ: 24.08.2021

ತಿದ್ದುಪಡಿ ಅಧಿಸೂಚನೆ

ಉಲ್ಲೇಖ: 1) ಟೆಂಡರ್ ನೋಟಿಫಿಕೇಷನ್ ಸಂಖ್ಯೆ: ಕಾಪಾಅ/ಯೋ–ಪ/ಟೆಂಡರ್/12/2021–22 ದಿನಾಂಕ: 22.07.2021.

ರಾಜಾಜಿನಗರ ವಿಧಾನಸಭಾ ಕ್ಷೇತ್ರ, **ವಾರ್ಡ್ ನಂ. 101**ರಲ್ಲಿ ಸಮಗ್ರ ಅಭಿವೃದ್ಧಿ ಮತ್ತು ಬಹುಪಯೋಗಿ ಕಟ್ಟಡ ಮತ್ತು ಸಾರ್ವಜನಿಕ ಶೌಚಾಲಯ ನಿರ್ಮಾಣ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳು ಪ್ಯಾಕೇಜ್ 03 ಕಾಮಗಾರಿಗೆ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾಗಿದ್ದು, ತಾಂತ್ರಿಕ ಕಾರಣಗಳಿಂದ ಟೆಂಡರ್‌ಗಳನ್ನು ಈ ಕೆಳಕಂಡ ದಿನಾಂಕಗಳಿಗನುಗುಣವಾಗಿ ವಿಸ್ತರಣೆ ಮಾಡಲಾಗಿರುತ್ತದೆ.

ತಿದ್ದುಪಡಿ ಅಧಿಸೂಚನೆ ದಿನಾಂಕಗಳು: (1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **14.09.2021ರ ಸಂಜೆ 4:00 ಗಂಟೆವರೆಗೆ.** (2) ಟೆಂಡರನ್ನು ತೆರೆಯುವ ದಿನಾಂಕ ಮತ್ತು ಸಮಯ: **16.09.2021ರ ಸಂಜೆ 4:30 ಗಂಟೆಗೆ.** (3) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ಸಮಯ: **ತಾಂತ್ರಿಕ ಬಿಡ್ ಅನುಮೋದನೆಯ ನಂತರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು.**

ಸಹಿ/–, ಕಾರ್ಯಪಾಲಕ ಅಭಿಯಂತರರು, ಯೋಜನೆ ವಿಭಾಗ, ಪಶ್ಚಿಮ ವಲಯ, ಬಿಬಿಎಂಪಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ GOVERNMENT OF KARNATAKA
ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ
VIJAYANAGAR INSTITUTE OF MEDICAL SCIENCES, BALLARI
Cantonment Area, STD- 08392, Director:'- 242 387, PA:235 201,Fax:08392-235 202, Principal:'-235 204,
e-mail : directorvimsBallari@gmail.com
website: www.vimsBallari.org.in
No. VIMS/SUP/TEND/60/2021-22, DATE: 23.08.2021

ಮರು ಇ–ಟೆಂಡರ್ ಅಧಿಸೂಚನೆ

ವಿಮ್ಸ್ ಸಂಸ್ಥೆಯ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗೆ ಮೆಡಿಕಲ್ ಉಪಕರಣಗಳನ್ನು ಓ.ಟಿ. ಮತ್ತು ಐ.ಸಿ.ಯು ವಿಭಾಗಕ್ಕೆ ಡಿ.ಎಂ.ಎಫ್ ಅನುದಾನದಲ್ಲಿ ಸರಬರಾಜು ಮಾಡಲು ಅರ್ಹ ಟೆಂಡರುದಾರರಿಂದ ಕೆ.ಟಿ.ಪಿ.ಪಿ ಅಧಿನಿಯಮ–1999 ಮತ್ತು ನಿಯಮ–2000 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ–ಪೋರ್ಟಲ್ ಮೂಲಕ ಈ ಕೆಳಗಿನಂತೆ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ ಹಾಗು ಹೆಚ್ಚಿನ ಮಾಹಿತಿಯನ್ನು ಕಾರ್ಯಾಲಯದ ಕಛೇರಿ ಅವಧಿಯಲ್ಲಿ ಪಡೆಯಲು ಮತ್ತು ವೆಬ್‌ಸೈಟ್: **https://eproc.karnataka.gov.in** ಮೂಲಕ ಪಡೆಯಲು ಕೋರಿದೆ.

01. ಟೆಂಡರ್ ಫಾರಂ ಅನ್ನು ವೆಬ್‌ಸೈಟ್ – http//eproc.karnataka.gov.in ರಲ್ಲಿ ಡೌನ್ ಲೋಡ್ ಮಾಡಿಕೊಳ್ಳು ಪ್ರಾರಂಭದ ದಿನಾಂಕ: **23.08.2021.** 02. ಟೆಂಡರಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **30.08.2021 up to 5.00 PM.** 03. ಟೆಂಡರ್‌ನ್ನು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ : **06.09.2021 up to 5.00 PM.** 04. ಟೆಂಡರಿನ ಟೆಕ್ನೋ–ಕಮರ್ಷಿಯಲ್ ಬಿಡ್ ಅನ್ನು ತೆರೆಯುವ ದಿನಾಂಕ ಮತ್ತು ಸಮಯ (ಮೊದಲನೇ ಬಿಡ್): **07.09.2021 @ 5.15 PM.** 05. ಸದರಿ ಟೆಂಡರಿನ ಅಂದಾಜು ಮೊತ್ತ: **66.00 Lakhs.**

ಸಹಿ/– ನಿರ್ದೇಶಕರು, ವಿಮ್ಸ್, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/294/ಎಂಸಿಎ/2021–22

ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ತುಮಕೂರು

ಶ್ರೀ ಮಹಾಲಕ್ಷ್ಮೀ ಆರ್ಕೇಡ್, ಎಸ್.ಎಸ್.ಪುರಂ ಮುಖ್ಯರಸ್ತೆ, ಕಾಫಿ ಬೋರ್ಡ್ ಕಾಲೋನಿ, ತುಮಕೂರು–572 102
ದೂರವಾಣಿ:0816–2278190, CIN:U74999KA2017PLC099774
ವೆಬ್‌ಸೈಟ್: www.smartcitytumakuru.in
ಇ–ಮೇಲ್: smartcitytumakuru@gmail.com
ಸಂಖ್ಯೆ:ತುಸ್ಮಾಸಿ/ಟೆಂಡರ್/ಸಿಆರ್/83/2019–20 ದಿನಾಂಕ: 23.08.2021

ಟೆಂಡರ್ ಪ್ರಕಟಣೆ

ತುಮಕೂರು ಸ್ಮಾರ್ಟ್‌ಸಿಟಿ ಯೋಜನೆಯಡಿಯಲ್ಲಿ ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಬಿಡ್‌ದಾರರು ಟೆಂಡರ್‌ನಲ್ಲಿ ಭಾಗವಹಿಸಲು ಟೆಂಡರ್ ದಾಸ್ತಾನನ್ನು ಇ–ಪೋರ್ಟಲ್ www.eproc.karnataka.gov.in - ಮುಖಾಂತರ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಇ–ಪೋರ್ಟಲ್ ಹೆಲ್ಪ್ ಡೆಸ್ಕ್ ದೂರವಾಣಿ ಸಂಖ್ಯೆ: 080–22340948 ಹಾಗೂ ತುಮಕೂರು ಸ್ಮಾರ್ಟ್‌ಸಿಟಿ ದೂರವಾಣಿ ಸಂಖ್ಯೆ: 0816–2278190 ಯನ್ನು ಸಂಪರ್ಕಿಸಬಹುದು.

ಕಾಮಗಾರಿಯ ಹೆಸರು: (1) ತುಮಕೂರು ನಗರದ ಅಜ್ಜಗೊಂಡನಹಳ್ಳಿ ಘನ ತ್ಯಾಜ್ಯ ಸಂಗ್ರಹದ ಪರಿಹಾರ ಮತ್ತು ಸ್ಥಳ ಮನಶ್ಚೇತನಗೊಳಿಸುವಿಕೆ – ಮರು ಟೆಂಡರ್ – (4ನೇ ಕರೆ) ಟೆಂಡರ್ ಮೊತ್ತ: **4.97 ಕೋಟಿಗಳು.** ಇಎಂಡಿ: **2.00 ಲಕ್ಷಗಳು.** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **06.09.2021** ಟೆಂಡರ್ ತೆರೆಯುವ ದಿನಾಂಕ: **07.09.2021. ಸೂಚನೆ:** ಈ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಯಾವುದಾದರೂ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ.

ಸಹಿ/–ಕಾರ್ಯಪಾಲಕ ಅಭಿಯಂತರರು, ತುಮಕೂರು ಸ್ಮಾರ್ಟ್‌ಸಿಟಿ ಲಿಮಿಟೆಡ್, ತುಮಕೂರು.
DIPR/TUM/251/MCA/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಿಜಯಪುರ ಮಹಾನಗರ ಪಾಲಿಕೆ, ವಿಜಯಪುರ

ದೂರವಾಣಿ ಸಂ: 08352–278539,
ಸಹಾಯವಾಣಿ: 08352–222474, ಫ್ಯಾಕ್ಸ್: 08352–278532,
Website: www.bijapurcity.gov.in
email: itstaff_ulb_bijapur@yahoo.co.in
ನಂ: ಮನಪಾವಿ/ಲೋಇ/ಟೆ.ಪ್ರ/2021–22/1135 ದಿನಾಂಕ: 19.08.2021

ತಿದ್ದುಪಡಿ ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ 2ನೇ ಕರೆ ಟೆಂಡರ ಪ್ರಕಟಣೆ

ಉಲ್ಲೇಖ: ಈ ಹಿಂದಿನ ಪತ್ರ ಸಂಖ್ಯೆ: ನಂ.ಮನಪಾವಿ/ಲೋ.ಇ/ಟೆ.ಪ/2021–22/644, ದಿನಾಂಕ: 13–07–2021.

ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ದರ್ಜೆಯ ಯಾವತ್ತೂ ಮಕ್ತೇದಾರರಿಗೆ ಈ ಮೂಲಕ ತಿಳಿಸುವದೇನೆಂದರೆ, ಮಹಾತ್ಮಾಗಾಂಧಿ ನಗರ ವಿಕಾಸ ಯೋಜನಾ (MGNVY) ಅನುದಾನದಲ್ಲಿನ ರೂ.500.00 ಲಕ್ಷಗಳ ಪ್ಯಾಕೇಜ್ ನಂ. 06 ಅಭಿವೃದ್ಧಿ ಕಾಮಗಾರಿಗಳ ನಿರ್ವಹಿಸಲು (W.I.No.: DMA/2020-21/OW/WORK_INDENT 108270/CALL-2) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ.–4ರ ನಿಬಂಧನೆಗೆ ಒಳಪಟ್ಟು ಐಟಂವಾರು ಟೆಂಡರಗಳನ್ನು ಕರೆಯಲಾಗಿದೆ ಹಾಗೂ ಅದರಂತೆ ಟೆಂಡರ್‌ನಲ್ಲಿ ಕೆಲವೊಂದು ತಿದ್ದುಪಡಿಗಳನ್ನು ಮಾಡಿದ್ದು, ಸದರ ಕಾಮಗಾರಿಗಳ 1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **04.09.2021ರಂದು ಸಾಯಂಕಾಲ 4.00 ಘಂಟೆಗೆ.** 2) ತಾಂತ್ರಿಕ ದಾಖಲಾತಿಗಳನ್ನು ತೆರೆಯುವ ದಿನಾಂಕ: **06.09.2021ರಂದು ಸಾಯಂಕಾಲ 4.30 ಘಂಟೆಗೆ.** ಆರ್ಥಿಕ ದಾಖಲಾತಿಗಳನ್ನು ತೆರೆಯುವ ದಿನಾಂಕ: **13.09.2021ರಂದು ಸಾಯಂಕಾಲ 4.30 ಘಂಟೆ.** ಕಾಮಗಾರಿ ಹೆಚ್ಚಿನ ಮಾಹಿತಿಗಾಗಿ ಆನ್‌ಲೈನ್ ಮೂಲಕ ವೆಬ್‌ಸೈಟ್ (www.eproc.karnataka.gov.in) ನಲ್ಲಿ ಸಂಪರ್ಕಿಸಬಹುದಾಗಿದೆ

ಸಹಿ/- ಕಾರ್ಯಪಾಲಕ ಅಭಿಯಂತರರು, ವಿಜಯಪುರ ಮಹಾನಗರ ಪಾಲಿಕೆ, ವಿಜಯಪುರ.
ವಾ.ಸಾ.ಇ./ವಿಜಯಪುರ/235/ಎಂಸಿಎ/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರವರ ಕಛೇರಿ, ಪದ್ಮನಾಭನಗರ ವಿಭಾಗ, ಕುಮಾರಸ್ವಾಮಿ ಬಡಾವಣೆ, ಸಾಗರ್ ಆಸ್ಪತ್ರೆ ಎದುರು, ಬೆಂಗಳೂರು–560 078.
ಸಂಖ್ಯೆ: ಕಾಅ(ಪನಾ)/ಟೆಂಡರ್/04/2021-22 ದಿನಾಂಕ: 24-08-2021

ಟೆಂಡರ್ ಪ್ರಕಟಣೆ (ಏಕ ಲಕೋಟೆ ಪದ್ಧತಿ ಮತ್ತು ದ್ವಿ ಟೆಂಡರ್ ದಾಖಲೆಗಳ ಪದ್ಧತಿ)

(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಪದ್ಮನಾಭನಗರ ವಿಭಾಗ, ಬೃಬೆಂಮಪಾ, ಬೆಂಗಳೂರು ಇವರು ಕೆಳಗೆ ತಿಳಿಸಿರುವ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಬಿ.ಬಿ.ಎಂ.ಪಿ / ಕೆ.ಪಿ.ಡಬ್ಲ್ಯೂ.ಡಿ / ಸಿ.ಪಿ.ಡಬ್ಲ್ಯೂ.ಡಿ / ರೈಲ್ವೆ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು ಮತ್ತು ವರ್ಗ	ನಿಗದಿಪಡಿಸಿದ ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ)
1.	ವಾರ್ಡ್ ನಂ.166ರಲ್ಲಿ ರಸ್ತೆಗಳ ಸುಧಾರಣೆ ಮತ್ತು ಪಾದಚಾರಿ ಮಾರ್ಗಗಳ ನಿರ್ವಹಣೆ. (ಪರಿಶಿಷ್ಟ ಜಾತಿ).	40.00
2.	ವಾರ್ಡ್ ನಂ.166ರ ಕರಿಸಂದ್ರದಲ್ಲಿ ಆರ್‌ಓ ಪ್ಲಾಂಟ್ ಒದಗಿಸುವುದು (3ನೇ ಕರೆ) (ಇತರೆ).	15.00
3.	ವಾರ್ಡ್ ನಂ.180ರಲ್ಲಿ ಬನಶಂಕರಿ ದೇವಸ್ಥಾನದ ಈಶ್ವರಿನಗರದ ಸುತ್ತಮುತ್ತಲು ಸಿಸಿ ಕ್ಯಾಮರ ಒದಗಿಸುವುದು. (2ನೇ ಕರೆ) (ಇತರೆ).	25.00
4.	ವಾರ್ಡ್ ನಂ.180ರಲ್ಲಿ ಬನಶಂಕರಿ ದೇವಸ್ಥಾನದ ಗಂಗಾಧರನಗರ ಸುತ್ತಮುತ್ತಲು ಸಿಸಿ ಕ್ಯಾಮರ ಒದಗಿಸುವುದು. (ಇತರೆ).	27.00
5.	ವಾರ್ಡ್ ನಂ.181ರ ಕುಮಾರಸ್ವಾಮಿ ಬಡಾವಣೆಯಲ್ಲಿ ಪರ್ಕ್ಯುಲೇಶನ್ ಪಿಟ್ಸ್‌ಗಳನ್ನು ಒದಗಿಸುವುದು. ಅನುಬಂಧ-2 ಕ್ರ.ಸಂ.1246 (ಇತರೆ).	20.00
6.	ವಾರ್ಡ್ ನಂ.181ರ ಕುಮಾರಸ್ವಾಮಿ ಬಡಾವಣೆಯಲ್ಲಿ ಸಿಸಿ ಕ್ಯಾಮರಗಳನ್ನು ಒದಗಿಸುವುದು. ಅನುಬಂಧ-2 ಕ್ರ.ಸಂ.1256 (ಇತರೆ).	50.00
7.	ವಾರ್ಡ್ ನಂ.182ರ ಪದ್ಮನಾಭನಗರದಲ್ಲಿ ಬ್ಲಾಕ್ ಸ್ಪಾಟ್‌ಗಳಿಗೆ ಸಿಸಿ ಕ್ಯಾಮರ ಒದಗಿಸುವುದು ಹಾಗೂ ಬ್ಲಾಕ್ ಸ್ಪಾಟ್ ಪ್ರದೇಶಗಳ ಅಭಿವೃದ್ಧಿ(2ನೇ ಕರೆ) (ಇತರೆ).	22.50
8.	ವಾರ್ಡ್ ನಂ.183ರ ಚಿಕ್ಕಲಸಂದ್ರದಲ್ಲಿ ಯುಜಿಡಿ ಕಾಮಗಾರಿಗಳು (ಇತರೆ).	7.50
9.	ವಾರ್ಡ್ ನಂ.183ರ ಚಿಕ್ಕಲಸಂದ್ರದಲ್ಲಿ ಉಳಿಕೆ ಒಳಚರಂಡಿಗಳ ಹೂಳು ತೆಗೆಯುವುದು ಹಾಗೂ ರಸ್ತೆಗಳ ಸುಧಾರಣಾ ಕಾಮಗಾರಿ (ಇತರೆ).	25.00
10.	ವಾರ್ಡ್ ನಂ.166ರ 7ನೇ ಬ್ಲಾಕ್ ಜಯನಗರದ 13ನೇ ಅಡ್ಡರಸ್ತೆಯ ಗಣಪತಿ ದೇವಸ್ಥಾನದಲ್ಲಿ ಸಮುದಾಯ ಭವನದ ನಿರ್ಮಾಣ ಕಾಮಗಾರಿ (ಇತರೆ). (4ನೇ ಕರೆ)	25.00
11.	ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.161, 182, 183, ಮತ್ತು 166ರಲ್ಲಿ ರಸ್ತೆಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಕಾಮಗಾರಿ (ಇತರೆ).	400.00
12.	ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.161, 180, 182, 183, 165 ಮತ್ತು 166ರಲ್ಲಿ ಒಳಚರಂಡಿಗಳ ಸಮಗ್ರ ಅಭಿವೃದ್ಧಿ ಕಾಮಗಾರಿ (ಇತರೆ).	375.00
13.	ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.161, 182, 183, 165, 166, 167 ಮತ್ತು 180ರಲ್ಲಿ ಆಟದ ಮೈದಾನ, ಬಿಬಿಎಂಪಿ ಕಟ್ಟಡ, ಚಿತಾಗಾರದ ನಿರ್ವಹಣೆ ಹಾಗೂ ಉದ್ಯಾನವನಗಳ ಅಭಿವೃದ್ಧಿ ಕಾಮಗಾರಿ (ಇತರೆ).	150.00
14.	ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.161, 182, 165, 166ರಲ್ಲಿ ಬಿಬಿಎಂಪಿ ಕಟ್ಟಡಗಳು ಮತ್ತು ವಾರ್ಡ್ ಕಚೇರಿಗಳ ನಿರ್ವಹಣೆ ಕಾಮಗಾರಿ (ಇತರೆ).	75.00
15.	ವಾರ್ಡ್ ನಂ.181ರ ಕುಮಾರಸ್ವಾಮಿ ಬಡಾವಣೆ ವಾರ್ಡ್‌ನಲ್ಲಿ ಉದ್ಯಾನವನಗಳಿಗೆ ಕೊಳವೆ ಬಾವಿಗಳನ್ನು ಒದಗಿಸುವುದು ಅನುಬಂಧ-2 ಕ್ರ.ಸಂ.1247 (ಇತರೆ).	200.00
16.	ವಾರ್ಡ್ ನಂ.182ರ ಪದ್ಮನಾಭನಗರದ ಗುರುರಾಜ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳ ಸುಧಾರಣಾ ಕಾಮಗಾರಿ (2ನೇ ಕರೆ) (ಇತರೆ).	81.00
17.	ವಾರ್ಡ್ ನಂ.182ರ ಪದ್ಮನಾಭನಗರದ ಕುಮಾರಸ್ವಾಮಿ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳ ಸುಧಾರಣಾ ಕಾಮಗಾರಿ (2ನೇ ಕರೆ) (ಇತರೆ).	75.00
18.	ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.161, 182, 183, 165, 166 ಮತ್ತು 180ರಲ್ಲಿ ಕೊಳವೆ ಬಾವಿಯನ್ನು ಕೊರೆಯುವುದು ಹಾಗೂ ನೀರು ಸರಬರಾಜು ಒದಗಿಸುವುದು ಹಾಗೂ ದುರಸ್ತಿ ಕಾಮಗಾರಿ (ಇತರೆ).	150.00

ಇಎಂಡಿ ವಿನಾಯಿತಿ (ಇಎಂಡಿ ಘೋಷಣೆ ಫಾರ್ಮ್ ಸಲ್ಲಿಸಿದ್ದರೆ) ಸರ್ಕಾರಿ ಆದೇಶದ ಪ್ರಕಾರ ನಂ.ಆಇ 675 ವೆಚ್ಚ-12/2020, ಬೆಂಗಳೂರು, ದಿನಾಂಕ: 22-12-2020 ಮತ್ತು ಆಯುಕ್ತರು, ಬಿಬಿಎಂಪಿ ಕಚೇರಿ ಆದೇಶ ನಂ.: ಆಯುಕ್ತರು/ಪಿಆರ್/ಇ-9251/2020-21, ದಿನಾಂಕ: 30-01-2021.

ಟೆಂಡರ್‌ನ ಕಾರ್ಯಸೂಚಿ: 1. ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ವೇಳೆ: 27-09-2021ರ ಸಂಜೆ 4:00 ಗಂಟೆ. 2. ಆರ್ಥಿಕ ಬಿಡ್‌ಗಳನ್ನು (ಕ್ರ.ಸಂ.11 ರಿಂದ 18ರ ಕಾಮಗಾರಿಗಳನ್ನು ಹೊರತುಪಡಿಸಿ) ಮೇಲ್ಕಂಡ ಕಚೇರಿಯಲ್ಲಿ ದಿನಾಂಕ: 28-09-2021ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. 3. ಪೂರ್ವ ಬಿಡ್ ಸಭೆಯನ್ನು ಕ್ರ.ಸಂ.11 ರಿಂದ 18ರ ಕಾಮಗಾರಿಗಳಿಗೆ ಮಾತ್ರ ದಿನಾಂಕ: 22-09-2021ರಂದು ಮಧ್ಯಾಹ್ನ 3:00 ಗಂಟೆಗೆ ಮುಖ್ಯ ಅಭಿಯಂತರರವರ ಕಚೇರಿ (ದಕ್ಷಿಣ), ಬೃಬೆಂಮಪಾ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು-560011 ಇಲ್ಲಿ ನಡೆಸಲಾಗುವುದು. 4. ತಾಂತ್ರಿಕ ಬಿಡ್‌ಗಳನ್ನು ಕ್ರ.ಸಂ.11 ರಿಂದ 18ರ ಕಾಮಗಾರಿಗಳಿಗೆ ಮಾತ್ರ ಕಾರ್ಯಪಾಲಕ ಅಭಿಯಂತರರು, (ಪದ್ಮನಾಭನಗರ)ರವರ ಕಚೇರಿಯಲ್ಲಿ ದಿನಾಂಕ: 28-09-2021ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ **https://eproc.karnataka.gov.in** ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಪದ್ಮನಾಭನಗರ ವಿಭಾಗ, ಬೃಬೆಂಮಪಾ.

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

❦ ಸುಭಾಷಿತ ❦

ಒಳ್ಳೆಯ ರಾಷ್ಟ್ರ ನಿರ್ಮಾಣವಾಗಬೇಕಾದರೆ, ಒಳ್ಳೆಯ ವ್ಯಕ್ತಿಗಳ ನಿರ್ಮಾಣವೂ ಆಗಬೇಕು.
- ಸರ್ ಎಂ.ವಿಶ್ವೇಶ್ವರಯ್ಯ

ವಿರೋಧ ಪಕ್ಷಗಳ ಒಗ್ಗಟ್ಟಿಗೆ ಬೇಕು ಗಟ್ಟಿಯಾದ ಸಮಾನ ನೆಲೆಗಟ್ಟು

ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಧಾನಿ ಅಥವಾ ಆಡಳಿತ ಪಕ್ಷಕ್ಕೆ ಸರ್ವಾಧಿಕಾರ ಇಲ್ಲ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ವ್ಯವಸ್ಥೆಯ ಅವಿಭಾಜ್ಯ ಭಾಗಗಳು; ವಿರೋಧ ಪಕ್ಷಕ್ಕೆ ಇರುವ ಮಹತ್ವವು ಕಡಿಮೆಯೇನೂ ಅಲ್ಲ. ಆದರೆ, 2014ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವು ಅಧಿಕಾರಕ್ಕೆ ಏರಿತು. ಲೋಕಸಭೆಗೆ ನಡೆದ ಸತತ ಎರಡು ಚುನಾವಣೆಗಳಲ್ಲಿ ಯಾವ ಪಕ್ಷವೂ ಅಧಿಕೃತ ವಿರೋಧ ಪಕ್ಷ ಎಂಬ ಮಾನ್ಯತೆಗೆ ಬೇಕಾದಷ್ಟು ಸ್ಥಾನಗಳನ್ನು ಗಳಿಸದೇ ಇದ್ದುದು ಆಡಳಿತ ಪಕ್ಷವು ವಿರೋಧ ಪಕ್ಷಗಳನ್ನು ನಿರ್ಲಕ್ಷ್ಯದಿಂದ ಕಾಣಲು, ವಿರೋಧ ಪಕ್ಷಗಳ ನಾಯಕರನ್ನು ಹೀನಾಯವಾಗಿ ಟೀಕಿಸಲು ಕಾರಣವಾಗಿದೆ ಎಂದರೆ ತಪ್ಪಾಗಲಾರದು. ವಿರೋಧ ಪಕ್ಷಗಳು ಸಂಸತ್ತಿನಲ್ಲಿ ಮುಂದಿಟ್ಟ ಆಗ್ರಹ, ಬೇಡಿಕೆ, ಪ್ರತಿಭಟನೆಯನ್ನು ಕೂಡ ಸರ್ಕಾರ ಗಂಭೀರವಾಗಿ ಪರಿಗಣಿಸುತ್ತಿಲ್ಲ ಎಂಬುದಕ್ಕೆ ಈಚೆಗಷ್ಟೇ ಮುಕ್ತಾಯವಾದ ಮುಂಗಾರು ಅಧಿವೇಶನವು ಸಾಕ್ಷಿಯಾಗಿದೆ. ಸರ್ಕಾರ ಮತ್ತು ಆಡಳಿತ ಪಕ್ಷದ ನಡವಳಿಕೆಯು ಬಿಜೆಪಿಯ ವಿರುದ್ಧ ಎಲ್ಲ ವಿರೋಧ ಪಕ್ಷಗಳು ಒಂದಾಗಿ ಹೋರಾಡಬೇಕು ಎಂಬ ಮನೋಭಾವವು ಕಾಂಗ್ರೆಸ್‌ನ ಸೋನಿಯಾ ಗಾಂಧಿ, ಟಿಎಂಸಿಯ ಮಮತಾ ಬ್ಯಾನರ್ಜಿ, ಡಿಎಂಕೆಯ ಎಂ.ಕೆ.ಸ್ಟಾಲಿನ್, ನ್ಯಾಷನಲ್ ಕಾನ್ಫರೆನ್ಸ್‌ನ ಒಮರ್ ಅಬ್ದುಲ್ಲಾ, ಸಿಪಿಎಂನ ಸೀತಾರಾಂ ಯೆಚೂರಿ ಮುಂತಾದವರಲ್ಲಿ ಮೂಡಲು ಕಾರಣವಾಗಿದೆ.

ಸಂಕುಚಿತ ಸ್ವಹಿತಾಸಕ್ತಿಯನ್ನು ಮರೆತು ರಾಜಕೀಯ ಮತ್ತು ಆಳ್ವಿಕೆಯ ಸಕಾರಾತ್ಮಕ ಕಾರ್ಯಸೂಚಿಯನ್ನು ಮುಂದಿಟ್ಟು ಜನರನ್ನು ಆಕರ್ಷಿಸಬೇಕಿದೆ

ವಿರೋಧ ಪಕ್ಷಗಳ ಒಕ್ಕೂಟವೊಂದು ರೂಪುಗೊಳ್ಳಬೇಕು ಎಂಬ ಉದ್ದೇಶದಿಂದ ಅನೌಪಚಾರಿಕ ರೀತಿಯಲ್ಲಿ ಹಲವು ಸಭೆಗಳು ನಡೆದಿವೆ. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು 18 ಪಕ್ಷಗಳ ನಾಯಕರನ್ನು ಆಹ್ವಾನಿಸಿ ಶುಕ್ರವಾರ ನಡೆಸಿದ ಸಭೆಯು, ವಿರೋಧ ಪಕ್ಷಗಳ ಒಕ್ಕೂಟ ರಚನೆ ಆಗಲೇಬೇಕು ಎಂಬ ಭಾವ ವಿವಿಧ ಪಕ್ಷಗಳಲ್ಲಿ ಇದೆ ಎಂಬುದನ್ನು ತೋರಿಸಿಕೊಟ್ಟಿದೆ. ಈ ಹಿಂದೆ ನಡೆದ ಇಂತಹ ಪ್ರಯತ್ನಗಳ ಬಗ್ಗೆಯೂ ಪಕ್ಷಗಳಿಂದ ಉತ್ಸಾಹದ ಪ್ರತಿಕ್ರಿಯೆ ವ್ಯಕ್ತ ಆಗಿತ್ತು. ಯಶವಂತ ಸಿನ್ಹಾ ನೇತೃತ್ವದ ರಾಷ್ಟ್ರ ಮಂಚ್ ಆಯೋಜಿಸಿದ್ದ ಸಭೆಯಲ್ಲಿ ಟಿಎಂಸಿ, ಎಸ್‌ಪಿ, ಎಎಪಿ ಸೇರಿ ಎಂಟು ಪಕ್ಷಗಳ ನಾಯಕರು ಭಾಗಿಯಾಗಿದ್ದರು. 2024ರ ಸಾರ್ವತ್ರಿಕ ಚುನಾವಣೆಯ ಹೊತ್ತಿಗೆ ವಿರೋಧ ಪಕ್ಷಗಳ ಒಕ್ಕೂಟವು ಇರಬೇಕು ಎಂಬ ಉದ್ದೇಶದಿಂದ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರೂ ವಿರೋಧ ಪಕ್ಷಗಳ ಅನೌಪಚಾರಿಕ ಸಭೆಯನ್ನು ನಡೆಸಿದ್ದರು. ಸೋನಿಯಾ ಅವರು ಕರೆದಿದ್ದ ಸಭೆಯಲ್ಲಿ ಅತಿ ಹೆಚ್ಚು ಪಕ್ಷಗಳ ಭಾಗೀದಾರಿಕೆ ಇತ್ತು. ಮಮತಾ ಬ್ಯಾನರ್ಜಿ, ಶರದ್ ಪವಾರ್, ಸ್ಟಾಲಿನ್, ಉದ್ಧವ್ ಠಾಕ್ರೆ, ಸೀತಾರಾಂ ಯೆಚೂರಿ ಮುಂತಾದ ನಾಯಕರು ಭಾಗಿಯಾಗಿದ್ದರು. ಬಿಜೆಪಿ ವಿರುದ್ಧ ವಿರೋಧ ಪಕ್ಷಗಳ ಒಕ್ಕೂಟವೊಂದು ರೂಪುಗೊಳ್ಳುವ ಸಾಧ್ಯತೆಯನ್ನು ಈ ಸಭೆಯು ತೆರೆದಿಟ್ಟಿದೆ. ಕಾಂಗ್ರೆಸ್ ಪಕ್ಷದ ನೇತೃತ್ವ ಇಲ್ಲದೇ ಇದ್ದರೆ ಇಂತಹ ಪ್ರಯತ್ನ ಸಾಕಾರಗೊಳ್ಳುವುದು ಸುಲಭವಲ್ಲ ಎಂಬ ಸೂಚನೆಯನ್ನೂ ಕೊಟ್ಟಿದೆ. ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಎಲ್ಲ ವಿರೋಧ ಪಕ್ಷಗಳು ತೋರಿದ 'ಬದ್ಧತೆಯ ಒಗ್ಗಟ್ಟು' ಹೇಗೆ ಫಲಪ್ರದವಾಗಿತ್ತು ಎಂಬುದನ್ನು ಸೋನಿಯಾ ಅವರು ಸಭೆಯಲ್ಲಿ ಉಲ್ಲೇಖಿಸಿದ್ದಾರೆ. 2024ರಲ್ಲಿ ಎನ್‌ಡಿಎಯನ್ನು ಎದುರಿಸಲು ವಿರೋಧ ಪಕ್ಷಗಳು ಒಟ್ಟಾಗುವುದನ್ನು ಬಿಟ್ಟರೆ ಬೇರೆ ಪರ್ಯಾಯವೇ ಇಲ್ಲ ಎಂದು ಅವರು ಪ್ರತಿಪಾದಿಸಿದ್ದಾರೆ. ಸೋನಿಯಾ ಅವರ ಪ್ರತಿಪಾದನೆಯಲ್ಲಿ ಸತ್ಯ ಇದೆ. ಆದರೆ, ಎಲ್ಲ ವಿರೋಧ ಪಕ್ಷಗಳನ್ನು ಜತೆಗೆ ಒಯ್ಯುವ ಸ್ಥಿತಿಯಲ್ಲಿ ಕಾಂಗ್ರೆಸ್ ಇದೆಯೇ ಎಂಬುದೇ ದೊಡ್ಡ ಪ್ರಶ್ನೆಯಾಗಿದೆ. ಬಿಜೆಪಿಯ ನಂತರ ಕಾಂಗ್ರೆಸ್ ಈಗ ಈ ದೇಶದ ಅತ್ಯಂತ ದೊಡ್ಡ ಪಕ್ಷ. ಆದರೆ, ಕಾಂಗ್ರೆಸ್ ನಿತ್ರಾಣಗೊಂಡಿದೆ. ಸುದೀರ್ಘ ಕಾಲ ದೇಶವನ್ನು ಆಳಿದ ಪಕ್ಷಕ್ಕೆ ಈಗ ಅಧಿಕೃತ ವಿರೋಧ ಪಕ್ಷದ ಮಾನ್ಯತೆಯೂ ಇಲ್ಲ. ಸ್ವತಂತ್ರವಾಗಿ ಮೂರು ರಾಜ್ಯಗಳಲ್ಲಿ ಅಧಿಕಾರದಲ್ಲಿದ್ದರೂ ಅಲ್ಲಿ ಒಳಜಗಳ ನಿಲ್ಲುತ್ತಲೇ ಇಲ್ಲ. ರಾಜಸ್ಥಾನದಲ್ಲಿ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಮತ್ತು ಮುಖಂಡ ಸಚಿನ್ ಪೈಲಟ್ ನಡುವೆ ಒಮ್ಮೆ ಸ್ಫೋಟಿಸಿ, ಸರ್ಕಾರವನ್ನೇ ಪತನದ ಅಂಚಿಗೆ ಒಯ್ದಿದ್ದ ಭಿನ್ನಮತವು ಶಮನವೇ ಆಗಿಲ್ಲ. ಪಂಜಾಬ್‌ನಲ್ಲಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಮತ್ತು ನವಜೋತ್ ಸಿಂಗ್ ಸಿಧು ನಡುವಣ ವೈಷಮ್ಯಕ್ಕೆ ಹೈಕಮಾಂಡ್ ಹಾಕಿದ್ದ ತೇಪೆಯು ಕೆಲವೇ ದಿನಗಳಲ್ಲಿ ಹರಿದು ಹೋದಂತೆ ಕಾಣಿಸುತ್ತಿದೆ. ಅಮರಿಂದರ್ ಮತ್ತು ಸಿಧು ಬಣದ ನಡುವೆ ಮತ್ತೆ ವಾಕ್ಸಮರ ಆರಂಭವಾಗಿದೆ. ಕಾಂಗ್ರೆಸ್ ಅಧಿಕಾರದಲ್ಲಿರುವ ಛತ್ತೀಸಗಡದಲ್ಲಿಯೂ ಭಿನ್ನಮತ ತೀವ್ರವಾಗಿದೆ. ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರಿಗೆ ಹಿರಿಯ ಮುಖಂಡ ಟಿ.ಎಸ್. ಸಿಂಗ್ ದೇವ್ ಅವರು ಸವಾಲೆಸೆದು ಕೂತಿದ್ದಾರೆ. ಅಧಿಕಾರದ ಬರಗಾಲದ ಈ ಸಮಯದಲ್ಲಿಯೂ ಮೂರು ರಾಜ್ಯಗಳ ನಾಯಕರನ್ನು ಒಟ್ಟಾಗಿ ಇರಿಸಲು ಕಾಂಗ್ರೆಸ್‌ಗೆ ಸಾಧ್ಯವಾಗಿಲ್ಲ. ಇಂತಹ ಪಕ್ಷವು ಸುಮಾರು 20 ಪಕ್ಷಗಳ ಒಕ್ಕೂಟವನ್ನು ಮುನ್ನಡೆಸಬಲ್ಲುದೇ ಎಂಬ ಪ್ರಶ್ನೆಯು ಬಿಜೆಪಿ ವಿರೋಧಿ ಪಕ್ಷಗಳಲ್ಲಿ ಮೂಡಿದರೆ ತಪ್ಪೇನೂ ಅಲ್ಲ.

ಇದರ ಜತೆಗೆ, ಕಾಂಗ್ರೆಸ್ ಪಕ್ಷದ ನಾಯಕತ್ವ ಪ್ರಶ್ನೆಯು ಗಜಪ್ರಸವದಂತಾಗಿದೆ. ಹಂಗಾಮಿ ಅಧ್ಯಕ್ಷೆಯಾಗಿರುವ ಸೋನಿಯಾ ಅವರು ಎಷ್ಟು ದಿನ ಆ ಹುದ್ದೆಯಲ್ಲಿ ಇರಲಿದ್ದಾರೆ, ಮುಂದೆ ಯಾರು ಅಧ್ಯಕ್ಷರಾಗಲಿದ್ದಾರೆ ಎಂಬುದಕ್ಕೆಲ್ಲ ಉತ್ತರ ಸಿಕ್ಕಿಲ್ಲ. ವಿರೋಧ ಪಕ್ಷಗಳ ಒಕ್ಕೂಟಕ್ಕೆ ಮುಂದಾಗಿರುವ ಬಹುತೇಕ ಪಕ್ಷಗಳು ಒಂದೊಂದು ರಾಜ್ಯಕ್ಕೆ ಸೀಮಿತ. ಅದರಾಚೆಗೆ ಈ ಪಕ್ಷಗಳಿಗೆ ಅಸ್ತಿತ್ವವೇ ಇಲ್ಲ. ಕೆಲವು ಪಕ್ಷಗಳು ಒಂದೇ ರಾಜ್ಯದಲ್ಲಿ ಪ್ರತಿಸ್ಪರ್ಧಿಗಳೂ ಹೌದು. ಈ ಎಲ್ಲದರ ನಡುವೆಯೂ ಬಿಜೆಪಿಯನ್ನು ಒಗ್ಗಟ್ಟಾಗಿ ಎದುರಿಸಬೇಕು ಎಂಬ ದೃಢ ನಿಲುವು ವ್ಯಕ್ತವಾಗಿದೆ. ಬಿಜೆಪಿ ವಿರುದ್ಧ ಯಾವೆಲ್ಲ ಅಂಶಗಳನ್ನು ಬಳಸಿಕೊಳ್ಳಬಹುದು ಎಂಬುದನ್ನು ಈ ಪಕ್ಷಗಳು ಗುರುತಿಸಿವೆ. ಚುನಾವಣೆ ಹೊತ್ತಿಗೆ ಇವುಗಳಲ್ಲಿ ಕೆಲವು ಅಪ್ರಸ್ತುತ ಅನಿಸಬಹುದು. ಅದೇನೇ ಇದ್ದರೂ ವಿರೋಧ ಪಕ್ಷಗಳ ಒಗ್ಗಟ್ಟಿಗೆ ಗಟ್ಟಿಯಾದ ಸಮಾನ ನೆಲೆಗಟ್ಟೊಂದನ್ನು ರೂಪಿಸುವ ಕೆಲಸ ಆಗಬೇಕು. ಸಂಕುಚಿತ ಸ್ವಹಿತಾಸಕ್ತಿಯನ್ನು ಮರೆತು ರಾಜಕೀಯ ಮತ್ತು ಆಳ್ವಿಕೆಯ ಸಕಾರಾತ್ಮಕ ಕಾರ್ಯಸೂಚಿಯನ್ನು ಮುಂದಿಟ್ಟು ಜನರನ್ನು ಆಕರ್ಷಿಸಬೇಕಿದೆ.

ದಿನದ ಟ್ವೀಟ್

ನಿಲುವು ಸ್ಪಷ್ಟವಾಗಲಿ

ಮಾನ್ಯ ಬಸವರಾಜ ಬೊಮ್ಮಾಯಿ ಅವರೆ, ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ (ಎನ್‌ಇಪಿ) 8ನೇ ತರಗತಿಯವರೆಗೆ ತಾಯ್ನುಡಿ/ಪರಿಸರದ ನುಡಿಯಲ್ಲಿ ಕಲಿಕೆ ಕಲ್ಪಿಸುವ ಕುರಿತು ಮಾತನಾಡಲಾಗಿದೆ. ಆದರೆ ಈ ಬಗ್ಗೆ ಎಲ್ಲೂ ಚರ್ಚೆಯಾಗುತ್ತಿಲ್ಲ. ಈ ಬಗ್ಗೆ ಸರ್ಕಾರದ ನಿಲುವು ತಿಳಿಸಿ ಸರ್. ಹಾಗೆಯೇ, ಖಾಸಗಿಯಾಗಿ ಒಳ್ಳೆಯ ಕನ್ನಡ ಮಾಧ್ಯಮ ಶಾಲೆ ಶುರು ಮಾಡುವವರಿಗೆ ಪ್ರೋತ್ಸಾಹದ ನೀತಿ ಕಲ್ಪಿಸಿ.

ವಸಂತ್ ಶೆಟ್ಟಿ, ಬರಹಗಾರ

ಕಿಡಿನುಡಿ

ಎಚ್.ಡಿ.ಕುಮಾರಸ್ವಾಮಿ ಮಹಾನ್ ಪ್ರಾಮಾಣಿಕ, ಸತ್ಯ ಹರಿಶ್ಚಂದ್ರನ ಎರಡನೇ ಕುಡಿ. ನಾಮಪತ್ರ ಸಲ್ಲಿಸಿದ ಮೇಲೆ ಕುಮಾರಸ್ವಾಮಿ ಕ್ಷೇತ್ರಕ್ಕೆ ಹೋಗುವುದೇ ಇಲ್ಲ. ನಯಾಪೈಸೆ ಖರ್ಚು ಮಾಡದೆ ಗೆಲ್ಲುತ್ತಾರೆ. ಅವರಂಥ ಪ್ರಾಮಾಣಿಕರನ್ನು ನಾನು ಜೀವನದಲ್ಲಿ ಮತ್ತೊಬ್ಬರನ್ನು ನೋಡಿಲ್ಲ!

ಬಿ.ಸಿ.ಪಾಟೀಲ, ಕೃಷಿ ಸಚಿವ

25 ವರ್ಷಗಳ ಹಿಂದೆ

ಭಾನುವಾರ, 25-8-1996

● **'ಖಾಸಗಿ ಸ್ಥಳೀಯ ಬ್ಯಾಂಕ್‌ಗಳ ಸ್ಥಾಪನೆ ಗ್ರಾಮೀಣ ಸಾಲ ವ್ಯವಸ್ಥೆಗೇ ಕುತ್ತು'**

ಬೆಂಗಳೂರು, ಆ. 24– ಖಾಸಗಿ ಸ್ಥಳೀಯ ಬ್ಯಾಂಕುಗಳ ಸ್ಥಾಪನೆಗೆ ಸಂಬಂಧಿಸಿ ಭಾರತೀಯ ರಿಸರ್ವ್ ಬ್ಯಾಂಕ್ ಕೈಗೊಂಡಿರುವ ನಿರ್ಧಾರದ ಬಗ್ಗೆ ರಾಜ್ಯ ಯೋಜನಾ ಮಂಡಳಿ ತೀವ್ರ ಆತಂಕ ವ್ಯಕ್ತಪಡಿಸಿದೆ.

ಹೊಸ ಸ್ಥಳೀಯ ಬ್ಯಾಂಕುಗಳ ಸ್ಥಾಪನೆಗೆ ರಿಸರ್ವ್ ಬ್ಯಾಂಕ್ ಮಾರ್ಗದರ್ಶಿ ಸೂತ್ರಗಳನ್ನು ಅಂತಿಮಗೊಳಿಸಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ ಕರೆಯಲಾಗಿದ್ದ ತುರ್ತು ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷ ಡಾ. ಡಿ.ಎಂ.ನಂಜುಂಡಪ್ಪ ಈ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಈ ಕ್ರಮವು ಗ್ರಾಮೀಣ ಬ್ಯಾಂಕ್ ಹಾಗೂ ವಾಣಿಜ್ಯ ಬ್ಯಾಂಕುಗಳ ಗ್ರಾಮೀಣ ಶಾಖೆಗಳನ್ನು ಆಧರಿಸಿರುವ ಗ್ರಾಮೀಣ ಸಾಲ ವ್ಯವಸ್ಥೆಗೇ ಕುತ್ತು ತರಲಿದೆ ಎಂದು ಅವರು ಹೇಳಿದರು.

● **ಅಮರನಾಥ: ಸತತ ಹಿಮಪಾತ, 120 ಸಾವು; ಯಾತ್ರಿಕರ ವಾಪಸಿಗೆ ಸೂಚನೆ**

ಶ್ರೀನಗರ, ಆ. 24 (ಪಿಟಿಐ)– ಭಾರೀ ಮಳೆ ಹಾಗೂ ಹಿಮಪಾತದಿಂದಾಗಿ ಮೃತಪಟ್ಟ ಅಮರನಾಥ ಯಾತ್ರಿಕರ ಸಂಖ್ಯೆ ಇಂದು 120ಕ್ಕೆ ಏರಿದ್ದು, ಇತರ 60 ಸಾವಿರ ಯಾತ್ರಿಕರು ಪಹಲ್‌ಗಾಂವ್ ಹಾಗೂ ಪಂಚತರ್ಣಿ ಮಧ್ಯೆ ಸಿಕ್ಕಿಬಿದ್ದಿದ್ದಾರೆ.

● **ನಿಂದನೆಗೆ ವೇದಿಕೆ; ರಾಜಕೀಯ ಸಾಧನೆಯ ಪ್ರವಾಸ**

ಬೆಂಗಳೂರು, ಆ. 24– ಇಬ್ಬರು ರಾಜಕೀಯ ಧುರೀಣರಾದ ಪ್ರಧಾನಿ ಎಚ್.ಡಿ.ದೇವೇಗೌಡ ಹಾಗೂ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರು ಈ ವಾರ ರಾಜ್ಯದಲ್ಲಿ ನಡೆಸಿದ 'ಅವಿಸ್ಮರಣೀಯ' ಪ್ರವಾಸದ ನೆನಪುಗಳನ್ನು ಜನತೆ ಈಗ ಮೆಲುಕು ಹಾಕುತ್ತಿದ್ದಾರೆ.

ಜಿಲ್ಲಾ ಕೇಂದ್ರಗಳಲ್ಲಿ ಪ್ರಧಾನಿಯವರು ಕೈಗೊಂಡ ಮೊದಲ ಪ್ರವಾಸ ಹಾಗೂ 'ಜನಾದೇಶ' ಪಡೆಯಲು ಹೆಗಡೆ ಅವರು ನಡೆಸಿದ ಕೊನೆಯ ಸುತ್ತಿನ ಪ್ರವಾಸಗಳು ಜನಹಿತಕ್ಕಿಂತ ಹೆಚ್ಚಾಗಿ ರಾಜಕೀಯ ಹಿತಸಾಧನೆಯ ಅಸ್ತ್ರವಾಗಿ ಬಳಕೆಯಾಗಿರುವುದು ಜನವಲಯದಲ್ಲಿ ತೀರಾ ಚರ್ಚೆಗೆ ಗ್ರಾಸ ಒದಗಿಸಿದೆ. ಪರಸ್ಪರ ರಾಜಕೀಯ ಸಮರದ ದ್ಯೋತಕವಾಗಿ ಏರ್ಪಾಡಾಗಿದ್ದ ಇಬ್ಬರು ಮುಖಂಡರ ಬಹಿರಂಗ ಸಭೆಗಳೂ ಪರಸ್ಪರ ದೋಷಾರೋಪಣೆ, ನಿಂದನೆ, ಟೀಕೆಗಳ ವೇದಿಕೆಗಳಾಗಿ ಮಾರ್ಪಟ್ಟಿವೆ.

ವಿಮರ್ಶೆಯ ಹೆಸರಿನಲ್ಲಿ ಬಲಿಪೀಠಗಳಾಗುತ್ತಿರುವ ಸಾಮಾಜಿಕ ಜಾಲತಾಣಗಳು

ವಿಧ್ವಂಸಕ ಗುಣದ ಬುಲ್ಡೋಜರ್ ವಿಮರ್ಶೆ

ಪಡಸಾಲೆ

ರಘುನಾಥ ಚ.ಹ.

ಜನಪ್ರಿಯ ಲೇಖಕರನ್ನು ಶಿಲುಬೆಗೇರಿಸುವ ಪ್ರಯತ್ನ ಕನ್ನಡ ಸಾಹಿತ್ಯಲೋಕಕ್ಕೆ ಹೊಸತೇನಲ್ಲ. ಸಾಮಾಜಿಕ ಜಾಲತಾಣಗಳ ಅಬ್ಬರದ ಈ ದಿನಗಳಲ್ಲಂತೂ ಕನ್ನಡ ಲೇಖಕರನ್ನು ರುಬ್ಬುವ ಕೆಲಸ ನಿರಂತರವಾಗಿ ನಡೆಯುತ್ತಿದೆ. ಇದುವರೆಗೂ ಕನ್ನಡದ ಲೇಖಕರೇ ತಮ್ಮ ಸರೀಕರು ಮತ್ತು ಹಿರಿಯರನ್ನು ತಕರಾರಿನ ಕಟಕಟೆಗೆ ನಿಲ್ಲಿಸುತ್ತಿದ್ದರು. ಈಗ ವಿಮರ್ಶಕರ ಪಾಳಯದಲ್ಲಿ ಮಿಂಚುತ್ತಿರುವುದು ಸಮಾಜಶಾಸ್ತ್ರದ ವಿದ್ಯಾರ್ಥಿಗಳು. ಆಯುರ್ವೇದ ವೈದ್ಯರೂ ಶಸ್ತ್ರಚಿಕಿತ್ಸೆ ನಡೆಸಬಹುದು ಎನ್ನುವ ಸರ್ಕಾರದ ನಂಬಿಕೆ, ಸಮಾಜಶಾಸ್ತ್ರದ ಸಲಕರಣೆಗಳನ್ನು ಬಳಸಿ ಸಾಹಿತ್ಯ ವಿಮರ್ಶೆ ನಡೆಸಲು ಪ್ರೇರಣೆಯಾಗಿರಬಹುದು.

ವ್ಯಕ್ತಿಯ ಹಿನ್ನೆಲೆ ಬೇರೆಯಾಗಿದ್ದ ಮಾತ್ರಕ್ಕೆ ವಿಮರ್ಶೆಯನ್ನು ಸಲ್ಲದು ಎನ್ನಲಾಗದು. ಆದರೆ, ವಿಮರ್ಶೆ ಮಾಡುವ ವ್ಯಕ್ತಿ ತಾಯಿಗುಣವನ್ನು ಹೊಂದಿರುವುದು ಅಗತ್ಯ. ಜೀವಪರ ಗುಣವನ್ನು ಬಿಟ್ಟುಕೊಟ್ಟ ವಿಮರ್ಶೆ ಹಲ್ಲೆಯ ರೂಪು ಪಡೆದುಕೊಳ್ಳುತ್ತದೆ. 'ಇದು ಜೀವಪರ ಸಾಹಿತ್ಯವಲ್ಲ' ಎಂದು ಸಾಧಿಸಲು ಹೊರಟ ವಿಮರ್ಶೆಯೇ ಜೀವಪರ ಗುಣವನ್ನು ಕಳೆದುಕೊಂಡಾಗ ನಡೆಯುವುದು ವಿಧ್ವಂಸಕ ಕೃತ್ಯ.

ಸಾಹಿತ್ಯದ ಹೆಸರಿನಲ್ಲಿ ನಡೆಯುತ್ತಿರುವ ಸಾಹಿತಿಗಳ ಪೋಸ್ಟ್ ಮಾರ್ಟಂಗೆ ಮತ್ತೆ ಮತ್ತೆ ಒಳಗಾಗುತ್ತಿರುವುದು ಗೋಪಾಲಕೃಷ್ಣ ಅಡಿಗರು. ಅವರ ಕವಿತೆಗಳಲ್ಲಿನ ಪುರಾಣ ಪ್ರತಿಮೆಗಳು ವೈದಿಕಪ್ರಜ್ಞೆಯನ್ನು ಹೇಗೆ ಪೋಷಿಸುತ್ತಿವೆ ಎನ್ನುವುದನ್ನು ಸಾಮಾಜಿಕ ಜಾಲತಾಣಗಳಲ್ಲಿ ಬಗೆದು ಬಗೆದು ತೋರಿಸಲಾಗುತ್ತಿದೆ. ವಿಮರ್ಶಕರ ಹತ್ಯಾರಗಳಿಗೆ ಬೇಂದ್ರೆ, ಮಾಸ್ತಿ, ಡಿವಿಜಿಯವರೂ ಮಿಕಗಳಾಗುತ್ತಿದ್ದಾರೆ. ಈ ಹೊಸಬಗೆಯ ವಿಮರ್ಶೆ, ಕನ್ನಡದ ಓದುಗರ ಈವರೆಗಿನ ಓದು ಹಾಗೂ ವಿಮರ್ಶಾ ಪ್ರಜ್ಞೆಯ ಮರು ಮೌಲ್ಯಮಾಪನಕ್ಕೆ ಒತ್ತಾಯಿಸುತ್ತಿದೆ. ಅದು ತಪ್ಪಲ್ಲ. ಸಮಸ್ಯೆ ಎನ್ನಿಸುತ್ತಿರುವುದು, ಸಾಹಿತ್ಯಿಕ ನೆಲೆಗಟ್ಟಿನಲ್ಲಿ ನಡೆಸಬೇಕಾದ ವಿಮರ್ಶೆ–ವಿಶ್ಲೇಷಣೆಯನ್ನು ಸಾಮಾಜಿಕ ಪರಿವೇಷದ ಹಿನ್ನೆಲೆಯಲ್ಲಿ ನಡೆಸುತ್ತಿರುವುದರಲ್ಲಿ. ಕಾವ್ಯದ ತೊಗಲು ಸಿಗಿದು, ಅಸ್ಥಿಪಂಜರ ಮುಂದಿಟ್ಟು, 'ಇದೇ ನೋಡಿ, ಈವರೆಗೆ ನೀವು ಮೆಚ್ಚಿಕೊಂಡಿದ್ದ ಸಾಹಿತ್ಯ ಅಥವಾ ಒಳ್ಳೆಯ ಕಾವ್ಯ ಎಂದು ನಿಮ್ಮನ್ನು ನಂಬಿಸಲಾಗಿದ್ದ ಕಾವ್ಯದ ಅಸಲಿ ರೂಪ' ಎಂದು ಹೇಳಲಾಗುತ್ತಿದೆ. ಪದಗಳನ್ನು ಸುಲಿದು ಬಿಡಿಬಿಡಿಯಾಗಿಸಿ, ಧ್ವನಿಶಕ್ತಿ, ರೂಪಕಶಕ್ತಿಗಳನ್ನು ಕಾವ್ಯದಿಂದ ದೂರ ಮಾಡಲಾಗುತ್ತಿದೆ. ಈ ಪ್ರಯತ್ನವನ್ನು ಒಪ್ಪದವರ ಸಂವೇದನೆಯಲ್ಲಿ ಐಬು ಹುಡುಕಲಾಗುತ್ತದೆ.

ಸಾಮಾಜಿಕ ಸರ್ಜನ್ನರ ವಿಮರ್ಶೆಯ ಪ್ರಕಾರ ಅಡಿಗರು ಕೋಮುವಾದಿ. ಬೇಂದ್ರೆಯವರ ಸಾಹಿತ್ಯದ ಸಂಗ(ಘ)ದಲ್ಲೂ ಕೋಮುವಾಸನೆಯಿದೆ. ಈ ತೀರ್ಮಾನಗಳು ನಿಜವಾಗಿದ್ದಲ್ಲಿ, ಈವರೆಗೆ ಬೇಂದ್ರೆ–ಅಡಿಗರನ್ನು ಓದಿದ ಕಾರಣಕ್ಕೆ ಕೋಮುವಾದಿಗಳಾದವರ ದೊಡ್ಡ ಗುಂಪನ್ನೇ ನಾವು ನೋಡಬೇಕಾಗಿತ್ತು. ಆದರೆ, ಕೋಮುವಾದಿ ಎನ್ನಲಾಗುತ್ತಿರುವ ಕಾವ್ಯದಿಂದ ಸಹೃದಯರ ಮನೋವಿಕಾಸವಾಗಿರುವುದನ್ನು, ರಸಮೊಗ್ಗುಗಳು ಚುರುಕಾಗಿರುವುದನ್ನು ಕಂಡಿದ್ದೇವೆ. ಸಾಹಿತ್ಯವನ್ನು ರಾಜಕೀಯ ಅಜೆಂಡಾದ ಭಾಗವಾಗಿಸಿಕೊಂಡ ಲೇಖಕರು ನಮ್ಮಲ್ಲಿದ್ದಾರೆ. ಫೇಸ್‌ಬುಕ್ ಬರಹಗಳ ಮೂಲಕ ಸಮಾಜದಲ್ಲಿ ಬಿರುಕುಗಳನ್ನು ಮೂಡಿಸುತ್ತಿರುವವರು ಇದ್ದಾರೆ. ಅವರು ಪಡೆದ ಯಶಸ್ಸು 'ಕೋಮುವಾದಿ' ಅಡಿಗರಿಗೆ, ಬೇಂದ್ರೆಗೆ ಯಾಕೆ ಸಾಧ್ಯವಾಗಿಲ್ಲ? ಇದಕ್ಕೆ ಉತ್ತರವನ್ನು ಹೀಗೆ ಹೇಳಬಹುದು: ಬೇಂದ್ರೆ–ಅಡಿಗರ ಕಾವ್ಯದಲ್ಲಿ ಪ್ರಮುಖವಾಗಿರುವುದು ಅವ್ಯವಸ್ಥೆಯ ಬಗೆಗಿನ ಅಸಹನೆಯೇ ಹೊರತು ಕೋಮುವಾದವಲ್ಲ. ಅವರ ಕಾವ್ಯದ ಅಜೆಂಡಾ ಮತೀಯವಾದವಲ್ಲ. ಹಾಗಾದರೆ, ಅವರ ಕಾವ್ಯದಲ್ಲಿ ಧಾರ್ಮಿಕ ಅಸಹನೆಯ ಅಂಶಗಳಿಲ್ಲವೇ? ಇಲ್ಲವೆನ್ನಲಾಗದು. ಆದರದು ನಗಣ್ಯ. ಅಗುಳಿನ ಮೇಲೆ ಅನ್ನದ ಪರೀಕ್ಷೆ ಎನ್ನುವುದು ಕವಿಯೊಬ್ಬನ ಮೌಲ್ಯಮಾಪನಕ್ಕೆ ಸಲ್ಲದು. ಅಡಿಗರಾಗಲೀ ಬೇಂದ್ರೆಯವರಾಗಲೀ ಸಮಾಜ ಕಟ್ಟಲಿಕ್ಕೆ, ಮನಸ್ಸುಗಳನ್ನು ಆರ್ದ್ರಗೊಳಿಸಲಿಕ್ಕೆ ತಮ್ಮ ಸಾಹಿತ್ಯವನ್ನು ಬಳಸಿದ್ದಾರೆಯೇ ಹೊರತು ಒಡೆಯಲಿಕ್ಕಲ್ಲ ಎನ್ನುವುದಕ್ಕೆ ಅವರ ಸಾಹಿತ್ಯದಲ್ಲಿಯೇ ಹೇರಳ ಉದಾಹರಣೆಗಳಿವೆ. ಅವುಗಳನ್ನು ಪಕ್ಕಕ್ಕಿಟ್ಟು ದುರ್ಬಲ ರಚನೆಗಳನ್ನು ಹೆಕ್ಕಿಕೊಂಡು ಕವಿಯ ಒಟ್ಟಾರೆ ಸಾಹಿತ್ಯವನ್ನು, ವ್ಯಕ್ತಿತ್ವವನ್ನು ಬೆಲೆಗಟ್ಟಲು ಹೊರಡುವುದು ವಿಮರ್ಶೆಯ ಹೆಸರಿನ ಕಸರತ್ತೇ ಹೊರತು ಕಸುಬುದಾರಿಕೆಯಲ್ಲ.

ಸಮಕಾಲೀನ ಸಾಹಿತ್ಯ ಸಂದರ್ಭ ಒಡೆದ ಕನ್ನಡಿಯಂತಹದ್ದು. ಅಡಿಗರು ಕೋಮುವಾದಿ. ಬೇಂದ್ರೆ ಕೋಮುವಾದಿ. ಅಡಿಗರ ಬಗ್ಗೆ ಮೃದು ಧೋರಣೆ ಹೊಂದಿದ್ದರಿಂದಾಗಿ ಲಂಕೇಶ್ ವೈಚಾರಿಕತೆಯೂ ಶಂಕಾಸ್ಪದ. ಕುವೆಂಪು ಆಳದಲ್ಲಿ ಸನಾತನಿ. ಅನಂತಮೂರ್ತಿ ಅವರಿಗೆ ಬ್ರಾಹ್ಮಣ್ಯ ಬಿಡಲಾಗಲಿಲ್ಲ. 'ಸಂಬಂಜ ಅನ್ನೋದು ದೊಡ್ಡದು ಕನಾ' ಎಂದ ದೇವನೂರರನ್ನು ದಲಿತ ಹುಡುಗರೇ ತಡವಿಕೊಂಡಿರುವುದಿದೆ. ಹಾಗಾದರೆ ಯಾರು ನಮಗೆ ಮಾದರಿ–ದಾರಿ? ಕನ್ನಡ ಸಾಹಿತ್ಯದ ಸಾಲುದೀಪಗಳನ್ನೆಲ್ಲ ಬಯಲಿಗೆ ತಂದು ಗಾಳಿಗೊಡ್ಡಿದ್ದೇವೆ. ವೈದಿಕತೆಯನ್ನು ವಿರೋಧಿಸುವ ಪ್ರಯತ್ನದಲ್ಲಿ ತೊಡಗಿರುವ ಕೆಲವರು ತಾವು ಯಾವುದನ್ನು ವಿರೋಧಿಸುತ್ತಿದ್ದೇವೆ ಎಂದು ಹೇಳುತ್ತಿದ್ದಾರೋ ಅದೇ ಭಾಷೆ ಹಾಗೂ ಧೋರಣೆಯನ್ನು ಮೈಗೂಡಿಸಿಕೊಂಡಿದ್ದಾರೆ. ಈ ದುಡುಕಿನಿಂದಾಗಿ, ಸಮಗ್ರ ಕನ್ನಡಿಗರನ್ನು ಪ್ರತಿನಿಧಿಸುವ, ಎಲ್ಲರ ಪ್ರೀತಿಗೊಳಗಾದ ಲೇಖಕ ವರ್ತಮಾನದಲ್ಲಿರಲಿ, ಭೂತಕಾಲದಲ್ಲೂ ಇರದಂತಹ ಸ್ಥಿತಿಯನ್ನು ಸೃಷ್ಟಿಸುತ್ತಿದ್ದೇವೆ. ಕನ್ನಡದ ಪ್ರಾತಿನಿಧಿಕ ಸಾಹಿತಿ ಎಂದು ಕನ್ನಡಮನಸ್ಸುಗಳು ಗೌರವಿಸಿಕೊಂಡು ಬಂದವರನ್ನು ಸಾಮಾಜಿಕ ಜಾಲತಾಣಗಳ ಕಾಲಘಟ್ಟ ಚಿಂದಿ ಚಿಂದಿ ಮಾಡಿಬಿಟ್ಟಿದೆ.

ಸಾಹಿತ್ಯ ಮಾತ್ರವಲ್ಲ, ಯಾವುದೇ ಬಗೆಯ ವಿಮರ್ಶೆಯಲ್ಲಿ ತೊಡಗಿರುವವರು ಕಾಲುಹಾದಿಯ ಪಥಿಕರಾಗಿರಬೇಕು. ಆಗಷ್ಟೇ ಸಮೀಪನೋಟ, ಒಳನೋಟಗಳು ಗೋಚರಿಸುತ್ತವೆ; ಚೌಕಟ್ಟುಗಳೂ ಅರ್ಥವಾಗುತ್ತವೆ. ಕಾಲುಹಾದಿಯನ್ನು ತೊರೆದು ಬುಲ್ಡೋಜರ್‌ನಲ್ಲಿ ಕುಳಿತು ಹೊರಟಾಗಿನ ಅಂತರ ಮತ್ತು ಎತ್ತರದ ಸ್ಥಾನ ನಮ್ಮ ನೋಟಕ್ಕೆ ಪೂರ್ವಗ್ರಹಗಳನ್ನು ಸೇರಿಸುತ್ತವೆ. ಆಗ ಉಂಟಾಗುವುದು ವಿಧ್ವಂಸಕ ಕೃತ್ಯವಷ್ಟೇ. ತರತಮಗಳ ಬಗ್ಗೆ ಮಾತನಾಡುವವರು, ಜಾತೀಯತೆಗೆ ನೋಯುವವರು, ಧರ್ಮ ನಿರಪೇಕ್ಷತೆ ಹಾಗೂ ಮಾನವತಾವಾದಕ್ಕೆ ಹಂಬಲಿಸುವವರು ಬುಲ್ಡೋಜರ್ ಸವಾರಿಯಿಂದ ದೂರವಿರುವುದು ಅಗತ್ಯ. ಇರುವ ರೂಪಕಗಳನ್ನು ಒಡೆಯಲು ಮುಂದಾಗುವವನಿಗೆ ಹೊಸ ರೂಪಕಗಳನ್ನು ಸೃಜಿಸುವ ಶಕ್ತಿಯೂ ಇರಬೇಕಾಗುತ್ತದೆ.

ಸಾಹಿತಿಗೆ ಸಾಮಾಜಿಕ ಜವಾಬ್ದಾರಿ ಇರಬೇಕು ಎನ್ನುವ ನಿರೀಕ್ಷೆ ಸರಿಯಾದುದು. ಆದರೆ, ಸಾಹಿತ್ಯದ ಕಾಳಜಿ ಅರ್ಥ ಮಾಡಿಕೊಳ್ಳಲು ನಾವು ಅನುಸರಿಸಬೇಕಾದ ಮಾರ್ಗ ದುಡುಕಿನದಾದರೆ, ಕಳೆದುಕೊಳ್ಳುವುದೇ ಹೆಚ್ಚು. ಇದಕ್ಕೆ ಉದಾಹರಣೆಯಾಗಿ, ಕಳೆದ ವಾರ ಕನ್ನಡ ಲೇಖಕರಿಬ್ಬರು ನೀಡಿದ ಹೇಳಿಕೆಗಳಿಗೆ ವ್ಯಕ್ತವಾದ ಸ್ಪಂದನವನ್ನು ಗುರ್ತಿಸಬಹುದು. ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲವೂ ಸುಂದರವಾಗಿದೆ ಎಂದು ಕಥೆಗಾರರೊಬ್ಬರು ಫೇಸ್‌ಬುಕ್‌ನಲ್ಲಿ ಬರೆದುಕೊಂಡರು. ಸೋರುವ ನಲ್ಲಿ ರಿಪೇರಿಯಂಥ ಸಣ್ಣ ಕೆಲಸಕ್ಕೆ ಒಂದು ದಿನದ ಕೂಲಿ ಕೇಳುವ ಪ್ಲಂಬರ್‌ನ ದುರಾಸೆಯನ್ನು ಸಮಾಜದ ಭ್ರಷ್ಟತೆಗೆ ಉದಾಹರಣೆಯನ್ನಾಗಿ ಕಾದಂಬರಿಕಾರರೊಬ್ಬರು ಸಂದರ್ಶನವೊಂದರಲ್ಲಿ ಹೇಳಿಕೊಂಡಿದ್ದರು. ಕಥೆಗಾರನ ಬೀಸುಹೇಳಿಕೆಯನ್ನು ಉಗ್ರವಾಗಿ ಖಂಡಿಸಿದ ಸಾಮಾಜಿಕ ಜಾಲತಾಣಗಳ ವಿಮರ್ಶೆ, ಆತನನ್ನು ಸ್ವಘೋಷಿತ ಪ್ರಗತಿಪರರ ಗುಂಪಿನಿಂದ ಹೊರಹಾಕಿದೆ. ಈ ಉಗ್ರ ವಿಮರ್ಶಕಗಡಣ, ಬಡಪಾಯಿ ನಲ್ಲಿರಿಪೇರಿ ಕೆಲಸಗಾರನಲ್ಲಿ ಅಪ್ರಾಮಾಣಿಕತೆ, ಭ್ರಷ್ಟತೆಯನ್ನು ಕಂಡ ಕಾದಂಬರಿಕಾರರ ಬಗ್ಗೆ ಹೆಚ್ಚು ಗಮನಹರಿಸಲಿಲ್ಲ. ಬಹುಶಃ ಅವರು ಈಗಾಗಲೇ ಮತ್ತೊಂದು ಗುಂಪಿನಲ್ಲಿ ಗುರ್ತಿಸಿಕೊಂಡಿರುವುದರಿಂದ ನಿರ್ಲಕ್ಷಿಸಿರಬಹುದೇನೊ? ಈ ಘಟನೆಗಳಿಗೆ ಬಂದ ಪ್ರತಿಕ್ರಿಯೆಯೇ ಈ ಹೊತ್ತಿನ ವಿಮರ್ಶೆಯ ಧೋರಣೆಯನ್ನು, ಅದರಿಂದ ನಾವು ಗಳಿಸುತ್ತಿರುವುದೇನು, ಕಳೆದುಕೊಳ್ಳುತ್ತಿರುವುದೇನು ಎನ್ನುವುದನ್ನು ಸೂಚಿಸುತ್ತಿರುವಂತಿದೆ.

ಈವರೆಗೆ ಮನಸ್ಸುಗಳನ್ನು ಬೆಸೆಯುವ ಮದ್ದಿನ ರೂಪದಲ್ಲಿ ಸಾಹಿತ್ಯವನ್ನು ನೋಡುತ್ತಿದ್ದೆವು. 'ಮದ್ದು ಹಾಕು' ಎನ್ನುವುದನ್ನು ಕೆಡುಕಿನ ಅರ್ಥದಲ್ಲೂ ಬಳಸುತ್ತೇವೆ. ನಮಗೆ ಬೇಕಾದುದು ಔಷಧ ರೂಪದ ಮದ್ದು. ಈಗ ಹೆಚ್ಚು ಚಾಲ್ತಿಯಲ್ಲಿರುವ ಕೇಡಿನ ಮದ್ದು ವಿಷವಷ್ಟೇ ಅಲ್ಲ; ಸಿಡಿಯುವ ವಿಧ್ವಂಸಕ ಶಕ್ತಿಯನ್ನೂ ಹೊಂದಿರುವಂತಹದ್ದು. ಈ ವಿಧ್ವಂಸಕ ಮಾರ್ಗದಲ್ಲಿ ಹೋದಲ್ಲಿ ಇಡೀ ಕನ್ನಡ ಸಾಹಿತ್ಯವೇ ನಿರರ್ಥಕ ಎನ್ನುವಂತಾಗುತ್ತದೆ. ಧಾರ್ಮಿಕ ರಾಜಕಾರಣದಲ್ಲಿ ತೊಡಗಿರುವವರು ಹೇಳುತ್ತಿರುವ ಮಾತೂ ಅದೇ: 'ನೀವು ಈವರೆಗೆ ನಡೆದು ಬಂದ ಹಾದಿ ಸರಿಯಾದುದಲ್ಲ.'

ಚುರುಮುರಿ

ಬಸಣ್ಣನ ವಚನ

● ಮಣ್ಣೆರಾಜು

'ಝೀರೊ ಟ್ರಾಫಿಕ್‌ನಲ್ಲಿ ಹೀರೊ ಥರಾ ಜಬರ್ದಸ್ತ್ ಮಾಡುವುದು ಬಿಟ್ಟು, ಹೆವಿ ಟ್ರಾಫಿಕ್‌ನಲ್ಲೇ ಓಡಾಡ್ತೀನಿ ಅಂತಾರಲ್ರೀ ನಮ್ಮ ಸಿಎಂ ಬಸಣ್ಣ...' ಸುಮಿ ಹೇಳಿದಳು.

'ಅಧಿಕಾರ ಉಳ್ಳವರು ಝೀರೊ ಟ್ರಾಫಿಕ್‌ನಲ್ಲಿ ಓಡಾಡುವರು, ನಾವೇನು ಮಾಡೋಣ ಪ್ರಜೆಗಳಯ್ಯಾ ಅಂತ ಜನಸಾಮಾನ್ಯರು ನೊಂದುಕೊಳ್ಳಬಾರದು ಅಂತ ಎಲ್ಲರೊಳಗೊಂದಾಗಲು ಹೊರಟಿದ್ದಾರೆ' ಅಂದ ಶಂಕ್ರಿ.

'ಹೀಗಾದ್ರೆ, ಸಿಎಂ ಸ್ಥಾನದ ಗತ್ತು, ಗಮ್ಮತ್ತು ಕಮ್ಮಿ ಆಗೋದಿಲ್ವೇನ್ರೀ?'

'ಇಲ್ವಂತೆ, ಸಿಎಂ ಅಂದ್ರೆ ಕಾಮನ್ ಮ್ಯಾನ್ ಅಂತೆ. ಅಬ್ಬರ, ಆರ್ಭಟ ಮಾಡಿದ್ರೆ ಜನ ಒಪ್ಪುವುದಿಲ್ಲವಂತೆ... ಝೀರೊ ಟ್ರಾಫಿಕ್ ಬೇಡ, ಗಾರ್ಡ್ ಆಫ್ ಆನರ್ ಬೇಡ, ಸನ್ಮಾನಕ್ಕೆ ಕನ್ನಡ ಪುಸ್ತಕ ನೀಡಾ, ಹಾರ-ತುರಾಯಿ ಕೂಡದು ಸಂಗಮದೇವಾ ಅನ್ನೋದು ಬಸಣ್ಣನ ವಚನ'.

'ಅವರ ತಾಯಿ ಮಾಡುತ್ತಿದ್ದ ಜೋಳದ ರೊಟ್ಟಿ ಭಾಳಾ ಇಷ್ಟವಂತೆ. ಈಗ ಯಾರೇ ರೊಟ್ಟಿ ಮಾಡಿಕೊಟ್ಟರೂ ತಾಯಿ ಮಾಡಿದ ರೊಟ್ಟಿ ಎಂದೇ ಭಾವಿಸಿ ತಿನ್ನುತ್ತಾರಂತೆ. ಅಮ್ಮ ಹಾಗೂ ಅನ್ನವನ್ನು ಗೌರವಿಸಬೇಕು ಅನ್ನೋದು ಬಸಣ್ಣನ ಇನ್ನೊಂದು ವಚನ ಕಣ್ರೀ...'

'ಹೌದು, ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು, ಕಟ್ಟಿದರೆ ಕನ್ನಡನಾಡು ಕಟ್ಟಬೇಕು. ಎಲ್ಲರೂ ಮಾತೃ, ಮಾತೃಭೂಮಿ, ಮಾತೃಭಾಷೆಯನ್ನು ಗೌರವಿಸಬೇಕು. ಅನ್ಯ ಭಾಷಿಕರಿಗೆ ಕನ್ನಡ ಕಲಿಸಿರಿ, ಕನ್ನಡ ಪುಸ್ತಕ ಓದಿ ತಿಳಿಯಿರಿ ಅನ್ನುವ ವಚನ ಸಾರುತ್ತಿದ್ದಾರೆ'.

'ಪುಸ್ತಕ ಓದಿದರೆ ಸಿಟ್ಟು ಶಮನವಾಗುತ್ತದೆ ಎಂಬುದು ತಂದೆಯಿಂದ ಕಲಿತ ವಚನವಂತೆ. ಪ್ರಜೆಗಳು ಪುಸ್ತಕ ಓದಿ ಶಾಂತಿ, ಸಹನೆ ಕಾಪಾಡಿಕೊಳ್ಳಲಿ ಎಂಬುದು ಬಸಣ್ಣರ ಕಾಳಜಿ'.

'ಆದರೇನು, ಮಂತ್ರಿ ಸ್ಥಾನ ಸಿಗದೆ ಸಿಟ್ಟಾಗಿರುವ, ಮಂತ್ರಿಯಾಗಿಯೂ ಆನಂದ ಕಾಣದೆ ಕಂಗೆಟ್ಟಿರುವ ಬಸಣ್ಣರ ಒಡ್ಡೋಲಗದ ಪ್ರಜಾಪತಿಗಳ ಸಿಟ್ಟು ಶಮನ ಮಾಡುವ, ಅವರ ರೋಗಕ್ಷೇಮ ಕಾಪಾಡುವ ಪರಿಹಾರ ಯಾವ ವಚನ, ಪುಸ್ತಕದಲ್ಲೂ ಸಿಗುತ್ತಿಲ್ಲವಂತೆ, ಪಾಪ!...' ಶಂಕ್ರಿ ನೊಂದುಕೊಂಡ.

ಸಂಗತ

ನಮ್ಮೂರೇ ಅವರೂರು, ಅವರೀಗ ನಮ್ಮೋರು

ಎಲ್ಲಾ ಬಗೆಯ ಉದ್ಯೋಗಗಳನ್ನು ವೃತ್ತಿಪರವಾಗಿ ನಿರ್ವಹಣೆ ಮಾಡುವತ್ತ ನಮ್ಮ ಜನರನ್ನು ಸಜ್ಜುಗೊಳಿಸಬೇಕಾದ ಅಗತ್ಯ ಇದೆ

● ಡಾ. ಎಚ್.ಬಿ.ಚಂದ್ರಶೇಖರ್

ಮನೆಯ ಗೀಸರ್ ಕೆಟ್ಟು ಹೋಗಿತ್ತು. ದುರಸ್ತಿ ಮಾಡಲು ಬಂದ ವ್ಯಕ್ತಿ ದುರಸ್ತಿಗೆ ₹ 200 ಹಾಗೂ ಸಂಪರ್ಕಿಸುವ ಪೈಪ್‌ಗೆ ₹ 500 ಎಂದು ತಿಳಿಸಿ, ಹಣ ನೀಡಿದರೆ ತಾನೇ ತರುವುದಾಗಿ ಹೇಳಿದ. ಗೂಗಲ್ ಮಾಡಿದಾಗ, ಪೈಪ್‌ನ ಬೆಲೆ ₹ 200 ಮಾತ್ರ ಎಂದು ತಿಳಿಯಿತು. ಅವನಿಗೆ 'ನಾವೇ ಪೈಪ್ ತರುತ್ತೇವೆ' ಎಂದು ಹೇಳಿ, ಸ್ವಲ್ಪ ಸಮಯ ಬಿಟ್ಟು ಬರಲು ತಿಳಿಸಿದೆವು.

ಪೈಪ್ ತಂದು ಹಲವು ಬಾರಿ ಕರೆ ಮಾಡಿ ಕೋರಿಕೊಂಡಾಗ್ಯೂ ಅವನು ಬರಲೇ ಇಲ್ಲ. ಸ್ವಲ್ಪ ದಿನಗಳ ನಂತರ ಪರಿಚಿತರ ಮೂಲಕ ಉತ್ತರ ಭಾರತ ಮೂಲದ ಒಬ್ಬ ವ್ಯಕ್ತಿಯನ್ನು ದುರಸ್ತಿ ಮಾಡಲು ಕರೆದೆವು. ಅವನು ಬಂದು ಕೆಲ ನಿಮಿಷಗಳಲ್ಲೇ ಪೈಪ್ ಅನ್ನು ಗೀಸರ್‌ಗೆ ಸಂಪರ್ಕಿಸಿ, ಕೇವಲ ₹ 100 ಸೇವಾ ಶುಲ್ಕ ಪಡೆದು ತೆರಳಿದ. ಮೊದಲು ದುರಸ್ತಿ ಮಾಡಲು ಬಂದಿದ್ದ ನಮ್ಮದೇ ನೆಲದ ವ್ಯಕ್ತಿ ₹ 500 ಹೆಚ್ಚಿಗೆ ಪಡೆಯುವ ಇರಾದೆ ಹೊಂದಿದ್ದ. ಅದು ಫಲಿಸದೇ ಇದ್ದಾಗ ಸೇವೆಯನ್ನೇ ನೀಡುವ ಇಚ್ಛೆ ತೋರಲಿಲ್ಲ.

ನೀವು ಬೆಂಗಳೂರಿಗರಾಗಿದ್ದರೆ ಇದನ್ನು ನೀವು ಸಹ ಗಮನಿಸಿರುತ್ತೀರಿ. ನಿಮ್ಮ ತಲೆಕೂದಲು ಕತ್ತರಿಸಿಕೊಳ್ಳಲು ಸಲೂನ್‌ಗೆ ಹೋದರೆ, ಅಲ್ಲಿ ನಿಮಗೆ ಸೇವೆ ನೀಡಲು ಉತ್ತರ ಭಾರತೀಯನೊಬ್ಬ ಸಿಗುತ್ತಾನೆ. ಅದೇ ರೀತಿ ಮನೆಯ ಇಂಟೀರಿಯರ್ ಕೆಲಸ, ಬಣ್ಣ ಹಚ್ಚುವುದು, ಮರಗೆಲಸ, ಕಟ್ಟಡ ನಿರ್ಮಾಣ ಇತ್ಯಾದಿಗಳಲ್ಲಿ ಹೆಚ್ಚಾಗಿ ತೊಡಗಿರುವವರು ಉತ್ತರ ಪ್ರದೇಶ, ಬಿಹಾರ, ಒಡಿಶಾದಂತಹ ರಾಜ್ಯಗಳವರು. ಇದಕ್ಕೆ ಕಾರಣ ಹುಡುಕಿದರೆ, ಕೆಲವರು ತಿಳಿಸಿದಂತೆ, ಅಲ್ಲಿನ ಕಾರ್ಮಿಕರು ಕಡಿಮೆ ಕೂಲಿ ಅಥವಾ ಸೇವಾ ಶುಲ್ಕ ಪಡೆಯುತ್ತಾರೆ ಹಾಗೂ ಕೆಲಸವನ್ನು ಹೇಳಿದ ಸಮಯಕ್ಕೆ ಮಾಡಿಕೊಡುತ್ತಾರೆ. ಅವರಿಗೆ ಇದು ಅಪರಿಚಿತ ಪ್ರದೇಶವಾದ ಕಾರಣ ಹೆಚ್ಚಿನ ಸ್ನೇಹಿತರೂ ಇರುವುದಿಲ್ಲ. ಇದರಿಂದ ಹೊರಗಡೆ ಸುತ್ತಾಟವೂ ಕಡಿಮೆಯೇ. ತಮ್ಮ ಪೂರ್ಣ ಸಮಯವನ್ನು ಕೆಲಸಕ್ಕೆ ಉಪಯೋಗಿಸುತ್ತಾರೆ. ಒಂದಷ್ಟು ಪ್ರಕರಣ ಹೊರತು ಪಡಿಸಿದರೆ, ಹೆಚ್ಚು ಕಡಿಮೆ ಉತ್ತರ ಭಾರತದ ಕಾರ್ಮಿಕರ ಸೇವೆ ಉತ್ತಮ ಎಂದೇ ಹೇಳಲಾಗುತ್ತದೆ.

ಹಿಂದೆಲ್ಲ ಆಂಧ್ರಪ್ರದೇಶ, ತಮಿಳುನಾಡಿನ ಕಾರ್ಮಿಕರು ನಮ್ಮ ರಾಜ್ಯಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ವಲಸೆ ಬಂದು ಕೆಲಸ ಮಾಡುತ್ತಿದ್ದರು. ಅಲ್ಲಿನ ಸರ್ಕಾರಗಳು ತಳಮಟ್ಟದ ಜನರಿಗಾಗಿ ಅನುಷ್ಠಾನ ಮಾಡುತ್ತಿರುವ ಕಲ್ಯಾಣ ಕಾರ್ಯಕ್ರಮಗಳ ಪರಿಣಾಮವೋ ಏನೋ ಇತ್ತೀಚೆಗೆ ಆ ರಾಜ್ಯಗಳ ಕಾರ್ಮಿಕರು ನಮ್ಮಲ್ಲಿ ಹೆಚ್ಚಾಗಿ ಕಂಡುಬರುತ್ತಿಲ್ಲ.

ನಮ್ಮ ರಾಜ್ಯದ ಜನರು ಮಾಡಬಹುದಾದ ಕೆಲಸಗಳನ್ನು ಉತ್ತರ ಭಾರತೀಯರು ಹೆಚ್ಚಿನ ಸಂಖ್ಯೆಯಲ್ಲಿ ನಿರ್ವಹಿಸುತ್ತಿರುವುದು ಏಕೆ? ನಮ್ಮ ಜನ ಕೆಲಸ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುತ್ತಿಲ್ಲವೇ ಎಂಬ ಕುರಿತು ಅಧ್ಯಯನ ನಡೆಯಬೇಕಿದೆ. ಬೆಂಗಳೂರಿನಂತಹ ನಗರಗಳಲ್ಲಿ ಕಾರ್ಮಿಕರ ಅಗತ್ಯವು ರಾಜ್ಯದಲ್ಲಿರುವ ಕಾರ್ಮಿಕರ ಸಂಖ್ಯೆಗಿಂತ ಹೆಚ್ಚು ಇದೆಯೇ ಅಥವಾ ನಮ್ಮ ಜನರು ಉದ್ಯೋಗ ನಿರ್ವಹಣೆಯಲ್ಲಿ ವಿಮುಖರಾಗಿದ್ದಾರೆಯೇ? ಈ ಕುರಿತು ಜನಗಣತಿಯ ವಿಶ್ಲೇಷಣೆಯಲ್ಲಿ ಒಂದಷ್ಟು ಮಾಹಿತಿ ದೊರೆಯುತ್ತದೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮುಖ್ಯ ಆರ್ಥಿಕ ಸಲಹೆಗಾರರಾದ ಡಾ. ಸೌಮ್ಯಕಾಂತಿ ಘೋಷ್ ಅವರು ದೇಶದ ಜನಗಣತಿ 1991 ಹಾಗೂ 2011ರ ವಿಶ್ಲೇಷಣೆಯ ಆಧಾರದ ಮೇಲೆ ಕೆಲವು ಕುತೂಹಲಕಾರಿ ಅಂಶಗಳನ್ನು 2019ರಲ್ಲಿ ಹೊರಗೆಡವಿದ್ದಾರೆ. ಅದರಂತೆ, ಉತ್ತರಪ್ರದೇಶ, ಬಿಹಾರ ಹಾಗೂ ಒಡಿಶಾದಲ್ಲಿ ಜನಸಂಖ್ಯಾ ಬೆಳವಣಿಗೆಯ ದರವು ದಕ್ಷಿಣ ಭಾರತದ ರಾಜ್ಯಗಳಿಗಿಂತ ಹೆಚ್ಚಾಗಿದೆ. ಕೇರಳ, ತಮಿಳುನಾಡು, ಪಂಜಾಬ್ ಹಾಗೂ ಕರ್ನಾಟಕದಲ್ಲಿ ಕಾರ್ಮಿಕರ ಕೂಲಿ ದರ ಹೆಚ್ಚು. ಆದರೆ ಬಿಹಾರ, ಉತ್ತರ ಪ್ರದೇಶ, ರಾಜಸ್ಥಾನ, ಮಧ್ಯಪ್ರದೇಶದಲ್ಲಿ ಜನಸಂಖ್ಯಾ ಬೆಳವಣಿಗೆಯ ದರ ಹೆಚ್ಚು ಮತ್ತು ಕಾರ್ಮಿಕರ ಕೂಲಿ ದರ ಕಡಿಮೆ. ಹೀಗಾಗಿ ಉತ್ತರದಿಂದ ದಕ್ಷಿಣಕ್ಕೆ ಕಾರ್ಮಿಕರ ವಲಸೆಯ ಪ್ರಮಾಣ ಹೆಚ್ಚು ಎನ್ನಲಾಗಿದೆ. ಆದರೆ ಇದು ಭವಿಷ್ಯದಲ್ಲಿ ಭಾಷೆ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರಣಗಳಿಂದ ವ್ಯತ್ಯಾಸಗಳನ್ನು ಉಂಟು ಮಾಡುವ, ಸಂಘರ್ಷಗಳು ನಡೆಯುವ ಅಪಾಯಗಳ ಕುರಿತು ಸೌಮ್ಯಕಾಂತಿ ಆತಂಕಪಡುತ್ತಾರೆ. ಈಗಾಗಲೇ ಸಾಂಸ್ಕೃತಿಕ ಕಾರಣಗಳಿಂದ ಈಶಾನ್ಯ ರಾಜ್ಯಗಳ ಜನರು ಹಾಗೂ ಸ್ಥಳೀಯ ರಾಜ್ಯದ ಜನರ ನಡುವೆ ಸಂಘರ್ಷಗಳು ನಡೆದ ಉದಾಹರಣೆಗಳಿವೆ.

ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ರಾಜ್ಯದ ಜನರು ವಿವಿಧ ವೃತ್ತಿಗಳಲ್ಲಿ ತೊಡಗಿಸಿಕೊಂಡಿರುವ ಪ್ರಮಾಣ ಹಾಗೂ ಆ ಪ್ರಮಾಣವನ್ನು ಹೆಚ್ಚು ಮಾಡುವಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತಂತೆ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಆಯಾಮಗಳಲ್ಲಿ ಅಧ್ಯಯನ ನಡೆಯಬೇಕಿದೆ. ಜಾತಿ, ಧರ್ಮಗಳ ಕಟ್ಟುಪಾಡುಗಳಾಚೆ ಸ್ಥಾಪಿತ ಮಡಿವಂತಿಕೆಯನ್ನು ದೂರ ಸರಿಸಿ, ಎಲ್ಲಾ ಉದ್ಯೋಗಗಳನ್ನು ಮುಕ್ತವಾಗಿ ಸ್ವೀಕರಿಸುವ ಕಡೆಗೆ ಜನಜಾಗೃತಿ ಮೂಡಿಸಬೇಕಿದೆ. ಎಲ್ಲಾ ಉದ್ಯೋಗಗಳನ್ನು ವೃತ್ತಿಪರವಾಗಿ ನಿರ್ವಹಣೆ ಮಾಡುವತ್ತ ಜನರನ್ನು ಸಜ್ಜುಗೊಳಿಸಬೇಕಿದೆ. ಜೊತೆಗೆ ವಿವಿಧ ವೃತ್ತಿಗಳಿಗೆ ಅಗತ್ಯವಾದ ಕೌಶಲವನ್ನು ಬೆಳೆಸಿಕೊಳ್ಳಲು ಲಭ್ಯವಿರುವ ಎಲ್ಲಾ ಅವಕಾಶಗಳನ್ನು ಜನರು ಸದುಪಯೋಗಪಡಿಸಿಕೊಳ್ಳುವೆಡೆ ಸೂಕ್ತ ಕಾರ್ಯತಂತ್ರಗಳನ್ನು ಹೆಣೆಯಬೇಕಿದೆ.

ವಾಚಕರ ವಾಣಿ

ಭಾಷಾ ನಿಧಿ ಸಂರಕ್ಷಿಸೋಣ

'ಪರಂಪರೆಯ ಭಂಡಾರಕ್ಕೆ ಕೀಲಿಕೈ' ಎಂಬ ಯೋಗಾನಂದ ಅವರ ಲೇಖನವನ್ನು (ಸಂಗತ, ಆ. 24) ಓದಿ, ಸಂಸ್ಕೃತದ ಬಗ್ಗೆ ನಾನು ಆತ್ಮಾವಲೋಕನ ಮಾಡಿಕೊಂಡೆ. ಕಳೆದ ವಾರ ಚಂದನ ವಾಹಿನಿಯನ್ನು ವೀಕ್ಷಿಸುತ್ತಿದ್ದಾಗ, ವಾರ್ತೆಯು ಸಂಸ್ಕೃತದಲ್ಲಿ ಪ್ರಸಾರವಾಗುತ್ತಿತ್ತು. ನನಗೆ ಆಶ್ಚರ್ಯ. ಸಂಸ್ಕೃತದ ಬಗ್ಗೆ ಅಲ್ಪ ಜ್ಞಾನವಿದ್ದ ಕಾರಣ ಅದು ನನಗೆ ಮನನವಾಯಿತು. ಆದರೆ ನಮ್ಮ ತಾಯಿ, 'ಅದು ಯಾವ ಭಾಷೆ' ಎಂದು ಕೇಳಿದರು! ಇದು ನಮ್ಮ ಪಾರಂಪರಿಕ ಭಾಷೆಯ ಅವನತಿಗೆ ಹಿಡಿದ ಕೈಗನ್ನಡಿಯಾಗಿದೆ. ಸಂಸ್ಕೃತ ಮೃತ ಭಾಷೆಯಾಗಿಲ್ಲ, ನನ್ನ ಪ್ರಕಾರ ಮಿತ ಭಾಷೆಯಾಗಿದೆ.

ತಂತ್ರಜ್ಞಾನದ ಜಗತ್ತಿನಲ್ಲಿ ಇಂಗ್ಲಿಷ್ ಭಾಷೆಯ ದಾಳಿಯಿಂದ ಸಂಸ್ಕೃತ ಮರೀಚಿಕೆಯಾಗಿದೆ. ಇದು ನಮ್ಮ ಪೀಳಿಗೆಯ ಸ್ಥಿತಿ ಮಾತ್ರವಲ್ಲ. ಪ್ರಾಚೀನ ಕಾಲದಲ್ಲಿ ಸಂಸ್ಕೃತ ಅತ್ಯುನ್ನತ ವರ್ಗದವರ ಭಾಷೆಯಾಗಿತ್ತು. ಕೆಳವರ್ಗದವರಿಗೆ ಕಲಿಯಲು ಅವಕಾಶ ನೀಡುತ್ತಿರಲಿಲ್ಲ. ಅವರು ಪ್ರಾಕೃತ ಭಾಷೆಗೆ ಸೀಮಿತವಾಗಿದ್ದರು. ಕಾರಣ ಜೈನ, ಬೌದ್ಧ ಧರ್ಮಗಳ ಉನ್ನತಿಗೆ ಮಾರ್ಗ ದೊರಕಿತು. ಈಗ ಹೊಸ ಶಿಕ್ಷಣ ನೀತಿಯನ್ನು ರಾಜ್ಯದಲ್ಲೇ ಮೊದಲಿಗೆ ಅಳವಡಿಸಲಾಗುತ್ತಿದೆ. ಇನ್ನಾದರೂ ಮಕ್ಕಳಿಗೆ ಸಂಸ್ಕೃತ ಭಾಷೆಯ ಕಡೆಗೆ ಒಲವು ಮೂಡುವಂತೆ ನೋಡಿಕೊಳ್ಳೋಣ. ಪಾರಂಪರಿಕ ಭಾಷಾ ನಿಧಿಯನ್ನು ಸಂರಕ್ಷಿಸೋಣ.

ಸ್ನೇಹಾ ರೆಡ್ಡಿ, ಜಮಖಂಡಿ

ಟಿಕೆಟ್ ನೀಡಿಕೆ: ಇರಲಿ ಎಚ್ಚರ

ಸಂಸದರು, ಶಾಸಕರು ಸೇರಿದಂತೆ 363 ಜನಪ್ರತಿನಿಧಿಗಳ ವಿರುದ್ಧ ಅಪರಾಧ ಪ್ರಕರಣಗಳಿವೆ, ಅಪರಾಧ ಸಾಬೀತಾದರೆ ಇವರೆಲ್ಲರೂ ಪ್ರಜಾಪ್ರಾತಿನಿಧ್ಯ ಕಾಯ್ದೆ ಪ್ರಕಾರ ಅನರ್ಹಗೊಳ್ಳಲಿದ್ದಾರೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಅಧ್ಯಯನ ಹೇಳಿರುವುದಾಗಿ ವರದಿಯಾಗಿದೆ (ಪ್ರ.ವಾ., ಆ. 24).

ಅದರಲ್ಲೂ ತಾನು ಜನಪರ ಎಂದು ಹೇಳುವ ಬಿಜೆಪಿ ಪಕ್ಷದಲ್ಲೇ ಹೆಚ್ಚು ಆರೋಪಿಗಳಿರುವುದು ವಿಷಾದದ ಸಂಗತಿ. ಕ್ರಿಮಿನಲ್ ಹಿನ್ನೆಲೆಯ ಜನಪ್ರತಿನಿಧಿಗಳು ತಮ್ಮ ವಿರುದ್ಧದ ಸಾಕ್ಷ್ಯಗಳನ್ನೇ ನಾಶ ಮಾಡಿ ನ್ಯಾಯಾಲಯದಿಂದಲೇ ನಿರ್ದೋಷಿಗಳಾಗಿ ಹೊರಬರುವಷ್ಟು ಪ್ರಬಲರು. ಇದು ಆತಂಕಕಾರಿ ವಿಚಾರ. ರಾಜಕೀಯ ಪಕ್ಷಗಳು ಚುನಾವಣೆಯಲ್ಲಿ ಸ್ಪರ್ಧಿಸಲು ಆಕಾಂಕ್ಷಿಗಳಿಗೆ ಟಿಕೆಟ್ ನೀಡುವಾಗ ಇಂತಹ ಎಲ್ಲ ಆರೋಪ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿದರೆ ಜನಪ್ರತಿನಿಧಿ ಸ್ಥಾನಕ್ಕೆ ಗೌರವ ಬರುವುದು. ಗೆಲುವನ್ನಷ್ಟೇ ಮಾನದಂಡ ಮಾಡಿಕೊಂಡಿರುವ ಎಲ್ಲ ಪಕ್ಷಗಳೂ ಹಿಂದೆಮುಂದೆ ನೋಡದೆ ಹಣಬಲ, ತೋಳ್ಬಲ ಇರುವಂತಹವರಿಗೆ ಟಿಕೆಟ್ ನೀಡುತ್ತಿರುವುದೇ ಈ ಸ್ಥಿತಿಗೆ ಕಾರಣ. ಇಂತಹವರು ಆರಿಸಿ ಬಂದರೆ ಯಾವ ರೀತಿ ದೇಶಸೇವೆ ಮಾಡಬಹುದು ಎಂದು ಊಹಿಸಿಕೊಳ್ಳಬಹುದು. ಸದನದಲ್ಲೇ ಬಟ್ಟೆ ಹರಿದುಕೊಂಡು ಕೂಗಾಡುವ, ತೋಳೇರಿಸಿಕೊಂಡು ಅನ್ಯ ಸದಸ್ಯರ ಮೇಲೆ ಎರಗುವ, ತುಚ್ಛ ಶಬ್ದಗಳಿಂದ ಪರಸ್ಪರ ಬೈದಾಡುವ, ನೀಲಿಚಿತ್ರಗಳನ್ನು ವೀಕ್ಷಿಸುವ ಸದಸ್ಯರು ಬೇಡವೆಂದು ಬಯಸುವ ಪಕ್ಷಗಳು ಎಚ್ಚರಿಕೆಯಿಂದ ಟಿಕೆಟ್ ನೀಡುವ ಪರಿಪಾಟ ಬೆಳೆಸಿಕೊಳ್ಳಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ನಾನೆಂದೂ ಕ್ಷಮಿಸೆನು...

ಅಫ್ಗನ್ ಜನರು ಅಮೆರಿಕ ಯೋಧರಿಗೆ
ಹಸ್ತಾಂತರಿಸಿದ ಮಗು (ಪ್ರ.ವಾ., ಆ. 21) ಹೇಳುವಂತಿತ್ತು,
ನಾ ದಾಟುತ್ತಿರುವುದು ಬರೀ
ಮುಳ್ಳುತಂತಿಯ ಬೇಲಿಯನ್ನಲ್ಲ
ನನ್ನ ಕರುಳ ಬಳ್ಳಿಯನ್ನು...
ಹೇ... ತಾಲಿಬಾನೀಯರೇ, ನನ್ನ ದೇಶವನ್ನಿನ್ನೂ
ನಾ ಕಣ್ತುಂಬ ನೋಡುವ ಮುನ್ನ
ನನ್ನೀ ಆಗಸದ ತಂಗಾಳಿಯ
ಸ್ಪರ್ಶ ಸುಖವ ಆನಂದಿಸುವ ಮುನ್ನ
ನನ್ನ ಮಾತೃಭೂಮಿಯಲುಕ್ಕಿದ
ಹನಿ ನೀರನು ಸವಿಯುವ ಮುನ್ನ
ನನ್ನೀ ನೆಲದ ಅನ್ನದಗುಳು
ನನ್ನ ತುಟಿಮುಟ್ಟುವ ಮುನ್ನ
ನನ್ನೀ ಮಣ್ಣಿನಲಿ ನಾ
ಆಡಿಹೊರಳಾಡುವ ಮುನ್ನ
ನನ್ನನ್ನು ಪರದೇಶಕ್ಕಟ್ಟಿದ ಪಾಪ
ನಿಮ್ಮನ್ನೆಂದೂ ಬಿಡದು
ನಾನೆಂದೂ ನಿಮ್ಮ ಕ್ಷಮಿಸೆನು!

ಜೆ.ಬಿ.ಮಂಜುನಾಥ, ಪಾಂಡವಪುರ

ಶೀಘ್ರ ದೊರಕಲಿ ಪ್ರಮಾಣಪತ್ರ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು 2013-14ನೇ ಸಾಲಿನಿಂದ 2016-17ರವರೆಗೆ ಮಾನ್ಯತೆ ಕಳೆದುಕೊಂಡ ಸಮಯದಲ್ಲಿ, ಸಾವಿರಾರು ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸಿ ವಿವಿಧ ಸ್ನಾತಕ, ಸ್ನಾತಕೋತ್ತರ ಪದವಿಗಳನ್ನು ನೀಡಿರುವುದು ಸರಿಯಷ್ಟೆ. ಪದವಿ ಗಳಿಸಿರುವ ಈ ಸಾಲಿನ ವಿದ್ಯಾರ್ಥಿಗಳಿಗೆ ಅನ್ಯಾಯವಾಗಬಾರದೆಂದು ಹೈಕೋರ್ಟ್, ಪದವಿಗಳನ್ನು ಮಾನ್ಯ ಮಾಡಿ ತೀರ್ಪು ನೀಡಿದ ಬಳಿಕ ಈ ಬಗ್ಗೆ ರಾಜ್ಯ ಸರ್ಕಾರವು ಆದೇಶವನ್ನು ಹೊರಡಿಸಿತು.

ಆದರೆ, ವಿಶ್ವವಿದ್ಯಾಲಯವು ಪದವಿ ಪ್ರಮಾಣಪತ್ರವನ್ನೇ ವಿತರಿಸಿಲ್ಲ. ವಿಶ್ವವಿದ್ಯಾಲಯವು 2016ರಲ್ಲಿ ಪದವಿ ಪ್ರಮಾಣಪತ್ರಗಳಿಗೆ ಶುಲ್ಕ ಕಟ್ಟಿಸಿಕೊಂಡು ಐದು ವರ್ಷಗಳೇ ಕಳೆದಿವೆ. ಕಳೆದ ಬಾರಿ ಮುಕ್ತ ವಿಶ್ವವಿದ್ಯಾಲಯವು ಘಟಿಕೋತ್ಸವ ನಡೆಸಿದರೂ 2013-14, 2014-15ನೇ ಸಾಲಿನಲ್ಲಿ ಪದವಿ ಪಡೆದವರಿಗೆ ಪ್ರಮಾಣಪತ್ರವನ್ನೇ ನೀಡಿಲ್ಲ. ಎರಡು ವರ್ಷದಿಂದ ಯುಜಿಸಿಯಿಂದ ಮಾನ್ಯತೆ ಪಡೆದು ಕಾರ್ಯಾಚರಿಸುತ್ತಿರುವ ವಿಶ್ವವಿದ್ಯಾಲಯ ತನ್ನ ಹಳೆಯ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುತ್ತಿದೆ. ಉನ್ನತ ಶಿಕ್ಷಣ ಸಚಿವರು ಈ ಕುರಿತು ಸೂಕ್ತ ಕ್ರಮ ಕೈಗೊಳ್ಳಬೇಕು. ಮುಕ್ತ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ನ್ಯಾಯ ಕೊಡಿಸಬೇಕು.

ವೆಂಕಟೇಶ ಪಿ., ನಂಜನಗೂಡು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮೂರು ದಶಕಗಳ ಬಳಿಕ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ರೂಪುಗೊಂಡಿದೆ. ಕೇಂದ್ರ ಸರ್ಕಾರವು ಭಾರಿ ಮಹತ್ವಾಕಾಂಕ್ಷೆಯಿಂದ ರೂಪಿಸಿದ ಈ ನೀತಿಯ ಜಾರಿಗೆ ಕರ್ನಾಟಕ ಸರ್ಕಾರವು ಚಾಲನೆ ಕೊಟ್ಟಿದೆ. ಹೊಸ ಶಿಕ್ಷಣ ನೀತಿಯು ಕಲಿಕೆಯನ್ನು ಈ ನೆಲದೊಂದಿಗೆ ಬೆಸೆಯಲಿದೆ ಎಂದು ಶಿಕ್ಷಣ ತಜ್ಞರಲ್ಲಿ ಕೆಲವರು ಭಾವಿಸಿದ್ದಾರೆ. ನೀತಿಯಲ್ಲಿ ಇರುವ ಹಲವು ಅಂಶಗಳ ಬಗ್ಗೆ ಆಮೂಲಾಗ್ರ ಚರ್ಚೆ ಆಗಬೇಕಿದೆ. ನೀತಿಯ ಜಾರಿಗೆ ಆತುರ ಮಾಡಲಾಗಿದೆ ಎಂದು ಪ್ರತಿಪಾದಿಸುವ ಶಿಕ್ಷಣ ಪರಿಣತರೂ ಇದ್ದಾರೆ. ರಾಜ್ಯದ ಪರಿಣತರ ಅಭಿಪ್ರಾಯ ಇಲ್ಲಿದೆ

ರಾಷ್ಟ್ರೀಯ ಶಿಕ್ಷಣ ನೀತಿ...

ನೆಲದೊಂದಿಗೆ ಬೆಸುಗೆಯೇ? ಆತುರದ ಜಾರಿಯೇ?

ಸರ್ವಾಂಗೀಣ ಅಭಿವೃದ್ಧಿಗೆ ವೇದಿಕೆ

ಈ ತನಕ ಬ್ರಿಟಿಷ್ ಮಾದರಿಯ ನಾಲ್ಕು ಗೋಡೆಗಳ ನಡುವಿನ ಶಿಕ್ಷಣ ಪದ್ಧತಿ ಇತ್ತು. ಹೊಸ ನೀತಿಯು ಯುವಜನತೆಯ ಕೌಶಲ, ಬುದ್ಧಿಮತ್ತೆ, ವ್ಯಕ್ತಿತ್ವ ವಿಕಸನ ಸೇರಿದಂತೆ ಬಹುಶಿಸ್ತೀಯ ಅಧ್ಯಯನಕ್ಕೆ ಸಾಕಷ್ಟು ಅವಕಾಶಗಳನ್ನು ಒದಗಿಸಲಿದೆ. ಮಾತೃಭಾಷೆಯಲ್ಲಿ ತಾಂತ್ರಿಕ ಶಿಕ್ಷಣವು ಇದರ ಇನ್ನೊಂದು ವಿಶೇಷ. ಇದು ಸ್ವದೇಶಿ ತಂತ್ರಜ್ಞಾನ ಅಭಿವೃದ್ಧಿಗೆ ಪೂರಕವಾಗಿದೆ. ಆದರೆ, ಯಾವುದೇ ನೀತಿಯು ಎಷ್ಟೇ ಉತ್ತಮವಾಗಿದ್ದರೂ, ಅನುಷ್ಠಾನವು ಪರಿಣಾಮಕಾರಿಯಾದಾಗ ಮಾತ್ರ ಪ್ರತಿಫಲ ದೊರೆಯಲು ಸಾಧ್ಯ.

ಡಾ. ಮಾಧವ ಎಂ.ಕೆ., ಸಂಯೋಜಕರು
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳುಪೀಠ, ಮಂಗಳೂರು ವಿಶ್ವವಿದ್ಯಾಲಯ

ಪ್ರದರ್ಶನಕ್ಕಿಂತ 'ದರ್ಶನ' ಮುಖ್ಯ

ಪ್ರಜಾತಂತ್ರದಲ್ಲಿ ಯಾವುದೇ ನೀತಿಯು ಸಂವಾದ, ಭಾಗವಹಿಸುವಿಕೆ, ಚರ್ಚೆಗಳ ಮೂಲಕ ಅನುಷ್ಠಾನಗೊಳ್ಳುವುದು ಸಹಜ. ಹೀಗಾಗಿ, ಎನ್‌ಇಪಿಯನ್ನು ಕೋವಿಡ್–19 ಸಂಕಷ್ಟದ ನಡುವೆಯೂ ಧಾವಂತದಲ್ಲಿ ಅನುಷ್ಠಾನಗೊಳಿಸುವ ಬದಲಾಗಿ, ಇನ್ನಷ್ಟು ಚರ್ಚೆಗೆ ತೆರೆದಿಟ್ಟರೆ ಉತ್ತಮ. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಮೂಲಸೌಕರ್ಯಗಳ (ಕಟ್ಟಡ, ಅಂತರ್ಜಾಲ ಇತ್ಯಾದಿ) ಕೊರತೆ ಇದೆ. ಪೂರಕ ಮೂಲಸೌಕರ್ಯ ಇಲ್ಲದೇ ಎನ್‌ಇಪಿ ಪರಿಣಾಮಕಾರಿಯಾದೀತೇ ಎಂಬ ಆತಂಕವು ಶೈಕ್ಷಣಿಕ ವಲಯದಲ್ಲಿದೆ.

ಐವನ್ ಫ್ರಾನಿಸ್ ಲೋಬೊ, ರಾಜ್ಯಶಾಸ್ತ್ರ ಸಹ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಪುತ್ತೂರು

ಕ್ರೆಡಿಟ್ ಗಳಿಕೆಯ ಗೋಜಲು

ಪದವಿ ಕೋರ್ಸ್‌ಗಳನ್ನು ಕ್ರೆಡಿಟ್ ಗಳಿಕೆಯ ಗೋಜಲಿಗೆ ತಳ್ಳಲಾಗಿದೆ. ಮೂರು ವಿಷಯಗಳನ್ನು ಓದುವ ಬದಲು ಒಂದು ಅಥವಾ ಎರಡು ವಿಷಯಗಳಿಗೆ ಮಾತ್ರವೇ ಪದವಿ ಕೋರ್ಸನ್ನು ಸೀಮಿತಗೊಳಿಸಲಾಗಿದೆ. ಕನ್ನಡ ಭಾಷೆಯ ಕಲಿಕೆಯನ್ನು ಒಂದು/ಎರಡು ವರ್ಷಕ್ಕೆ ಸೀಮಿತಗೊಳಿಸಿರುವುದರಿಂದ ಭಾಷಾ ಕಲಿಕೆ, ಬೆಳವಣಿಗೆ ಕುಂಠಿತಗೊಳ್ಳುತ್ತದೆ.

ಸುಭಾಷ್ ಜೋಯಪ್ಪ, ಎಐಡಿಎಸ್‌ಒ ರಾಜ್ಯ ಸಮಿತಿ ಸದಸ್ಯ

ಏಕೀಕೃತ ವಿವಿಗಳ ಮೇಲೆ ಪ್ರಯೋಗ ಏಕೆ?

ಆಧುನಿಕ ಕಾಲಕ್ಕೆ ತಕ್ಕಂತೆ ಶಿಕ್ಷಣ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆ ಅಗತ್ಯ. ಆದರೆ, ರಾಜ್ಯ ಸರ್ಕಾರ ಅತ್ಯಂತ ಅವಸರಕ್ಕೆ ಒಳಗಾಗಿ ಇದೇ ಶೈಕ್ಷಣಿಕ ವರ್ಷದಿಂದ ನೂತನ ಶಿಕ್ಷಣ ನೀತಿ ಜಾರಿಗೊಳಿಸುತ್ತಿರುವುದು ಅನುಮಾನಾಸ್ಪದವಾಗಿದೆ. ವಿದ್ಯಾರ್ಥಿಗಳು, ಪೋಷಕರ ಅಭಿಪ್ರಾಯ ಸಂಗ್ರಹಿಸದೇ ಹೊಸ ನೀತಿ ಜಾರಿಗೊಳಿಸುತ್ತಿರುವುದು ಸರಿಯಾದ ಕ್ರಮವಲ್ಲ. ಏಕೀಕೃತ ವಿವಿಗಳ ಮೇಲೆ ಏಕೆ ಪ್ರಯೋಗ ಮಾಡಲಾಗುತ್ತಿದೆ ಎಂಬ ಪ್ರಶ್ನೆ ಮೂಡಿದೆ. ಶಾಲಾ, ಕಾಲೇಜುಗಳಲ್ಲಿ ಸಂವಾದ, ಕಾರ್ಯಾಗಾರ, ಉಪನ್ಯಾಸಗಳು ನಡೆಯಬೇಕಾಗಿತ್ತು.

ಡಾ.ಎನ್.ಎಸ್.ಶಂಕರೇಗೌಡ
ಸಹಾಯಕ ಪ್ರಾಧ್ಯಾಪಕ, ಮಂಡ್ಯ ಏಕೀಕೃತ ವಿಶ್ವವಿದ್ಯಾಲಯ, ಮಂಡ್ಯ

ಕೈ ಕೆಸರಾದರೆ ಬಾಯಿ ಮೊಸರು ಪರಿಕಲ್ಪನೆ



ಕೈ ಕೆಸರಾದರೆ ಬಾಯಿ ಮೊಸರು ಎನ್ನುವ ಪರಿಕಲ್ಪನೆಯ ಆಧಾರದ ಮೇಲೆ ಹೊಸ ಶಿಕ್ಷಣ ನೀತಿ ರೂಪಿಸಲಾಗಿದೆ. ಇಷ್ಟು ವರ್ಷಗಳ ಕಾಲ ಬೌದ್ಧಿಕ ಜ್ಞಾನಕ್ಕೆ ಮಾತ್ರ ಮಹತ್ವ ನೀಡಲಾಗಿತ್ತು. ಇದರಿಂದಾಗಿ ಅಸಮತೋಲನ ಸೃಷ್ಟಿಯಾಗಿತ್ತು. ಅದನ್ನು ಬದಲಾಯಿಸಲು, ಹೊಸ ನೀತಿಯಲ್ಲಿ ವಿದ್ಯೆ ಮತ್ತು ತರಬೇತಿ ಎರಡಕ್ಕೂ ಸಮಾನ ಮಹತ್ವ ನೀಡಲಾಗಿದೆ. ಬುದ್ಧಿ ಹಾಗೂ ಕೌಶಲ ಜೊತೆಜೊತೆಯಾಗಿ ಹೋಗಬೇಕು. ಇದರ ಪ್ರತಿಫಲವನ್ನು ಮುಂಬರುವ ವರ್ಷಗಳಲ್ಲಿ ನಾವು ಕಾಣಲಿದ್ದೇವೆ.

ಪ್ರೊ. ತೇಜಸ್ವಿ ಕಟ್ಟಿಮನಿ, ಕುಲಪತಿ
ಆಂಧ್ರಪ್ರದೇಶದ ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯ

ಅಷ್ಟೊಂದು ತರಾತುರಿಯೇಕೆ?

ದಕ್ಷಿಣ ಭಾರತದಲ್ಲಿ ಯಾವ ರಾಜ್ಯವೂ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಲು ಆತುರ ತೋರುತ್ತಿಲ್ಲ. ಅಂಥದರಲ್ಲಿ ಕರ್ನಾಟಕ ಸರ್ಕಾರ ಇಷ್ಟೊಂದು ತರಾತುರಿಯಲ್ಲಿ ಜಾರಿಗೆ ತರುವ ಅಗತ್ಯವಾದರೂ ಏನಿತ್ತು?

ಮುಖ್ಯವಾಗಿ ಎನ್‌ಇಪಿಯಿಂದ ಭಾಷೆಗಳಿಗೆ ಕಂಟಕ ಎದುರಾಗಲಿದೆ. ಇದನ್ನು ಉಳಿಸಿಕೊಂಡು ಹೋಗುವ ಬಗೆಯನ್ನು ತಿಳಿಸಿಲ್ಲ. ವರ್ಷದ ಹಿಂದೆ 400ಕ್ಕೂ ಅಧಿಕ ಪುಟಗಳ ಕರಡು ಪ್ರತಿಯನ್ನು ಕಳುಹಿಸಿ ಈ ಬಗ್ಗೆ ಆಕ್ಷೇಪಣೆ ಸಲ್ಲಿಸಿ ಎಂದು ಹೇಳಿದ್ದರು. ಆದರೆ, ಎಷ್ಟು ಜನ ಉಪನ್ಯಾಸಕರಿಗೆ ಆ ಬಗ್ಗೆ ಮಾಹಿತಿ ಇದೆ ಎಂಬುದನ್ನು ಅರಿಯಲು ಸರ್ಕಾರ ಪ್ರಯತ್ನಿಸಿದೆಯೇ?

ಒಟ್ಟಾರೆ ಇದು ಜಾಗತಿಕ ಮಾರುಕಟ್ಟೆಗೆ ಕೆಲವೇ ಕೆಲವು ಉದ್ಯೋಗಿಗಳನ್ನು ತಯಾರು ಮಾಡಿಕೊಡಲು ರೂಪುಗೊಂಡಿದೆ. ಮೊದಲಿದ್ದ ಶಿಕ್ಷಣ ನೀತಿ ಹಳೆಯದಾಗಿದೆ. ಹೊಸದಾಗಿ ರೂಪುಗೊಳ್ಳಬೇಕು ಎಂಬುದನ್ನು ಒಪ್ಪುತ್ತೇನೆ. ಆದರೆ, ಈ ಬಗ್ಗೆ ಸಮಗ್ರ ಚರ್ಚೆಯನ್ನೇ ನಡೆಸದೇ ಕೇಂದ್ರ ಸರ್ಕಾರದ ಮೂಗಿನಡಿಯಲ್ಲಿ ರೂಪಿಸಿರುವುದರ ಹಿಂದಿನ ಕಾರಣವೇನು?

ಡಾ.ಮೀನಾಕ್ಷಿ ಬಾಳಿ
ಪ್ರಾಧ್ಯಾಪಕಿ, ವಿ.ಜಿ. ಮಹಿಳಾ ಕಾಲೇಜು, ಕಲಬುರ್ಗಿ

ಜ್ಞಾನಾಧಾರಿತ ಶಿಕ್ಷಣಕ್ಕೂ ಬೇಕಿದೆ ಒತ್ತು

ನೂತನ ರಾಷ್ಟ್ರೀಯ ಶಿಕ್ಷಣದ ಅಂಶಗಳಲ್ಲಿ ಮುಖ್ಯವಾಗಿ ತಾಂತ್ರಿಕ ಹಾಗೂ ಔದ್ಯೋಗಿಕ ವಿಚಾರಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಒತ್ತನ್ನು ನೀಡಲಾಗಿದೆ. ಅದರ ಜೊತೆಗೆ ಜ್ಞಾನಾಧಾರಿತ ಅಥವಾ ಸಂಶೋಧನೆಯನ್ನು ಮುಖ್ಯವಾಗಿಸಿಕೊಂಡ ಪಠ್ಯಕ್ರಮ ರೂಪಿಸುವ ಮೂಲಕ ಶಿಕ್ಷಣ ನೀತಿಯ ವ್ಯಾಪ್ತಿಯನ್ನು ಹಿಗ್ಗಿಸಬೇಕಾಗಿದೆ. ಸೆಮಿಸ್ಟರ್‌ಗಳಿಗೆ ವಿಸ್ತರಿಸಬೇಕು. ಪಠ್ಯಕ್ರಮ ರಚನೆಯಲ್ಲಿ ಎಲ್ಲ ಭಾಗದ ತಜ್ಞರಿಗೂ ಅವಕಾಶ ನೀಡಬೇಕು.

ಹೊಸ ಜ್ಞಾನದ ಸೃಷ್ಟಿಗೆ ಪೂರಕವಾಗಲು ಇನ್ನಷ್ಟು ಕ್ರಮಗಳನ್ನು ಕೈಗೊಳ್ಳಬೇಕು.

ಡಾ.ವಿಕ್ರಮ ವಿಸಾಜಿ
ಸಹ ಪ್ರಾಧ್ಯಾಪಕ, ಕರ್ನಾಟಕ ಕೇಂದ್ರೀಯ ವಿ.ವಿ. ಕಲಬುರ್ಗಿ

ಜ್ಞಾನದ ಯುಗಕ್ಕೆ ಪೂರಕ

ಹೊಸ ಶಿಕ್ಷಣ ನೀತಿಯು 21ನೇ ಶತಮಾನದ ಜ್ಞಾನ ಯುಗಕ್ಕೆ ಪೂರಕವಾಗಿದೆ. ವಿದ್ಯಾರ್ಥಿಯು ವಿಷಯವಾರು ಕಲಿಕೆಯ ಜತೆಗೆ ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು, ಕೌಶಲ ಬೆಳೆಸಿಕೊಂಡು ವೃತ್ತಿಪರತೆ ಗಳಿಸಿಕೊಳ್ಳಲು ನೆರವಾಗಲಿದೆ. ಮೌಲ್ಯ ಅಳವಡಿಸಿಕೊಳ್ಳಲು ಪೂರಕವಾಗಿದೆ. ಯಾವುದೇ ವಿದ್ಯಾರ್ಥಿ ಜಾಗತಿಕ ಮಟ್ಟದಲ್ಲಿ ಭಾಗವಹಿಸಲು, ಸ್ಪರ್ಧೆ ಒಡ್ಡಲು ಬೇಕಾದ ಜ್ಞಾನವನ್ನು ಹೊಸ ಶಿಕ್ಷಣ ನೀತಿಯಲ್ಲಿ ಪಡೆದುಕೊಳ್ಳಲು ಅವಕಾಶಗಳಿವೆ.

ಪ್ರೊ.ವೈ.ಎಸ್.ಸಿದ್ದೇಗೌಡ, ಕುಲಪತಿ, ತುಮಕೂರು ವಿಶ್ವವಿದ್ಯಾನಿಲಯ

ಚರ್ಚೆಗಳು ಹೆಚ್ಚು ನಡೆಯಬೇಕು

ಹೊಸಶಿಕ್ಷಣ ನೀತಿಯ ಬಗ್ಗೆ ಹೆಚ್ಚು ಚರ್ಚೆಗಳು ಸಮಾಜದಲ್ಲಿ ನಡೆಯಬೇಕು. ಆಶಯಗಳು ಕಾರ್ಯಗತವಾಗಲು ಸೂಕ್ತ ಶೈಕ್ಷಣಿಕ ಕ್ರಿಯಾಯೋಜನೆಗಳನ್ನು ಜತೆಯಲ್ಲಿಯೇ ಜಾರಿಗೊಳಿಸಬೇಕು. ಕಲಿಕೆಯಲ್ಲಿ ಸಮತೆಯನ್ನು ತರಬೇಕು. ಪ್ರತಿಯೊಂದು ಮಗುವನ್ನು ಒಳಗೊಳ್ಳುವ ಭಾರತೀಯ ಸಾಂಸ್ಕೃತಿಕ, ಪರಂಪರೆಯ ಮೌಲ್ಯಗಳು ಹಾಗೂ ಸಂವಿಧಾನದ ಮೌಲ್ಯಗಳು, ಜೀವನಕೌಶಲಗಳನ್ನು ಪಠ್ಯದಲ್ಲಿ ಅಳವಡಿಸುವುದು ಆದ್ಯತೆಯ ವಿಷಯವಾಗಬೇಕು.

ಪ್ರೊ.ಕೋಡಿ ರಂಗಪ್ಪ, ಶಿಕ್ಷಣ ತಜ್ಞರು, ಚಿಕ್ಕಬಳ್ಳಾಪುರ

ವಿದ್ಯಾರ್ಥಿಸ್ನೇಹಿ ನೀತಿ

ವಿದ್ಯಾರ್ಥಿಗಳು ತಮ್ಮ ಇಚ್ಛೆಗೆ ಅನುಗುಣವಾಗಿ ಯಾವುದೇ ವಿಭಾಗದ (ಕಲೆ, ವಾಣಿಜ್ಯ, ವಿಜ್ಞಾನ) ವಿಷಯವನ್ನು ಆಯ್ಕೆ ಮಾಡಲು ಅವಕಾಶವಿದೆ. ಈ ಮೊದಲು ವಿದ್ಯಾರ್ಥಿಯು ಕೋರ್ಸ್ ಅರ್ಧಕ್ಕೆ ಬಿಟ್ಟು, ಮರಳಿ ಸೇರಬೇಕೆಂದರೆ ಮೊದಲಿನಿಂದಲೇ ಆರಂಭಿಸಬೇಕಿತ್ತು. ಆದರೆ ನೂತನ ಪದ್ಧತಿಯಲ್ಲಿ ವಿದ್ಯಾರ್ಥಿ ಸ್ನೇಹಿಯನ್ನಾಗಿಸಲಾಗಿದೆ. ಇಷ್ಟು ಮಾತ್ರವಲ್ಲ, ಈಗ ಎನ್‌ಸಿಸಿ, ಎನ್‌ಎಸ್‌ಎಸ್, ಕ್ರೀಡೆ, ಸಂಗೀತ, ನಾಟಕಗಳನ್ನು ಆಯ್ಕೆ ಮಾಡಿಕೊಂಡು ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬಹುದು. ಇಲ್ಲಿನ ಸಾಧನೆ ಅಂಕಗಳು ಅಂತಿಮ ಫಲಿತಾಂಶಕ್ಕೆ ಸೇರುವುದರಿಂದ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಾಗಲಿದೆ.

ಪ್ರೊ. ಕೆ.ಬಿ. ಗುಡಸಿ, ಕುಲಪತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

'ಶಿಕ್ಷಣ ವ್ಯಾಪಾರೀಕರಣದ ಅಪಾಯ'

ರಾಷ್ಟ್ರೀಯ ಶಿಕ್ಷಣ ನೀತಿಯು ಕೇಂದ್ರ ಸರ್ಕಾರದ ಸಿದ್ಧಾಂತದಿಂದ ಪ್ರಭಾವಿತವಾಗಿದೆ. ಸಂಸತ್ತು ಮತ್ತು ಸಂಬಂಧಪಟ್ಟ ಜನರು ಹಾಗೂ ರಾಜ್ಯ ಸರ್ಕಾರಗಳೊಂದಿಗೆ ಪ್ರಜಾತಾಂತ್ರಿಕ ಚರ್ಚೆ ಮಾಡದೇ ಜಾರಿಗೊಳಿಸಲಾಗುತ್ತಿದೆ. ನಮ್ಮ ನವೋದಯ ಚಳವಳಿ, ಸ್ವಾತಂತ್ರ್ಯ ಹೋರಾಟದ ಶ್ರೀಮಂತ ಪರಂಪರೆಯನ್ನು ಎಲ್ಲಿಯೂ ಗುರುತಿಸಿಲ್ಲ. ಎನ್‌ಇಪಿಯು ವಾಣಿಜ್ಯೀಕರಣ, ಕೇಂದ್ರೀಕರಣ ಮತ್ತು ಶಿಕ್ಷಣದ ಕೋಮುವಾದವನ್ನು ಗುರಿಯಾಗಿರಿಸಿಕೊಂಡಿದೆ. ಇದು ತಾರತಮ್ಯ, ಬಡವರ ವಿರೋಧಿ ಮತ್ತು ಕಾರ್ಪೊರೇಟ್ ಪರವಾಗಿದೆ. ಶಿಕ್ಷಣವು ಸರ್ಕಾರಿ ಮತ್ತು ಖಾಸಗಿಯವರ ಜವಾಬ್ದಾರಿಯಾಗಿದೆ ಎಂದು ಎನ್‌ಇಪಿ ಹೇಳುತ್ತಿರುವುದು ಆಘಾತಕಾರಿ.

ಎಚ್.ಟಿ.ಭರತಕುಮಾರ, ಶಿಕ್ಷಣ ತಜ್ಞ, ವಿಜಯಪುರ

ನೆಲಕ್ಕೆ ಅಂಟಿಕೊಂಡು ಜಾಗತಿಕವಾಗುವ ನೀತಿ

ರಾಷ್ಟ್ರೀಯ ಶಿಕ್ಷಣ ನೀತಿ ಬಹುವಾದ ಆಶಯಗಳನ್ನು ಒಳಗೊಂಡಿದೆ. ಇಪ್ಪತ್ತೊಂದನೇ ಶತಮಾನದ ಕೌಶಲಗಳನ್ನು ವಿದ್ಯಾರ್ಥಿ ಕೇಂದ್ರಿತವಾಗಿ ಕಲಿಸುವ ಯೋಚನೆ, ಯೋಜನೆಗಳಿವೆ.

ಅವುಗಳನ್ನು ಅರ್ಥೈಸಿಕೊಳ್ಳಲು ನಾಲ್ಕನೇ ಅಧ್ಯಾಯವನ್ನು ಬಿಡಿಯಾಗಿ, ಒಟ್ಟಾರೆ ನೀತಿಯನ್ನು ಇಡಿಯಾಗಿ ಅಧ್ಯಯನ ಮಾಡಿದಲ್ಲಿ ಆಶಯಗಳು ಮತ್ತು ಅನುಷ್ಠಾನದ ಜೈವಿಕ ಬೆಳವಣಿಗೆ ತಿಳಿಯುತ್ತದೆ. ಹಲವರು ಪರ–ವಿರೋಧಗಳನ್ನು ಮೇಲುಸ್ತರದಲ್ಲಿ ನೋಡಿಕೊಂಡ ಪ್ರತಿಕ್ರಿಯೆಗಳೇ ಹೆಚ್ಚಾಗಿ ಮಾಧ್ಯಮಗಳಲ್ಲಿ ಕಾಣುತ್ತಿರುವುದು ಬೇಸರದ ವಿಷಯ. ನಿವೃತ್ತ ಕುಲಪತಿಗಳು, ಪ್ರಾಧ್ಯಾಪಕರು, ಎಲ್ಲದರ ಮೇಲೂ ಮಾತಾಡುವ ಸಾಹಿತಿಗಳು ನೀತಿಯನ್ನು ಸಮಗ್ರವಾಗಿ ಅರಿಯದೆ ಪ್ರತಿಕ್ರಿಯಿಸಿ ಆರೋಗ್ಯಕರ ಚರ್ಚೆಯು ಹಾದಿ ತಪ್ಪುವಂತೆ ಮಾಡಿದ್ದು ನೋವಿನ ಸಂಗತಿ. ನೀತಿಯು ಭಾರತವನ್ನು ಈ ನೆಲಕ್ಕೆ ಬೆಸೆದು, ಸ್ಥಳೀಯ ಜಾನಪದ, ಜೀವನಕ್ಕೂ ಬೆಸೆಯುವುದರ ಜತೆಗೆ ಅಂತರರಾಷ್ಟ್ರೀಯ ಬೇಡಿಕೆಗೂ ಸಿದ್ಧಪಡಿಸುವಂತಿದೆ.

ಡಾ.ಹರಿಪ್ರಸಾದ್ ಜಿ.ವಿ.
ರಾಷ್ಟ್ರೀಯ ಶಿಕ್ಷಣ ನೀತಿ ಆಧಾರಿತ ಶಾಲಾ ಪಠ್ಯಕ್ರಮ ಅಧ್ಯಯನಕಾರರು, ಶಿವಮೊಗ್ಗ

ಅವಸರದ ಕ್ರಮ

ಹಲವು ವರ್ಷಗಳ ಬಳಿಕ ಶಿಕ್ಷಣ ನೀತಿ ಬದಲಾಗುವುದು ಸರಿ. ಆದರೆ, ರಾಜ್ಯದಲ್ಲಿ ಅವುಗಳನ್ನು ಜಾರಿ ಮಾಡಲು ಅವಸರ ಮಾಡಲಾಗಿದೆ ಹೊಸ ಶಿಕ್ಷಣ ನೀತಿಯಲ್ಲಿ ಕೆಲವು ಒಳ್ಳೆಯ ಅಂಶಗಳು ಇವೆ. ಇನ್ನು ಕೆಲವು ಅಂಶಗಳ ಬಗ್ಗೆ ತಿಳಿಯಬೇಕಿದೆ.

ಹೊಸ ನೀತಿ ಪ್ರಕಾರ ವಿದ್ಯಾರ್ಥಿಗಳು ತಮಗೆ ಇಷ್ಟವಾದ ವಿಷಯ ಆಯ್ಕೆ ಮಾಡಬಹುದು. ಇಷ್ಟವಾಗದ್ದನ್ನು ಬಿಡಬಹುದು. ಉದಾಹರಣೆಗೆ ಒಬ್ಬ ವಿದ್ಯಾರ್ಥಿ ಇತಿಹಾಸ, ಭೌತವಿಜ್ಞಾನ, ಸಂಗೀತ ಆಯ್ಕೆ ಮಾಡಿಕೊಳ್ಳಬಹುದು. ತರಗತಿಗೆ ಯಾವಾಗ ಬೇಕಾದರೂ ಬರಬಹುದು. ಆದರೆ, ನಮ್ಮ ಕಾಲೇಜುಗಳಲ್ಲಿ ಕಲಾವಿಭಾಗ ಅಂದರೆ ಕಲೆಯ ವಿಷಯಗಳನ್ನಷ್ಟೇ ಕಲಿಸಲಾಗುತ್ತಿದೆ. ಹಾಗಾಗಿ ಇಲ್ಲಿವರೆಗೆ ಯಾರು ಏನು ಕಲಿತರೂ ಆಳವಾಗಿ ಕಲಿಯುತ್ತಿದ್ದರು. ಯಾವಾಗ ಬೇಕಾದರೂ ಬಂದು ಹೋಗುವ ಪದ್ಧತಿ ನಮ್ಮದಲ್ಲ. ಸರಿಯಾದ ಸಮಯಕ್ಕೆ ಬರಬೇಕು ಎಂಬುದು ನಮ್ಮ ಶಿಕ್ಷಣದ ಶಿಸ್ತು.

ಅದಕ್ಕಾಗಿ ಮೊದಲು ಯಾವುದಾದರೂ ಒಂದು ವಿಶ್ವವಿದ್ಯಾಲಯವನ್ನು ಆಯ್ಕೆ ಮಾಡಿಕೊಂಡು, ಎರಡು ವರ್ಷ ಪರಾಂಬರಿಸಬೇಕು. ಹಿತ/ಅಹಿತಗಳ ಅಧ್ಯಯನಾ ನಂತರ ಉಳಿದೆಡೆ ಜಾರಿ ಮಾಡುವುದು ಸರಿಯಾದ ಮಾರ್ಗ.

ಡಾ. ಎಂ.ಜಿ. ಈಶ್ವರಪ್ಪ, ಶಿಕ್ಷಣ ತಜ್ಞರು, ದಾವಣಗೆರೆ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರು ಮಾಡಿದ್ದಾರೆ ಎನ್ನಲಾದ ಟ್ವೀಟ್ ಬಗ್ಗೆ ಚರ್ಚೆಯಾಗುತ್ತಿದೆ. 'ಬಿಎಸ್‌ಎನ್‌ಎಲ್ ಮುನ್ನಡೆಸಲು ಸಾಧ್ಯವಾಗದವ, ರೈಲ್ವೆ, ವಿಮಾನ ನಿಲ್ದಾಣಗಳನ್ನು ಕಾರ್ಯಾಚರಣೆ ನಡೆಸಲು ಸಾಧ್ಯವಾಗದ ವ್ಯಕ್ತಿಯೊಬ್ಬ ದೇಶವನ್ನು ನಡೆಸುತ್ತಾನೆ ಎಂದು ಅಂಧಭಕ್ತನೊಬ್ಬ ಹೇಳುತ್ತಾನೆ' ಎಂಬ ಉಲ್ಲೇಖ ಆ ಟ್ವೀಟ್‌ನಲ್ಲಿದೆ. 'ತನ್ನ ಹೆಂಡತಿಯನ್ನು ನೋಡಿಕೊಳ್ಳಲು ಸಾಧ್ಯವಾಗದವರು ದೇಶವನ್ನು ಮುನ್ನಡೆಸುತ್ತಾರೆ' ಎಂದು ಟ್ವಿಟರ್ ಬಳಕೆದಾರರೊಬ್ಬರು ರೀಟ್ವೀಟ್ ಮಾಡುವಾಗ ಉಲ್ಲೇಖಿಸಿದ್ದಾರೆ.

ಡಾ. ಮನಮೋಹನ್ ಸಿಂಗ್ ಅವರು ಈವರೆಗೆ ಟ್ವಿಟರ್ ಖಾತೆ ತೆರೆದಿಲ್ಲ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ಸ್ಪಷ್ಟಪಡಿಸಿದೆ. ಖಾತೆಯ ಪರಿಚಯದಲ್ಲಿ 'ವಿಡಂಬನಾ ಖಾತೆ' ಎಂದು ಉಲ್ಲೇಖಿಸಲಾಗಿದೆ. ಕಾಂಗ್ರೆಸ್‌ನ ಸಾಮಾಜಿಕ ಜಾಲತಾಣ ವಿಭಾಗದ ಸಂಚಾಲಕ ಸರಳ್ ಪಟೇಲ್ ಅವರು ಇದನ್ನು ಈ ಹಿಂದೆಯೇ ಸ್ಪಷ್ಟಪಡಿಸಿದ್ದಾರೆ. ಸಿಂಗ್ ಅವರ ಹೆಸರಿನಲ್ಲಿ ನಕಲಿ ಖಾತೆಗಳನ್ನು ತೆರೆದು ಟ್ವೀಟ್ ಮಾಡಲಾಗಿದೆ. ಒಂದು ವೇಳೆ ಖಾತೆ ಅವರದ್ದೇ ಆಗಿದ್ದರೆ ಅದಕ್ಕೆ ಬ್ಲೂಟಿಕ್ ಇರಬೇಕಿತ್ತು. ನಕಲಿ ಖಾತೆಗಳನ್ನು ಹಿಂಬಾಲಿಸಬೇಡಿ ಎಂದು ಪಟೇಲ್ ಮನವಿ ಮಾಡಿದ್ದಾರೆ.

ಗುಂಡಣ್ಣ

ಬೆರಗಿನ ಬೆಳಕು
ಗುರುರಾಜ ಕರಜಗಿ

ನಿಷ್ಠಾ ಸಮನ್ವಯ

ತಾಯೊ ತಂಗಿಯೊ ಎನಿಪ ಶುಚಿಯ ಸೌಮ್ಯದ ಸೊಬಗು |
ಪ್ರೇಯಸಿಯ ಕರೆವೊಲಾತರವಡಿಪ ಬೆಡಗು ||
ಈಯೆರಡು ಸಮದ ರುಚಿ ನಿನ್ನನಿಬ್ಬಗೆಗೊಳಿಸೆ |
ಧ್ಯೇಯ ನಿನಗಾವುದೆಲೊ ? - ಮಂಕುತಿಮ್ಮ || 453 ||

ಪದ-ಅರ್ಥ: ಕರೆವೊಲಾತುರವಡಿಪ = ಕರೆವವೊಲು (ಕರೆಯುವ ರೀತಿಯಂತೆ) + ಆತುರವಡಿಪ (ಆತುರಪಡಿಸುವ), ನಿನ್ನನಿಬ್ಬಗೆಗೊಳಿಸೆ = ನಿನ್ನನ್ನು + ಇಬ್ಬಗೆಗೊಳಿಸೆ

ವಾಚ್ಯಾರ್ಥ: ತಾಯಿ, ತಂಗಿಯ ವಿಷಯದಲ್ಲಿರುವ ಸೌಂದರ್ಯದ ಸೊಬಗು ಸೌಮ್ಯವಾದದ್ದು ಮತ್ತು ಶುಚಿಯಾದದ್ದು. ಪ್ರೇಯಸಿಯ ಸೊಬಗು ಮಾತ್ರ ಅವಳ ಕರೆಯಂತೆ ಆತುರಪಡಿಸುವುದು. ಅದೊಂದು ಬೆಡಗು. ಈ ಎರಡೂ ಬಗೆಯ ಸೌಂದರ್ಯಗಳು ನಿನ್ನನ್ನು ವಿಭಿನ್ನವಾಗಿ ಸೆಳೆದಾಗ ನಿನ್ನ ಧ್ಯೇಯವಾವುದು?

ವಿವರಣೆ: ಸೃಷ್ಟಿಯಲ್ಲಿರುವ ಪ್ರೀತಿ ಸಹಜವಾದದ್ದು. ಈ ಪ್ರೀತಿಗೆ ಹಲವು ಮುಖಗಳು. ಪ್ರೀತಿ ತಲುಪಬಹುದಾದ ಅತ್ಯಂತ ಎತ್ತರದ, ಅತ್ಯಂತ ಉತ್ಕಟದ, ಅತ್ಯಂತ ನಿಷ್ಕಾಮ ಮತ್ತು ಅತ್ಯಂತ ನಿರ್ಮಲ ಸ್ಥಿತಿಯನ್ನು ತಾಯಿಯಲ್ಲಿ ಕಾಣಬಹುದು. ಅದನ್ನು ತಾಯಿಯಲ್ಲಷ್ಟೇ ಕಾಣಬಹುದು. ಅದು ವಾತ್ಸಲ್ಯಭಾವ. ಕಕ್ಕುಲತೆ ಎನ್ನುವುದು ಅಣ್ಣ- ತಂಗಿ, ಅಕ್ಕ-ತಮ್ಮ, ಅಣ್ಣ-ತಮ್ಮ, ಅಕ್ಕ-ತಂಗಿ, ಹೀಗೆ ಒಡಹುಟ್ಟಿದವರ ನಡುವೆ ಇರುವ ಪ್ರೀತಿ. ಅದಕ್ಕೂ ಅಗಾಧವಾದ ಶಕ್ತಿ ಇದೆ. ಸ್ನೇಹ ಎನ್ನುವುದು, ಹೆಸರೇ ಹೇಳುವಂತೆ ಸ್ನೇಹಿತರ ಮಧ್ಯೆ ವಿಜೃಂಭಿಸಬಲ್ಲ ಭಾವದ್ರವ್ಯ. ಒಂದೇ ಊರು, ಭಾಷೆ, ಒಂದೇ ರೀತಿಯ ಆಚಾರ–ವಿಚಾರಗಳೂ ಬಾಂಧವ್ಯ ಪ್ರೀತಿಯಡಿ ಹೃದಯಗಳನ್ನು ಬಂಧಿಸುತ್ತವೆ. ಮಣ್ಣು, ಸಂಸ್ಕೃತಿಯ ಅಭಿಮಾನ ದೇಶಪ್ರೇಮವಾಗುವುದು ಪ್ರೀತಿಯ ಮತ್ತೊಂದು ಮುಖ.

ಮತ್ತೊಂದು ರಭಸದ, ಆತುರದ ಪ್ರೀತಿ, ಹದಿಹರೆಯದಲ್ಲಿ ಉಕ್ಕುವಂಥದ್ದು. ಅದು ಪ್ರಮುಖವಾಗಿ ದೇಹಾಕರ್ಷಣೆಯುಳ್ಳದ್ದು. ಅದನ್ನು ಪ್ರಣಯ ಪ್ರೀತಿ ಎನ್ನಬಹುದು. ಅದರ ಸೆಳೆತ, ಬೆಡಗು ತುಂಬ ಹೆಚ್ಚು. ಇಷ್ಟು ತರಹದ ಪ್ರೀತಿಗಳಲ್ಲಿ ಯಾವುದು ಸರಿ, ಯಾವುದು ಹೆಚ್ಚು ಪ್ರಬಲವಾದದ್ದು? ಪ್ರತಿಯೊಂದು ಪ್ರೀತಿಯೂ ಅದರದೇ ಆದ ಸಂದರ್ಭದಲ್ಲಿ ಸರಿಯಾದದ್ದೇ. ಆದರೆ ಅವುಗಳ ನಡುವೆ ತಾಕಲಾಟ ಬಂದರೆ? ಇದೇ ಪ್ರಶ್ನೆಯನ್ನು ಕಗ್ಗ ಕೇಳುತ್ತದೆ. ತಾಯಿ ಅಥವಾ ಸಹೋದರಿಯ ಪ್ರೀತಿ ತುಂಬ ಶುಚಿಯಾದದ್ದು. ಅದರದು ಸೌಮ್ಯದ ಸೊಗಸು. ಪ್ರೇಯಸಿಯ ಕರೆ ಸೌಮ್ಯವಾದದ್ದಲ್ಲ. ಅದು ಉದ್ವೇಗದ್ದು, ಆತುರದ್ದು, ತೀವ್ರವಾದ ಸೆಳೆತವುಳ್ಳದ್ದು. ಇವೆರಡೂ ಇಬ್ಬಗೆಯಾಗಿ ನಮ್ಮನ್ನು ವಿರುದ್ಧವಾಗಿ ಎಳೆದಾಡಿದಾಗ ನಮ್ಮ ಅವಸ್ಥೆ ಏನಾದೀತು? ಯಾವುದರೆಡೆಗೆ ನಾವು ಮನಸ್ಸನ್ನು ನೀಡಬೇಕು? ಇದಕ್ಕೆ ಉತ್ತರವಾಗಿ ಇದೇ ಸರಿಯೆಂದು ಹೇಳಲಾಗುವುದಿಲ್ಲ. ನಮ್ಮ ಜೀವನದ ನಿಷ್ಠೆಗಳಲ್ಲಿ ಯಾವದೊಂದನ್ನು ಬಿಡಲಾಗುವುದಿಲ್ಲ. ಯಾವುದನ್ನು ಮಿತಿ ಮೀರಿ ಬೆಳೆಸಲಾಗುವುದಿಲ್ಲ. ಈ ಮಿತಿ ವಿವೇಚನೆಯ ಮೂಲಕ ಸಾಧಿಸಬಹುದಾದ ನಿಷ್ಠಾಸಮನ್ವಯ-ವೇ ಅದಕ್ಕೊಂದು ಉಪಾಯ. ಮಾಸ್ತಿಯವರನ್ನು ತರುಣಿಯೊಬ್ಬಳು ತುಂಟತನದಿಂದ ಕೇಳಿದಳು, 'ಸರ್, ನಿಮ್ಮ ಬದುಕಿನಲ್ಲಿ ಯಾವುದಾದರೂ ಹೆಣ್ಣನ್ನು ಪ್ರೀತಿಸಿದ್ದಿರಾ?' ಅವರು ಬಾಯಿ ತುಂಬ ನಕ್ಕು, 'ಹೌದಮ್ಮ, ನಾನು ಬಹಳ ಜನ ಹೆಣ್ಣುಮಕ್ಕಳನ್ನು ಪ್ರೀತಿಸಿದ್ದೇನೆ. ಅವರಲ್ಲಿ, ನನ್ನ ತಾಯಿ, ತಂಗಿ, ಮಗಳು, ಹೆಂಡತಿ ಎಲ್ಲರೂ ಸೇರಿದ್ದಾರೆ. ತಾಯಿಯ ಪ್ರೀತಿ, ಹೆಂಡತಿಯ ಪ್ರೇಮಕ್ಕೆ ಅಡ್ಡಬರಲಿಲ್ಲ, ಮಗಳ ಪ್ರೀತಿ, ತಂಗಿಯ ಒಲುಮೆಗೆ ಅಡಚಣೆಯಾಗಲಿಲ್ಲ'. ಇಬ್ಬಗೆಯಾಗಿ ಎರಡು ಪ್ರೀತಿಗಳು ಸೆಳೆದಾಗ ಈ ಸಮನ್ವಯವೇ ಸರಿಯಾದ ದಾರಿ. ❖

ದಿನ ಭವಿಷ್ಯ

ಬುಧವಾರ ಆಗಸ್ಟ್ 25, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಮಖಾ ತೃತೀಯ ಗಂ. 25-00 ಹ. 4-15) ಬುಧವಾರ ನಿತ್ಯ ನಕ್ಷತ್ರ ಉತ್ತರ ಭಾದ್ರ ಗಂ. 39-8 (ರಾ. 9-54) ಧೃತಿ ನಾಮ ಯೋಗ ಗಂ. 4-14 ಭದ್ರೆ ಕರಣ ಗಂ. 25-0 ವಿಷ ಗಂ. 1-55 ಅಮೃತ ಗಂ. 27-13 : ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 : ಸೂರ್ಯೋದಯ: 6-11 ಸೂರ್ಯಾಸ್ತ: 6-34 ಅದೃಷ್ಟ ಸಂಖ್ಯೆ 3 7

ಮೇಷ: ಸಮಯೋಚಿತವಾಗಿ ಕೈಗೊಂಡ ಕಾರ್ಯಗಳು ಸಂಪೂರ್ಣಗೊಂಡು ಹಿರಿಯಿಂದ ಪ್ರಶಂಸೆ. ಆರೋಗ್ಯದಲ್ಲಿ ಸುಧಾರಣೆ ಕಂಡುಕೊಳ್ಳುವಿರಿ. ಪ್ರಯಾಣದಲ್ಲಿನ ನೆಮ್ಮದಿಯನ್ನು ಸಂಪೂರ್ಣ ಪಡೆದುಕೊಳ್ಳಲಿದ್ದೀರಿ.

ವೃಷಭ: ಕೆಲಸ ಕಾರ್ಯಗಳಲ್ಲಿ ಅಡಚಣೆಗಳು ನಿವಾರಣೆಯಾಗಿ ಸುಗಮವಾಗಲಿವೆ. ಲೇವಾದೇವಿ ವ್ಯವಹಾರದಿಂದ ಅಧಿಕ ಲಾಭ. ಆಪ್ತರ ಭೇಟಿ ಸಂತಸ ನೀಡಲಿದೆ. ವಿಪರೀತ ಖರ್ಚು ಎದುರಾಗುವ ಸಾಧ್ಯತೆ.

ಮಿಥುನ: ಒತ್ತಡಗಳ ಪರಿಣಾಮವಾಗಿ ವಿರೋಧಿಗಳು ತಟಸ್ಥರಾಗಲಿದ್ದಾರೆ. ವಾಹನ, ಯಂತ್ರೋಪಕರಣಗಳಿಂದ ನೆಮ್ಮದಿಯ ಕೆಲಸ ಹೊಂದುವಿರಿ. ಕುಟುಂಬದಲ್ಲಿನ ಕಿರಿ ಕಿರಿಯಿಂದ ಹೊರಬಂದು ನೆಮ್ಮದಿ.

ಕರ್ಕಾಟಕ: ಕುಟುಂಬದ ಸದಸ್ಯರಲ್ಲಿ ಒಮ್ಮತ ಮೂಡುವುದರಿಂದ ನೆಮ್ಮದಿ ಮೂಡುವುದು. ಯಂತ್ರೋಪಕರಣಗಳಿಂದಾಗಿ ತೊಂದರೆ. ಬಹುದಿನಗಳಿಂದ ನಿರೀಕ್ಷಿಸುತ್ತಿದ್ದ ಸಂತಸದ ಸುದ್ದಿಯೊಂದನ್ನು ಸ್ವೀಕರಿಸಲಿದ್ದೀರಿ.

ಸಿಂಹ: ಕೆಲಸ ಕಾರ್ಯಗಳಲ್ಲಿ ಯಶಸ್ಸು. ಪ್ರೀತಿಪಾತ್ರರ ಭೇಟಿಯಿಂದಾಗಿ ನೆಮ್ಮದಿ. ವಿದ್ಯಾಭ್ಯಾಸದಲ್ಲಿ ಸಫಲತೆ. ವಿವಾದಗಳಲ್ಲಿ ಯಶಸ್ಸು ನಿಮ್ಮದಾಗಲಿದೆ. ಸಾಮಾಜಿಕ ಗೌರವಾದರಗಳು ದೊರಕುವ ಸಾಧ್ಯತೆ.

ಕನ್ಯಾ: ಶತ್ರುಭೀತಿಯು ದೂರವಾಗಿ ನಿರುಮ್ಮಳವೆನ್ನಿಸಲಿದೆ. ವ್ಯವಹಾರಗಳಲ್ಲಿ ಮಕ್ಕಳ ಸಹಕಾರ ದೊರೆಯುವುದು. ಆತ್ಮೀಯರೊಂದಿಗೆ ಸಮಾಲೋಚನೆಯನ್ನು ನಡೆಸುವುದರಿಂದ ನೆಮ್ಮದಿ ಇಮ್ಮಡಿಗೊಳ್ಳಲಿದೆ.

ತುಲಾ: ಅನಿರೀಕ್ಷಿತ ಪ್ರಯಾಣ ಎದುರಾಗಲಿದೆ. ವೃತ್ತಿ ವ್ಯವಹಾರಗಳಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ. ಆರೋಗ್ಯದಲ್ಲಿ ಸುಧಾರಣೆ. ಬಂಧು–ಬಾಂಧವರ ಭೇಟಿಯಿಂದಾಗಿ ನೆಮ್ಮದಿ.

ವೃಶ್ಚಿಕ: ವ್ಯಾಪಾರ ವ್ಯವಹಾರಗಳಲ್ಲಿನ ಲಾಭ ವೃದ್ಧಿಯಾಗಲಿದೆ. ಹರ್ಷ ಮೂಡಿಸುವ ಸಂದೇಶಗಳನ್ನು ಕೇಳುವ ಭಾಗ್ಯ ನಿಮ್ಮದಾಗಲಿದೆ. ಬರಬೇಕಾದ ಬಾಕಿ ಹಣ ಬರಲಿದೆ.

ಧನು: ಉದ್ಯೋಗ ಕ್ಷೇತ್ರದಲ್ಲಿ ಒತ್ತಡ. ವಿಪರೀತ ಶ್ರಮವಹಿಸಿ ಕಾರ್ಯನಿರ್ವಹಿಸುವುದರಿಂದಾಗಿ ದೇಹಾಲಾಸ್ಯ ಉಂಟಾಗಲಿದೆ. ಅನಾವಶ್ಯಕ ಓಡಾಟ ಸಾಧ್ಯತೆ. ಸಂಗಾತಿಯ ಸಹಕಾರದಿಂದ ನೆಮ್ಮದಿ.

ಮಕರ: ಉದ್ಯೋಗದಲ್ಲಿ ಸಂತಸ ಮೂಡುವುದು. ವಿರೋಧಿಗಳಿಂದ ಒತ್ತಡವನ್ನು ಎದುರಿಸಬೇಕಾದೀತು. ಕುಟುಂಬ ವರ್ಗದವರಲ್ಲಿ ಸಣ್ಣಪುಟ್ಟ ಮನಸ್ತಾಪ ಎದುರಾಗುವ ಸಾಧ್ಯತೆ.

ಕುಂಭ: ಅನುಮಾನಗಳು ಬಗೆಹರಿಯುವುದರೊಂದಿಗೆ ಕೆಲಸ ಕಾರ್ಯಗಳು ಸರಾಗವಾಗಿ ನಡೆಯುವುದರಿಂದ ಸಂತಸ. ಭೂ ವ್ಯವಹಾರದಲ್ಲಿ ಹಿರಿಯರ ಸಲಹೆ ಪಡೆದು ಮುಂದುವರೆಯುವುದು ಒಳಿತು.

ಮೀನ: ವೃತ್ತಿಜೀವನದಲ್ಲಿ ಪ್ರಗತಿ ಕಾಣುವಿರಿ. ಅಧ್ಯಯನ ನಿರತರು ಮೇಲುಗೈ ಸಾಧಿಸಲಿದ್ದೀರಿ. ಅಸ್ಥಿರ ಮನಸ್ಸಿನಿಂದಾಗಿ ಭಯ ಮೂಡುವ ಸಾಧ್ಯತೆ ಕಂಡುಬರುತ್ತಿದೆ. ಪ್ರೀತಿಪಾತ್ರರೊಂದಿಗಿನ ಸಮಾಲೋಚನೆಯಿಂದ ನೆಮ್ಮದಿ.

ನಿಮ್ಮ ಜನ್ಮದಿನ 25-ಆಗಸ್ಟ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಆರ್ಥಿಕ ಅನುಕೂಲತೆಗಾಗಿ ಸ್ನೇಹಿತರ ಸಹಕಾರದಿಂದ ಹೊಸ ಯೋಜನೆಯೊಂದನ್ನು ಕೈಗೊಳ್ಳಲಿದ್ದೀರಿ. ಸಂಗಾತಿಯ ವಿಶ್ವಾಸ ವೃದ್ಧಿಯೊಂದಿಗೆ ಉತ್ತಮ ದಾಂಪತ್ಯ ನಿಮ್ಮದಾಗಲಿದೆ. ವಿವಾಹಾಕಾಂಕ್ಷಿಗಳಿಗೆ ಅನುಕೂಲಕರ ದಿನಗಳು ಸಮೀಪದಲ್ಲಿವೆ.

ಪದಬಂಧ 4699
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮೂಲಧನವಿದು (4)
3.ವೇದನೆಯಿಂದ ಕೂಡಿರುವ ಅನಿಸಿಕೆ! (4)
5.ತರ್ಕ ಮಾಡುತ್ತಿರುವ ವ್ಯಾಪಾರಿ (3)
6.ಅಬಲೆಯಲ್ಲಿರುವ ಜಾಲ ಉಲ್ಟಾಪಲ್ಟಾ ಆಗಿದೆ (2)
8.ಗುರುಗುಟ್ಟುತ್ತಿರುವ ಗಂಡು ಕುರಿ (3)
10.ರಸಸ್ವಾದನೆಯನ್ನು ಬಲ್ಲವನು (3)
13.ಕನಸಲ್ಲಿ ಕಾಣಿಸಿದ ಕೊಳೆ (2)
15.ಮಾತು ಕೇಳುವ ಸೋದರ ಮಾವ (3)
16.ಉಲ್ಟಾ ಆಗಿರುವ ಗಾದೆ ಮಾತು (4)
17.ಹಸ್ತಕೊನೆಗಿದ್ದಾಗ ನಿಪುಣ ಕಾಣುವನೇ? (4)

ಮೇಲಿಂದ ಕೆಳಕ್ಕೆ
1.ದೊಡ್ಡ ಮನೆ ಇಲ್ಲಿದೆ (3)
2.ಕಳವಳದಿಂದ ತಿರುಗಿತಿಂದಿರುವ ತುತ್ತು (3)
3.ನೋವು ಹೀಗೆ ಬಂದಿದೆ (3)
7.ಉಪಯೋಗಿಸುವವನು ಬರದಲ್ಲಿದ್ದಾನೆ (5)
9.ದುಃಖಾಂತವಾದ ನಾಟಕ (5)
11.ಅರ್ಧ ಚಂದ್ರಾಕೃತಿ ರಚನೆ (3)
12.ಆಲದ ಮರಕ್ಕೊರಗಿರುವ ಸೋಮಾರಿ! (3)
14.ಸಕಲ ಅಥವಾ ಸಂಪೂರ್ಣ (3)



4698ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಾದಕ 3.ಬಾಲಕ 5.ರವಿಕಿರಣ 7.ತ್ರಮಿ 9.ಅಚ್ಚು 10.ಹಾಲು 12.ಲೆನೆ 14.ಹಯವದನ 16.ಲವಣ 17.ರವಾನೆ

ಮೇಲಿಂದ ಕೆಳಕ್ಕೆ: 1.ವಾಯುಪುತ್ರ 2.ಕರ 3.ಬಾಣ 5.ಕಲಗಚ್ಚು 6.ಕಿಟಕಿ 8.ಮಿಗಿಲು 9.ಅಬಲೆ 10.ಹಾಲಾಹಲ 11.ಸಂಭವ 13.ನೆರೆಮನೆ 14.ಹಣ 15.ನರ

ಸುಡೊಕು 5085

	6		8				1	
2							7	
		4	9		2	8		6
3		6				5		9
	7		3	2	4		8	
		1				3		7
4			6		1		9	
	3				5			8
6		8	2				5	4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5084 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ನವ ಕರ್ನಾಟಕ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾಡಬೇಕಾದುದೇನು?

‘ಶಾಸಕ ನಿಷ್ಠ ಅಲ್ಲ, ಜನನಿಷ್ಠ ಮುಖ್ಯಮಂತ್ರಿ ಆಗಲಿ’

ಬೆಂಗಳೂರು: ಬಸವರಾಜ ಬೊಮ್ಮಾಯಿ ಅವರು ತಮ್ಮ ಸ್ಥಾನ ಭದ್ರಪಡಿಸಿಕೊಳ್ಳಲು ಪಕ್ಷದ ಶಾಸಕರಿಗೆ ನಿಷ್ಠರಾಗುವ ಬದಲು ಜನನಿಷ್ಠ ಮುಖ್ಯಮಂತ್ರಿಯಾಗಿ ಹೊರಹೊಮ್ಮಲಿ. ಜನಪರ ಕಾರ್ಯಗಳ ಮೂಲಕ ಇತಿಹಾಸದಲ್ಲಿ ತಮ್ಮ ಹೆಸರನ್ನು ಅಚ್ಚೊತ್ತಲಿ. ಭ್ರಷ್ಟಾಚಾರ ಮುಕ್ತ ರಾಜ್ಯ ನಿರ್ಮಾಣದ ಪಣ ತೊಡಲಿ..

‘**ನವ ಕರ್ನಾಟಕ:** ಬೊಮ್ಮಾಯಿ ಮಾಡಬೇಕಾದುದೇನು’ ಎಂಬ ವಿಷಯ ಕುರಿತು ಮಂಗಳವಾರ ನಡೆದ ‘ಪ್ರಜಾವಾಣಿ ಸಂವಾದ’ದಲ್ಲಿ ಮೂಡಿಬಂದ ಅಭಿಪ್ರಾಯಗಳಿವು.

‘ನಾಯಕನಾದವನು ಜನಪರ ನಿಲುವು ತೆಗೆದುಕೊಳ್ಳುತ್ತಾ ಹೋದರೆ ಜನರು ಸಮರ್ಥಿಸಿಕೊಳ್ಳುತ್ತಾ ಹೋಗುತ್ತಾರೆ. ಆಗ ಶಾಸಕರಲ್ಲಿ ಭಯ ಸೃಷ್ಟಿಯಾಗುತ್ತದೆ. ಅಂತಹ ವಾತಾವರಣ ನಿರ್ಮಾಣ ಮಾಡಲಿ’ ಎಂಬ ಸಲಹೆಯೂ ಬಂತು.

ಪೂರ್ಣ ಸಂವಾದ ವೀಕ್ಷಿಸಲು:
https://fb.watch/7AxhlawkUr/

‘ಪ್ರತಿ ಹನಿ ನೀರು ಹೊಲಕ್ಕೆ ಮುಟ್ಟಬೇಕು’



‘ಚೆಲುವ ಕನ್ನಡ ನಾಡು ಕಟ್ಟುವ ಹಾದಿಯಲ್ಲಿ ಬೊಮ್ಮಾಯಿ ಎದುರು ಪ್ರಮುಖವಾಗಿ ಹತ್ತು ಸವಾಲುಗಳಿವೆ. ಬೆಂಗಳೂರಿನಲ್ಲಿ ಮೇಲ್ಸೇತುವೆ ನಿರ್ಮಾಣ ಹಾಗೂ ರಸ್ತೆಗಳಿಗೆ ವೈಟ್ ಟಾಪಿಂಗ್ ಮಾಡಿದರೆ ನವಕರ್ನಾಟಕ ನಿರ್ಮಾಣದ ಕನಸು ಈಡೇರದು. ನಮ್ಮಲ್ಲಿರುವ ಜಲ ಸಂಪನ್ಮೂಲದ ಸದ್ಬಳಕೆಯಾಗಬೇಕು. ಪ್ರತಿ ಹನಿ ನೀರನ್ನು ರೈತರ ಹೊಲಕ್ಕೆ ಮುಟ್ಟಿಸುವ ಕೆಲಸ ಮಾಡಬೇಕು. ಇನ್ನೂ 10 ಸಾವಿರ ಕಿ.ಮೀ. ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಾಗಬೇಕಿವೆ. ಅವುಗಳನ್ನು ಪೂರ್ಣಗೊಳಿಸಬೇಕು. 6 ಲಕ್ಷ ಕಿ.ಮೀ.ವರೆಗೆ ನಮ್ಮ ಹೊಲ ನಮ್ಮ ರಸ್ತೆ ನಿರ್ಮಾಣವಾಗಬೇಕಿದೆ. ಇವುಗಳು ಆದ್ಯತೆಯಾಗಬೇಕು’.

‘ಇತಿಹಾಸದಲ್ಲಿ ತಮ್ಮ ಹೆಸರು ಚಿರಸ್ಥಾಯಿಯಾಗಿ ಉಳಿಯುವಂತೆ ಮಾಡುವ ನಿಲುವನ್ನು ಬೊಮ್ಮಾಯಿ ಅವರು ತೆಗೆದುಕೊಂಡರೆ 18 ತಿಂಗಳಲ್ಲೇ ಹಲವಾರು ಜನಪರ ಕೆಲಸಗಳನ್ನು ಮಾಡಬಹುದು. ರಾಜಕೀಯ ಇಚ್ಛಾಶಕ್ತಿ ತೋರಿದರೆ ಯಾವುದೂ ಅಸಾಧ್ಯವಲ್ಲ. ಉದ್ಯೋಗ ಸೃಷ್ಟಿಗೆ ಅನುಕೂಲವಾಗುವಂತಹ ಹೊಸ ಹೊಸ ಯೋಜನೆಗಳನ್ನು ಜಾರಿಗೊಳಿಸಲಿ. ರೈತರನ್ನು ಶೋಷಣೆಗಳಿಂದ ಮುಕ್ತರನ್ನಾಗಿಸುವ ದಿಶೆಯಲ್ಲಿ ಕೆಲಸ ಮಾಡಲಿ’.

ಎಚ್.ಕೆ.ಪಾಟೀಲ, ಶಾಸಕ ಹಾಗೂ ಕಾಂಗ್ರೆಸ್ ನಾಯಕ.

ಪ್ರಜಾವಾಣಿ ಸಂವಾದ

‘ದಿಟ್ಟ ನಿರ್ಧಾರಗಳನ್ನು ಕೈಗೊಳ್ಳಲಿ’



‘ಮುಖ್ಯಮಂತ್ರಿಯಾದವರಿಗೆ ತಮ್ಮ ಮೇಲೆ ಅಪರಿಮಿತ ವಿಶ್ವಾಸ ಇರಬೇಕು. ಅವರು ಮತ್ತೊಬ್ಬರ ಕೈಗೊಂಬೆಯಂತೆ ವರ್ತಿಸಬಾರದು. ಅವರಿಗೆ ಗುರಿಯ ಬಗ್ಗೆ ಸ್ಪಷ್ಟತೆಯೂ ಇರಬೇಕು. ಮುಖ್ಯಮಂತ್ರಿಯಾದವರೆಲ್ಲಾ ಇತಿಹಾಸದ ಪುಟ ಸೇರಿಲ್ಲ. ತಾವೊಬ್ಬ ಮಾದರಿ ಹಾಗೂ ಜನಾನುರಾಗಿ ಮುಖ್ಯಮಂತ್ರಿಯಾಗುವ ದಿಕ್ಕಿನಲ್ಲಿ ಬೊಮ್ಮಾಯಿ ಅವರು ಕೆಲಸ ಮಾಡಲಿ’.

‘ಬೊಮ್ಮಾಯಿ ಅವರು ಇದುವರೆಗೂ ಒಂದೇ ಒಂದು ಪ್ರಮುಖ ನಿರ್ಧಾರ ಕೈಗೊಂಡಿದ್ದಾರೆಯೇ. ಅವರಿಗೆ ಮುಖ್ಯಮಂತ್ರಿ ಗಾದಿ ಬಯಸದೇ ಬಂದಿರುವ ಭಾಗ್ಯ. ಇನ್ನಾದರೂ ಅವರು ದಿಟ್ಟ ನಿರ್ಣಯಗಳನ್ನು ಕೈಗೊಳ್ಳಲಿ. ಜಿಲ್ಲಾವಾರು ಕೃಷಿ ಬೆಲೆ ಆಯೋಗಗಳನ್ನು ಸ್ಥಾಪಿಸಲಿ, ದೆಹಲಿ ಮಾದರಿಯಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಆಮೂಲಾಗ್ರ ಬದಲಾವಣೆ ತರಲು ಪ್ರಯತ್ನಿಸಲಿ’.

‘ಭ್ರಷ್ಟಾಚಾರಕ್ಕೆ ಆದಿ, ಅಂತ್ಯ ಎಂಬುದಿಲ್ಲ. ರಾಜಕೀಯ ಪಕ್ಷಗಳನ್ನು ಒಳಗೊಂಡು ಚುನಾವಣಾ ಸುಧಾರಣೆಗಳನ್ನು ಜಾರಿಗೊಳಿಸಬೇಕು. ಪಂಚಾಯತ್ ವ್ಯವಸ್ಥೆ ತಂದಿದ್ದ ಸುಧಾರಣೆಗಳನ್ನು ಮರು ಜಾರಿಗೊಳಿಸುವ ಕೆಲಸ ಮಾಡಲಿ. ಎಲ್ಲರೂ ಪಕ್ಷಬೇಧ ಮರೆತು ಇದನ್ನು ಬೆಂಬಲಿಸಬೇಕು’.

ಕೆ.ಆರ್.ರಮೇಶ್ ಕುಮಾರ್, ಶಾಸಕ, ಕಾಂಗ್ರೆಸ್ ನಾಯಕ.

‘ಸರ್ಕಾರಿ ಶಾಲೆ ಹಾಗೂ ಆಸ್ಪತ್ರೆಗಳ ಅಭಿವೃದ್ಧಿಯೇ ಆದ್ಯತೆಯಾಗಲಿ’

‘ಕೃಷ್ಣಾ ಮತ್ತು ಭದ್ರಾ ಯೋಜನೆಗಳನ್ನು ರಾಷ್ಟ್ರೀಯ ಯೋಜನೆಗಳೆಂದು ಘೋಷಿಸುವಂತೆ ನಮ್ಮ ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಿತ್ತು. ಇವುಗಳನ್ನು ಮಂಜೂರು ಮಾಡಿಸಿಕೊಂಡು ಬರುವ ಇಚ್ಛಾಶಕ್ತಿಯನ್ನು ಮುಖ್ಯಮಂತ್ರಿಯವರು ತೋರಬೇಕು’.

‘ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಸಾವಿರಾರು ಲೋಪಗಳಿವೆ. ಅದರಿಂದ ಕನ್ನಡಕ್ಕೆ ಕುತ್ತು ಎದುರಾಗಲಿದೆ. ಹೀಗಿದ್ದರೂ ಮುಖ್ಯಮಂತ್ರಿಯವರ ಕೈ ಕಟ್ಟಿಹಾಕಿ ಇದನ್ನು ತರಾತುರಿಯಲ್ಲಿ ಅನುಷ್ಠಾನಗೊಳಿಸಲಾಗಿದೆ. ಸರ್ಕಾರಿ ಶಾಲೆ ಹಾಗೂ ಆಸ್ಪತ್ರೆಗಳು ಬಲವರ್ಧನೆಯಾಗಬೇಕು. ಇದು ಸರ್ಕಾರದ ಪ್ರಮುಖ ಆದ್ಯತೆಯಾಗಲಿ. ಜಿಲ್ಲಾ ಮುಖ್ಯ ರಸ್ತೆಗಳು ಹಾಗೂ ಗ್ರಾಮೀಣ ಭಾಗಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳ ನಿರ್ಮಾಣಕ್ಕೂ ಒತ್ತು ನೀಡಬೇಕು. ಸಚಿವರು ಸುಲಭವಾಗಿ ಜನರಿಗೆ ಸಿಗುವಂತಾಗಬೇಕು’.

‘ಪ್ರಾದೇಶಿಕತೆಗೆ ಒತ್ತು ನೀಡುವ, ರಾಜ್ಯದ ಅಸ್ಮಿತೆ ಮತ್ತು ಸ್ವಾಭಿಮಾನ ಕಾಪಾಡುವಂತಹ, ಸಮಗ್ರ ಹಾಗೂ ಮಾದರಿ ಕರ್ನಾಟಕ ನಿರ್ಮಾಣದ ಅಪೇಕ್ಷೆ ಎಲ್ಲರಿಗಿದೆ. ಆ ದಿಸೆಯಲ್ಲಿ ಬೊಮ್ಮಾಯಿ ಅವರು ಕೆಲಸ ಮಾಡಲಿ. ತಾವು ಜನನಿಷ್ಠ ಮುಖ್ಯಮಂತ್ರಿ ಎಂಬ ಸಂದೇಶವನ್ನು ಹೈಕಮಾಂಡ್‌ಗೆ ರವಾನಿಸಲಿ. ಖಾಸಗೀಕರಣದ ವಿಚಾರದಲ್ಲಿ ಹೈಕಮಾಂಡ್ ಎದುರು ಮಂಡಿಯೂರದಿರಲಿ’.

ವೈ.ಎಸ್.ವಿ.ದತ್ತ, ಜೆಡಿಎಸ್ ನಾಯಕ.

‘ರೈತರ ಬೆಳೆಗೆ ಬೆಂಬಲ ಬೆಲೆ ಘೋಷಿಸಲಿ’

‘ತಾವು ಸ್ಥಿರ ಆಡಳಿತ ನೀಡಲು ಬದ್ಧ ಎಂಬ ಭಾವನೆಯನ್ನು ಜನರ ಮನಸ್ಸಿನಲ್ಲಿ ಬಿತ್ತುವ ಕೆಲಸವನ್ನು ಬೊಮ್ಮಾಯಿ ಅವರು ಮೊದಲು ಮಾಡಬೇಕು. ನಾಡು, ನುಡಿ, ಗಡಿ, ಜಲ ಹೀಗೆ ಅನೇಕ ಸವಾಲುಗಳು ಅವರ ಎದುರಿಗಿವೆ. ಆರೋಗ್ಯ ಕ್ಷೇತ್ರದ ಬಲವರ್ಧನೆಗೆ ಹೆಚ್ಚಿನ ಮನ್ನಣೆ ನೀಡಬೇಕಿದೆ’.

‘ರೈತರು ಬೆಳೆದ ಬೆಳೆಗೆ ಬೆಂಬಲ ಬೆಲೆ ಘೋಷಿಸುವ ಕೆಲಸ ಬಹುಮುಖ್ಯವಾಗಿ ಆಗಬೇಕು. ರೈತರು, ಕೂಲಿಕಾರ್ಮಿಕರ ಕಷ್ಟಗಳನ್ನು ದೂರ ಮಾಡಬೇಕು. ಕನ್ನಡ ಭಾಷೆಯ ಬೆಳವಣಿಗೆಗೆ ಅಗತ್ಯವಿರುವ ಯೋಜನೆಗಳನ್ನು ರೂಪಿಸಬೇಕು. ನೀರಾವರಿ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿರುವ ಬೊಮ್ಮಾಯಿ ಅವರು ಕೃಷ್ಣಾ ಮೇಲ್ದಂಡೆ, ಮೇಕೆದಾಟು ಯೋಜನೆ ಸೇರಿದಂತೆ ಇತರೆ ನೀರಾವರಿ ಯೋಜನೆಗಳಿಗೆ ಕಾಯಕಲ್ಪ ನೀಡಬೇಕು’.

ಬಂಡೆಪ್ಪ ಕಾಶೆಂಪೂರ, ಜೆಡಿಎಸ್ ಶಾಸಕಾಂಗ ಪಕ್ಷದ ಉಪ ನಾಯಕ.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಗ್ರೀನ್ ಟಾಕ್

ನಿಮ್ಮ ಕೆರೆ ನಮ್ಮ ಕರೆ



https://bit.ly/3mtxSaz

ಕನ್ನಡ ಧ್ವನಿ

ಪಾಡ್‌ಕಾಸ್ಟ್:
ದಿನದ ವಿಶೇಷ: ಋಣ ಋಣ ಕಾಂಚಾಣ
ಪ್ರತೀ ದಿನ: ವಚನವಾಣಿ, ದಿನದ ಸೂಕ್ತಿ, ಪ್ರಜಾವಾಣಿ ವಾರ್ತೆ, ಸಂಪಾದಕೀಯ, ಪ್ರಚಲಿತ

ನಾಳೆ

ಸಂವಾದ ಬೆಳಿಗ್ಗೆ 11ರಿಂದ 12

ಕ್ರೀಡಾ ಪ್ರಶಸ್ತಿ, ಸ್ಟೇಡಿಯಂಗಳಿಗೆ ರಾಜಕಾರಣಿಗಳ ಹೆಸರು ಬೇಕೇ? : ಭಾಗವಹಿಸುವವರು:
ಸಲೀಂ ಅಹ್ಮದ್, ಕಾರ್ಯಾಧ್ಯಕ್ಷ, ಕೆಪಿಸಿಸಿ.,
ಕ್ಯಾ. ಗಣೇಶ್ ಕಾರ್ಣಿಕ್, ಬಿಜೆಪಿ ರಾಜ್ಯ ವಕ್ತಾರ.,
ಎಂ.ಕೆ.ಆಶಾ, ಅಂತರರಾಷ್ಟ್ರೀಯ ಅಥ್ಲೀಟ್,
ಕೆ.ಸಿ.ರಘು, ನೀತಿ ವಿಶ್ಲೇಷಕ.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು ‘Deccan Herald-Prajavani Relief Trust’ ಹೆಸರಿಗೆ ಕಳುಹಿಸಬಹುದು.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

‘Deccan Herald-Prajavani Relief Trust’
Canara Bank, Cantonment Branch
A/c no. - ***0404101200385***
IFSC code - ***CNRB0000404***
MICR Code - ***560015009***

ಸೂಚನೆ: ದೇಣಿಗೆ ನೀಡುವವರು ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಕೊಡುಗೆ’ ಎಂದು ನಮೂದಿಸಲು ಮನವಿ.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್- ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು - 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಅರ್ಜಿ’ ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅನಿಸಿಕೆ

ಕಾಲೇಜಿನ ಪುಸ್ತಕ ತೆಗೆದುಕೊಂಡೆ

‘ಪ್ರಜಾವಾಣಿ’ ಸಂಸ್ಥೆ ನೀಡಿದ ಸ್ಕಾಲರ್‌ಶಿಪ್ ಹಣವನ್ನು ಪದವಿಪೂರ್ವ ಕಾಲೇಜಿನ ಪಠ್ಯಪುಸ್ತಕ ಹಾಗೂ ಸಮವಸ್ತ್ರ ಖರೀದಿಸಲು ಬಳಸಿಕೊಂಡಿದ್ದೇನೆ. ಕಷ್ಟಕಾಲದಲ್ಲಿ ಸ್ಕಾಲರ್‌ಶಿಪ್ ಹಣ ಬಂದಿದ್ದರಿಂದ ಅನುಕೂಲವಾಯಿತು.

ಸಾನಿಯಾ ಕೆ., ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ

ಕೋವಿಡ್ ಸಮಯದಲ್ಲಿ ಸಹಾಯ

ಕೋವಿಡ್ ಸಂಕಷ್ಟ ಸಮಯದಲ್ಲಿ ‘ಪ್ರಜಾವಾಣಿ’ಯಿಂದ ಬಂದ ಸಹಾಯಧನ ಕಾಲೇಜು ಶುಲ್ಕ ಪಾವತಿಸಲು ಸಹಾಯಕ್ಕೆ ಬಂತು. ಗ್ರಾಮೀಣ ಪ್ರದೇಶದ ಮಕ್ಕಳಿಗೆ ಪತ್ರಿಕೆಯು ಮಾಡುತ್ತಿರುವ ಸಹಾಯವನ್ನು ಮರೆಯಲು ಸಾಧ್ಯವಿಲ್ಲ. ನನ್ನ ಜವಾಬ್ದಾರಿಯೂ ಹೆಚ್ಚಿದ್ದು, ಚೆನ್ನಾಗಿ ಅಭ್ಯಾಸ ಮಾಡುತ್ತಿದ್ದೇನೆ.

ಎಸ್.ಎನ್.ಹರ್ಷಿತಾ, ಸಾಗ್ಯ, ಮಳವಳ್ಳಿ (ಮಂಡ್ಯ)

ಚಿನ್ನದ ರಥೋತ್ಸವ

ಮಂತ್ರಾಲಯದಲ್ಲಿ ಶ್ರೀರಾಘವೇಂದ್ರ ಸ್ವಾಮಿಗಳ ಮಧ್ಯಾರಾಧನೆ ದಿನದಂದು ಮಂಗಳವಾರ, ಮಠದ ಪ್ರಾಕಾರದಲ್ಲಿ ಚಿನ್ನದ ರಥೋತ್ಸವ ಸಂಭ್ರಮದಿಂದ ನೆರವೇರಿಸಲಾಯಿತು

-ಪ್ರಜಾವಾಣಿ ಚಿತ್ರ: ಶ್ರೀನಿವಾಸ ಇನಾಮದಾರ

ಕೇಂದ್ರದ ವಿವಿಧ ಸಚಿವರ ಜತೆ ಸಭೆ

ಬೊಮ್ಮಾಯಿ ಇಂದು ದೆಹಲಿಗೆ

ಪ್ರಜಾವಾಣಿ ವಾರ್ತೆ

ಬಸವರಾಜ ಬೊಮ್ಮಾಯಿ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬುಧವಾರ (ಆ.25) ಕ್ಕೆ ದೆಹಲಿಗೆ ತೆರಳಲಿದ್ದು, ಗುರುವಾರ (ಆ. 26) ಎಲ್ಲ ಕೇಂದ್ರ ಸಚಿವರನ್ನು ಭೇಟಿ ಮಾಡಿ ರಾಜ್ಯಕ್ಕೆ ಸಂಬಂಧಿಸಿದ ವಿಚಾರಗಳ ಬಗ್ಗೆ ಚರ್ಚಿಸಲಿದ್ದಾರೆ.

ಮಂತ್ರಿ ಮಂಡಲ ವಿಸ್ತರಣೆ ಮತ್ತು ಖಾತೆ ಹಂಚಿಕೆಯ ಬಳಿಕ ಇದೇ ಮೊದಲ ಬಾರಿಗೆ ಅವರು ದೆಹಲಿಗೆ ಭೇಟಿ ನೀಡುತ್ತಿದ್ದಾರೆ. ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಈ ವಿಷಯ ತಿಳಿಸಿದ ಅವರು, ‘ಎಲ್ಲ ಕೇಂದ್ರ ಸಚಿವರನ್ನು ಭೇಟಿ ಮಾಡಿ ರಾಜ್ಯ ಅಭಿವೃದ್ಧಿ ಬಗ್ಗೆ ಚರ್ಚಿಸಲಾಗುವುದು’ ಎಂದರು.

‘ಆರೋಗ್ಯ, ಹಣಕಾಸು, ಜಲಶಕ್ತಿ, ಕೃಷಿ ಮತ್ತು ರಕ್ಷಣಾ ಸಚಿವರ ಭೇಟಿಗೆ ಸಮಯ ಕೇಳಿದ್ದೇನೆ’ ಎಂದು ಹೇಳಿದರು.

ಜಲ ವಿವಾದ ಕಾನೂನು ತಜ್ಞರ ಸಭೆ: ಇದೇ ಸಂದರ್ಭದಲ್ಲಿ ಅಂತರರಾಜ್ಯ ಜಲವಿವಾದಗಳ ಬಗ್ಗೆ ನವದೆಹಲಿಯಲ್ಲಿ ಕಾನೂನು ತಜ್ಞರ ಜತೆ ಸಭೆ ನಡೆಸಲಾಗುವುದು ಎಂದು ಬೊಮ್ಮಾಯಿ ತಿಳಿಸಿದರು.

ರಾಜ್ಯ ಸರ್ಕಾರದ ಅಡ್ವೋಕೇಟ್ ಜನರಲ್, ರಾಜ್ಯದ ಹಿರಿಯ ವಕೀಲರು, ಕಾನೂನು ತಜ್ಞರು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಜಲ ವಿವಾದದ ಬಗ್ಗೆ ರಾಜ್ಯದ ಮುಂದಿನ ನಡೆಯ ಬಗ್ಗೆ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುವುದು’ ಎಂದರು.

ರಾಜ್ಯದ ನೆಲ, ಜಲ, ಭಾಷೆಯ ಹಿತರಕ್ಷಣೆಗೆ ಸರ್ವ ಪ್ರಯತ್ನ ನಡೆಸಲಾಗುವುದು. ಈ ವಿಷಯದಲ್ಲಿ ಯಾವುದೇ ರೀತಿಯ ಆತಂಕ ಬೇಡ ಎಂದು ಮುಖ್ಯಮಂತ್ರಿ ಹೇಳಿದರು.

ಕೋವಿಡ್ ನಿಯಂತ್ರಣ ಕುರಿತು ಈಗಾಗಲೇ ಇರುವ ತಜ್ಞರ ಸಮಿತಿ ಮುಂದುವರಿಯಲಿದೆ. ಕೇಂದ್ರ ವಿಪತ್ತು ನಿರ್ವಹಣಾ ಸಮಿತಿ ಅಕ್ಟೋಬರ್ ತಿಂಗಳು ರಾಜ್ಯಕ್ಕೆ ಬರಬಹುದು. ಮೂರನೇ ಅಲೆಯ ನಿಯಂತ್ರಣಕ್ಕೆ ಮುಂಜಾಗ್ರತಾ ಕ್ರಮಗಳ ಬಗ್ಗೆ ಚರ್ಚಿಸಲು ಕೋವಿಡ್ ತಜ್ಞರ ಸಮಿತಿ ಹಾಗೂ ಸಂಬಂಧಪಟ್ಟ ಸಚಿವರೊಂದಿಗೆ ಸಭೆ ನಡೆಸಲಾಗುವುದು ಎಂದು ಬೊಮ್ಮಾಯಿ ತಿಳಿಸಿದರು.

ಜಲಜೀವನ್ ಮಿಷನ್ ಮೇಲ್ವಿಚಾರಣೆಗೆ ಸಮಿತಿ ರಚನೆ: ಮುಖ್ಯಮಂತ್ರಿ

ಬೆಂಗಳೂರು: ‘ಜಲಜೀವನ್ ಮಿಷನ್ ಯೋಜನೆಯ ಅನುಷ್ಠಾನ ಚುರುಕುಗೊಳಿಸಲು, ಈ ಯೋಜನೆಯಡಿ ಕೈಗೆತ್ತಿಕೊಂಡಿರುವ ಬಹುಗ್ರಾಮ ಕುಡಿಯುವ ನೀರು ಯೋಜನೆಗಳ ಮೇಲ್ವಿಚಾರಣೆಗೆ ಸಮಿತಿ ರಚಿಸಬೇಕು’ ಎಂದು ಗ್ರಾಮೀಣಾಭಿವೃದ್ಧಿ ಇಲಾಖೆಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದರು.

ಜಲಜೀವನ್ ಮಿಷನ್ ಯೋಜನೆಯ ಪ್ರಗತಿ ಪರಿಶೀಲನೆ ನಡೆಸಿದ ಮುಖ್ಯಮಂತ್ರಿ, ‘ಪ್ರತಿ 15 ದಿನಗಳಿಗೊಮ್ಮೆ ಯೋಜನೆಯ ಪ್ರಗತಿ ಪರಿಶೀಲನೆ ನಡೆಸಬೇಕು. ಕಾಲ ಕಾಲಕ್ಕೆ ಸ್ಥಳ ಪರಿಶೀಲನೆ ನಡೆಸುವ ಮೂಲಕ, ಪರಿಣಾಮಕಾರಿ ಹಾಗೂ ತ್ವರಿತವಾಗಿ ಯೋಜನೆಯನ್ನು ಅನುಷ್ಠಾನಗೊಳಿಸಬೇಕು. ಪ್ರತಿ ತಿಂಗಳು ನಾನೇ ಯೋಜನೆಯ ಪ್ರಗತಿ ಪರಿಶೀಲನೆ ಮಾಡುತ್ತೇನೆ’ ಎಂದರು. ಮೇಲ್ಮೈ ಜಲಮೂಲ ಇಲ್ಲದ ಜಿಲ್ಲೆಗಳಿಗೆ ನೀರು ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ ಮುಖ್ಯಮಂತ್ರಿ, ‘2022-23ರ ಸಾಲಿಗೆ ಯೋಜನೆ ರೂಪಿಸಿ, ಅನುಮೋದನೆ ನೀಡುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು. ಪ್ರಸಕ್ತ ಸಾಲಿನ ಎಲ್ಲ ಡಿಪಿಆರ್‌ಗಳ ಅನುಮೋದನೆ ಪ್ರಕ್ರಿಯೆ ಅಕ್ಟೋಬರ್ ಒಳಗೆ ಪೂರ್ಣಗೊಳ್ಳಬೇಕು. ತೊಡಕುಗಳು ಎದುರಾದರೆ ಅದರ ನಿವಾರಣೆಗೆ ನಾನೇ ಕ್ರಮ ವಹಿಸುತ್ತೇನೆ’ ಎಂದೂ ಭರವಸೆ ನೀಡಿದರು.

15 ಬಾಲಕಾರ್ಮಿಕರ ರಕ್ಷಣೆ

ನಾಲತವಾಡ (ವಿಜಯಪುರ): ಸಮೀಪದ ಬಂಗಾರಗುಂಡ ಹೋಬಳಿ ಸುತ್ತಮುತ್ತ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿದ್ದ 15 ಕ್ಕೂ ಹೆಚ್ಚು ಬಾಲಕಾರ್ಮಿಕರನ್ನು ಮಂಗಳವಾರ ರಕ್ಷಿಸಲಾಗಿದೆ. ಕೆಲಸಕ್ಕೆ ನೇಮಿಸಿದ್ದ ಆರೋಪಿ ಕೃಷ್ಣರೆಡ್ಡಿ ಪರಾರಿಯಾಗಿದ್ದಾರೆ.

ಆರೋಪಿ ಆಂಧ್ರಪ್ರದೇಶ ಮೂಲದವರು. ಮಕ್ಕಳಿಗೆ ದಿನಕ್ಕೆ ₹200 ಕೂಲಿ ನೀಡಿ ಸಂಜೆವರೆಗೂ ದುಡಿಸಿಕೊಳ್ಳುತ್ತಿದ್ದ ಎನ್ನಲಾಗಿದೆ. ಅಧಿಕಾರಿಗಳು ಸ್ಥಳಕ್ಕೆ ಹೋಗುತ್ತಿದ್ದುದನ್ನು ಗಮನಿಸಿ ಆರೋಪಿ ಪರಾರಿಯಾಗಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಡಿಎಸ್‌ಎಸ್ ಅಂಬೇಡ್ಕರ್ ಸೇನೆಯ ರಾಜ್ಯ ಸಂಘಟನಾ ಸಂಚಾಲಕ ಮಲ್ಲು ತಳವಾರ ಅವರ ಮಾಹಿತಿ ಆಧರಿಸಿ ಸ್ಥಳಕ್ಕೆ ಮುದ್ದೇಬಿಹಾಳ ಕಾರ್ಮಿಕ ಇಲಾಖೆಯ ತಾಲ್ಲೂಕು ಅಧಿಕಾರಿ ಇನಾಂದಾರ್, ಗ್ರಾಮ ಲೆಕ್ಕಿಗ ಏಕನಾಥ ಸಾಲೋಟಗಿ, ಉಪತಹಶೀಲ್ದಾರ್ ಜಿ.ಎನ್. ಕಟ್ಟಿ ಇತರರು ಭೇಟಿ ನೀಡಿ ಮಕ್ಕಳನ್ನು ರಕ್ಷಿಸಿದರು.

‘ಹಲವು ವರ್ಷಗಳಿಂದಲೂ ಗಡಿ ಜಿಲ್ಲೆಯ ಬಾಲಕರನ್ನು ಕೃಷಿ ಕೆಲಸಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಈ ಬಗ್ಗೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು’ ಎಂದು ಡಿಎಸ್‌ಎಸ್ ಮುಖಂಡ ಬಿಜ್ಜೂರಿನ ಮಲ್ಲು ತಳವಾರ ಹಾಗೂ ಎ.ಎಸ್.ಉಮೇಶ ಆಗ್ರಹಿಸಿದ್ದಾರೆ.

‘ಸಾರಿಗೆ ಸಂಸ್ಥೆ ಲಾಭದತ್ತ ನಡೆಸಲು ಕಾರ್ಯಪಡೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದಾಗಿ ನಷ್ಟದ ಸುಳಿಗೆ ಸಿಲುಕಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ, ಇತರ ಮೂರು ಸಾರಿಗೆ ನಿಗಮಗಳನ್ನು ಲಾಭದತ್ತ ಕೊಂಡೊಯ್ಯಲು ಕಾರ್ಯಪಡೆ ರಚಿಸಲಾಗುವುದು ಎಂದು ಸಾರಿಗೆ ಸಚಿವ ಬಿ.ಶ್ರೀರಾಮುಲು ತಿಳಿಸಿದರು.

ತಜ್ಞರನ್ನು ಒಳಗೊಂಡ ಕಾರ್ಯಪಡೆ ನೀಡುವ ವರದಿಯನ್ನು ಅನುಷ್ಠಾನಗೊಳಿಸಲಾಗುವುದು ಎಂದು ಸಾರಿಗೆ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ಬಳಿಕ ಅವರು ಹೇಳಿದರು.

ಕೋವಿಡ್‌ನಿಂದಾಗಿ ವಿವಿಧ ಸಾರಿಗೆ ನಿಗಮಗಳಿಂದ ₹1,171 ಕೋಟಿ ನಷ್ಟವಾಗಿದೆ. ಸಂಸ್ಥೆ ನಷ್ಟದಲ್ಲಿದ್ದರೂ ನೌಕರರಿಗೆ ಸಂಬಳ ಕಡಿತ ಮಾಡಿಲ್ಲ. ಬೊಕ್ಕಸದಿಂದ ₹2,551 ಕೋಟಿ ಸಂಬಳಕ್ಕಾಗಿ ನೀಡಲಾಗಿದೆ. ಬಾಕಿ ಉಳಿಸಿಲ್ಲ ಎಂದು ವಿವರಿಸಿದರು.

ಸಂಸ್ಥೆಯಲ್ಲಿ ಆರ್ಥಿಕ ಶಿಸ್ತು ಮೂಡಿಸಲು ಮತ್ತು ನಷ್ಟದಿಂದ ಲಾಭಕ್ಕೆ ತರಲು ಶ್ರಮಿಸಲಾಗುವುದು. ತಪ್ಪು ಮಾಡಿದಲ್ಲಿ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ಆರು ತಿಂಗಳಲ್ಲಿ ಲಾಭವೂ ಇಲ್ಲದ ನಷ್ಟವೂ ಅಲ್ಲದ ಸ್ಥಿತಿಗೆ ತರಲಾಗುವುದು. ಇದಕ್ಕಾಗಿ ಹಲವು ಕಠಿಣ ಕ್ರಮಗಳನ್ನು ಅನುಸರಿಸಲಾಗುವುದು. ಈ ಬಗ್ಗೆ ಇವತ್ತಿನ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಲಾಯಿತು ಎಂದರು.

‘ಕೋವಿಡ್ ಬಳಿಕ ಪ್ರಯಾಣಿಕರ ಸಂಖ್ಯೆ ಕಡಿಮೆ ಆಗಿದೆ. ಖಾಲಿ ಬಸ್ಸುಗಳ ಓಡಾಟದಿಂದ ನಷ್ಟವಾಗಿದೆ. ನಷ್ಟಕ್ಕೆ ಡೀಸೆಲ್ ದರ ಏರಿಕೆ ಒಂದೇ ಕಾರಣವಲ್ಲ. ಎಲೆಕ್ಟ್ರಿಕ್ ಬಸ್ಸುಗಳನ್ನು ಬಳಸಿದಲ್ಲಿ ನಷ್ಟ ಕಡಿಮೆ ಮಾಡಬಹುದು’ ಎಂದು ತಿಳಿಸಿದರು.

ಮುಂದಿನ ದಿನಗಳಲ್ಲಿ ಕಾಗದದ ಟಿಕೆಟ್ ಬದಲಿಗೆ ಡಿಜಿಟಲ್ ಟಿಕೆಟ್ ಪದ್ಧತಿ ಜಾರಿಗೆ ತರುವ ಉದ್ದೇಶವಿದೆ. ಮಹಿಳೆಯರ ಸುರಕ್ಷತೆಗೆ ಆದ್ಯತೆ ನೀಡುವುದರ ಜತೆಗೆ, ಬಸ್ಸುಗಳಲ್ಲಿ ಜಿಪಿಎಸ್ ಟ್ರ್ಯಾಕಿಂಗ್ ವ್ಯವಸ್ಥೆ ಮಾಡಲಾಗುವುದು ಎಂದರು.

ಅಂತರ್ ನಿಗಮ ವರ್ಗಾವಣೆ: ಅಂತರ್ ನಿಗಮ ವರ್ಗಾವಣೆಗಾಗಿ 7354 ಅರ್ಜಿಗಳು ಬಂದಿದ್ದವು. ಆ ಪೈಕಿ 2365 ಮಂದಿಯನ್ನು ವರ್ಗಾವಣೆಗೆ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ ಎಂದರು.

ಆನ್‌ಲೈನ್ ಮೂಲಕವೇ ಬಸ್ ಪಾಸ್

ಶಾಲಾ- ಕಾಲೇಜು ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕವೇ ಬಸ್ ಪಾಸ್ ನೀಡಲಾಗುವುದು ಎಂದು ಶ್ರೀರಾಮುಲು ಹೇಳಿದರು.

ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಭರ್ತಿ ಮಾಡಿ ಪಾಸ್ ಪಡೆದುಕೊಳ್ಳಬಹುದು. ಪಾಸ್ ದರ ಹೆಚ್ಚಳ ಮಾಡುವ ಉದ್ದೇಶವಿಲ್ಲ ಎಂದೂ ತಿಳಿಸಿದರು.

ನಟಿ ರಾಗಿಣಿ, ಸಂಜನಾ ಡ್ರಗ್ಸ್ ಸೇವನೆ ದೃಢ

ಒಂದನೇ ಪುಟದಿಂದ

ಇವರೆಲ್ಲರ ವಿರುದ್ಧ 2,900 ಪುಟಗಳ ದೋಷಾರೋಪ ಪಟ್ಟಿಯನ್ನು ಫೆಬ್ರುವರಿಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಜೈಲು ವಾಸದಲ್ಲಿದ್ದ ಆರೋಪಿಗಳಿಗೆ ಜಾಮೀನು ಸಹ ಮಂಜೂರಾಗಿತ್ತು.

ತಿರುವು ನೀಡಿದ ಕೂದಲು: ಪ್ರಕರಣದಲ್ಲಿ ತಮ್ಮದೇನು ಪಾತ್ರವಿಲ್ಲವೆಂದು ವಾದಿಸಿದ್ದ ಆರೋಪಿಗಳು, ಜೀವನದಲ್ಲಿ ಒಮ್ಮೆಯೂ ಡ್ರಗ್ಸ್ ಸೇವಿಸಿಲ್ಲವೆಂದು ಹೇಳುತ್ತಿದ್ದರು. ಇದೀಗ ಕೂದಲು ಮಾದರಿ ವರದಿ ಬಂದಿದ್ದು, ಪ್ರಕರಣಕ್ಕೆ ಹೊಸ ತಿರುವು ಸಿಕ್ಕಿದೆ.

‘ಡ್ರಗ್ಸ್ ಸೇವನೆ ಪತ್ತೆ ಮಾಡುವಲ್ಲಿ ಕೂದಲು ಮಾದರಿ ಮಹತ್ವದ ಪಾತ್ರ ವಹಿಸುತ್ತದೆ. 2020ರ ಡಿಸೆಂಬರ್ 5ರಂದು ಆರೋಪಿಗಳ ಕೂದಲು ಮಾದರಿ ಸಂಗ್ರಹಿಸಿ ಪರೀಕ್ಷೆಗಾಗಿ ಹೈದರಾಬಾದ್ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಅದರ ವರದಿ ಇತ್ತೀಚೆಗೆ ಬಂದಿದ್ದು, ಆರೋಪಿಗಳು ಡ್ರಗ್ಸ್ ಸೇವಿಸಿದ್ದು ದೃಢಪಟ್ಟಿದೆ’ ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

‘ರಾಗಿಣಿ ದ್ವಿವೇದಿ, ಸಂಜನಾ ಗಲ್ರಾನಿ, ವಿರೇನ್ ಖನ್ನಾ, ಬಿ.ಕೆ. ರವಿಶಂಕರ್, ರಾಹುಲ್ ತೋನ್ಸೆ ಹಾಗೂ ಲೋ ಪೆಪ್ಪರ್ ಡ್ರಗ್ಸ್ ಸೇವಿಸಿದ್ದು ವರದಿಯಿಂದ ಗೊತ್ತಾಗಿದೆ. ಆದಿತ್ಯ ಆಳ್ವ, ಶ್ರೀನಿವಾಸ್ ಹಾಗೂ ಇತರೆ ಆರೋಪಿಗಳ ವರದಿ ಬರುವುದು ಬಾಕಿ ಇದೆ’ ಎಂದೂ ತಿಳಿಸಿದರು.

‘ಹೊಸ ಪದ್ಧತಿಯಲ್ಲಿ ಯಶಸ್ಸು’

‘ಎನ್‌ಡಿಪಿಎಸ್ ಪ್ರಕರಣದಲ್ಲಿ ಆರೋಪಿಗಳ ಮೂತ್ರ ಹಾಗೂ ರಕ್ತ ಮಾದರಿ ಪರೀಕ್ಷೆ ನಡೆಸಲಾಗುತ್ತಿತ್ತು. ಒಂದೆರಡು ದಿನದ ಡ್ರಗ್ಸ್ ಫಲಿತಾಂಶ ಮಾತ್ರ ಸಿಗುತ್ತಿತ್ತು. ಹೊಸ ಪದ್ಧತಿಯಲ್ಲಿ ಕೂದಲು ಮಾದರಿ ಪರೀಕ್ಷೆ ನಡೆಸಲಾಗುತ್ತಿದ್ದು, ಇದರಲ್ಲಿ ವರ್ಷದ ಡ್ರಗ್ಸ್ ಸೇವನೆ ಫಲಿತಾಂಶ ದೊರೆಯುತ್ತಿದೆ’ ಎಂದು ಸಿಸಿಬಿ ಜಂಟಿ ಕಮಿಷನರ್ ಸಂದೀಪ್ ಪಾಟೀಲ ಹೇಳಿದರು.

‘ಡ್ರಗ್ಸ್ ಪ್ರಕರಣದಲ್ಲಿ ಆರೋಪಿಗಳ ಕೂದಲು ಮಾದರಿ ವರದಿ ನಮ್ಮ ಕೈ ಸೇರಿದೆ. ಇದರಿಂದ ಸಿಸಿಬಿ ಪೊಲೀಸರಿಗೆ ಯಶಸ್ಸು ಸಿಕ್ಕಿದೆ. ಪ್ರಕರಣದಲ್ಲಿ ತಿಂಗಳುಗಟ್ಟಲೇ ತಲೆಮರೆಸಿಕೊಂಡು ಸಿಕ್ಕಿಬೀಳುವ ಆರೋಪಿಗಳ ಡ್ರಗ್ಸ್ ಸೇವನೆ ಪತ್ತೆ ಹಚ್ಚಲು ಹೊಸ ಪದ್ಧತಿ ಅನುಕೂಲವಾಗಿದೆ’ ಎಂದೂ ತಿಳಿಸಿದರು.

ಕನಿಷ್ಠ ಬೆಂಬಲ ಬೆಲೆ: ಪ್ರತಿಭಟನೆ 8ರಿಂದ

ಬಲ್ಲಿಯಾ, ಉತ್ತರ ಪ್ರದೇಶ (ಪಿಟಿಐ): ಕೃಷಿ ಕಾಯ್ದೆಗಳು ಮತ್ತು ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಸಂಬಂಧಿಸಿ ತನ್ನ ಬೇಡಿಕೆಗಳ ಬಗ್ಗೆ ಮಾಸಾಂತ್ಯದೊಳಗೆ ಕ್ರಮಕೈಗೊಳ್ಳದಿದ್ದರೆ ಸೆಪ್ಟೆಂಬರ್ 8ರಿಂದ ದೇಶವ್ಯಾಪಿ ಪ್ರತಿಭಟನೆ ನಡೆಸಲಾಗುವುದು ಆರ್‌ಎಸ್‌ಎಸ್ ಮಾನ್ಯತೆ ಹೊಂದಿರುವ ಭಾರತೀಯ ಕಿಸಾನ್ ಸಂಘ (ಬಿಕೆಎಸ್) ಎಚ್ಚರಿಸಿದೆ.

ಬೇಡಿಕೆ ಈಡೇರಿಸದಿದ್ದರೆ ಹೋರಾಟ: ರುಪ್ಸಾ

ಬೆಂಗಳೂರು: ‘1995ರ ನಂತರದ ಖಾಸಗಿ ಅನುದಾನಿತರಹಿತ ಕನ್ನಡ ಮಾಧ್ಯಮ ಶಾಲೆಗಳನ್ನು ತಕ್ಷಣ ಅನುದಾನಕ್ಕೆ ಒಳಪಡಿಸಬೇಕು. ನೂತನ ಪಿಂಚಣಿ ಪದ್ಧತಿ ರದ್ದುಪಡಿಸಿ, ಹಳೆಯ ಪಿಂಚಣಿ ಪದ್ಧತಿ ಜಾರಿಗೊಳಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಮುಂದಿಟ್ಟಿರುವ ಖಾಸಗಿ ಶಾಲಾ ಒಕ್ಕೂಟ, ಈ ಬೇಡಿಕೆಗಳನ್ನು ಸರ್ಕಾರ ಈಡೇರಿಸದಿದ್ದರೆ ಸೆ. 15ರ ಬಳಿಕ ಹಂತ ಹಂತವಾಗಿ ಪ್ರತಿಭಟನೆ ಹಮ್ಮಿಕೊಳ್ಳಲು ನಿರ್ಧರಿಸಿದೆ.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘ, ಕಲ್ಯಾಣ ಕರ್ನಾಟಕ ಖಾಸಗಿ ಶಾಲಾ ಒಕ್ಕೂಟ ಮತ್ತು ಖಾಸಗಿ ಅನುದಾನರಹಿತ ಶಾಲೆಗಳ ಒಕ್ಕೂಟದ (ರುಪ್ಸಾ) ಪ್ರತಿನಿಧಿಗಳು ಶಾಸಕರ ಭವನದಲ್ಲಿ ಮಂಗಳವಾರ ಸಭೆ ನಡೆಸಿದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರುಪ್ಸಾ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ, ‘ಅನುದಾನಿತ, ಅನುದಾನ ರಹಿತ ಶಾಲಾ ಕಾಲೇಜು ಸಿಬ್ಬಂದಿಗೂ ಜ್ಯೋತಿ ಸಂಜೀವಿನಿ ಯೋಜನೆಯನ್ನು ಸರ್ಕಾರ ವಿಸ್ತರಿಸಬೇಕು ಎಂದೂ ಮನವಿ ಮಾಡಿದ್ದೇವೆ. ನಮ್ಮ ಬೇಡಿಕೆಗಳ ಬಗ್ಗೆ ಸರ್ಕಾರಕ್ಕೆ ಈಗಾಗಲೇ ಹಲವು ಬಾರಿ ಮನವಿ ಕೊಟ್ಟಿದ್ದೇವೆ. ದಶಕಗಳಿಂದ ಹೋರಾಟ ಮಾಡಿಕೊಂಡು ಬಂದರೂ ಪರಿಹಾರ ಸಿಕ್ಕಿಲ್ಲ. ಹೀಗಾಗಿ, ಕನ್ನಡ ಹಾಗೂ ಆಂಗ್ಲ ಮಾಧ್ಯಮ ಶಾಲೆಗಳು ಒಟ್ಟಾಗಿ ಹೋರಾಟಕ್ಕೆ ನಡೆಸಲು ತೀರ್ಮಾನಿಸಿದ್ದೇವೆ. ಬೇಡಿಕೆಗಳನ್ನು ಈಡೇರಿಸಲು ಸೆ. 15ರ ಗಡುವು ನೀಡಿದ್ದೇವೆ’ ಎಂದರು.

ಸರ್ಕಾರಿ ಇಲಾಖೆಗಳ ಖರೀದಿಯಲ್ಲಿ ಶೇ 25ರಷ್ಟು ಕೈಮಗ್ಗ ಉತ್ಪನ್ನಗಳಿಗೆ ಮೀಸಲು

ಕೈಮಗ್ಗ ಪುನಶ್ಚೇತನ: ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ನು ಮುಂದೆ ರಾಜ್ಯದ ಎಲ್ಲ ಸರ್ಕಾರಿ ಇಲಾಖೆಗಳು ಕನಿಷ್ಠ ಶೇ 25ರಷ್ಟು ಪ್ರಮಾಣದ ವಸ್ತುಗಳನ್ನು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಿಂದಲೇ ಖರೀದಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ಮಂಗಳವಾರ ನಡೆದ ನಿಗಮದ ಪುನಃಶ್ಚೇತನ ಸಭೆಯಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಈ ನಿರ್ದೇಶನ ನೀಡಿದರು. ಈ ಸಂಬಂಧ ಸದ್ಯವೇ ಆದೇಶ ಹೊರಡಿಸಲಾಗುವುದು ಎಂದೂ ಹೇಳಿದರು.

ಶಾಲಾ ಮಕ್ಕಳಿಗೆ ಸಮವಸ್ತ್ರ, ವಸತಿ ಶಾಲೆಗಳು, ಹಾಸ್ಟೆಲ್‌ಗಳಿಗೆ ಹೊದಿಕೆ ಮತ್ತು ಹಾಸಿಗೆ ಸೇರಿದಂತೆ ಆರೋಗ್ಯ, ನಗರಾಭಿವೃದ್ಧಿ, ಪೌರಾಡಳಿತ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಸತಿ ಶಿಕ್ಷಣ ಸಂಸ್ಥೆ ಮತ್ತಿತರ ಇಲಾಖೆಗಳು ನಿಗಮದ ವಸ್ತುಗಳನ್ನು ಶೇ 100ರಷ್ಟು ಖರೀದಿಸುವಂತೆ ಸಭೆಯಲ್ಲಿ ಪ್ರಸ್ತಾಪವಾಯಿತು.

ಈ ಬಗ್ಗೆ ಸುದೀರ್ಘ ಚರ್ಚೆಯ ಬಳಿಕ ಕನಿಷ್ಠ ಶೇ 25ರಷ್ಟು ಖರೀದಿ ಕಡ್ಡಾಯಗೊಳಿಸಿ ಮತ್ತು ಆಸಕ್ತ ಇಲಾಖೆಗಳು ಶೇ 100ರಷ್ಟು ಖರೀದಿಗೆ ಅವಕಾಶ ಕಲ್ಪಿಸಲು ಮುಖ್ಯಮಂತ್ರಿ ಒಪ್ಪಿಗೆ ಸೂಚಿಸಿದ್ದಾರೆ. ಅಲ್ಲದೆ, ಈ ಬಗ್ಗೆ ಅಧಿಕೃತ ಆದೇಶ ಹೊರಡಿಸಲು ಸೂಚಿಸಿದ್ದಾರೆ.

ನೇಕಾರಿಕೆಯನ್ನೇ ಅವಲಂಬಿಸಿರುವ 5,500 ಕುಟುಂಬಗಳಿಗೆ ಅನುಕೂಲವಾಗುವ ವಿವಿಧ ಯೋಜನೆಗಳನ್ನು ಜಾರಿಗೊಳಿಸಿ ನಿಗಮವನ್ನು ಆರ್ಥಿಕವಾಗಿ ಪುನಶ್ಚೇತನಗೊಳಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ. ಬೆಂಗಳೂರಿನ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ನಿಗಮದ ಒಡೆತನದಲ್ಲಿರುವ ಮೂರು ಎಕರೆ ಖಾಲಿ ಜಾಗವನ್ನು ಸರ್ಕಾರಿ ನಿಗಮ ಅಥವಾ ಇಲಾಖೆಗೆ ಮಾರಾಟ ಮಾಡಲು ಅನುಮತಿ ನೀಡುವಂತೆ ಮಂಡಿಸಿದ್ದ ಪ್ರಸ್ತಾವಕ್ಕೆ ಸಭೆಯಲ್ಲಿ ಅನುಮೋನೆ ನೀಡಿಲ್ಲ. ಭಾರಿ ಮೌಲ್ಯದ ಈ ಜಾಗವನ್ನು ಮಾರಾಟ ಮಾಡುವ ಬದಲು ಯಾವುದಾದರೂ ಇಲಾಖೆಯ ಸಹಭಾಗಿತ್ವದಲ್ಲಿ, ಬಹುಮಹಡಿ ಕಟ್ಟಡ ನಿರ್ಮಿಸಿದರೆ ಶಾಶ್ವತ ಆದಾಯಕ್ಕೆ ದಾರಿ ಆಗಲಿದೆ ಎಂದು ಮುಖ್ಯಮಂತ್ರಿ ಸಲಹೆ ನೀಡಿದರು.

ಪ್ರಮುಖ ನಿರ್ಣಯಗಳು: ನಿಗಮದ ಪುನಶ್ಚೇತನ ಚಟುವಟಿಕೆಗೆ 2017-18ರಲ್ಲಿ ನೀಡಿದ್ದ ₹ 45 ಕೋಟಿ ಸಾಲವನ್ನು ಷೇರು ಬಂಡವಾಳವಾಗಿ ಮಾರ್ಪಾಡು ಮಾಡಲು ಸಭೆಯಲ್ಲಿ ನಿರ್ಧರಿಸಲಾಗಿದೆ. ಶಾಲಾ ಮಕ್ಕಳಿಗೆ ಸಮವಸ್ತ್ರ ಪೂರೈಸುವುದರಿಂದ ನಿಗಮಕ್ಕೆ ವಾರ್ಷಿಕ ₹ 10 ಕೋಟಿ ನಷ್ಟವಾಗುತ್ತಿದ್ದು, ಅದರಲ್ಲಿ ₹ 5 ಕೋಟಿಯನ್ನು ಸರ್ಕಾರವೇ ಭರಿಸಲಿದೆ. ನಿಗಮದ ಅಭಿವೃದ್ಧಿ ಚಟುವಟಿಕೆ, ನಿವೃತ್ತರಿಗೆ ಪಿಂಚಣಿ, ಗ್ರಾಚ್ಯುಯಿಟಿ ಮತ್ತಿತರ ಮೊತ್ತ ಭರಿಸಲು ಪಡೆದ ₹ 23 ಕೋಟಿ ಸಾಲಕ್ಕೆ ₹ 40 ಕೋಟಿ ಬಡ್ಡಿ ರೂಪದಲ್ಲಿ ನಿಗಮ ಭರಿಸಿದೆ. ಬಾಕಿ ₹ 23 ಕೋಟಿಯನ್ನು ಷೇರು ಬಂಡವಾಳವಾಗಿ ಪರಿವರ್ತಿಸಲು ತೀರ್ಮಾನಿಸಲಾಗಿದೆ. ಬೇಡಿಕೆಯಷ್ಟು ವಸ್ತುಗಳನ್ನು ನಿಗಮವೇ ತಯಾರಿಸಿ ಕೊಡಬೇಕೆಂದು ಕೆಲವು ಇಲಾಖೆಗಳು ವಿಧಿಸಿದ್ದ ಷರತ್ತು ಸಡಿಲಿಸಲು ಕೂಡಾ ಸಭೆಯಲ್ಲಿ ನಿರ್ಣಯಿಸಲಾಗಿದೆ.

ನಟಿ ರಚಿತಾ ರಾಮ್ ವಿಚಾರಣೆಗೆ ಹಾಜರು

ಪ್ರಜಾವಾಣಿ ವಾರ್ತೆ

ರಾಮನಗರ: ‘ಲವ್ ಯೂ ರಚ್ಚು’ ಸಿನಿಮಾ ಚಿತ್ರೀಕರಣ ದುರಂತಕ್ಕೆ ಸಂಬಂಧಿಸಿ ಚಿತ್ರದ ನಾಯಕಿ ರಚಿತಾ ರಾಮ್ ಮಂಗಳವಾರ ಸಂಜೆ ಬಿಡದಿ ಪೊಲೀಸ್ ಠಾಣೆಯಲ್ಲಿ ವಿಚಾರಣೆಗೆ ಹಾಜರಾದರು.

ರಾಮನಗರ ಡಿವೈಎಸ್ಪಿ ಮೋಹನ್‌ಕುಮಾರ್ ಅರ್ಧ ಗಂಟೆ ಕಾಲ ವಿಚಾರಣೆ ನಡೆಸಿದರು. ಬಳಿಕ ಪತ್ರಕರ್ತರ ಜೊತೆ ಮಾತನಾಡಿದ ರಚಿತಾ ‘ಘಟನೆ ನಡೆದ ದಿನ ನಾನು ಸ್ಥಳದಲ್ಲಿ ಇರಲಿಲ್ಲ. ಈ ಕುರಿತು ವಿವರಣೆ ನೀಡಿದ್ದೇನೆ’ ಎಂದರು.

ರಚಿತಾ ರಾಮ್

‘ಕಲಾವಿದನ ಸಾವು ನಿಜಕ್ಕೂ ದುರಂತ. ಆದರೆ ಅದು ಹೇಗೆ ನಡೆಯಿತು ಎಂದು ನನಗೆ ತಿಳಿದಿಲ್ಲ. ಸಾಹಸ ದೃಶ್ಯಗಳಲ್ಲಿ ನಟಿಯರಿಗೆ ಹೆಚ್ಚು ಕೆಲಸ ಇರುವುದಿಲ್ಲ. ಹೀಗಾಗಿ ಅಲ್ಲಿನ ಸುರಕ್ಷತಾ ಕ್ರಮಗಳ ಬಗ್ಗೆ ನನಗೆ ಮಾಹಿತಿ ಇಲ್ಲ’ ಎಂದು ತಿಳಿಸಿದರು.

ಘಟನೆ ನಡೆದಾಗ ಸ್ಥಳದಲ್ಲೇ ಇದ್ದ ನಟ ಅಜಯ್ ರಾವ್ ನೆರವಿಗೆ ಧಾವಿಸಲಿಲ್ಲ ಎಂಬ ಆರೋಪ ಕುರಿತು ಅವರು, ‘ಈ ಬಗ್ಗೆ ಅಜಯ್ ಅವರನ್ನೇ ಕೇಳಬೇಕು. ಇಂತಹ ಘಟನೆಗಳಾದಾಗ ಕೂಡಲೇ ನೆರವಾಗುವುದು ನಮ್ಮೆಲ್ಲರ ಜವಾಬ್ದಾರಿ’ ಎಂದರು.

ಚಿತ್ರೀಕರಣ ದುರಂತ: ಆರೋಪಿಗಳ ನ್ಯಾಯಾಂಗ ಬಂಧನ ವಿಸ್ತರಣೆ

ರಾಮನಗರ: ‘ಲವ್ ಯೂ ರಚ್ಚು’ ಸಿನಿಮಾ ಚಿತ್ರೀಕರಣದ ವೇಳೆ ನಡೆದಿದ್ದ ದುರಂತಕ್ಕೆ ಸಂಬಂಧಿಸಿ ಬಂಧಿತರಾಗಿರುವ ಮೂವರ ನ್ಯಾಯಾಂಗ ಬಂಧನವನ್ನು ಕೋರ್ಟ್ ಸೆಪ್ಟೆಂಬರ್ 7ರವರೆಗೆ ವಿಸ್ತರಿಸಿದೆ.

ನಿರ್ದೇಶಕ ಶಂಕರ್, ಸಾಹಸ ನಿರ್ದೇಶಕ ವಿನೋದ್ ಕುಮಾರ್ ಹಾಗೂ ಕ್ರೇನ್ ಚಾಲಕ ಮಹದೇವು ಅವರ ನ್ಯಾಯಾಂಗ ಬಂಧನದ ಅವಧಿಯು ಮಂಗಳವಾರ ಮುಕ್ತಾಯಗೊಂಡಿದ್ದು, ವಿಡಿಯೊ ಕಾನ್ಫರೆನ್ಸ್ ಮೂಲಕ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ಅವಧಿ ವಿಸ್ತರಿಸಿ ನ್ಯಾಯಾಧೀಶೆ ಅನುಪಮಾ ಲಕ್ಷ್ಮಿ ಆದೇಶಿಸಿದರು.

ಜಾಮೀನು ಕೋರಿ ಆರೋಪಿಗಳು ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಚಿತ್ರತಂಡದ ಕೆಲವರು ನಿರೀಕ್ಷಣಾ ಜಾಮೀನಿಗೆ ಮೊರೆ ಹೋಗಿದ್ದಾರೆ. ಈ ಅರ್ಜಿಗಳ ವಿಚಾರಣೆ ಇದೇ 26ರಂದು ನಡೆಯಲಿದೆ.

ಅಫ್ಘಾನಿಸ್ತಾನ ಸ್ವಾತಂತ್ರ್ಯದ ಅವಸಾನ

ಆಪರೇಷನ್ 'ದೇವಿಶಕ್ತಿ': ಈವರೆಗೆ 800 ಮಂದಿ ತೆರವು

ನವದೆಹಲಿ (ಪಿಟಿಐ): ತಾಲಿಬಾನ್ ವಶವಾಗಿರುವ ಅಫ್ಘಾನಿಸ್ತಾನದಿಂದ ಭಾರತೀಯರು ಮತ್ತು ಇತರರನ್ನು ತೆರವುಗೊಳಿಸುವ ಭಾರತದ ಕಾರ್ಯಾಚರಣೆ ಬಿರುಸು ಪಡೆದಿದೆ. ಇದುವರೆಗೂ 800ಕ್ಕೂ ಹೆಚ್ಚು ಜನರನ್ನು ಅಲ್ಲಿಂದ ತೆರವುಗೊಳಿಸಿದೆ. ಈ ಕಾರ್ಯಾಚರಣೆಗೆ 'ಆಪರೇಷನ್ ದೇವಿ ಶಕ್ತಿ' ಎಂದು ಹೆಸರಿಡಲಾಗಿದೆ.

ಕಾಬೂಲ್‌ನಿಂದ ಮತ್ತೆ 78 ಮಂದಿಯನ್ನು ತೆರವುಗೊಳಿಸಿದ್ದಾಗಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಮಂಗಳವಾರ ಟ್ವೀಟ್ ಮಾಡಿದ್ದಾರೆ.

'ಆಪರೇಷನ್ ದೇವಿ ಶಕ್ತಿ ಮುಂದುವರಿದಿದೆ. ಕಾಬೂಲ್‌ನಿಂದ ಸ್ಥಳಾಂತರಿಸಿದ 78 ಜನರು ದುಶಾಂಬೆ ಮಾರ್ಗವಾಗಿ ದೆಹಲಿಗೆ ಬಂದಿದ್ದಾರೆ' ಎಂದು ಟ್ವೀಟ್ ಮಾಡಿರುವ ಅವರು, ಭಾರತೀಯ ವಾಯುಪಡೆ, ಭಾರತೀಯ ವಿಮಾನ ಯಾನ ಸಂಸ್ಥೆ ಹಾಗೂ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಸಿಬ್ಬಂದಿಗೆ ವಂದನೆ ಸಲ್ಲಿಸಿದ್ದಾರೆ.

ತಾಲಿಬಾನ್ ಪಡೆಯು ಕಾಬೂಲ್ ನಗರವನ್ನು ವಶಪಡಿಸಿಕೊಂಡ ಮಾರನೇ ದಿನ ಅಂದರೆ ಇದೇ 16ರಂದು ಮೊದಲನೇ ತೆರವು ಕಾರ್ಯಾಚರಣೆ ನಡೆಸಿದ ಭಾರತವು 40 ಮಂದಿಯನ್ನು ಅಲ್ಲಿಂದ ದೇಶಕ್ಕೆ ಕರೆ ತಂದಿತ್ತು. 25 ಜನ ಭಾರತೀಯರು, ಅಫ್ಘನ್ ಸಿಖ್ಖರು ಹಾಗೂ ಹಿಂದೂಗಳು ಸೇರಿದಂತೆ 78 ಜನರನ್ನು ಮಂಗಳವಾರ ಕರೆತರಲಾಗಿದೆ. ಇವರನ್ನೆಲ್ಲ ಸೋಮವಾರವಷ್ಟೇ ಕಾಬೂಲ್‌ನಿಂದ ತಜಕಿಸ್ತಾನದ ದುಶಾಂಬೆಗೆ ಸ್ಥಳಾಂತರಿಸಲಾಗಿತ್ತು.

ತಾಲಿಬಾನ್ ಪಡೆಯ ಆಡಳಿತಕ್ಕೆ ಹೆದರಿ, ದೇಶ ತೊರೆಯಲು ಮುಂದಾಗಿರುವ ಅಲ್ಲಿನ ಸಾವಿರಾರು ನಾಗರಿಕರು ಕಾಬೂಲ್ ವಿಮಾನ ನಿಲ್ದಾಣದ ಸುತ್ತ ಜಮಾಯಿಸಿದ್ದಾರೆ. ಕಳೆದ ಒಂದು ವಾರದಲ್ಲಿ ಅಲ್ಲಿನ ಪರಿಸ್ಥಿತಿಯು ಗಂಭೀರವಾಗಿದ್ದು, ತೆರವು ಕಾರ್ಯಾಚರಣೆಯು ಸಂಕೀರ್ಣವಾಗಿ ಪರಿಣಮಿಸಿದೆ.

ಪ್ರಧಾನಿ ಮೋದಿ–ಪುಟಿನ್ ಮಾತುಕತೆ: ಪ್ರಧಾನಿ ನರೇಂದ್ರ ಮೋದಿ ಹಾಗೂ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ಅಫ್ಘಾನಿಸ್ತಾನದಲ್ಲಿನ ಬೆಳವಣಿಗೆಗಳ ಕುರಿತಾಗಿ ಮಂಗಳವಾರ ಮಾತುಕತೆ ನಡೆಸಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಪ್ರಧಾನಿ ಮೋದಿ, 'ಸ್ನೇಹಿತರಾದ ರಷ್ಯಾ ಅಧ್ಯಕ್ಷ ಪುಟಿನ್ ಜೊತೆಗೆ ವಿಸ್ತೃತ ಮಾತುಕತೆ ನಡೆಸಿದೆವು. ಕೋವಿಡ್–19 ವಿರುದ್ಧವಾಗಿ, ಭಾರತ–ರಷ್ಯಾ ಸಹಕಾರ ಸೇರಿದಂತೆ ದ್ವಿಪಕ್ಷೀಯ ಕಾರ್ಯಸೂಚಿ ಬಗ್ಗೆಯೂ ಚರ್ಚಿಸಿದೆವು. ಪ್ರಮುಖ ವಿಷಯಗಳ ಕುರಿತಾಗಿ ನಿಕಟ ಸಂಪರ್ಕದಲ್ಲಿರಲೂ ಸಮ್ಮತಿಸಿದ್ದೇವೆ' ಎಂದು ತಿಳಿಸಿದ್ದಾರೆ.

ಅಫ್ಘಾನಿಸ್ತಾನದ ಪರಿಸ್ಥಿತಿ ಹಾಗೂ ಬೇರೆ ದೇಶಗಳ ಮೇಲೆ ಅದರ ಪರಿಣಾಮಗಳ ಕುರಿತು ಜರ್ಮನಿಯ ಛಾನ್ಸಲರ್ ಆಂಗೆಲಾ ಮರ್ಕೆಲ್ ಅವರೊಂದಿಗೂ ಪ್ರಧಾನಿ ಮೋದಿ ಸೋಮವಾರ ಚರ್ಚೆ ನಡೆಸಿದ್ದರು.

ಕೆಲ ವರ್ಷ ಹಿಂದೆ ಅಫ್ಘಾನಿಸ್ತಾನದ ತೊರೆದು ಬಂದ ನಿರಾಶ್ರಿತರಲ್ಲಿ ಸ್ವಾತಂತ್ರ್ಯದ ತುಡಿತ ಸದಾ ಜೀವಂತ

'ಗುಲಾಮನಾಗದೆ ಪಾರಿವಾಳದಂತೆ ಹಾರಬೇಕು'

ನವದೆಹಲಿ (ಪಿಟಿಐ): ಅಫ್ಘಾನಿಸ್ತಾನದಿಂದ ಎರಡು ವರ್ಷಗಳ ಹಿಂದೆ ಭಾರತಕ್ಕೆ ಬಂದಿರುವ ರಿಷದ್ ರೆಹಮಾನಿಗೆ ಈಗ 22 ವರ್ಷ ವಯಸ್ಸು. ಆ ಯುವಕನ ಕುತ್ತಿಗೆಯ ಒಂದು ಪಕ್ಕದಲ್ಲಿ ಹಾರುತ್ತಿರುವ ಪಾರಿವಾಳದ ಹಚ್ಚೆ ಇದೆ. ಅಫ್ಘನ್ನರ ಸ್ವಾತಂತ್ರ್ಯದ ಹಂಬಲದ ದ್ಯೋತಕವಾಗಿ ಆ ಹಚ್ಚೆಯು ಭರವಸೆ ಮೂಡಿಸಿದರೆ, ಕೆಲವು ವರ್ಷಗಳ ಹಿಂದೆ ತಾಲಿಬಾನ್ ಪಡೆಯಿಂದ ತನ್ನ ಚಿಕ್ಕಪ್ಪ ಹತನಾದ ಗಾಯದ ಗೀರುಗಳು ಆತನನ್ನು ಜರ್ಜರಿತಗೊಳಿಸಿವೆ.

ಹೀಗಾಗಿ, ತಾಲಿಬಾನ್ ಆಡಳಿತದ ಬಗ್ಗೆ ಆತನಿಗೆ ಭರವಸೆಯೇ ಉಳಿದಿಲ್ಲ. ಅವನಂತೆಯೇ ನಿರಾಶ್ರಿತರಾಗಿ ಭಾರತದಲ್ಲಿ ಆಶ್ರಯ ಪಡೆದಿರುವ ಯಾವ ಅಫ್ಘನ್ ಪ್ರಜೆಗೂ ಈಗ ತವರು ನೆಲದ ಭರವಸೆ ಇಲ್ಲ.

ಸದ್ಯಕ್ಕೆ ನೋಯ್ಡಾದಲ್ಲಿನ ಅಫ್ಘನ್ ನಿರಾಶ್ರಿತರ ಶಿಬಿರದಲ್ಲಿರುವ ರೆಹಮಾನಿಗೆ, ಪಾಶ್ತೊ ಭಾಷೆಯಲ್ಲಿ 'ವಿದ್ಯಾರ್ಥಿಗಳು' ಎಂದು ಅರ್ಥವಿರುವ 'ತಾಲಿಬಾನ್' ಎಂಬ ಪದದ ಬಗ್ಗೆಯೇ ತಿರಸ್ಕಾರವಿದೆ.

ಬಹುಶಃ ಸೌಂದರ್ಯದ ಖನಿ ಎನಿಸಿದ ನೆಲವು ಪ್ರಕ್ಷುಬ್ಧತೆಯ ಸ್ವರ್ಗವೇ ಆಗಿರುತ್ತದೆನೋ ಎಂದು ವಿಷಾದಿಸಿದ ರೆಹಮಾನಿ, 'ನಾನು ನನ್ನ ದೇಶಕ್ಕಾಗಿ ಹಂಬಲಿಸುವವನು. ಆದರೆ, ಅವರು (ತಾಲಿಬಾನಿಗಳು) ಅದನ್ನು ನಮ್ಮ ತಾಯ್ನೆಲವನ್ನಾಗಿ ಉಳಿಸುವುದಿಲ್ಲ. ನಮ್ಮದೇ ದೇಶದಲ್ಲಿ ಗುಲಾಮರಂತೆ ಬದುಕಲು ನಾವು ಬಯಸುವುದಿಲ್ಲ. ಅದರೊಂದಿಗೆ, ಈ ಪಾರಿವಾಳದ ಹಚ್ಚೆಯು, ಸ್ವಾತಂತ್ರ್ಯಕ್ಕಾಗಿನ ನನ್ನ ತುಡಿತವನ್ನು ಸದಾ ಉದ್ದೀಪಿಸುತ್ತಿರುತ್ತದೆ' ಎನ್ನುತ್ತಾನೆ.

'ಅಫ್ಘಾನಿಸ್ತಾನದ ಸ್ಥಿತಿಯನ್ನು ಕಂಡು ನನ್ನ ತಾಯಿ ಖಿನ್ನಳಾಗಿದ್ದಾಳೆ. ಭಾಷಾಂತರಕಾರನಾಗಿದ್ದ ಅವಳ ಅಣ್ಣನನ್ನು ತಾಲಿಬಾನಿಗರು ಕೆಲವು ವರ್ಷಗಳ ಹಿಂದೆ ಕೊಂದುಬಿಟ್ಟರು. ನಾವು ನಮ್ಮ ನೆಲವನ್ನು ಬಿಟ್ಟು, ಶಾಂತಿ ಹಾಗೂ ಭವಿಷ್ಯವನ್ನು ಅರಸಿ, ದೇಶ ಬಿಟ್ಟೆವು' ಎಂದ ಆ ಯುವಕ, ಬರಲಿರುವ ತಾಲಿಬಾನ್ ಆಡಳಿತ ದಿನಗಳನ್ನು ನೆನೆದು ಕಂಪಿಸಿದ.

ಅಫ್ಘಾನಿಸ್ತಾನವು ಮತ್ತೆ ತಾಲಿಬಾನ್ ವಶವಾಯಿತು ಎಂಬುದು ತಮಗೆ ತೀವ್ರ ಆಘಾತ ತಂದಿತು ಎಂದ ರೆಹಮಾನಿ, ಅಲ್ಲಿರುವ ತನ್ನ ಸಂಬಂಧಿಕರು ಎದುರಿಸಲಿರುವ ಕಷ್ಟಗಳನ್ನು ನೆನೆದು ಹತಾಶಗೊಂಡ. ಮರುಗಳಿಗೆಯೇ, ಕ್ರೂರ ಆಡಳಿತದಿಂದ ಪಾರಾಗಲು ಅವರಿಗೆ ದೇಶ ತೊರೆಯದೇ ವಿಧಿ ಇಲ್ಲ ಎಂದು ಸಂಕಟಪಟ್ಟ.

ದೆಹಲಿ ಹಾಗೂ ಸುತ್ತಮುತ್ತಲಿನ ನಗರಗಳಲ್ಲಿ ಆಶ್ರಯ ಪಡೆದಿರುವ ಅಫ್ಘಾನಿಸ್ತಾನದ ನೂರಾರು ನಿರಾಶ್ರಿತರು, ತಮ್ಮ ದೇಶದವರ ಸುರಕ್ಷತೆಗೆ ಆಗ್ರಹಿಸಿ ನಿರಾಶ್ರಿತರಿಗಾಗಿನ ವಿಶ್ವಸಂಸ್ಥೆಯ ಹೈಕಮಿಷನರ್ ಕಚೇರಿಯ (ಯುಎನ್‌ಎಚ್‌ಸಿಆರ್) ಮುಂದೆ ನಡೆಸುತ್ತಿರುವ ಪ್ರತಿಭಟನೆಯಲ್ಲಿ ಈ ಯುವಕನೂ ಭಾಗಿಯಾಗಿದ್ದಾನೆ.

'ಅಫ್ಘನ್ನರಿಗೆ ಏನೂ ತೊಂದರೆ ಮಾಡುವುದಿಲ್ಲ ಎಂದು ತಾಲಿಬಾನಿಗರು ಹೇಳುತ್ತಾರೆ. ಆದರೆ, ಅದೆಲ್ಲ ಬೂಟಾಟಿಕೆ' ಎಂದು ಆಕ್ರೋಶ ವ್ಯಕ್ತಪಡಿಸಿದ.

28 ವರ್ಷದ ಅಂಜಂ ಖಾನ್, ಇನ್ನೊಬ್ಬ ಅಫ್ಘನ್ ನಿರಾಶ್ರಿತ. ಪತ್ನಿ ಹಾಗೂ ಮಕ್ಕಳೊಂದಿಗೆ ದೆಹಲಿಯಲ್ಲಿ ಆಶ್ರಯ ಪಡೆದಿದ್ದಾರೆ. ಯಾವುದೇ ಪ್ರತಿರೋಧ ತೋರದೇ ತಾಲಿಬಾನ್ ಕೈವಶವಾದ ದೇಶದ ಬಗ್ಗೆ ಅವರಿಗೆ ಈಗ ಭರವಸೆಯೇ ಉಳಿದಿಲ್ಲ.

'ಕಾಬೂಲ್‌ನಲ್ಲಿರುವ ನನ್ನ ತಾಯಿಯ ಜೊತೆ ಕೆಲ ದಿನಗಳ ಹಿಂದಷ್ಟೇ ನಾನು ಮಾತಾಡಿದೆ. ಆಕೆ ಅಳುತ್ತಿದ್ದಳು. ಆಕೆ ಈಗ ಬರೀ ಅಳುತ್ತಾಳಷ್ಟೆ. ಅವಳ ಹಾಗೂ ನಮ್ಮ ಸಂಬಂಧಿಕರ ಬಗ್ಗೆ ಚಿಂತೆಯಾಗಿದೆ. ನಮಗಾರಿಗೂ ಆ ದೇಶದ ಬಗ್ಗೆ ಭರವಸೆ ಇಲ್ಲ. ತಾಲಿಬಾನ್ ಎಂಬುದು ಇಸ್ಲಾಂ ಆಡಳಿತವಲ್ಲ; ಬರಿ ಆತಂಕವಾದ ಅಷ್ಟೆ' ಎಂದು ಖಾನ್ ವಿಷಾದಿಸಿದರು.

ಅಫ್ಘನ್ ಸೇನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ತಮ್ಮ ಹತ್ತಿರದ ಸಂಬಂಧಿಕರನ್ನು, ಕೆಲವು ವರ್ಷಗಳ ಹಿಂದೆ ತಾಲಿಬಾನ್ ಪಡೆಯು ಕೊಂದ ನಂತರ ಅವರು ತವರು ದೇಶಕ್ಕೆ ಮರಳಲು ಧೈರ್ಯ ತೋರಿಲ್ಲ.

ತಾಲಿಬಾನ್ ಪಡೆಯ ಸುಧಾರಣಾವಾದ ಎಂಬುದೆಲ್ಲ ಸುಳ್ಳು. ಅದೆಲ್ಲ ಸರ್ಕಾರ ರಚನೆಯಾಗುವವರೆಗೆ ಮಾತ್ರ. ಒಮ್ಮೆ ಅವರು ಅಧಿಕಾರ ಹಿಡಿದರೆ, ಅವರು ಹಳೆಯ ಹಾದಿಯನ್ನೇ ಹಿಡಿಯುವುದು ಶತಃಸಿದ್ಧ. ಇಂಗ್ಲಿಷ್ ಭಾಷೆಯನ್ನು ಕಲಿಯುವುದು ಇಸ್ಲಾಂ ವಿರೋಧಿ ಎನ್ನುವ ಹಾಗೂ ಮಹಿಳೆಯರು ಮತ್ತು ಹೆಣ್ಣುಮಕ್ಕಳನ್ನು ನಿರ್ಬಂಧಿಸುವ ಪ್ರಗತಿವಿರೋಧಿ ತಾಲಿಬಾನಿಗರನ್ನು ನಂಬುವುದಿಲ್ಲ ಎನ್ನುತ್ತಾರೆ ಅವರು.

ರೆಹಮಾನಿ ಮತ್ತು ಖಾನ್ ಅವರಂತೆಯೇ ಹಲವಾರು ಅಫ್ಘನ್ ನಿರಾಶ್ರಿತರು, 1990ರ ದಶಕದಲ್ಲಿನ ತಾಲಿಬಾನ್ ಆಡಳಿತದ ಕರಾಳ ದಿನಗಳನ್ನು ನೆನೆದು ಸಂಕಟ ತೋಡಿಕೊಂಡರು.

ಅಫ್ಘನ್ ಒಗ್ಗಟ್ಟು ಸಮಿತಿಯು ಪಾಕಿಸ್ತಾನದ ಕರಾಚಿಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಅಫ್ಘಾನಿಸ್ತಾನದ ಜನರು ತಾಲಿಬಾನ್ ವಿರುದ್ಧ ಘೋಷಣೆ ಕೂಗಿದರು – ಎಎಫ್‌ಪಿ ಚಿತ್ರ

ಜಿ–7 ಸಭೆಯಲ್ಲಿ ಚರ್ಚೆ; ತೆರವು ಕಾರ್ಯಾಚರಣೆ ಬಿರುಸು

ಸಮೀಪಿಸುತ್ತಿದೆ ಗಡುವು; ವಿಸ್ತರಣೆಗೆ ಒತ್ತಡ

ಕಾಬೂಲ್ (ಎಎಫ್‌ಪಿ): ಅಮೆರಿಕದ ಸೇನೆಯು ಅಫ್ಘಾನಿಸ್ತಾನ ತೊರೆಯುವ ಗಡುವು ಸಮೀಪಿಸುತ್ತಿದ್ದು, ಕಾಬೂಲ್‌ನಿಂದ ಜನರನ್ನು ತೆರವುಗೊಳಿಸುವ ಕಾರ್ಯಾಚರಣೆ ಮೇಲೆ ತೀವ್ರ ಒತ್ತಡ ಉಂಟಾಗುತ್ತಿದೆ. ಮುಂದಿನ ಒಂದು ವಾರದೊಳಗೆ ಅಫ್ಘನ್ ನೆಲದಲ್ಲಿರುವ ತಮ್ಮ ನಾಗರಿಕರನ್ನು ಕರೆತರಲು ಸಾಧ್ಯವಾಗದಿರಬಹುದು ಎಂದು ಐರೋಪ್ಯ ಒಕ್ಕೂಟದ ಹಲವು ದೇಶಗಳು ಮಂಗಳವಾರ ಆತಂಕ ವ್ಯಕ್ತಪಡಿಸಿವೆ.

ಸೇನೆ ಹಿಂತೆಗೆತ ಕುರಿತು ಮಾಡಿಕೊಂಡಿರುವ ಒಪ್ಪಂದವನ್ನು ಪಾಲಿಸಲು ಬದ್ಧ ಎಂದು ಅಮೆರಿಕ ಅಧ್ಯಕ್ಷ ಜೊ ಬೈಡನ್ ಹೇಳಿದ್ದಾರೆ. ಆದರೆ ಜನರ ಸ್ಥಳಾಂತರಕ್ಕಾಗಿ ಹೆಚ್ಚುವರಿ ಸಮಯ ಬೇಕಾಗಿದ್ದು, ಮಾತುಕತೆ ನಡೆಸುವಂತೆ ಒತ್ತಡ ಹೆಚ್ಚುತ್ತಿದೆ. ತೆರವು ಕಾರ್ಯಾಚರಣೆಗಾಗಿ ಸಾವಿರಾರು ಸೈನಿಕರನ್ನು ಕಾಬೂಲ್‌ನಲ್ಲಿ ಅಮೆರಿಕ ನಿಯೋಜಿಸಿದೆ.

ಗಡುವು ವಿಸ್ತರಣೆಗೆ ಜಿ–7 ಶೃಂಗಸಭೆಯಲ್ಲಿ ಒತ್ತಡ ಹೇರುವುದಾಗಿ ಬ್ರಿಟನ್ ಮಂಗಳವಾರ ತಿಳಿಸಿದೆ. ಆದರೆ, ರಕ್ಷಣೆ ಅಗತ್ಯವಿರುವ ಎಲ್ಲರನ್ನೂ ಗಡುವಿನ ಒಳಗೆ ಸ್ಥಳಾಂತರಿಸಲು ಪಾಶ್ಚಿಮಾತ್ಯ ಮಿತ್ರ ರಾಷ್ಟ್ರಗಳಿಂದ ಸಾಧ್ಯವಾಗದು ಎಂದು ಜರ್ಮನಿ ಮಂಗಳವಾರ ಪ್ರತಿಪಾದಿಸಿದೆ.

ಅಮೆರಿಕವು ಗಡುವಿಗೆ ಅಂಟಿಕೊಂಡರೂ, ಕಾಬೂಲ್ ವಿಮಾನ ನಿಲ್ದಾಣದಿಂದ ಸ್ಥಳಾಂತರ ಪ್ರಕ್ರಿಯೆಯನ್ನು ಸ್ಥಗಿತಗೊಳಿಸುವುದಿಲ್ಲ ಎಂದು ಈ ಮೊದಲು ಫ್ರಾನ್ಸ್ ಹೇಳಿತ್ತು. ಸ್ಪೇನ್‌ಗಾಗಿ ಕೆಲಸ ಮಾಡಿದ ಎಲ್ಲ ಅಫ್ಘನ್ನರನ್ನು ರಕ್ಷಿಸಲು ಸಾಧ್ಯವಾಗದಿರಬಹುದು ಎಂದು ಸ್ಪೇನ್ ಹೇಳಿದೆ.

'ಆಪರೇಷನ್ ಅಪಗಾನ್' ಅಂಗವಾಗಿ ಕಾಬೂಲ್‌ನಿಂದ ಕರೆತಂದಿರುವ ನಿರಾಶ್ರಿತರನ್ನು ಅಬುದಾಭಿ ಸಮೀಪದ ಫ್ರಾನ್ಸ್ ಸೇನಾ ವಾಯುನೆಲೆಯಲ್ಲಿ ಇರಿಸಲಾಗಿದೆ —ಎಎಫ್‌ಪಿ ಚಿತ್ರ

> ತೆರವಿಗೆ ನಮಗೆ ಹೆಚ್ಚಿನ ಸಮಯ ಬೇಕಿದೆ. ಆದರೆ ಈಗ ಅದು ಅಸಂಭವ. ಉಳಿದಿರುವುದು ಕೆಲವೇ ಗಂಟೆಗಳು ಮಾತ್ರ
>
> **ಬೆನ್ ವ್ಯಾಲೇಸ್,** ಬ್ರಿಟನ್ ರಕ್ಷಣಾ ಸಚಿವ

ಜಿ–7 ಸಭೆಯಲ್ಲಿ ಒತ್ತಡ ಹೇರುವ ಸಾಧ್ಯತೆ: ಕಾಬೂಲ್‌ನಲ್ಲಿ ಅಮೆರಿಕದ ಸೈನ್ಯವನ್ನು ಆಗಸ್ಟ್ 31ರ ನಂತರವೂ ಉಳಿಸಲು ಜಿ–7 ರಾಷ್ಟ್ರಗಳು ಬಯಸಿವೆ. ಈ ಸಂಬಂಧ ಜಿ–7 ರಾಷ್ಟ್ರಗಳ ನಾಯಕರು ಅಮೆರಿಕ ಅಧ್ಯಕ್ಷ ಜೊ ಬೈಡನ್ ಮೇಲೆ ಒತ್ತಡ ಹೇರುವ ನಿರೀಕ್ಷೆಯಿದೆ. ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅಧ್ಯಕ್ಷತೆಯಲ್ಲಿ ನಡೆಲಿರುವ ವರ್ಚುವಲ್ ಸಭೆಯಲ್ಲಿ ಗುಡುವಿನ ಬಗ್ಗೆ ಚರ್ಚೆಯಾಗಲಿದೆ.

ಅಂಕಿ–ಅಂಶ

50,000
9 ದಿನಗಳ ಹಿಂದೆ ತಾಲಿಬಾನ್ ಅಧಿಕಾರಕ್ಕೆ ಬಂದ ನಂತರ ಕಾಬೂಲ್ ವಿಮಾನ ನಿಲ್ದಾಣದಿಂದ ತೆರವು ಮಾಡಲಾದ ವಿದೇಶಿಯರು ಮತ್ತು ಅಫ್ಘನ್ನರ ಸಂಖ್ಯೆ

21,600
ಕಳೆದ 24 ಗಂಟೆಗಳಲ್ಲಿ ಅಮೆರಿಕ ಹಾಗೂ ಮಿತ್ರಪಡೆಗಳು ತೆರವು ಮಾಡಿದ ಜನರ ಸಂಖ್ಯೆ

ಸಿಐಎ ಮುಖ್ಯಸ್ಥನ ರಹಸ್ಯ ಭೇಟಿ

ವಾಷಿಂಗ್ಟನ್ (ರಾಯಿಟರ್ಸ್): ಗಡುವಿನೊಳಗೆ ಅಫ್ಘಾನಿಸ್ತಾನವನ್ನು ತೊರೆಯುವ ಒತ್ತಡದ ಮಧ್ಯೆಯೇ, ತಾಲಿಬಾನ್ ನಾಯಕನನ್ನು ಭೇಟಿ ಮಾಡಲು ಅಮೆರಿಕದ ಅಧ್ಯಕ್ಷ ಜೊ ಬೈಡನ್ ಅವರು ಸಿಐಎ ಮುಖ್ಯಸ್ಥರನ್ನು ಸೋಮವಾರ ಕಳುಹಿಸಿದ್ದರು ಎಂಬುದಾಗಿ ವರದಿಯಾಗಿದೆ.

ಅಮೆರಿಕದ ಕೇಂದ್ರೀಯ ಗುಪ್ತಚರ ಸಂಸ್ಥೆಯ (ಸಿಐಎ) ನಿರ್ದೇಶಕ ವಿಲಿಯಂ ಬರ್ನ್ಸ್ ಅವರು ಕಾಬೂಲ್‌ನಲ್ಲಿ ತಾಲಿಬಾನ್ ನಾಯಕ ಅಬ್ದುಲ್ ಘನಿ ಬರದರ್ ಅವರನ್ನು ಸೋಮವಾರ ಭೇಟಿಯಾದರು ಎಂದು ವಾಷಿಂಗ್ಟನ್ ಪೋಸ್ಟ್ ವರದಿ ಮಾಡಿದೆ. ಎನ್‌ಬಿಸಿ ಹಾಗೂ ಫಾಕ್ಸ್ ನ್ಯೂಸ್ ಸಹ ಮೂಲಗಳನ್ನು ಉಲ್ಲೇಖಿಸಿ ವರದಿ ಮಾಡಿವೆ. ಆದರೆ ಶ್ವೇತಭವನ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.



ಅಫ್ಘಾನಿಸ್ತಾನದಿಂದ ಬಂದ ಗುಂಪಿನಲ್ಲಿದ್ದ ಮಗುವೊಂದು ಇಟಲಿಯ ವಿಮಾನ ನಿಲ್ದಾಣವೊಂದರಲ್ಲಿ ಕುಳಿತಿದ್ದ ದೃಶ್ಯ ರಾಯಿಟರ್ಸ್ ಚಿತ್ರ

ಅಫ್ಘನ್ ಸ್ಥಿತಿಗೆ ಅಮೆರಿಕ ಕಾರಣ: ಚೀನಾ

ಬೀಜಿಂಗ್/ಸಿಂಗಪುರ (ಪಿಟಿಐ): ಅಫ್ಘಾನಿಸ್ತಾನದಲ್ಲಿನ ತುರ್ತುಸ್ಥಿತಿ ಬಗ್ಗೆ ಚೀನಾ ಮತ್ತು ಅಮೆರಿಕ ಜಟಾಪಟಿ ನಡೆಸಿವೆ. 'ಅಫ್ಘಾನಿಸ್ತಾನದಲ್ಲಿನ ಈಗಿನ ಸ್ಥಿತಿಗೆ ಅಮೆರಿಕವೇ ಕಾರಣ' ಎಂದು ಚೀನಾ ಛೇಡಿಸಿದೆ. ದಕ್ಷಿಣ ಚೀನಾ ಸಮುದ್ರವು ತನ್ನದು ಎಂದು ಪ್ರತಿಪಾದಿಸುವ ಮೂಲಕ ಬೇರೆ ದೇಶಗಳ ಸಾರ್ವಭೌಮತೆಗೆ ಚೀನಾ ಧಕ್ಕೆ ತರುತ್ತಿದೆ ಎಂದು ಅಮೆರಿಕ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಹೇಳಿದ್ದರು. ಇದಕ್ಕೆ ಚೀನಾ ಹೀಗೆ ಪ್ರತಿಕ್ರಿಯೆ ನೀಡಿದೆ.

ಸಿಂಗಪುರ ಪ್ರವಾಸದಲ್ಲಿದ್ದ ಕಮಲಾ ಹ್ಯಾರಿಸ್ ಅವರು, 'ದಕ್ಷಿಣ ಚೀನಾ ಸಮುದ್ರದ ಬಹುತೇಕ ಭಾಗ ತನ್ನದು ಎಂದು ಚೀನಾ ಹೇಳುತ್ತಿದೆ. ಬೆದರಿಕೆ, ಹೆದರಿಕೆ ಇದನ್ನು ಚೀನಾ ನೆರೆ ದೇಶಗಳ ಮೇಲೆ ಹೇರುತ್ತಿದೆ. ಆ ಮೂಲಕ ಮುಕ್ತ ಮತ್ತು ಸ್ವತಂತ್ರ ಸಮುದ್ರಯಾನಕ್ಕೆ ಧಕ್ಕೆ ತರುತ್ತಿದೆ. ಈ ವಿಚಾರದಲ್ಲಿ ಅಮೆರಿಕವು ತನ್ನ ಮಿತ್ರ ರಾಷ್ಟ್ರಗಳ ಪರವಾಗಿ ನಿಲ್ಲುತ್ತದೆ. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದು ಹೇಳಿದ್ದರು.

ಇದಕ್ಕೆ ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ವಾಂಗ್ ವೆನ್‌ಬಿನ್ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ. 'ಅಫ್ಘಾನಿಸ್ತಾನದಿಂದ ಸೇನೆಯನ್ನು ವಾಪಸ್ ಕರೆದುಕೊಂಡ ರೀತಿಯು, ಅಮೆರಿಕದ ವಿಶ್ವಾಸಾರ್ಹತೆಯನ್ನು ಕುಂದಿಸಿದೆ' ಎಂದು ಅವರು ಹೇಳಿದ್ದಾರೆ.

'ಅಮೆರಿಕದ ಆಡಳಿತ-ಸುವ್ಯವಸ್ಥೆ ಏನು ಎಂಬುದನ್ನು ಅಫ್ಘಾನಿಸ್ತಾನದಲ್ಲಿನ ಇಂದಿನ ಸ್ಥಿತಿ ಪ್ರತಿಬಿಂಬಿಸುತ್ತಿದೆ. ಅಮೆರಿಕವು ಸಾರ್ವಭೌಮ ರಾಷ್ಟ್ರವೊಂದರಲ್ಲಿ ಸೇನಾ ಕಾರ್ಯಾಚರಣೆ ನಡೆಸಲಷ್ಟೇ ಆಸಕ್ತಿ ವಹಿಸುತ್ತದೆ. ಆದರೆ ಅಲ್ಲಿನ ಜನರ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಅಂತರರಾಷ್ಟ್ರೀಯ ಸಮುದಾಯದ ಅಭಿಪ್ರಾಯ ಕೇಳದೆಯೇ ನೀವು ಬರುತ್ತೀರಿ, ನಿರ್ಗಮಿಸುತ್ತೀರಿ. ನಿಮ್ಮ ಮಿತ್ರರಾಷ್ಟ್ರಗಳನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವುದಿಲ್ಲ. ಅಮೆರಿಕವು ಕೇವಲ ತನ್ನ ಹಿತಾಸಕ್ತಿಯ ಬಗ್ಗೆ ಯೋಚಿಸುತ್ತದೆ. ಅದಕ್ಕಾಗಿ ಬೇರೆ ದೇಶಗಳನ್ನು ತುಳಿಯುತ್ತದೆ' ಎಂದು ವಾಂಗ್ ಆರೋಪಿಸಿದ್ದಾರೆ.

ಶಾಸಕರು, ಸಂಸದರ ವಿಚಾರಣೆಗೆ ಸ್ಥಾಪನೆಯಾಗಿದ್ದ ಕೋರ್ಟ್

ಎರಡು ವಿಶೇಷ ಕೋರ್ಟ್‌ಗೆ ಒಬ್ಬ ನ್ಯಾಯಾಧೀಶರು

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಸಂಸದರು, ಶಾಸಕರ ವಿರುದ್ಧದ ಪ್ರಕರಣಗಳ ವಿಚಾರಣೆಗಾಗಿ ಎರಡು ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ. ಆದರೆ ಒಂದು ಕೋರ್ಟ್‌ನಲ್ಲಿ ನ್ಯಾಯಾಧೀಶರು ಇಲ್ಲ ಎಂದು ಸುಪ್ರೀಂ ಕೋರ್ಟ್‌ಗೆ ಮಂಗಳವಾರ ತಿಳಿಸಲಾಗಿದೆ.

'ವಿಶೇಷ ನ್ಯಾಯಾಲಯಗಳೆರಡೂ ಸೆಷನ್ಸ್ ಹಂತದಲ್ಲಿವೆ. ಬಿ.ಜಯಂತ ಕುಮಾರ್ ಅವರ ನೇತೃತ್ವದ ಎರಡೂ ನ್ಯಾಯಾಲಯಗಳಲ್ಲಿ ಒಟ್ಟು 155 ಪ್ರಕರಣಗಳು ಬಾಕಿ ಉಳಿದಿವೆ' ಎಂದು ಹಿರಿಯ ವಕೀಲರಾದ ವಿಜಯ್ ಹಂಸರಿಯಾ ಹಾಗೂ ಸ್ನೇಹಾ ಕಾಲಿತಾ ಅವರು ಸಲ್ಲಿಸಿದ ವಸ್ತುಸ್ಥಿತಿ ವರದಿಯಲ್ಲಿ ತಿಳಿಸಿದ್ದಾರೆ.

ಸೆಷನ್ಸ್ ಮಟ್ಟದಲ್ಲಿ ರಚನೆಯಾದ ಎರಡನೇ ವಿಶೇಷ ನ್ಯಾಯಾಲಯದ ನೇತೃತ್ವ ವಹಿಸಲು ಇನ್ನೊಬ್ಬ ನ್ಯಾಯಾಧೀಶರನ್ನು ನೇಮಿಸುವಂತೆ ಕರ್ನಾಟಕ ಹೈಕೋರ್ಟ್‌ಗೆ ಆಡಳಿತಾತ್ಮಕ ನಿರ್ದೇಶನ ನೀಡುವಂತೆ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಲಾಗಿದೆ.

ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಹೊಸ ನ್ಯಾಯಾಲಯವನ್ನು ಏಪ್ರಿಲ್ 9ರ ಸರ್ಕಾರಿ ಆದೇಶದ ಅನ್ವಯ ಸ್ಥಾಪಿಸಲಾಗಿದ್ದು, ನ್ಯಾಯಾಂಗಅಧಿಕಾರಿಯನ್ನುನೇಮಿಸಲಾಗಿಲ್ಲ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಎರಡುವಾರಗಳಅವಧಿಯಲ್ಲಿನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಹೈಕೋರ್ಟ್ ಮತ್ತು ರಾಜ್ಯ ಸರ್ಕಾರಕ್ಕೆ ಕೋರ್ಟ್ ನಿರ್ದೇಶಿಸಬಹುದು ಎಂದು ವರದಿ ಅಭಿಪ್ರಾಯಪಟ್ಟಿದೆ. ಮೊದಲನೇ ವಿಶೇಷ ನ್ಯಾಯಾಲಯದ ಎದುರು 2021ರ ಆಗಸ್ಟ್ 12ರ ವೇಳೆಗೆ 82 ಪ್ರಕರಣಗಳು ಬಾಕಿ ಉಳಿದಿದ್ದವು. ಈ ಪೈಕಿ 45 ಪ್ರಕರಣಗಳು ಸೆಷನ್ಸ್, 37 ಪ್ರಕರಣಗಳು ಮ್ಯಾಜಿಸ್ಟ್ರೇಟ್ ವಿಚಾರಣೆಗೆ ಸಂಬಂಧಿಸಿವೆ ಎಂದು ವರದಿ ತಿಳಿಸಿದೆ.

ಎರಡನೇ ಕೋರ್ಟ್ ಎದುರು 73 ಪ್ರಕರಣಗಳು ವಿಚಾರಣೆಗೆ ಬಾಕಿ ಇದ್ದು, ಈ ಪೈಕಿ 15 ಪ್ರಕರಣಗಳು ಸೆಷನ್ಸ್ ಹಾಗೂ 58 ಪ್ರಕರಣಗಳು ಮ್ಯಾಜಿಸ್ಟ್ರೇಟ್ ವಿಚಾರಣೆಗೆ ಸಂಬಂಧಿಸಿವೆ.

ಹಾಲಿ ಮತ್ತು ಮಾಜಿ ಸಂಸದರು/ ಶಾಸಕರ ವಿರುದ್ಧ ಕ್ರಿಮಿನಲ್ ವಿಚಾರಣೆಯನ್ನು ತ್ವರಿತಗೊಳಿಸಲು ನ್ಯಾಯಾಲಯಗಳ ಸ್ಥಾಪನೆಗೆ ಕೋರಿ ವಕೀಲರಾದ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು 2016ರಲ್ಲಿ ಅರ್ಜಿ ಸಲ್ಲಿಸಿದ್ದರು.

ಚರ್ಮ ಸ್ಪರ್ಶದ ತೀರ್ಪು ವಜಾಕ್ಕೆ ಒತ್ತಾಯ

ನವದೆಹಲಿ: ಆರೋಪಿ ಹಾಗೂ ಬಾಲಕಿ ನಡುವಣ ಪರಸ್ಪರ ಚರ್ಮ ಸ್ಪರ್ಶವಿಲ್ಲದೇ ಹೋದಲ್ಲಿ, ಅದನ್ನು ಲೈಂಗಿಕ ದೌರ್ಜನ್ಯ ಎನ್ನಲಾಗದು ಎಂದು ಬಾಂಬೆ ಹೈಕೋರ್ಟ್ ನೀಡಿದ ತೀರ್ಪನ್ನು ಅನೂರ್ಜಿತಗೊಳಿಸುವಂತೆ, ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಸುಪ್ರೀಂ ಕೋರ್ಟ್‌ಗೆ ಮಂಗಳವಾರ ಮನವಿ ಮಾಡಿದ್ದಾರೆ.

ಬಾಂಬೆ ಹೈಕೋರ್ಟ್ ನೀಡಿದ್ದ ತೀರ್ಪನ್ನು 'ಅಪಾಯಕಾರಿ ಹಾಗೂ ಅವಮಾನಕರ' ಎಂದಿರುವ ಅವರು, 'ಕೈಗವಸು ಧರಿಸಿ ಹೆಣ್ಣುಮಗುವೊಂದರ ಮೇಲೆ ದೌರ್ಜನ್ಯ ಎಸಗಿದರೆ ಅಂಥವನನ್ನು ಖುಲಾಸೆ ಮಾಡಲಾಗುತ್ತದೆ ಎಂಬುದು ಈ ತೀರ್ಪಿನ ಅರ್ಥ' ಎಂದು ವಾದಿಸಿದರು.

ಬಾಂಬೆ ಹೈಕೋರ್ಟ್ ತೀರ್ಪು ಪ್ರಶ್ನಿಸಿ ತಾವೇ ಸಲ್ಲಿಸಿರುವ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ಅಟಾರ್ನಿ ಜನರಲ್ ಈ ವಾದ ಮುಂದಿಟ್ಟರು. ಮಹಾರಾಷ್ಟ್ರ ಸರ್ಕಾರದ ವಕೀಲರೂ ಅಟಾರ್ನಿ ಜನರಲ್ ವಾದವನನ್ನು ಬೆಂಬಲಿಸಿದರು.

'ನಾಳೆ ಯಾರೋ ಒಬ್ಬ, ವೈದ್ಯಕೀಯ ಕೈಗವಸು ಧರಿಸಿ ಮಹಿಳೆಯ ಇಡೀ ದೇಹವನ್ನು ಸ್ಪರ್ಶಿಸುತ್ತಾನೆಂದರೆ, ಈ ತೀರ್ಪಿನ ಪ್ರಕಾರ ಆತನಿಗೆ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ ಅಡಿ ಶಿಕ್ಷೆ ನೀಡಲಾಗುವುದಿಲ್ಲ. ತೀರ್ಪು ನೀಡಿದವರು, ದೂರಗಾಮಿ ಪರಿಣಾಮಗಳನ್ನು ಗ್ರಹಿಸಿಲ್ಲ' ಎಂಬುದನ್ನು ನ್ಯಾಯಮೂರ್ತಿಗಳಾದ ಯು.ಯು. ಲಲಿತ್ ಹಾಗೂ ಅಜಯ್ ರಸ್ತೋಗಿ ಅವರನ್ನು ಒಳಗೊಂಡ ನ್ಯಾಯಪೀಠಕ್ಕೆ ವೇಣುಗೋಪಾಲ್ ತಿಳಿಸಿದರು.

ಪೋಕ್ಸೊ ಅಡಿಯ ಇನ್ನೊಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಂಬೆ ಹೈಕೋರ್ಟ್ ನೀಡಿದ ವಿವಾದಿತ ತೀರ್ಪನ್ನು ಪ್ರಶ್ನಿಸಿ, ಮಹಾರಾಷ್ಟ್ರ ಸರ್ಕಾರ ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಯೂ ಮಂಗಳವಾರ ನಿಗದಿಯಾಗಿತ್ತು. ಆದರೆ, ಆರೋಪಿಯ ಪರ ವಕೀಲರು ಇರಲಿಲ್ಲ. ಆರೋಪಿಗೆ ಇಬ್ಬರು ಹಿರಿಯ ವಕೀಲರ ಸೇವೆಯನ್ನು ಒದಗಿಸುವಂತೆ ಕಾನೂನು ಸೇವಾ ಪ್ರಾಧಿಕಾರಕ್ಕೆ ಸೂಚಿಸಿದ ನ್ಯಾಯಪೀಠ, ಎರಡೂ ಪ್ರಕರಣಗಳ ಅಂತಿಮ ವಿಚಾರಣೆಯನ್ನು ಸೆ.14ಕ್ಕೆ ನಿಗದಿಪಡಿಸಿತು.

ಕಾಬೂಲ್‌ನಿಂದ ಕ್ಷೇಮವಾಗಿ ಮರಳಿದ ಯುವಕ

ಪ್ರಜಾವಾಣಿ ವಾರ್ತೆ

ಕಾರವಾರ: ಅಫ್ಘಾನಿಸ್ತಾನದ ಕಾಬೂಲ್‌ನಲ್ಲಿ ಚಾಲಕನಾಗಿದ್ದ, ತಾಲ್ಲೂಕಿನ ಸದಾಶಿವಗಡದ ರಾಜೇಶ ಪಡುವಳಕರ್ ಮಂಗಳವಾರ ಸುರಕ್ಷಿತವಾಗಿ ಮರಳಿದ್ದಾರೆ. ಇದರಿಂದ ಅವರು ಮತ್ತು ಕುಟುಂಬ ಸದಸ್ಯರು ನಿಟ್ಟುಸಿರು ಬಿಟ್ಟಿದ್ದಾರೆ.

ಅಮೆರಿಕದ ಸೇನೆಗೆ ಆಹಾರ ಪೂರೈಕೆ ಮಾಡುವ 'ಇಕೊಲಾಗ್' ಎಂಬ ಸಂಸ್ಥೆಯಲ್ಲಿ ಮೂರು ವರ್ಷಗಳಿಂದ ಅವರು ದುಡಿಯುತ್ತಿದ್ದರು. ಅಫ್ಘಾನಿಸ್ತಾನವನ್ನು ತಾಲಿಬಾನ್ ವಶಕ್ಕೆ ಪಡೆದ ಬಳಿಕ ಅಮೆರಿಕ ಸೇನೆಯ ಆಶ್ರಯದಲ್ಲಿದ್ದರು.

ಅವರನ್ನು ಕಾಬೂಲ್‌ನಿಂದ ಕತಾರ್‌ಗೆ ವಿಮಾನದಲ್ಲಿ ಕಳುಹಿಸಿದ್ದು, ಅಲ್ಲಿಂದ ಭಾರತೀಯ ವಾಯುಪಡೆಯು ವಿಮಾನದಲ್ಲಿ ದೆಹಲಿಗೆ ಬಂದರು. ಮಂಗಳವಾರ ಬೆಳಿಗ್ಗೆ ತಾರಿವಾಡದ ತಮ್ಮ ಮನೆಗೆ ತಲುಪಿದರು.

ರಾಜೇಶ ಪಡುವಳಕರ್

ಅಫ್ಘಾನಿಸ್ತಾನದ ಸ್ಥಿತಿಯ ಬಗ್ಗೆ ಪ್ರತಿಕ್ರಿಯಿಸಿ, 'ಆ.14ರಂದೇ ಅಲ್ಲಿನ ಸ್ಥಿತಿ ಹದಗೆಡುತ್ತಿರುವ ಬಗ್ಗೆ ಅಮೆರಿಕದ ಸೇನೆ ಸೂಚನೆ ನೀಡಿತ್ತು. ತಾಯ್ನಾಡಿಗೆ ವಾಪಸ್ ಬಂದಿದ್ದು ಇನ್ನಿಲ್ಲದಂಥ ಸಂತಸ ತಂದಿದೆ' ಎಂದರು.

'ಸುಮಾರು 20 ಸಾವಿರ ಜನ ವಿಮಾನನಿಲ್ದಾಣದಲ್ಲಿ ಸೇರಿದ್ದರು. ನಿಲ್ದಾಣದ ಹೊರಗೆ ಗುಂಡಿನ ಸದ್ದು ಕೇಳಿ ಬರುತ್ತಿತ್ತು. ನಮ್ಮ ಸ್ಥಿತಿ ಏನಾಗಲಿದೆ ಎಂಬ ಆತಂಕ ಕ್ಷಣ ಕ್ಷಣಕ್ಕೂ ಹೆಚ್ಚಾಗುತ್ತಿತ್ತು. ಅಲ್ಲಿಂದ ಹೊರಟರೆ ಸಾಕು ಎಂಬಂತಾಗಿತ್ತು' ಎಂದರು.

ತ್ವರಿತ ತನಿಖೆ, ಮೇಲ್ವಿಚಾರಣಾ ಸಮಿತಿ ರಚನೆಗೆ 'ಸುಪ್ರೀಂ' ಗೆ ಮನವಿ

ನವದೆಹಲಿ: ಹಾಲಿ ಮತ್ತು ಮಾಜಿ ಸಂಸದರು, ಶಾಸಕರ ವಿರುದ್ಧ ಸಿಬಿಐ ಹಾಗೂ ಜಾರಿ ನಿರ್ದೇಶನಾಲಯ (ಇ.ಡಿ) ದಾಖಲಿಸಿರುವ ಪ್ರಕರಣಗಳ ತನಿಖೆ ವಿಳಂಬವಾಗಿರುವುದಕ್ಕೆ ಕಾರಣಗಳನ್ನು ಪರಾಮರ್ಶಿಸಲು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಅಥವಾ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಮೇಲ್ವಿಚಾರಣಾ ಸಮಿತಿ ರಚಿಸುವಂತೆ ಸುಪ್ರೀಂ ಕೋರ್ಟ್‌ಗೆ ಮಂಗಳವಾರ ಮನವಿ ಮಾಡಲಾಗಿದೆ.

ಸಿಬಿಐ, ಇ.ಡಿ ಮುಖ್ಯಸ್ಥರು ಮತ್ತು ಗೃಹ ಸಚಿವಾಲಯದ ಕಾರ್ಯದರ್ಶಿ ಈ ಸಮಿತಿಯಲ್ಲಿರಬೇಕು. ತನಿಖೆಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಸಮಿತಿ ನಿರ್ದೇಶನ ನೀಡಬೇಕು ಎಂದೂ ಮನವಿ ಮಾಡಲಾಗಿದೆ.

ಈ ವಿಷಯವಾಗಿ ಸುಪ್ರೀಂಕೋರ್ಟ್‌ಗೆ ನೆರವಾಗಲು ನೇಮಕವಾಗಿರುವ ಹಿರಿಯ ವಕೀಲ (ಅಮಿಕಸ್ ಕ್ಯೂರಿ) ವಿಜಯ್ ಹನ್ಸಾರಿಯಾ, ವಕೀಲೆ ಸ್ನೇಹಾ ಕಲಿತಾ ಅವರು ಸುಪ್ರೀಂಕೋರ್ಟ್‌ಗೆ ಸಲ್ಲಿಸಿರುವ ವಸ್ತುಸ್ಥಿತಿ ವರದಿಯಲ್ಲಿ ಈ ಮನವಿ ಮಾಡಿದ್ದಾರೆ.

ಹಾಲಿ ಹಾಗೂ ಮಾಜಿ ಸಂಸದರು, ಶಾಸಕರು ಸೇರಿದಂತೆ 37 ಜನರ ವಿರುದ್ಧ ಸಿಬಿಐ ದಾಖಲಿಸಿರುವ ಪ್ರಕರಣಗಳ ತನಿಖೆ ಬಾಕಿ ಇದೆ. ದೇಶದ ವಿಶೇಷ ನ್ಯಾಯಾಲಯಗಳಲ್ಲಿ ಸಿಬಿಐ ಸಲ್ಲಿಸಿರುವ 151 ಪ್ರಕರಣಗಳ ವಿಚಾರಣೆ ಬಾಕಿ ಇದೆ. ಈ ಪೈಕಿ 58 ಪ್ರಕರಣಗಳಲ್ಲಿ ಜೀವಾವಧಿ ಶಿಕ್ಷೆ ವಿಧಿಸಬಹುದಾಗಿದೆ ಎಂದೂ ಅವರು ವಿವರಿಸಿದ್ದಾರೆ.

ಉಕ್ರೇನ್ ವಿಮಾನ ಅಪಹರಣ ಗೊಂದಲ

ಕೀವ್ (ಎಎಫ್‌ಪಿ): ಆಗಸ್ಟ್ 15ರಂದು ಅಫ್ಘಾನಿಸ್ತಾನದ ಕಾಬೂಲ್ ವಿಮಾನ ನಿಲ್ದಾಣದಿಂದ ಹೊರಟ ಜೆಟ್ ವಿಮಾನವೊಂದನ್ನು ಅಪಹರಿಸಲಾಗಿದೆ ಎಂದು ಉಕ್ರೇನ್‌ನ ಉಪ ವಿದೇಶಾಂಗ ಸಚಿವ ಯೆವ್ಗೆನಿ ಯೆನ್ ಮಂಗಳವಾರ ಹೇಳಿದ್ದಾರೆ. ಆದರೆ ಯಾವುದೇ ವಿಮಾನ ಅಪಹರಣವಾಗಿಲ್ಲ ಎಂದು ಅವರದೇ ಸಚಿವಾಲಯದ ಅಧಿಕಾರಿಗಳು ವ್ಯತಿರಿಕ್ತ ಹೇಳಿಕೆ ನೀಡಿದ್ದಾರೆ.

ಜನರ ಸ್ಥಳಾಂತರಕ್ಕೆ ತೆರಳಿದ್ದ ಉಕ್ರೇನ್ ವಿಮಾನವನ್ನು ಕಾಬೂಲ್‌ನಲ್ಲಿ ಅಪಹರಿಸಿ, ಅಪರಿಚಿತ ಪ್ರಯಾಣಿಕರೊಂದಿಗೆ ಇರಾನ್‌ಗೆ ಹಾರಿಸಲಾಗಿದೆ ಎಂದು ಯೆನಿನ್ ಅವರು ಖಾಸಗಿ ರೇಡಿಯೊ ಹ್ರೋಮಾಡ್ಸ್ಕೆಗೆ ತಿಳಿಸಿದ್ದರು.

ಕಾಬೂಲ್ ಅಥವಾ ಇತರೆಡೆ ಯಾವುದೇ ಉಕ್ರೇನ್ ವಿಮಾನವನ್ನು ಅಪಹರಿಸಿಲ್ಲ ಎಂದು ವಕ್ತಾರ ಒಲೆಗ್ ನಿಕೊಲೆಂಕೊ ಸ್ಪಷ್ಟಪಡಿಸಿದ್ದಾರೆ. ಯೆನಿನ್ ಅವರ ಮಾತುಗಳು ಸತ್ಯಕ್ಕೆ ದೂರ ಎಂದು ಹೇಳಿದ್ದಾರೆ. ಒಂದು ಸೇನಾ, ಎರಡು ನಾಗರಿಕ ವಿಮಾನಗಳು ಸೇರಿ 256 ಪ್ರಯಾಣಿಕರನ್ನು ಹೊತ್ತು ಉಕ್ರೇನ್‌ಗೆ ಸುರಕ್ಷಿತವಾಗಿ ಮರಳಿವೆ ಎಂದಿದ್ದಾರೆ.

'ಯೆನಿನ್ ಅವರು ಉಲ್ಲೇಖಿಸಿದ ವಿಮಾನವನ್ನು ತೆರವು ಕಾರ್ಯಾಚರಣೆಯಲ್ಲಿ ಬಳಸಿಕೊಳ್ಳುವ ಬಗ್ಗೆ ಚರ್ಚೆ ನಡೆದಿತ್ತು. ಆದರೆ ಸೂಚನೆ ನೀಡುವ ಮೊದಲೇ ಅದು ತೆರಳಿದ್ದರಿಂದ ಕಾರ್ಯಾಚರಣೆಗೆ ಅದು ಬಳಕೆಯಾಗಲಿಲ್ಲ' ಎಂದು ಮೂಲಗಳು ತಿಳಿಸಿವೆ.

ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು

ಕೆನೆಪದರ ನಿಗದಿ: ವಾರ್ಷಿಕ ಆದಾಯವೇ ಮಾನದಂಡವಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಇತರೆ ಹಿಂದುಳಿದ ವರ್ಗಗಳಲ್ಲಿ 'ಕೆನೆ ಪದರ'ವನ್ನು ನಿರ್ಧರಿಸಲು ಕೇವಲ ವಾರ್ಷಿಕ ಆದಾಯವನ್ನು ಮಾನದಂಡವಾಗಿ ಪರಿಗಣಿಸಬಾರದು' ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ. 'ಕೇವಲ ವಾರ್ಷಿಕ ಆದಾಯದ ಆಧಾರದ ಮೇಲೆ ಒಂದು ವರ್ಗವನ್ನು ಶಿಕ್ಷಣ ಮತ್ತು ಉದ್ಯೋಗ ಮೀಸಲಾತಿಯಿಂದ ದೂರವಿಡಲಾಗದು' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಇತರೆ ಹಿಂದುಳಿದ ವರ್ಗಗಳಲ್ಲಿ ವಾರ್ಷಿಕ ₹ 6 ಲಕ್ಷಕ್ಕಿಂತ ಹೆಚ್ಚು ಆದಾಯ ಹೊಂದಿರುವ ಕುಟುಂಬದವರನ್ನು ಕೆನೆಪದರ ಎಂದು ಗುರುತಿಸಿದ ಹರಿಯಾಣ ಸರ್ಕಾರದ 2016ರ ಅಧಿಸೂಚನೆ ವಿರುದ್ಧ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆ ನಡೆಸಿ ಸುಪ್ರೀಂ ಕೋರ್ಟ್ ಈ ತೀರ್ಪು ನೀಡಿದೆ. 'ಸಾಮಾಜಿಕ, ಆರ್ಥಿಕ ಮತ್ತು ಇತರೆ ಮಾನದಂಡಗಳ ಆಧಾರದಲ್ಲಿ ಕೆನೆಪದರವನ್ನು ಗುರುತಿಸಬೇಕು ಎಂದು ಇದೇ ನ್ಯಾಯಾಲಯವು 1992ರ ಇಂದ್ರಾ ಸಾಹ್ನಿ ಪ್ರಕರಣದಲ್ಲಿ ಸ್ಪಷ್ಟವಾಗಿ ಹೇಳಿದೆ' ಎಂದು ನ್ಯಾಯಮೂರ್ತಿಗಳಾದ ಎಲ್.ನಾಗೇಶ್ವರ ರಾವ್ ಮತ್ತು ಅನಿರುದ್ಧಾ ಬೋಸ್ ಅವರಿದ್ದ ಪೀಠವು ಹೇಳಿದೆ.

'2016ರ ಆಗಸ್ಟ್ 17ರಂದು ಹೊರಡಿಸಿರುವ ಅಧಿಸೂಚನೆಯಲ್ಲಿ, ವಾರ್ಷಿಕ ₹ 6 ಲಕ್ಷಕ್ಕಿಂತ ಹೆಚ್ಚು ಆದಾಯ ಇರುವ ಕುಟುಂಬದವರನ್ನು ಕೆನೆ ಪದರ ಎಂದು ಗುರುತಿಸಲಾಗುತ್ತದೆ. ಆ ಮೂಲಕ ಶಿಕ್ಷಣ ಮತ್ತು ಉದ್ಯೋಗದಲ್ಲಿನ ಮೀಸಲಾತಿಯಿಂದ ಹೊರಗಿಡಲಾಗುತ್ತದೆ. ಇದು ಇಂದ್ರಾ ಸಾಹ್ನಿ ಪ್ರಕರಣದ ತೀರ್ಪಿನ ಸ್ಪಷ್ಟ ಉಲ್ಲಂಘನೆ. ಅಲ್ಲದೆ ವ್ಯಕ್ತಿಗತ ಆದಾಯ ಮತ್ತು ಕೃಷಿ ಆದಾಯವನ್ನು ಲೆಕ್ಕಹಾಕಿ, ಒಟ್ಟುಗೂಡಿಸಲೂ ಈ ಅಧಿಸೂಚನೆ ಅವಕಾಶ ನೀಡುತ್ತದೆ. ಇದೂ ಈ ಹಿಂದಿನ ತೀರ್ಪಿನ ಉಲ್ಲಂಘನೆ' ಎಂದು ಪೀಠವು ಹೇಳಿದೆ.

ಹರಿಯಾಣ ಸರ್ಕಾರದ 2016ರ ಅಧಿಸೂಚನೆಯನ್ನು ಈ ತೀರ್ಪಿನ ಮೂಲಕ ಸುಪ್ರೀಂ ಕೋರ್ಟ್ ರದ್ದುಪಡಿಸಿದೆ. 'ಆರ್ಥಿಕ ಸ್ಥಿತಿಯ ಜತೆಗೆ, ಸಾಮಾಜಿಕ ಮತ್ತು ಇತರೆ ಸ್ಥಿತಿಗತಿಗಳನ್ನು ಆಧರಿಸಿ ಕೆನೆಪದರವನ್ನು ಗುರುತಿಸುವ ಹೊಸ ಅಧಿಸೂಚನೆಯನ್ನು ಮುಂದಿನ ಮೂರು ತಿಂಗಳ ಒಳಗೆ ಹೊರಡಿಸಿ' ಎಂದು ಹರಿಯಾಣ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿದೆ.

ಹಿಂದುಳಿದ ವರ್ಗಗಳಲ್ಲೇ ಅತ್ಯಂತ ಹಿಂದುಳಿದ ವರ್ಗಗಳಿಗೆ ಸಾಮಾಜಿಕ ನ್ಯಾಯ ಒದಗಿಸುವ ಉದ್ದೇಶದಿಂದ ವಾರ್ಷಿಕ ಆದಾಯದ ಮಿತಿಯನ್ನು ₹ 6 ಲಕ್ಷಕ್ಕೆ ನಿಗದಿ ಮಾಡಲಾಗಿತ್ತು ಎಂದು ಹರಿಯಾಣ ಸರ್ಕಾರ ಪ್ರತಿಪಾದಿಸಿತ್ತು.

'ಎಂ–ಆರ್‌ಎನ್‌ಎ' ಲಸಿಕೆ ಕ್ಲಿನಿಕಲ್ ಟ್ರಯಲ್‌ಗೆ ಅನುಮತಿ

ಪ್ರಜಾವಾಣಿ ವಾರ್ತೆ

ಸಾಂದರ್ಭಿಕ ಚಿತ್ರ

ನವದೆಹಲಿ: ದೇಶದಲ್ಲಿ ಅಭಿವೃದ್ಧಿಪಡಿಸಿರುವ, ಕೋವಿಡ್ ವಿರುದ್ಧದ ಮೊದಲ 'ಎಂ–ಆರ್‌ಎನ್‌ಎ' ಆಧರಿತ ಲಸಿಕೆಯ 2 ಮತ್ತು 3ನೇ ಹಂತದ ಕ್ಲಿನಿಕಲ್ ಟ್ರಯಲ್‌ಗೆ ಭಾರತೀಯ ಔಷಧ ಪ್ರಧಾನ ಮಹಾ ನಿಯಂತ್ರಕರ (ಡಿಸಿಜಿಐ) ಅನುಮತಿ ದೊರೆತಿದೆ.

ಬಯೋಟೆಕ್ನಾಲಜಿ ಇಲಾಖೆ (ಡಿಬಿಟಿ) ನೆರವಿನೊಂದಿಗೆ ಪುಣೆ ಮೂಲದ ಜೆನ್ನೋವಾ ಬಯೋಫಾರ್ಮಾಸ್ಯುಟಿಕಲ್ ಲಿಮಿಟೆಡ್ ಈ ಲಸಿಕೆಯನ್ನು ಅಭಿವೃದ್ಧಿಪಡಿಸಿದೆ.

10–15 ಸ್ಥಳಗಳಲ್ಲಿ ಎರಡನೇ ಹಂತದ ಟ್ರಯಲ್ ನಡೆಸಲಾಗುವುದು. 3ನೇ ಹಂತದ ಟ್ರಯಲ್ 22–27 ಸ್ಥಳಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಕಂಪನಿ ತಿಳಿಸಿದೆ.

'ಎಂ–ಆರ್‌ಎನ್‌ಎ ಆಧರಿತ ಲಸಿಕೆಯಲ್ಲಿ ಸಾಕಷ್ಟು ಅನುಕೂಲಗಳಿವೆ. ಕೊರೊನಾ ವೈರಸ್‌ನ ಹೊಸ ತಳಿ ಕಂಡ ಬಂದರೆ, ಬಹಳ ಕಡಿಮೆ ಸಮಯದಲ್ಲಿಯೇ ಹೊಸ ಲಸಿಕೆಯನ್ನು ತಯಾರಿಸಲು ಸಾಧ್ಯವಿದೆ' ಎಂದು ರೀಜನಲ್ ಸೆಂಟರ್ ಆಫ್ ಬಯೋಟೆಕ್ನಾಲಜಿಯ ಕಾರ್ಯನಿರ್ವಾಹಕ ನಿರ್ದೇಶಕ ಸುಧಾಂಶು ವ್ರತಿ ಹೇಳಿದರು.

'ದೇಶೀಯವಾಗಿ ಅಭಿವೃದ್ಧಿಪಡಿಸಿರುವ ಈ ಲಸಿಕೆ ಸುರಕ್ಷಿತ ಹಾಗೂ ಕೋವಿಡ್ ವಿರುದ್ಧ ಪರಿಣಾಮಕಾರಿಯಾಗಿ ರಕ್ಷಣೆ ನೀಡಲಿದೆ ಎಂಬುದು ಹೆಮ್ಮೆಯ ವಿಷಯ. ಲಸಿಕೆ ಅಭಿವೃದ್ಧಿ ಕ್ಷೇತ್ರದಲ್ಲಿ ಇದೊಂದು ಮೈಲಿಗಲ್ಲು. ಜಾಗತಿಕ ಭೂಪಟದಲ್ಲಿ ಭಾರತಕ್ಕೂ ಸ್ಥಾನ ಸಿಗಲಿದೆ' ಎಂದು ಡಿಬಿಟಿ ಕಾರ್ಯದರ್ಶಿ ರೇಣು ಸ್ವರೂಪ್ ಹೇಳಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ದ್ವಿತೀಯ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಲಿಂಗಮ್ಮ (ಮಾವಳ್ಳಿ)
(ದಿ. ವೀರಭದ್ರಪ್ಪನವರ ಪತ್ನಿ)
ನಿಧನ: 25–08–2019
ನೀವು ನಮ್ಮನ್ನಗಲಿ ಎರಡು ವರ್ಷ ಕಳೆದಿದೆ.
ಆದರೂ ನಿಮ್ಮ ನೆನಪುಗಳು ನಮ್ಮಿಂದ ಎಂದಿಗೂ ದೂರಾಗದು.
ನೀವು ನೀಡಿದ ಅಗಾದ ಪ್ರೀತಿ, ವಾತ್ಸಲ್ಯ ನಮ್ಮ ಹೃದಯದಲ್ಲಿ ಯಾವಾಗಲೂ ನೆಲಸಿರುತ್ತದೆ.
ದುಃಖತಪ್ತರು: ಮಕ್ಕಳು, ಸೊಸೆಯಂದಿರು ಮತ್ತು ಮೊಮ್ಮಕ್ಕಳು.

LOOKING FOR JOB OPPORTUNITY
Refer Classifieds on Wednesday

ಕೋವಿಡ್ ಸೋಂಕು ಕುರಿತು ವಿಶ್ವದ 21 ವಿಜ್ಞಾನಿಗಳ ತಂಡದ ಅಭಿಮತ

ಲ್ಯಾಬ್‌ನಿಂದ ಹರಡಿರುವ ಸಾಧ್ಯತೆ ಕಡಿಮೆ

ವಾಷಿಂಗ್ಟನ್ (ಪಿಟಿಐ): 'ವುಹಾನ್‌ನ ಮಾರುಕಟ್ಟೆಯಲ್ಲಿ ಸೋಂಕಿತ ಪ್ರಾಣಿಯೊಂದರಿಂದ ಮಾನವನಿಗೆ ಸಾರ್ಸ್–ಕೋವ್–2 ವೈರಸ್ ತಗುಲಿರುವ ಸಾಧ್ಯತೆಗಳೇ ಹೆಚ್ಚು. ಪ್ರಯೋಗಾಲಯದಿಂದ ಆಕಸ್ಮಿಕವಾಗಿ ಈ ಸೋಂಕು ಹರಡಿರುವ ಸಾಧ್ಯತೆಗಳು ಬಹಳ ಕಡಿಮೆ' ಎಂದು ವಿಜ್ಞಾನಿಗಳ ತಂಡವೊಂದು ಹೇಳಿದೆ.

ವಿವಿಧ ದೇಶಗಳ 21 ವಿಜ್ಞಾನಿಗಳು ಈ ಸಂಬಂಧ ಕೈಗೊಂಡಿದ್ದ ಅಧ್ಯಯನದ ವರದಿ 'ಸೆಲ್' ಎಂಬ ವೈಜ್ಞಾನಿಕ ನಿಯತಕಾಲಿಕದಲ್ಲಿ ಪ್ರಕಟವಾಗಿದೆ.

'ಕೋವಿಡ್–19ನ ಉಗಮದ ಬಗ್ಗೆ ವಿಶ್ವದಾದ್ಯಂತ ಭಾರಿ ಚರ್ಚೆ ನಡೆಯುತ್ತಿದೆ. ಈ ವಿಷಯ ರಾಜಕೀಯ ಸ್ವರೂಪವನ್ನು ಪಡೆದುಕೊಂಡಿದೆ. ಹೀಗಾಗಿ, ಲಭ್ಯವಿರುವ ಸಾಕ್ಷ್ಯಗಳನ್ನು ಕ್ರೋಡೀಕರಿಸಿ, ಈ ಪಿಡುಗಿನ ಉಗಮದ ಬಗ್ಗೆ ಕೂಲಂಕಷ ವಿಶ್ಲೇಷಣೆ ಅಗತ್ಯವಿದೆ ಎಂಬುದು ನಮ್ಮ ಅನಿಸಿಕೆಯಾಗಿತ್ತು' ಎಂದು ಅಮೆರಿಕದ ಯುನಿವರ್ಸಿಟಿ ಆಫ್ ಉತಾಹ್‌ದ ವೈರಾಣುತಜ್ಞ, ಈ ಅಧ್ಯಯನ ವರದಿಯ ಲೇಖಕ ಸ್ಟೀಫನ್ ಗೋಲ್ಡ್‌ಸ್ಟೀನ್ ಹೇಳಿದ್ದಾರೆ.

ಚೀನಾದ ವುಹಾನ್ ನಗರದಲ್ಲಿರುವ ವುಹಾನ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ –ರಾಯಿಟರ್ಸ್ ಚಿತ್ರ

'ವುಹಾನ್‌ನ ಪ್ರಯೋಗಾಲಯದಿಂದ ಆಕಸ್ಮಿಕವಾಗಿ ಸೋಂಕು ಹರಡಿ ರುವ ಸಾಧ್ಯತೆಗಳನ್ನು ನಿರಾಕರಿಸುವಂತಿಲ್ಲ. ಈ ವಾದವನ್ನು ಸಾರಾಸಗಟಾಗಿ ತಿರಸ್ಕರಿಸುವಂತೆಯೂ ಇಲ್ಲ. ಇಂಥ ವಾದಗಳನ್ನು ಪುಷ್ಟೀಕರಿಸುವ ಪುರಾವೆಗಳು ಸದ್ಯ ನಮ್ಮ ಬಳಿ ಇಲ್ಲ ಅಷ್ಟೇ' ಎಂದೂ ಗೋಲ್ಡ್‌ಸ್ಟೀನ್ ಹೇಳಿದ್ದಾರೆ.

'ಭವಿಷ್ಯದಲ್ಲಿಯೂ ಹಲವಾರು ಪಿಡುಗುಗಳು ಜಗತ್ತನ್ನು ಬಾಧಿಸಬಹುದು. ಇಂಥ ವಿನಾಶಕಾರಿ ವೈರಸ್‌ಗಳು ಮಾನವ ದೇಹವನ್ನು ಪ್ರವೇಶಿಸುವ ಮಾರ್ಗವನ್ನು ಪ್ರತಿಬಂಧಿಸುವ ಮೂಲಕ ಸಂಭಾವ್ಯ ಜೀವಹಾನಿ ತಡೆಗಟ್ಟಬಹುದು. ಇದಕ್ಕೆ ರಾಜಕೀಯ ಇಚ್ಛಾಶಕ್ತಿ ಅಗತ್ಯ' ಎಂದೂ ಅವರು ಪ್ರತಿಪಾದಿಸಿದ್ದಾರೆ.

'2019ರ ಡಿಸೆಂಬರ್‌ನಲ್ಲಿ ಕೋವಿಡ್‌ನ ಮೊದಲ ಅಲೆ ಕಾಣಿಸಿಕೊಂಡಿತು. ಕೋವಿಡ್ ಪ್ರಕರಣಗಳು ವರದಿಯಾದ ಪ್ರದೇಶಗಳ ಭೌಗೋಳಿಕ ಸ್ಥಾನವನ್ನು ಭೂಪಟದ ನೆರವಿನಿಂದ ವಿಶ್ಲೇಷಿಸಲಾಯಿತು. ವುಹಾನ್‌ನ ಹುವಾನನ್ ಸೀಫುಡ್ ಹೋಲ್‌ಸೇಲ್ ಮಾರ್ಕೆಟ್‌ನಿಂದಲೇ ಸೋಂಕು ಹರಡಿದೆ ಎಂಬುದರತ್ತಲೇ ಎಲ್ಲ ಅಂಶಗಳು ಬೆರಳು ಮಾಡುತ್ತಿದ್ದವು' ಎಂದು ವಿಜ್ಞಾನಿಗಳು ಹೇಳಿದ್ದಾರೆ.

'ವುಹಾನ್‌ನಲ್ಲಿರುವ ಜೀವಂತ ಪ್ರಾಣಿಗಳ ಮಾರುಕಟ್ಟೆಯಿಂದಲೂ ಸೋಂಕು ಪ್ರಸರಣಗೊಂಡಿತು. ಕೆಲ ವಾರಗಳ ನಂತರ ಚೀನಾದಿಂದ ಇತರ ದೇಶಗಳಿಗೂ ಸೋಂಕು ವ್ಯಾಪಿಸಿತು. ಕಳೆದ ವರ್ಷ ಜನವರಿಯಲ್ಲಿ ಅಧಿಕ ಸಾವುಗಳು ಸಹ ಸಂಭವಿಸಿದವು. ಜನರಿಂದ ಜನರಿಗೆ ಸೋಂಕು ಹೇಗೆ ಹರಡಿತು ಎಂಬುದನ್ನು ಈ ವಿದ್ಯಮಾನ ಸೂಚಿಸುವಂತಿತ್ತು' ಎಂದು ಹೇಳಿದ್ದಾರೆ.

24 ಗಂಟೆಗಳಲ್ಲಿ 1.90 ಲಕ್ಷ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 24 ಗಂಟೆಗಳಲ್ಲಿ ಅವಧಿಯಲ್ಲಿ ಕೊರೊನಾ ಸೋಂಕು ಶಂಕಿತರ 1.90 ಲಕ್ಷ ಮಾದರಿಗಳನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿದೆ.

ಈವರೆಗೆ ಒಂದು ದಿನದ ಅವಧಿಯಲ್ಲಿ ನಡೆಸಲಾದ ಗರಿಷ್ಠ ಪರೀಕ್ಷೆಗಳು ಇವಾಗಿವೆ.

ಏ.30ರಂದು 1.89 ಲಕ್ಷ ಪರೀಕ್ಷೆಗಳನ್ನು ನಡೆಸಲಾಗಿತ್ತು. ಸಂಭಾವ್ಯ ಕೋವಿಡ್ ಮೂರನೇ ಅಲೆಯ ಮುನ್ನೆಚ್ಚರಿಕೆಯಾಗಿ ಈಗ ಮತ್ತೆ ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ.

ರಾಜ್ಯದಲ್ಲಿ 1,259 ಮಂದಿ ಕೋವಿಡ್ ಪೀಡಿತರಾಗಿರುವುದು ಮಂಗಳವಾರ ದೃಢಪಟ್ಟಿದೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.41 ಲಕ್ಷ ದಾಟಿದೆ.

ಸೋಂಕು ದೃಢ ಪ್ರಮಾಣ ಶೇ 0.65 ರಷ್ಟು ವರದಿಯಾಗಿದೆ. 12 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 13 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬೀದರ್‌ನಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 273, ಮೈಸೂರಿನಲ್ಲಿ 102 ಹಾಗೂ ಕೊಡಗಿನಲ್ಲಿ 38 ಪ್ರಕರಣಗಳು ಪತ್ತೆಯಾಗಿವೆ.

ಬೆಂಗಳೂರಿನಲ್ಲಿ 295 ಹಾಗೂ ಉಡುಪಿಯಲ್ಲಿ 128 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ಇವೆ.

ಸೋಂಕಿತರಲ್ಲಿ 1,701 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 28.84 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 19,784ಕ್ಕೆ ಇಳಿಕೆಯಾಗಿದೆ.

ಕೋವಿಡ್ ಪೀಡಿತರಲ್ಲಿ 29 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 11 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ.

ಬೆಂಗ ಳೂರಿನಲ್ಲಿ 11 ಮಂದಿ ಸಾವಿಗೀಡಾಗಿದ್ದಾರೆ. ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡದಲ್ಲಿ ತಲಾ 4, ಮಂಡ್ಯ ಹಾಗೂ ಹಾಸನದಲ್ಲಿ ತಲಾ ಇಬ್ಬರು ಮರಣ ಹೊಂದಿದ್ದಾರೆ. ಚಾಮರಾಜನಗರ ಸೇರಿದಂತೆ 6 ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ.

ಮರಣ ಪ್ರಮಾಣ ದರವು ಶೇ 2.30ರಷ್ಟು ವರದಿಯಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,184ಕ್ಕೆ ತಲುಪಿದೆ.

ವಾಟ್ಸ್‌ಆ್ಯಪ್ ಮೂಲಕ ಲಸಿಕೆ ನೋಂದಣಿ

ನವದೆಹಲಿ (ಪಿಟಿಐ): 'ಕೋವಿಡ್–19 ಲಸಿಕೆಯ ಸ್ಲಾಟ್‌ಗಳನ್ನು ಈಗ ವಾಟ್ಸ್‌ಆ್ಯಪ್ ಮೂಲಕವು ಬುಕ್ ಮಾಡಬಹುದು' ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರು ಮಂಗಳವಾರ ತಿಳಿಸಿದರು.

'ಮೊದಲು ವಾಟ್ಸ್‌ಆ್ಯಪ್ ಮೂಲಕ ಮೈಗಾವ್‌ಇಂಡಿಯಾ ಕೊರೊನಾ ಹೆಲ್ಪ್‌ಡೆಸ್ಕ್‌ಗೆ (MyGovIndia Corona Help desk) 'ಬುಕ್‌ಸ್ಲಾಟ್' ಎಂಬ ಸಂದೇಶ ಕಳುಹಿಸಬೇಕು. ಒಟಿಪಿ ಪರಿಶೀಲನೆ ಬಳಿಕ ಸೂಚಿಸಲಾಗುವ ಕ್ರಮಗಳನ್ನು ಅನುಸರಿಸಬೇಕು' ಎಂದು ಅವರು ವಿವರಿಸಿದರು.

' ಈಗ ಕೆಲವೇ ನಿಮಿಷಗಳೊಳಗೆ ನಿಮ್ಮ ಫೋನ್ ಮೂಲಕ ನೀವು ಸ್ಲಾಟ್ ಬುಕ್ ಮಾಡಬಹುದು. 919013151515 ಮೊಬೈಲ್ ಸಂಖ್ಯೆ ಮೂಲಕ ಲಸಿಕೆಯ ಸ್ಲಾಟ್ ಬುಕ್ ಮಾಡಿ' ಎಂದು ಮಾಂಡವೀಯ ಟ್ವೀಟ್ ಮಾಡಿದ್ದಾರೆ.

'ಕೋವಿಡ್: 'ಸ್ಥಳೀಯ ಕಾಯಿಲೆ' ಹಂತಕ್ಕೆ ಭಾರತ'

ನವದೆಹಲಿ (ಪಿಟಿಐ): 'ಬರುವ ದಿನಗಳಲ್ಲಿ ಭಾರತದಲ್ಲಿ ಜನರು ಕೊರೊನಾ ವೈರಸ್‌ನೊಂದಿಗೆ ಬದುಕುವುದನ್ನು ರೂಢಿಸಿಕೊಳ್ಳುವರು. ಕೋವಿಡ್–19 ಎಂಬುದು ಪಿಡುಗು ಆಗದೇ, ಸ್ಥಳೀಯವಾಗಿ ಕಾಣಿಸಿಕೊಳ್ಳುವ ರೋಗದ ಹಂತ ತಲುಪುವ ಸಾಧ್ಯತೆಗಳಿವೆ' ಎಂದು ವಿಶ್ವ ಆರೋಗ್ಯ ಸಂಸ್ಥೆಯ ಮುಖ್ಯವಿಜ್ಞಾನಿ ಡಾ.ಸೌಮ್ಯಾ ಸ್ವಾಮಿನಾಥನ್ ಅಭಿಪ್ರಾಯಪಟ್ಟಿದ್ದಾರೆ. 'ದಿ ವೈರ್' ಸುದ್ದಿ ಪೋರ್ಟಲ್‌ಗೆ ನೀಡಿರುವ ಸಂದರ್ಶನದಲ್ಲಿ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಕಡಿಮೆ ಅಥವಾ ಮಧ್ಯಮ ಪ್ರಮಾಣದಲ್ಲಿ ಸೋಂಕಿನ ಪ್ರಸರಣ ಕಂಡು ಬರುವ ಹಂತವನ್ನು ಭಾರತ ಪ್ರವೇಶಿಸುವ ಸಾಧ್ಯತೆ ಇದೆ. ಇದನ್ನು 'ಎಂಡೆಮಿಕ್' (ಸ್ಥಳೀಯವಾಗಿ ಕಾಣಿಸಿಕೊಳ್ಳುವ ರೋಗ) ಹಂತ ಎನ್ನಲಾಗುತ್ತಿದೆ' ಎಂದರು.

'ಕೋವ್ಯಾಕ್ಸಿನ್ ಲಸಿಕೆಗೆ ವಿಶ್ವ ಆರೋಗ್ಯ ಸಂಸ್ಥೆಯ ಪರಿಣತರ ತಂಡ ಸೆಪ್ಟೆಂಬರ್ ಮಧ್ಯಭಾಗದಲ್ಲಿ ಮಾನ್ಯತೆ ನೀಡುವ ವಿಶ್ವಾಸ ಇದೆ' ಎಂದು ಪ್ರಶ್ನೆಯೊಂದಕ್ಕೆ ಅವರು ಉತ್ತರಿಸಿದರು.

ವಿಮಾನ ನಿಲ್ದಾಣದಲ್ಲಿ ಕೋವಿಡ್ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಂಡನ್, ಯುರೋಪ್ ಮತ್ತು ಮಧ್ಯ ಪೂರ್ವ ರಾಷ್ಟ್ರಗಳಿಂದ ಇಲ್ಲಿಗೆ ಬರುವ ಪ್ರಯಾಣಿಕರು ಕೋವಿಡ್ ಆರ್‌ಟಿ–ಪಿಸಿಆರ್ ಪರೀಕ್ಷೆಯ ನೆಗೆಟಿವ್ ವರದಿಯನ್ನು ಕಡ್ಡಾಯವಾಗಿ ಹೊಂದಿರಬೇಕೆಂಬ ನಿಯಮವನ್ನು ಸಡಿಲಿಸಲಾಗಿದೆ. ಆದರೆ, ವಿಮಾನ ನಿಲ್ದಾಣದಲ್ಲಿಯೇ ಪರೀಕ್ಷೆಗೆ ಗಂಟಲ ದ್ರವದ ಮಾದರಿಗಳನ್ನು ಸಂಗ್ರಹಿಸಲಾಗುತ್ತದೆ.

ಈ ಬಗ್ಗೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಅವರು ಪರಿಷ್ಕೃತ ಸುತ್ತೋಲೆ ಹೊರಡಿಸಿದ್ದಾರೆ.

ವಿದೇಶಗಳಲ್ಲಿ ರೂಪಾಂತರಿ ವೈರಾಣುಗಳು ಕಾಣಿಸಿಕೊಂಡ ಕಾರಣ ಆರ್‌ಟಿ–ಪಿಸಿಆರ್ ಪರೀಕ್ಷಾ ವರದಿಯನ್ನು ವಿಮಾನ ಏರುವಾಗಲೇ ಕಡ್ಡಾಯವಾಗಿ ಹೊಂದಿರಬೇಕೆಂದು ಸೂಚಿಸಲಾಗಿತ್ತು. ಸದ್ಯದ ಪರಿಸ್ಥಿತಿ ಹಾಗೂ ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಶಿಫಾರಿಸಿನ ಅನುಸಾರ ನಿಯಮವನ್ನು ಪರಿಷ್ಕರಿಸಲಾಗಿದೆ. ಲಂಡನ್, ಯುರೋಪ್ ಮತ್ತು ಮಧ್ಯ ಪೂರ್ವ ರಾಷ್ಟ್ರಗಳಿಂದ ಇಲ್ಲಿಗೆ ಬರುವವರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ರಾಜ್ಯದ ಇತರ ವಿಮಾನ ನಿಲ್ದಾಣದಲ್ಲಿ ಆರ್‌ಟಿ–ಪಿಸಿಆರ್ ಪರೀಕ್ಷೆಗೆ ಮಾದರಿ ನೀಡಿ, ತೆರಳಬೇಕು. ವರದಿಗಾಗಿ ಕಾಯುವ ಅಗತ್ಯತೆ ಇಲ್ಲ ಎಂದು ತಿಳಿಸಿದ್ದಾರೆ.

ಬ್ರೆಜಿಲ್ ಮತ್ತು ದಕ್ಷಿಣ ಆಫ್ರಿಕಾದಿಂದ ಬರುವವರು ವಿಮಾನ ನಿಲ್ದಾಣದಲ್ಲಿ ಆರ್‌ಟಿ–ಪಿಸಿಆರ್ ಪರೀಕ್ಷೆಗೆ ಮಾದರಿ ನೀಡುವ ಜೊತೆಗೆ ಪರೀಕ್ಷೆಯ ವರದಿ ಬರುವವರೆಗೂ ಕಾಯಬೇಕು. ಸೋಂಕಿತರಾಗಿಲ್ಲ ಎನ್ನುವುದು ದೃಢಪಟ್ಟ ಬಳಿಕ ತೆರಳಬೇಕು.

ಪ್ರಮಾಣಿತ ಕಾರ್ಯಚರಣಾ ವಿಧಾನವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಸುತ್ತೋಲೆಯಲ್ಲಿ ಸೂಚಿಸಿದ್ದಾರೆ.

ಕೋಲ್ಕತ್ತದಲ್ಲಿ ನಗರ ಪೊಲೀಸರ ನೈರುತ್ಯ ಟ್ರಾಫಿಕ್ ಗಾರ್ಡ್‌ನ ಮಹಿಳಾ ಕಾನ್‌ಸ್ಟೆಬಲ್ ಒಬ್ಬರು ಮಜರ್‌ಹಾಟ್ ರೈಲು ನಿಲ್ದಾಣದ ಪಕ್ಕದಲ್ಲಿರುವ ತೆರೆದ ಜಾಗದಲ್ಲಿ ಕೊಳೆಗೇರಿ ಮಕ್ಕಳಿಗೆ ಕಲಿಸುತ್ತಿರುವುದು. ಈ ಕೊಳೆಗೇರಿ ಮಕ್ಕಳು ಆನ್‌ಲೈನ್ ತರಗತಿಗಳನ್ನು ಪಡೆಯಲು ಸಾಧ್ಯವಾಗದ ಕಾರಣ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಕೋವಿಡ್–19 ಸಾಂಕ್ರಾಮಿಕದಿಂದಾಗಿ ಶಾಲೆ–ಕಾಲೇಜುಗಳು ಮತ್ತು ಇತರ ಶಿಕ್ಷಣ ಸಂಸ್ಥೆಗಳನ್ನು ಮುಚ್ಚಲಾಗಿದೆ –ಪಿಟಿಐ ಚಿತ್ರ

ಕೇಂದ್ರ ಸಚಿವ ರಾಣೆ ಬಂಧನ

ಒಂದನೇ ಪುಟದಿಂದ

ರಾಣೆ ವಿರುದ್ಧ ಮಹದ್, ನಾಸಿಕ್ ಮತ್ತು ರಾಯಗಡ ಜಿಲ್ಲೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದವು. ರಾಣೆ ಅವರ ಭಾಷಣದ ನಂತರ ಹಲವೆಡೆ ಘರ್ಷಣೆಯೂ ನಡೆದಿತ್ತು.

ಘರ್ಷಣೆಗೆ ಪ್ರಚೋದನೆ ನೀಡಿದ ಆರೋಪದಲ್ಲೂ ನಾಸಿಕ್‌ನಲ್ಲಿ ರಾಣೆ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು. ರಾಣೆ ಅವರನ್ನು ತಕ್ಷಣವೇ ಬಂಧಿಸಿ ಎಂದು ನಾಸಿಕ್ ಪೊಲೀಸ್ ಆಯುಕ್ತ ದೀಪಕ್ ಪಾಂಡೆ ಮಂಗಳವಾರ ಬೆಳಿಗ್ಗೆ ಆದೇಶ ಹೊರಡಿಸಿದ್ದರು.

ಈ ಬಂಧನ ಆದೇಶ ಕುರಿತ ಸುದ್ದಿಯನ್ನು ಪ್ರಸಾರ ಮಾಡಿದ ಮಾಧ್ಯಮಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದಾಗಿ ರಾಣೆ ಅವರು ಬೆದರಿಕೆ ಹಾಕಿದ್ದರು.

ಜನಾಶೀರ್ವಾದ ಯಾತ್ರೆಯ ಮಧ್ಯೆಯೇ, 'ನಾನು ಯಾವುದೇ ಅಪರಾಧ ಮಾಡಿಲ್ಲ. ನೀವೆಲ್ಲಾ ನಿಜ ಏನು ಎಂಬುದನ್ನು ಪರಿಶೀಲಿಸಿ, ಆನಂತರ ಸುದ್ದಿ ಪ್ರಸಾರ ಮಾಡಬೇಕು. ಯಾವುದೇ ಅಪರಾಧ ಮಾಡದೇ ಇದ್ದರೂ ನನ್ನನ್ನು ತಕ್ಷಣ ಬಂಧಿಸಲಾಗುತ್ತದೆ ಎಂದು ಮಾಧ್ಯಮಗಳು ಸುದ್ದಿ ಪ್ರಸಾರ ಮಾಡುತ್ತಿವೆ. ನಾನೇನು ಸಾಮಾನ್ಯ ಮನುಷ್ಯನೇ? ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ' ಎಂದು ಮಾಧ್ಯಮ ಪ್ರತಿನಿಧಿಗಳಿಗೆ ಬೆದರಿಕೆ ಹಾಕಿದರು. ಆದರೆ ನಂತರದ ಕೆಲವೇ ನಿಮಿಷಗಳಲ್ಲಿ ಪೊಲೀಸರು ರಾಣೆ ಅವರನ್ನು ಬಂಧಿಸಿದರು.

ಪೊಲೀಸ್ ಬಂಧನದಲ್ಲಿ ರಾಣೆ ಅವರ ಜೀವಕ್ಕೆ ಅಪಾಯವಿದೆ ಎಂದು ರಾಜ್ಯ ಬಿಜೆಪಿ ಕಳವಳ ವ್ಯಕ್ತಪಡಿಸಿದೆ.

'ರಾಣೆ ಅವರ ಮಾನಸಿಕ ಸಮತೋಲನ ತಪ್ಪಿದೆ. ಅವರಿಗೆ ಶಾಕ್ ಟ್ರೀಟ್‌ಮೆಂಟ್ ನೀಡುವ ಅವಶ್ಯಕತೆ ಇದೆ' ಎಂದು ಮಹಾರಾಷ್ಟ್ರ ಸಚಿವ ಗುಲಾಬ್‌ರಾವ್ ಪಾಟೀಲ್ ಲೇವಡಿ ಮಾಡಿದ್ದಾರೆ.

ಸೇನಾ-ಬಿಜೆಪಿ ಜಟಾಪಟಿ: ರಾಣೆ ಅವರ ಹೇಳಿಕೆ ವಿರುದ್ಧ ರಾಜ್ಯದ ಹಲವೆಡೆ ಶಿವಸೇನಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ. ರಾಣೆ ಅವರ ಪ್ರತಿಕೃತಿಯನ್ನು ದಹಿಸಿದ್ದಾರೆ. ಮುಂಬೈನಲ್ಲಿ ರಾಣೆ ಅವರ ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದ್ದಾರೆ. ಆಗ ಅವರನ್ನು ಬಿಜೆಪಿ ಕಾರ್ಯಕರ್ತರು ತಡೆದಿದ್ದಾರೆ. ಆಗ ಎರಡೂ ಪಕ್ಷಗಳ ಕಾರ್ಯಕರ್ತರ ಮಧ್ಯೆ ಘರ್ಷಣೆ ನಡೆದಿದೆ.

ರಾಜ್ಯದ ಹಲವೆಡೆ ಸೇನಾ ಕಾರ್ಯಕರ್ತರು ರಾಣೆ ಅವರ ಚಿತ್ರ ಮತ್ತು ಕೋಳಿ ಕಳ್ಳ ಎಂಬ ಬರಹ ಇರುವ ಪೋಸ್ಟರ್‌ಗಳನ್ನು ಹಾಕಿದ್ದಾರೆ. ರಾಜಕೀಯ ಪ್ರವೇಶಿಸುವ ಮುನ್ನ ರಾಣೆ ಅವರು ಮುಂಬೈನ ಚೆಂಬೂರ್ ಪ್ರದೇಶದಲ್ಲಿ ಕೋಳಿ ಮಾಂಸದ ಅಂಗಡಿ ನಡೆಸುತ್ತಿದ್ದರು. ಅದನ್ನು ಲೇವಡಿ ಮಾಡಿ ಸೇನಾ ಕಾರ್ಯಕರ್ತರು ಈ ಪೋಸ್ಟರ್ ಹಾಕಿದ್ದಾರೆ.

'ರಾಣೆ ಅವರನ್ನು ಕೇಂದ್ರ ಸಚಿವ ಸಂಪುಟದಿಂದ ಕೈಬಿಡಬೇಕು' ಎಂದು ಸೇನಾ ಕಾರ್ಯಕರ್ತರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಿದ್ದಾರೆ.

ಬಂಧನ ಪ್ರಕ್ರಿಯೆ ಹೇಗೆ?

ಸಂಸತ್ತಿನ ಅಧಿವೇಶನದ ಅವಧಿ ಅಲ್ಲದೇ ಇದ್ದರೆ ಮತ್ತು ಕ್ರಿಮಿನಲ್ ಪ್ರಕರಣಗಳಾಗಿದ್ದಲ್ಲಿ ಸಂಪುಟ ದರ್ಜೆಯ ಸಚಿವರನ್ನು ಬಂಧಿಸಬಹುದಾಗಿದೆ. ಆದರೆ, 'ಬಂಧನದ ಕಾರಣ, ವಶಕ್ಕೆ ಪಡೆಯುವ ಸ್ಥಳದ ಬಗ್ಗೆ ಲಿಖಿತ ರೂಪದಲ್ಲಿ ರಾಜ್ಯಸಭಾ ಸಭಾಪತಿಗೆ ಮಾಹಿತಿ ನೀಡುವ ಮೂಲಕ ಸಚಿವರನ್ನು ಬಂಧಿಸಲು ಪೊಲೀಸರು, ನ್ಯಾಯಾಧೀಶರು ಮತ್ತು ಮ್ಯಾಜಿಸ್ಟ್ರೇಟ್ ಕ್ರಮ ತೆಗೆದುಕೊಳ್ಳಬಹುದು' ಎಂದು ರಾಜ್ಯಸಭಾ ಕಲಾಪ ನಿಯಮಾವಳಿಗಳ 22ನೇ ಎ ಸೆಕ್ಷನ್ ಹೇಳುತ್ತದೆ.

'ಸಿವಿಲ್ ಪ್ರಕರಣವಾಗಿದ್ದರೆ ಸಚಿವರನ್ನು ಸಂಸತ್ತಿನ ಅಧಿವೇಶನದ ಅವಧಿಯಲ್ಲಿ, ಅಧಿವೇಶನಕ್ಕೂ 40 ದಿನ ಮೊದಲು ಮತ್ತು ಅಧಿವೇಶನದ ನಂತರದ 40 ದಿನಗಳ ಅವಧಿಯಲ್ಲಿ ಬಂಧಿಸುವ ಹಾಗಿಲ್ಲ. ಆದರೆ ಕ್ರಿಮಿನಲ್ ಪ್ರಕರಣದಲ್ಲಿ ಮತ್ತು ಮುನ್ನೆಚ್ಚರಿಕೆ ಕ್ರಮವಾಗಿ ಬಂಧಿಸುವಾಗ ಈ ವಿನಾಯಿತಿ ಅನ್ವಯವಾಗುವುದಿಲ್ಲ' ಎಂದು ನಿಯಮಗಳು ಹೇಳುತ್ತವೆ.

ಎರಡನೇ ಪ್ರಕರಣ

2001ರ ಜೂನ್ 30ರಂದು ತಮಿಳುನಾಡಿನಲ್ಲಿ ಭ್ರಷ್ಟಾಚಾರ ಪ್ರಕರಣದಲ್ಲಿ ಮಾಜಿ ಮುಖ್ಯಮಂತ್ರಿ ಎಂ.ಕರುಣಾನಿಧಿ ಅವರ ಬಂಧನ ವೇಳೆ ಕೇಂದ್ರ ಸಚಿವರಾಗಿದ್ದ ಟಿ.ಬಾಲು ಮತ್ತು ಎಂ.ಮಾರನ್ ಅವರನ್ನು ಪೊಲೀಸರು ಬಂಧಿಸಿದ್ದರು. ದೇಶದ ಇತಿಹಾಸದಲ್ಲಿ ಕೇಂದ್ರ ಸಚಿವರನ್ನು ಬಂಧಿಸಿದ್ದು ಅದೇ ಮೊದಲು. ಆನಂತರ 20 ವರ್ಷಗಳಾದ ಮೇಲೆ ಅಂತಹ ಮತ್ತೊಂದು ಘಟನೆ ಈಗ ನಡೆದಿದೆ.

ಚೆನ್ನೈನಲ್ಲಿ ಮೇಲುಸೇತುವೆ ನಿರ್ಮಾಣ ಕಾರ್ಯದಲ್ಲಿ ಭ್ರಷ್ಟಾಚಾರ ನಡೆದಿದೆ ಮತ್ತು ಅದರಲ್ಲಿ ಚೆನ್ನೈ ನಗರ ಪಾಲಿಕೆಗೆ ₹12 ಕೋಟಿ ನಷ್ಟವಾಗಿದೆ ಎಂದು ಪಾಲಿಕೆಯ ಅಂದಿನ ಆಯುಕ್ತ ಜೆ.ಸಿ.ಟಿ.ಆಚಾರ್ಯಲು ಅವರು 2001ರ ಜೂನ್ 29ರ ರಾತ್ರಿ ದೂರು ದಾಖಲಿಸಿದ್ದರು. ಆರೋಪಿಗಳ ಬಂಧನಕ್ಕೆ ಜೆ.ಜಯಲಲಿತಾ ನೇತೃತ್ವದ ಎಐಎಡಿಎಂಕೆ ಸರ್ಕಾರವು ಆದೇಶಿಸಿತ್ತು.

ಜೂನ್ 30ರ ರಾತ್ರಿ 1.30ರಲ್ಲಿ ಕರುಣಾನಿಧಿ ಅವರ ಮನೆಗೆ ತೆರಳಿದ್ದ ಪೊಲೀಸರು, ಅವರನ್ನು ಬಂಧಿಸಿದ್ದರು. ಅವರ ಬಂಧನವನ್ನು ತಡೆಯಲು ಮುಂದಾದ ಎಂ.ಮಾರನ್ ಮತ್ತು ಟಿ.ಬಾಲು ಅವರನ್ನೂ ಪೊಲೀಸರು ಬಂಧಿಸಿದ್ದರು. ಈ ಬಂಧನವನ್ನು ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಖಂಡಿಸಿದ್ದರು. ಕೇಂದ್ರದಲ್ಲಿ ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್ ಸಹ ಬಂಧನವನ್ನು ಖಂಡಿಸಿತ್ತು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಕವಿ ಲಾಜಿಸ್ಟಿಕ್ಸ್ ಬೆಂಗಳೂರು ಹೈದರಾಬಾದ್ ಮಾರ್ಗದಲ್ಲಿ ಚಲಾಯಿಸಲು ಡ್ರೈವರ್ಸ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ ನಂ.4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು: 9738421001, 9886683188

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

TOYOTA, TVS, ವಿಡಿಯೋಕಾನ್, ಬ್ರಿಟಾನಿಯಾಗಳಿಗೆ ಬಿಗ್ ಬಜಾರ್‌ಗಳಿಗೆ SSLC,PUC,Degree ಯವರು, ITI ನವರು, (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ. 17,000- 56,000/- ವಸತಿಯೂಟವಿದೆ. 9611715755

ಆಫೀಸನಲ್ಲಿ ಕೆಲಸ ಮಾಡಲು Peon ಬೇಕಾಗಿದ್ದಾರೆ 2ಗಂಟೆಯ ನಂತರ ಸಂಪರ್ಕಿಸಿ: ಮಧುಸ್ಟೀಲ್ ಕಾರ್ಪೊರೇಶನ್ ಮಿನಿಯಾ ಬಿಲ್ಡಿಂಗ್, ಅಮಾನತ್ ಕೋ ಆಪರೇಟೀವ್ ಬ್ಯಾಂಕ್ ಕೆಳಗೆ,N.R.ರಸ್ತೆ, 2ನೇ ಕ್ರಾಸ್, ಬೆಂಗಳೂರು2

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC,Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ 18,000- 56,000/- ವಸತಿಯೂಟವಿದೆ. 7204853296, 7204396011

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800- 45000/-. 9980295449, 9902839010

Wanted

ವಯಸ್ಸಾದವರನ್ನು ನೋಡಿಕೊಳ್ಳಲು ಮಹಿಳೆಯರು ಬೇಕಾಗಿದ್ದಾರೆ 18ವರ್ಷ ಮೇಲ್ಪಟ್ಟವರಿಗೆ ಉಚಿತ ಊಟ ವಸತಿಯೊಂದಿಗೆ 11000 ರಿಂದ 16000ವರೆಗೆ ಸಂಬಳ. ಫೋ: 8139962883

ರಾಷ್ಟ್ರೀಕೃತ ಬ್ಯಾಂಕಿನ ಸಂಸ್ಥೆಯಲ್ಲಿ Financial Advisor ಹುದ್ದೆಗಳಿಗೆ ನೇರ ನೇಮಕಾತಿ. ಆಸಕ್ತ SSLC ಮತ್ತು 25 ವರ್ಷ ಮೇಲ್ಪಟ್ಟ ಅಭ್ಯರ್ಥಿಗಳು ಸಂಪರ್ಕಿಸಿ 9900690439/9738201400/9035648988

ಮನೆಯಿಂದಲೆ ಕುಳಿತು ಡಾಟಾ ಎಂಟ್ರಿ ಫಾರಂ-ಫಿಲ್ಲಿಂಗ್ ಬರವಣಿಗೆ Offline. Weekly ಪೇಮೆಂಟ್ಸ್ 3000- 5000. ಸಂಪರ್ಕಿಸಿ: 7624918246, 7259848246.

Walk-in

HYUNDAI
We are Hiring
"Do you have passion for Cars" Come join us as Sales Managers, Team Leaders, Senior Sales Consultants, Sales Consultants - We are looking to onboard young and enthusiastic professionals at our outlets in Bangalore, Mysore, Mangalore, Hassan, Coorg and Kolar.
• Salary and attractive Incentives.
• For Bangalore showrooms Candidates can Walk-In for Interview.
• Candidates applying for other locations can mail your resume.
ADVAITH HYUNDAI
Caring for you...always
Walk-In Interview
12, Shama Rao Compound, Mission Road, Bangalore-560 027
Date : 1st to 4th Sept 2021
Time : 10am to 4pm
Contact : 9620229889 / 9741018380
E-mail your Resume: careers@advaithgroup.com

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ, ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಉಚಿತವಾಗಿ ಕೊಡಲಾಗುತ್ತದೆ ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007

ಕೊಲ್ಲೂರು ಮೂಕಾಂಬಿಕಾ ಜ್ಯೋತಿಷ್ಯರು, ಸ್ತ್ರೀಪುರುಷ ವಶೀಕರಣ, ಪ್ರೀತಿಯಲ್ಲಿ ನಂಬಿ ಮೋಸ, ಗಂಡಹೆಂಡತಿ ಕಲಹ ಇನ್ನೂ ನಿಮ್ಮ ಯಾವುದೇ ಸಮಸ್ಯೆಗಳಿಗೆ 100% ಶಾಶ್ವತ ಪರಿಹಾರ ಕೆಲಸ ಹಾಗದಿದ್ದಲ್ಲಿ ಹಣ ವಾಪಸ್, ರಾಮಕೃಷ್ಣ ಶರ್ಮಾ. 9880950461

★ಉಚಿತ ಭವಿಷ್ಯ★ಖಚಿತ ಪರಿಹಾರ:ನಿಮ್ಮ ಸಮಸ್ಯೆಗಳು ಯಾವುದೇ ಇರಲಿ ಸ್ತ್ರೀವಶೀಕರಣ, ಪುರುಷವಶೀಕರಣ ಲೈಂಗಿಕ ಸಮಸ್ಯೆ,ನಿಮ್ಮ ಯಾವುದೇ ಸಮಸ್ಯೆಗಳಿದ್ದರು 100%ಶಾಶ್ವತ ಪರಿಹಾರ.ಮಂತ್ರಾಲಯ. ಪಂಡಿತ್.ಸಾಗರ್ ಶರ್ಮ.8217374106

ಸಾಯಿಅಂಜನ್ ಜ್ಯೋತಿಷ್ಯರು ಸ್ತ್ರೀ-ಪುರುಷ ವಶೀಕರಣ ಸ್ಪೆಷಲಿಸ್ಟ್ ನಿಮ್ಮ ಸಮಸ್ಯೆಗಳು ಏನೇಇರಲಿ 11 ಗಂಟೆಯಲ್ಲಿ ಪರಿಹಾರ ಶತಸಿದ್ಧ.ಪರಿಹಾರ ಆಗದಿದ್ದಲ್ಲಿ ನಿಮ್ಮ ಹಣ ವಾಪಸ್. 9535852216

ಪ್ರವಾಸ

Travel

ವಿಮಾನ/ ರೈಲಿನಲ್ಲಿ 15.9.2021 ರಿಂದ 10 ದಿನಗಳ ರಾಜಸ್ಥಾನ ಸ್ಪೇಷಲ್ 3 ಸ್ಟಾರ್ ಹೊಟೇಲ್. ಸಂಪರ್ಕಿಸಿ: ಶ್ರೀರಾಜರಾಜೇಶ್ವರಿ ಟೂರ್ಸ್ 9743895346

ವಾಹನ

Four Wheelers Selling

Others

ಸ್ವತಂತ್ರ ದಿನಾಚರಣೆಗೆ ಕೊಡುಗೆಗಳೊಂದಿಗೆ ವರಮಹಾಲಕ್ಷ್ಮಿಯನ್ನು ಬರಮಾಡಿಕೊಳ್ಳಿ

YODHA 1700 Kg payload
₹999/-* ಪಾವತಿಸಿ 2 ವರ್ಷ/ 75 000 km AMC ಪಡೆಯಿರಿ
ಕೊಡುಗೆಗಳು ₹25 000/-* ದವರೆಗೆ ಎಕ್ಸ್‌ಚೇಂಜ್ ₹18 000/-* ದವರೆಗೆ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore 72597 84441 95389 35533
Mysore 95389 35533
Tumkur/Davanagere/Chitradurga 98950 23373
Mangalore/Shivamogga/Udupi/Hassan/Chikkamagalur/Karwar 98950 23373
Hubli/Haveri/Gadag/Bellary/Raichur - 96209 55858
Bagalkot/Bijapur/Gulbarga/Bidar - 73899 44057
Hubli/Belgaum- 91088 64572
* ಷರತ್ತುಗಳು ಅನ್ವಯಿಸುತ್ತದೆ.

ಸ್ವತಂತ್ರ ದಿನಾಚರಣೆಗೆ ಕೊಡುಗೆಗಳೊಂದಿಗೆ ವರಮಹಾಲಕ್ಷ್ಮಿಯನ್ನು ಬರಮಾಡಿಕೊಳ್ಳಿ

INTRA V 30 1300 Kg payload
4.99%* ಬಡ್ಡಿದರ
₹55 000/-* ದವರೆಗೆ ಉಳಿತಾಯ
ಕೊಡುಗೆಗಳು ₹25 000/-* ದವರೆಗೆ ಎಕ್ಸ್‌ಚೇಂಜ್ ₹15 000/-* ದವರೆಗೆ
ನಿಮ್ಮ Super ACE, Mega ಅಥವಾ ACE XL ಅನ್ನು ಎಕ್ಸ್‌ಚೇಂಜ್ ಮಾಡಿ ವಿಶೇಷ ಬೋನಸ್‌ನ ಲಾಭ ಪಡೆಯಿರಿ
Bangalore/Mysore 95389 35533
Bangalore 7259784441
Tumkur/Davanagere/Chitradurga 98950 23373
Mangalore/Shivamogga/Udupi/Hassan/Chikkamagalur/Karwar 98950 23373
Hubli/Haveri/Gadag/Bellary/Raichur - 96209 55858
Bagalkot/Bijapur/Gulbarga/Bidar - 80952 02223
Hubli/Belgaum- 91088 64572
* ಷರತ್ತುಗಳು ಅನ್ವಯಿಸುತ್ತದೆ.

ಇತರೆ

Medical

ಶ್ರೀಶಕ್ತಿ ಹೆಲ್ತ್-ಕೇರ್ ವತಿಯಿಂದ ಯಾವುದೇ ಶಸ್ತ್ರಚಿಕಿತ್ಸೆವಿಲ್ಲದೆ ಮಂಡಿನೋವು, ಬೆನ್ನುನೋವು, ಕತ್ತುನೋವು, ವೆರಿಕೋಸ್ ವೈನ್ಸ್, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರು, ಸಂಧಿವಾತ, ಟೆನ್ನಿಸ್ ಎಲ್ಬೋಪೇನ್, ತಲೆನೋವು, ಮೈಗ್ರೇನ್, ರೋಮೆಟೋ ಆರ್ಥ್ರೈಟಿಸ್, ಹಿಮ್ಮಡಿನೋವು, ಬುಜದನೋವುಗಳಿಗೆ ಎಲೆಕ್ಟ್ರೋ ಮ್ಯಾಗ್ನೆಟಿಕ್ ಚಿಕಿತ್ಸೆ ಕೊಡಲಾಗುವುದು ಸ್ಥಳ ಹುಮನಾಬಾದ ಜಿ// ಬೀದರ್: 6366656745

EDUCATION SPECIAL
We are coming out with special offer for Admission Notice, Education Success Congratulation Ads
DH DECCAN HERALD Classifieds More value, more impact
For details contact:
Jerry : 9731810277
Vishal : 9845114560
Tanveer: 9886213331
E-mail: dhclassifieds@deccanherald.co.in

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಷೇರುಪೇಟೆ ವಹಿವಾಟು ▲403



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,496
ಇಂದಿನ ಅಂತ್ಯ	16,624
▲	128
ದಿನದ ಗರಿಷ್ಠ	16,647

ವಿನಿಮಯ ದರ

$ ಡಾಲರ್	74.19
£ ಪೌಂಡ್	101.7
€ ಯುರೊ	87.03
¥ ಯೆನ್ (100ಕ್ಕೆ)	68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹410
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹410

ಐದು ವರ್ಷಗಳ ನಂತರ ಬೆಳೆಗಾರರಿಗೆ ಮತ್ತೆ ಬಂಪರ್

ಅರ್ಧ ಲಕ್ಷದ ಸಮೀಪ ಅಡಿಕೆ ದರ

• ಚಂದ್ರಹಾಸ ಹಿರೇಮಳಲಿ

ಶಿವಮೊಗ್ಗ: ಐದು ವರ್ಷಗಳ ನಂತರ ಅಡಿಕೆ ಧಾರಣೆ ಏರುಗತಿಯಲ್ಲಿ ಸಾಗಿದ್ದು, ವ್ಯಾಪಾರಿಗಳು ರೈತರ ಮನೆ ಬಾಗಿಲಿಗೇ ತೆರಳಿ ಕ್ವಿಂಟಲ್‌ಗೆ ₹ 50 ಸಾವಿರದವರೆಗೂ ನೀಡಿ ಖರೀದಿಸುತ್ತಿದ್ದಾರೆ.

ರಾಶಿ ಪ್ರಕಾರದ ಅಡಿಕೆ ಧಾರಣೆ 2010ರವರೆಗೂ ಕ್ವಿಂಟಲ್‌ಗೆ ₹ 10 ಸಾವಿರದಿಂದ ₹ 15 ಸಾವಿರದ ಆಸುಪಾಸು ಇತ್ತು. 2014–15ರಲ್ಲಿ ಕ್ವಿಂಟಲ್ ಅಡಿಕೆ ಧಾರಣೆ ₹ 1 ಲಕ್ಷದ ಗಡಿ ಮುಟ್ಟಿ ಸಾರ್ವಕಾಲಿಕ ದಾಖಲೆ ಸೃಷ್ಟಿಸಿತ್ತು. ನಂತರ ಮತ್ತೆ ಕುಸಿತ ಕಂಡಿತ್ತು. 2020ರಲ್ಲಿ ಗರಿಷ್ಠ ಧಾರಣೆ ₹ 42 ಸಾವಿರ ದಾಟಿತ್ತು. ಬೆಲೆ ಹೆಚ್ಚಳದ ಲಾಭ ಮಧ್ಯವರ್ತಿಗಳ ಪಾಲಾದ ನಂತರ ಬೆಳೆಗಾರರೇ ಅಧಿಕ ಪ್ರಮಾಣದಲ್ಲಿ ದಾಸ್ತಾನು ಮಾಡುತ್ತಾ ಬಂದಿದ್ದರು. ಐದು ವರ್ಷಗಳ ನಂತರ ಧಾರಣೆಯಲ್ಲಿ ಭಾರಿ ಜಿಗಿತ ಕಂಡಿದೆ. ಕ್ವಿಂಟಲ್ ಅಡಿಕೆ ಅರ್ಧ ಲಕ್ಷದವರೆಗೂ ಮಾರಾಟವಾಗುತ್ತಿದೆ.

ರಾಜ್ಯದಲ್ಲಿ ಪ್ರತಿವರ್ಷ 4 ಲಕ್ಷದಿಂದ 6 ಲಕ್ಷ ಟನ್ ಅಡಿಕೆ ಉತ್ಪಾದಿಸಲಾಗುತ್ತಿದ್ದರೂ ಅಕಾಲಿಕ ಮಳೆ, ರೋಗಬಾಧೆಗಳಿಂದ ಅಡಿಕೆ ಇಳುವರಿ ಗಣನೀಯವಾಗಿ ಕುಸಿದಿದೆ. ರೈತರು ಸಹ ತಾವು ಬೆಳೆದ ಅಡಿಕೆಯನ್ನು ತಕ್ಷಣಕ್ಕೆ ಮಾರಾಟ ಮಾಡದೇ ಕನಿಷ್ಠ ಎರಡು, ಮೂರು ವರ್ಷಗಳು ದಾಸ್ತಾನು ಮಾಡುತ್ತಿರುವುದು ಮಾರುಕಟ್ಟೆಯಲ್ಲಿ ದಾಸ್ತಾನು ಕಡಿಮೆಯಾಗಲು ಪ್ರಮುಖ ಕಾರಣ ಎನ್ನುತ್ತಾರೆ ಮಾರುಕಟ್ಟೆ ವಿಶ್ಲೇಷಕರು.

‘ದೊಡ್ಡ ದೊಡ್ಡ ವ್ಯಾಪಾರಿಗಳು ತಮ್ಮ ಬಳಿ ಇರುವ ಭಾರಿ ಪ್ರಮಾಣದ ಅಡಿಕೆಗೆ ಮೌಲ್ಯ ಹೆಚ್ಚಿಸಿಕೊಳ್ಳಲು ಕೃತಕ ಬೆಲೆ ಏರಿಕೆ ಸೃಷ್ಟಿಸುತ್ತಿದ್ದಾರೆ. ಮೊದಲು ಕಡಿಮೆ ಬೆಲೆಗೆ ಅಡಿಕೆ ಖರೀದಿಸಿ, ನಂತರ ತಾವೇ ಅಧಿಕ ಬೆಲೆಗೆ ಟೆಂಡರ್ ಬರೆಯುತ್ತಾರೆ. ಸ್ಥಳೀಯ ಮಾರುಕಟ್ಟೆಯಲ್ಲಿ ಬೆಲೆ ಹೆಚ್ಚಳವಾದ ತಕ್ಷಣ ತಮ್ಮ ಬಳಿ ಇರುವ ದಾಸ್ತಾನು ಮಾರಾಟ ಮಾಡುತ್ತಾರೆ. ಈ ಏರಿಕೆ ಶಾಶ್ವತವಲ್ಲ’ ಎಂದು ನಗರದ ಹಿರಿಯ ಅಡಿಕೆ ವ್ಯಾಪಾರಿಯೊಬ್ಬರು ಬೆಲೆ ಏರಿಕೆಯ ಗುಟ್ಟು ಬಿಚ್ಚಿಟ್ಟರು.

ವರ್ಷ	ಗರಿಷ್ಠ ಅಡಿಕೆ ಧಾರಣೆ (₹ ಗಳಲ್ಲಿ)
2013	28,797
2014	99,190
2015	87,575
2016	39,650
2017	36,499
2018	33,869
2019	35,899
2020	42,299
2021	47,599

‘ದೇಶಕ್ಕೆ ಆಮದಾಗುವ ಪ್ರತಿ ಕ್ವಿಂಟಲ್ ಅಡಿಕೆ ಮೇಲೆ ₹ 25,100 ಸುಂಕ ನಿಗದಿ ಮಾಡಿರುವುದು, ವಿದೇಶದಿಂದ ಆಮದಾಗುವ ಕಳಪೆ ಅಡಿಕೆ ಕಳ್ಳ ಸಾಗಣೆ ಮೇಲೆ ಕಠಿಣ ಕ್ರಮ ಕೈಗೊಳ್ಳುತ್ತಿರುವುದೂ ಬೆಲೆ ಏರಿಕೆಗೆ ಅವಕಾಶ ಮಾಡಿಕೊಟ್ಟಿದೆ’ ಎನ್ನುತ್ತಾರೆ ಅಡಿಕೆ ಬೆಳೆಗಾರ ಶಿವಾನಂದ ಮೂರ್ತಿ.

‘ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತಂದು ರೈತರ ಮನೆ ಬಾಗಿಲಲ್ಲೇ ಖರೀದಿಗೆ ಅವಕಾಶ ನೀಡಿರುವುದು ಬೆಲೆ ಏರಿಕೆಗೆ ಕಾರಣ. ಮಾರುಕಟ್ಟೆ ಹೊರಗೆ ಖರೀದಿಸಿದರೆ ಶೇ 2 ಕಮಿಷನ್, ಶೇ 0.6 ಸೆಸ್ ಉಳಿಸುತ್ತಾರೆ. ಕೈ ವ್ಯಾಪಾರದ ಬಹುತೇಕ ಅಡಿಕೆ, ಶೇ 5ರಷ್ಟು ಜಿಎಸ್‌ಟಿ ವಂಚಿಸಿ, ಅಕ್ರಮವಾಗಿ ಸಾಗಣೆ ಮಾಡಲಾಗುತ್ತದೆ. ಹಾಗಾಗಿಯೇ, ಮಾರುಕಟ್ಟೆ ಹೊರಗೆ ₹ 3 ಮೂರು ಸಾವಿರ ಅಧಿಕ ದರ ನೀಡಲಾಗುತ್ತಿದೆ’ ಎಂದು ಆರೋಪಿಸುತ್ತಾರೆ ಎಪಿಎಂಸಿ ವ್ಯಾಪಾರಿಗಳು.

ದೇಶದಲ್ಲಿ ಬೆಳೆಯುವ ಅಡಿಕೆಯಲ್ಲಿ ರಾಜ್ಯದ ಪ್ರಮಾಣ ಶೇ 60ರಷ್ಟಿದೆ. ವಾರ್ಷಿಕ ಸರಾಸರಿ ₹ 20 ಸಾವಿರ ಕೋಟಿ ವಹಿವಾಟು ನಡೆಯುತ್ತದೆ.

ಬಹು ವರ್ಷಗಳ ನಂತರ ಅಡಿಕೆಗೆ ಮತ್ತೆ ಉತ್ತಮ ಧಾರಣೆ ದೊರೆಯುತ್ತಿದೆ. ಕೊರೊನಾ ಸಂಕಷ್ಟದ ಕಾರಣ ಕ್ಷೀಣಿಸಿದ್ದ ವಹಿವಾಟು ಮತ್ತೆ ಜಿಗಿತ ಕಂಡಿದೆ

ಕೆ.ಸಿ.ಮಲ್ಲಿಕಾರ್ಜುನ್, ಕಾರ್ಯದರ್ಶಿ, ಶಿವಮೊಗ್ಗ ಅಡಿಕೆ ವರ್ತಕರ ಸಂಘ

ಭಾರತದಲ್ಲಿ ಪೊಲೀಸಿಂಗ್ ಸ್ಥಿತಿ 2020–2021 ವರದಿ ಅಭಿಪ್ರಾಯ

ನಕ್ಸಲರ ಬೇಡಿಕೆ ನ್ಯಾಯಬದ್ಧ, ದಾರಿ ತಪ್ಪು: ಶೇ 45 ಮಂದಿ ಅಭಿಮತ

• ಶೆಮಿನ್ ಜಾಯ್

ನವದೆಹಲಿ: ನಕ್ಸಲರು ಹಾಗೂ ಬಂಡುಕೋರರ ಬೇಡಿಕೆಗಳು ನೈಜವಾದವು, ಆದರೆ ಅವರು ಆಯ್ದುಕೊಂಡ ದಾರಿ ಸರಿಯಲ್ಲ ಎಂದು ಶೇ 45ರಷ್ಟು ಪೊಲೀಸರು ಮತ್ತು ನಾಗರಿಕರು ಅಭಿಪ್ರಾಯಪಟ್ಟಿದ್ದಾರೆ. ‘ಭಾರತದಲ್ಲಿ ಪೋಲಿಸಿಂಗ್ ಸ್ಥಿತಿ 2020-2021 ವರದಿ: ಸಂಘರ್ಷಪೀಡಿತ ಪ್ರದೇಶಗಳಲ್ಲಿ ಪೊಲೀಸರು’ ಎಂಬ ವರದಿಯಲ್ಲಿ ಈ ಅಭಿಪ್ರಾಯ ವ್ಯಕ್ತವಾಗಿದ್ದು, ಅಸಮಾನತೆ, ತಾರತಮ್ಯ ಮತ್ತು ನಿರುದ್ಯೋಗ ಇದಕ್ಕೆಲ್ಲಾ ಕಾರಣ ಎಂದು ಜನರು ಅನಿಸಿಕೆ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದೆ.

ಸಿಎಸ್‌ಡಿಎಸ್, ಲೋಕನೀತಿ, ಟಾಟಾ ಟ್ರಸ್ಟ್ ಮತ್ತು ಲಾಲ್ ಫ್ಯಾಮಿಲಿ ಫೌಂಡೇಶನ್ ಸಹಯೋಗದೊಂದಿಗೆ ಕಾಮನ್ ಕಾಸ್ ಎಂಬ ಎನ್‌ಜಿಒ ಈ ವರದಿಯನ್ನು ಸಿದ್ಧಪಡಿಸಿದೆ. ಆದಿವಾಸಿಗಳು, ಬಡವರು ಮೊದಲಾದ ಸಾಮಾಜಿಕ ಗುಂಪಿನ ಜನರು ಸಾಮಾನ್ಯವಾಗಿ ನಕ್ಸಲ್ ಸಂಘಟನೆಗಳಿಗೆ ಸೇರುತ್ತಾರೆ ಎಂಬ ಪೂರ್ವಗ್ರಹ ಪೊಲೀಸರು ಮತ್ತು ನಾಗರಿಕರಲ್ಲಿ ಇದೆ ಎಂದು ವರದಿ ತಿಳಿಸಿದೆ. ಸಂಘರ್ಷ ಪೀಡಿತ ಪ್ರದೇಶಗಳಲ್ಲಿ ಬಂಡುಕೋರ ಗುಂಪುಗಳು ಮತ್ತು ಭದ್ರತಾ ಪಡೆಗಳ ಗುರಿ ಮಹಿಳೆಯರೇ ಆಗಿರುತ್ತಾರೆ ಎಂದೂ ಹೇಳಿದೆ.

ನಕ್ಸಲ್ ನಿಗ್ರಹ ಕಾರ್ಯಾಚರಣೆ–ಸಾಂದರ್ಭಿಕ ಚಿತ್ರ

ಸಮೀಕ್ಷೆ: ಯಾರ ಅಭಿಪ್ರಾಯ ಹೇಗಿದೆ...?

ಹಿಂಸೆಪೀಡಿತ 11 ರಾಜ್ಯಗಳಲ್ಲಿ ಸಮೀಕ್ಷೆ

- ಜಮ್ಮು ಮತ್ತು ಕಾಶ್ಮೀರ
- ಆಂಧ್ರಪ್ರದೇಶ
- ತೆಲಂಗಾಣ
- ಒಡಿಶಾ
- ಛತ್ತೀಸಗಡ
- ಜಾರ್ಖಂಡ್
- ಬಿಹಾರ
- ಅಸ್ಸಾಂ
- ತ್ರಿಪುರಾ
- ನಾಗಾಲ್ಯಾಂಡ್
- ಮಣಿಪುರ

① ‘ಸಂಘರ್ಷದ ಕಾರಣ ಕಾನೂನುಬದ್ಧ, ಆದರೆ ಅಳವಡಿಸಿಕೊಂಡ ವಿಧಾನ ತಪ್ಪು’ ಎಂದು ಅಭಿಪ್ರಾಯಪಟ್ಟವರು (ಶೇಕಡವಾರು)

ಸಾಮಾನ್ಯ ಜನ	46
ಪೊಲೀಸ್ ಸಿಬ್ಬಂದಿ	43
ಎಸ್‌ಸಿ	42
ಎಸ್‌ಟಿ	59
ಒಬಿಸಿ	43
ಬಡವರು	40
ಕೆಳವರ್ಗದವರು	44
ಮಧ್ಯಮ ವರ್ಗದವರು	50
ಶ್ರೀಮಂತರು	60

② ನಕ್ಸಲರು ಮತ್ತು ಬಂಡುಕೋರ ಗುಂಪುಗಳು ‘ಅನಗತ್ಯ ಹಿಂಸಾಚಾರ’ ಹರಡುತ್ತವೆ ಎಂದವರ ಪ್ರಮಾಣ (%)

ಸಾಮಾನ್ಯ ಜನ 22, ಪೊಲೀಸರು 42

③ ಈ ಗುಂಪುಗಳು ‘ಬಡವರ ಹಕ್ಕುಗಳಿಗಾಗಿ ಹೋರಾಟ’ ನಡೆಸುತ್ತಿವೆ ಎಂದು ನಂಬಿದವರು (%)

ಸಾಮಾನ್ಯ ಜನ 20, ಪೊಲೀಸರು 9

④ ಬಂಡುಕೋರರು ಎಷ್ಟೇ ಅಪಾಯಕಾರಿಯಾಗಿದ್ದರೂ ಪೊಲೀಸರು ಅವರನ್ನು ಹಿಡಿಯಲು ಮತ್ತು ಅವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಲು ಪ್ರಯತ್ನಿಸಬೇಕು ಎಂದು ಅಭಿಪ್ರಾಯಪಟ್ಟವರು (%)

ಪೊಲೀಸ್ ಸಿಬ್ಬಂದಿ 75, ಸಾಮಾನ್ಯ ಜನ 66

⑤ ಎಂತಹ ಜನರು ಬಂಡಾಯ ಚಟುವಟಿಕೆಗಳಿಗೆ ಸೇರುವ ಅಥವಾ ಬೆಂಬಲಿಸುವ ಸಾಧ್ಯತೆಯಿದೆ ಎಂದು ಭಾವಿಸಿರುವ ಪೊಲೀಸರ ಪ್ರಮಾಣ (%)

ಆದಿವಾಸಿಗಳು ಅಥವಾ ಮೂಲನಿವಾಸಿಗಳು 26, ಬಡವರು 11

⑥ ಮಹಿಳೆಯರು ಯಾರಿಂದ ಲೈಂಗಿಕ ದೌರ್ಜನ್ಯಕ್ಕೊಳಗಾಗುತ್ತಾರೆ? (%)

ಬಂಡುಕೋರ ಗುಂಪುಗಳು 10, ಪೊಲೀಸ್ 7, ಸೇನೆ/ಅರೆಸೇನಾ ಪಡೆ 5

⑦ ನಕ್ಸಲರಾಗಲು ಪ್ರಮುಖ ಕಾರಣ (ಜನಸಾಮಾನ್ಯರ ಅಭಿಪ್ರಾಯ) (%)

ಬಡತನ 13, ನಿರುದ್ಯೋಗ 11, ಅಸಮಾನತೆ, ಅನ್ಯಾಯ, ಶೋಷಣೆ ಮತ್ತು ತಾರತಮ್ಯದಿಂದ ಉಂಟಾದ ಅಸಮಾಧಾನ 14

⑧ ನಕ್ಸಲರಾಗಲು ಪ್ರಮುಖ ಕಾರಣ (ಪೊಲೀಸರ ಅಭಿಪ್ರಾಯ) (%)

ನಿರುದ್ಯೋಗ 17, ಬಡತನ/ಹಸಿವು 15

ವಿಚಾರಣೆಯೋ.. ಹತ್ಯೆಯೋ..

ದಂಗೆಕೋರರು ಮತ್ತು ನಕ್ಸಲರನ್ನು ನ್ಯಾಯಯುತ ವಿಚಾರಣೆ ನಡೆಸಬೇಕು ಎಂಬುದನ್ನು ಒಂದಷ್ಟು ಸಂಖ್ಯೆಯ ಪೊಲೀಸರು ಮತ್ತು ಜನರು ಬೆಂಬಲಿಸಿದ್ದಾರೆ. ಆದರೆ ‘ಅಪಾಯಕಾರಿ ನಕ್ಸಲರು/ದಂಗೆಕೋರರನ್ನು ಕೊಲ್ಲುವುದು ಕಾನೂನು ವಿಚಾರಣೆಗಿಂತ ಉತ್ತಮ’ ಎಂಬುದಾಗಿ ಐವರಲ್ಲಿ ಒಬ್ಬರು ಅಭಿಪ್ರಾಯಪಟ್ಟಿದ್ದಾರೆ ಎಂದು ವರದಿ ತಿಳಿಸಿದೆ.

ಪ್ರ.ವಾ ಗ್ರಾಫಿಕ್ಸ್: ಕಣಕಾಲಮಠ

ಚುಟುಕು ಸುದ್ದಿ

ಜೂನ್ ತ್ರೈಮಾಸಿಕದಲ್ಲಿ ಜಿಡಿಪಿ ಶೇ 18.5ರಷ್ಟು ಬೆಳವಣಿಗೆ: ಎಸ್‌ಬಿಐ

ಮುಂಬೈ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯು (ಜಿಡಿಪಿ) ಶೇಕಡ 18.5ರಷ್ಟು ಬೆಳವಣಿಗೆ ಕಾಣುವ ನಿರೀಕ್ಷೆ ಇದೆ ಎಂದು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಹೇಳಿದೆ.

ಎಸ್‌ಬಿಐನ ಅರ್ಥಶಾಸ್ತ್ರಜ್ಞರು ‘ಎಕೊವ್ರ್ಯಾಪ್’ ವರದಿಯಲ್ಲಿ ಮಾಡಿರುವ ಈ ಅಂದಾಜು, ಭಾರತೀಯ ರಿಸರ್ವ್ ಬ್ಯಾಂಕ್ ಮಾಡಿರುವ ಅಂದಾಜಿಗಿಂತ ಕಡಿಮೆ. ಆರ್‌ಬಿಐ ಅಂದಾಜಿನ ಪ್ರಕಾರ ದೇಶದ ಅರ್ಥ ವ್ಯವಸ್ಥೆಯ ಬೆಳವಣಿಗೆ ದರವು ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಶೇ 21.4ರಷ್ಟು ಇರಲಿದೆ.

ಕೈಗಾರಿಕಾ ಚಟುವಟಿಕೆ, ಸೇವಾ ವಲಯದ ಚಟುವಟಿಕೆ ಮತ್ತು ಜಾಗತಿಕ ಅರ್ಥ ವ್ಯವಸ್ಥೆಯ ಜೊತೆ ಬೆಸೆದುಕೊಂಡಿರುವ 41 ಸೂಚ್ಯಂಕಗಳನ್ನು ಆಧರಿಸಿ, ಆರ್ಥಿಕ ಚಟುವಟಿಕೆಗಳ ಬೆಳವಣಿಗೆಯನ್ನು ಅಂದಾಜಿಸುವ ‘ನೌವ್‌ಕಾಸ್ಟಿಂಗ್’ ಮಾದರಿಯನ್ನು ಎಸ್‌ಬಿಐ ರೂಪಿಸಿದೆ.

ಹುಂಡೈ ಐ20 ಎನ್ ಲೈನ್ ಅನಾವರಣ

ಬೆಂಗಳೂರು: ಹುಂಡೈ ಮೋಟರ್ ಇಂಡಿಯಾ ಕಂಪನಿಯು ಮಂಗಳವಾರ ‘ಐ20 ಎನ್ ಲೈನ್’ ಕಾರನ್ನು ಅನಾವರಣಗೊಳಿಸಿದೆ. ಎನ್ ಲೈನ್ ಉತ್ಪನ್ನ ಶ್ರೇಣಿಯಲ್ಲಿ ದೇಶದಲ್ಲಿ ಬಿಡುಗಡೆ ಆಗುತ್ತಿರುವ ಮೊದಲ ಮಾದರಿ ಇದಾಗಿದ್ದು, ಈ ಮೂಲಕ ಸ್ಪೋರ್ಟ್ ಕಾರು ಬಯಸುವ ಗ್ರಾಹಕರನ್ನು ಸೆಳೆಯಲು ಕಂಪನಿ ಮುಂದಾಗಿದೆ.

ಸ್ಪೋರ್ಟಿ ಲುಕ್ ನೀಡಲು ಮೋಟಾರ್‌ಸ್ಪೋರ್ಟ್ಸ್‌ನಿಂದ ಸ್ಫೂರ್ತಿ ಪಡೆದು ಕಾರಿನ ಹೊರಾಂಗಣ ಮತ್ತು ಒಳಾಂಗಣದಲ್ಲಿ ಬಹಳಷ್ಟು ಬದಲಾವಣೆಗಳನ್ನು ಮಾಡಲಾಗಿದೆ ಎಂದು ಕಂಪನಿ ತಿಳಿಸಿದೆ.

ಐ20 ಎನ್ ಲೈನ್ ಕಾರು 1 ಲೀಟರ್ ಪೆಟ್ರೋಲ್ ಟರ್ಬೊ ಜಿಐಡಿ ಎಂಜಿನ್ ಹೊಂದಿದ್ದು, 6 ಸ್ಪೀಡ್ ಇಂಟಲಿಜೆಂಟ್ ಮ್ಯಾನುಯಲ್ ಟ್ರಾನ್ಸ್‌ಮಿಷನ್ (ಐಎಂಟಿ) ಮತ್ತು 7 ಸ್ಪೀಡ್ ಡಿಸಿಟಿ ಟ್ರಾನ್ಸ್‌ಮಿಷನ್ ಆಯ್ಕೆಗಳನ್ನು ಒಳಗೊಂಡಿದೆ. ಆನ್‌ಲೈನ್‌ನಲ್ಲಿ ‘ಹುಂಡೈ ಕ್ಲಿಕ್ ಟು ಬೈ’ ಮೂಲಕ ಅಥವಾ ಹುಂಡೈ ಸಿಗ್ನೆಚರ್ ಡೀಲರ್‌ಶಿಪ್‌ಗಳ ಮೂಲಕ ₹ 25 ಸಾವಿರಕ್ಕೆ ಬುಕಿಂಗ್ ಮಾಡಬಹುದಾಗಿದೆ ಎಂದು ಕಂಪನಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

24-8-2021

ಜಾವಾ 70/80(ಹೊಸ)	10100-10150
ಜಾವಾ 80/90(ಹೊಸ)	9200-9250
ದಪ್ಪ ಮಧ್ಯಪ್ರದೇಶ(ಹೊಸ)	9700-9750
ದಪ್ಪ ಗುಜರಾತ್(ಹೊಸ)	9450-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1540)
ಒಂದು ವಾರದ ಡೆಲಿವರಿ	1545 (1535)
ಸೋಯಾ ಕಚ್ಚಾ	1365 (1360)
ಪಾಮ್ ವಾರದ ಡೆಲಿವರಿ	1258 (1258)
ಸೂರ್ಯಕಾಂತಿ ಎಣ್ಣೆ ಕಚ್ಚಾ	1440 (1440)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 47,450 (47,200)

ಬೆಳ್ಳಿ ಕೆ.ಜಿ 63,400 (62,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಶ್ನೋತ್ತರ

ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಚಂದ್ರಿಕಾ, ವಿಜಯಪುರ

- **ಪ್ರಶ್ನೆ: ನಾನು ಹಾಗೂ ನನ್ನ ಪತಿ ಸರ್ಕಾರಿ ನೌಕರರು. ನಾವಿಬ್ಬರೂ ಕೆಜಿಐಡಿ, ಎಲ್‌ಐಸಿ, ಎನ್‌ಪಿಎಸ್, ಸುಕನ್ಯಾ ಸಮೃದ್ಧಿ ಯೋಜನೆಗಳಲ್ಲಿ ತೊಡಗಿಸುವ ಹಣ ನಮ್ಮ ಸಂಬಳದಿಂದ ಕಡಿತವಾಗಿ ನಮಗೆ ₹40 ಸಾವಿರ ತಿಂಗಳಿಗೆ ಉಳಿಯುತ್ತದೆ. ಬಾಡಿಗೆ ₹10 ಸಾವಿರ ಕಳೆದು ಕೈಗೆ ₹30 ಸಾವಿರ ಸಿಗುತ್ತದೆ. ನಮಗೆ ಉತ್ತಮ ಉಳಿತಾಯ ಯೋಜನೆ ತಿಳಿಸಿ.**

ಉತ್ತರ: ನಿಮ್ಮಲ್ಲಿ ಉಳಿಯುವ ₹ 30 ಸಾವಿರದಲ್ಲಿ ಮನೆ ಖರ್ಚಿಗೆ ₹ 10 ಸಾವಿರ ತೆಗೆದಿಟ್ಟು, ಉಳಿದ ₹ 20 ಸಾವಿರವನ್ನು ವಿಂಗಡಿಸಿ ನೀವಿಬ್ಬರೂ ತಲಾ ₹ 10 ಸಾವಿರವನ್ನು 10 ವರ್ಷಗಳ ಆರ್‌.ಡಿ. ಮಾಡಿ. 10 ವರ್ಷಗಳ ಅಂತ್ಯಕ್ಕೆ ತಲಾ ₹ 16 ಲಕ್ಷ ಪಡೆಯುವಿರಿ. ಇನ್ನೊಂದು ಆಯ್ಕೆ ಇದೆ; ವಿಜಯಪುರದಲ್ಲಿ ಬ್ಯಾಂಕ್ ಸಾಲದ ಮೇಲೆ 30X40 ಅಳತೆಯ ನಿವೇಶನವನ್ನು ಕೊಂಡು ತಿಂಗಳಿಗೆ ₹ 20 ಸಾವಿರದ ಕಂತಿನಂತೆ ಸಾಲ ಮರುಪಾವತಿ ಮಾಡಬಹುದು. ಆರ್‌.ಡಿ. ಅಥವಾ ನಿವೇಶನ ಇವೆರಡರಲ್ಲಿ ನಿಮ್ಮ ಇಂದಿನ ಅನುಕೂಲಕ್ಕೆ ಸೂಕ್ತವಾಗಿರುವುದನ್ನು ಆರಿಸಿಕೊಳ್ಳಿ. ವಾರ್ಷಿಕ ಇನ್‌ಕ್ರಿಮೆಂಟ್ ಹಾಗೂ ಅರ್ಧ ವಾರ್ಷಿಕ ತುಟ್ಟಿಭತ್ಯೆಯಿಂದ ನೀವು ಗಳಿಸುವ ಆದಾಯದಲ್ಲಿ ಶೇಕಡ 50ರಷ್ಟನ್ನು ಪ್ರತಿ ವರ್ಷ ಉಳಿಸುತ್ತಾ ನಿಮ್ಮ ಹೆಣ್ಣು ಮಗುವಿನ ಸಲುವಾಗಿ ಬಂಗಾರದ ನಾಣ್ಯ ಕೊಳ್ಳಲು ಪ್ರಾರಂಭಿಸಿ. ಈ ಪ್ರಕ್ರಿಯೆ ಮಗಳ ಮದುವೆ ತನಕವೂ ಮುಂದುವರಿಸಿ.

ಶ್ರೀರಾಮ್, ಜೆ.ಪಿ. ನಗರ, ಬೆಂಗಳೂರು

- **ಪ್ರಶ್ನೆ: ನಾನು, ನನ್ನ ಹೆಂಡತಿ ಇಬ್ಬರೂ ಸರ್ಕಾರಿ ನೌಕರರು. ವಯಸ್ಸು ಕ್ರಮವಾಗಿ 29, 27 ವರ್ಷ. ಸಂಬಳ ₹ 72 ಸಾವಿರ ಹಾಗೂ ₹ 65 ಸಾವಿರ. ಪಿಂಚಣಿ ಇಲ್ಲ. ಆದರೆ, ಎನ್‌ಪಿಎಸ್ ಇದೆ. ಆದಾಯ ತೆರಿಗೆ ಉಳಿಸಲು ಎನ್‌ಪಿಎಸ್ ವಿಚಾರದಲ್ಲಿ ಗೊಂದಲವಿದೆ. ಕಳೆದ 5 ವರ್ಷಗಳಿಂದ ನಿಮ್ಮ ಅಂಕಣ ಓದುತ್ತಿದ್ದೇವೆ. ನಮಗೆ ಸಂಪೂರ್ಣ ಮಾಹಿತಿ ನೀಡಬೇಕಾಗಿ ಕೋರಿಕೆ**

ಉತ್ತರ: ಎನ್‌ಪಿಎಸ್ ಹೂಡಿಕೆಯಿಂದ ಈ ಕೆಳಗೆ ತಿಳಿಸಿದಂತೆ ಆದಾಯ ತೆರಿಗೆ ವಿನಾಯಿತಿ ಪಡೆಯಬಹುದು.

ಎನ್‌ಪಿಎಸ್	ಸೆಕ್ಷನ್	ಗರಿಷ್ಠ ಕಡಿತ/ಮಿತಿ	ಷರಾ
ಎನ್‌ಪಿಎಸ್‌ನಲ್ಲಿ ವೈಯಕ್ತಿಕ ಹೂಡಿಕೆ	80ಸಿಸಿಡಿ (1ಬಿ)	₹ 50 ಸಾವಿರ	ಸೆಕ್ಷನ್ 80ಸಿಸಿಡಿ (2) ಹೊರತುಪಡಿಸಿ
ಉದ್ಯೋಗದಾತರ ಕೊಡುಗೆ	80ಸಿಸಿಡಿ (2)	ಸಂಬಳದ ಶೇ 10 (ಮಿತಿ ಇಲ್ಲ)	ಸೆಕ್ಷನ್ 80ಸಿ ಹಾಗೂ 80ಸಿಸಿಡಿ (1ಬಿ) ಹೊರತುಪಡಿಸಿ
ಉದ್ಯೋಗಿಯ ಕೊಡುಗೆ	80 ಸಿಸಿಡಿ (I)	ಸಂಬಳದ ಶೇ 10, ಗರಿಷ್ಠ ಮಿತಿ ₹ 1.50 ಲಕ್ಷ	ಈ ಹೂಡಿಕೆ ಸೆಕ್ಷನ್ 80ಸಿ ಮಿತಿ ಒಳಗೊಂಡಿದೆ

ಚಂದ್ರಮೌಳಿ, ಚನ್ನಪಟ್ಟಣ

- **ಪ್ರಶ್ನೆ: ನಾನು ಸರ್ಕಾರಿ ನೌಕರ. ವಯಸ್ಸು 48 ವರ್ಷ. ನನಗೆ ಇಬ್ಬರು ಮಕ್ಕಳು. ಹೆಂಡತಿ ಗೃಹಿಣಿ. ನನ್ನ ತಿಂಗಳ ಸಂಬಳ ₹ 76 ಸಾವಿರ. ನಾನು ಅಂಗವಿಕಲ. ಸ್ವಂತ ಮನೆ ಇಲ್ಲ. ಗೃಹ ಸಾಲ ಪಡೆದರೆ ನನಗೆ ಅಂಗವೈಕಲ್ಯದ ಕಾರಣದಿಂದ ಏನಾದರೂ ವಿಶೇಷ ವಿನಾಯಿತಿ ಸಿಗುವುದೇ? ತಿಳಿಸಿ.**

ಉತ್ತರ: ನಿಮ್ಮ ಸಂಬಳದಲ್ಲಿ ಕಡಿತದ ವಿಚಾರ ತಿಳಿಸಿಲ್ಲ. ಗೃಹಸಾಲ ಪಡೆಯುವ ಇಚ್ಛೆ ನಿಮ್ಮಲ್ಲಿ ಇರುವುದನ್ನು ಗಮನಿಸಿದರೆ, ನಿಮ್ಮೊಡನೆ ನಿವೇಶನ ಇರಬಹುದು ಎಂದು ಊಹಿಸಬಹುದು. ನಿವೇಶನ ಹಾಗೂ ಮನೆ ಎರಡೂ ಆದಲ್ಲಿ ಕನಿಷ್ಠ ₹ 60 ಲಕ್ಷ ಗೃಹಸಾಲ ಬೇಕಾದೀತು. ಈ ಮೊತ್ತದ ಸಾಲಕ್ಕೆ ಸಮಾನ ಮಾಸಿಕ ಕಂತು (ಇಎಂಐ) ಭರಿಸಲು ನಿಮಗೆ ಸಾಧ್ಯವಾಗಲಾರದು. ಗೃಹ ಸಾಲದ ಅವಧಿ ನಿಮ್ಮ ವಯಸ್ಸಿಗೆ ಅನುಗುಣವಾಗಿ 12 ವರ್ಷ ಮಾತ್ರ. ಈ ವಿಚಾರ ಮನಸ್ಸಿನಲ್ಲಿ ಇಟ್ಟುಕೊಂಡು ಮನೆ ಕಟ್ಟುವ ವಿಚಾರಕ್ಕೆ ಮುಂದಾಗಿ. ನಿಮ್ಮ ಈಗಿನ ಸಂಬಳ, ವಯಸ್ಸು ಮಕ್ಕಳ ಜವಾಬ್ದಾರಿ ಎಲ್ಲವನ್ನೂ ಲೆಕ್ಕಕ್ಕೆ ತೆಗೆದುಕೊಂಡು, ಸದ್ಯದ ಪರಿಸ್ಥಿತಿಯಲ್ಲಿ ನಿವೇಶನ ಇಲ್ಲವಾದರೆ ಬ್ಯಾಂಕ್ ಸಾಲ ಮಾಡಿ ನಿವೇಶನವನ್ನು ಮಾತ್ರ ಕೊಳ್ಳಿರಿ. ಮುಂದೆ ನಿವೃತ್ತಿಯಾಗುವಾಗ ಬರುವ ಗ್ರ್ಯಾಚುಟಿ, ಪಿಎಫ್, ಕಮ್ಯುಟೇಷನ್ ಹಾಗೂ ರಜಾ ಸಂಬಳದಿಂದ ಮನೆ ಕಟ್ಟಿಸಿಕೊಳ್ಳಿ. ಅಂಗವಿಕಲರಿಗೆ ಸೆಕ್ಷನ್ 80ಯು ಆಧಾರದ ಮೇಲೆ ಒಟ್ಟು ಸಂಬಳದಿಂದ ₹ 75 ಸಾವಿರ ಕಳೆದು ತೆರಿಗೆ ಸಲ್ಲಿಸಬಹುದು. ಗೃಹ ಸಾಲ ಅಥವಾ ಇನ್ನಿತರ ಸಾಲ ಪಡೆಯುವಲ್ಲಿ ಯಾವ ರಿಯಾಯಿತಿಯೂ ದೊರೆಯಲಾರದು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.

ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.

ಇ-ಮೇಲ್: businessdesk@prajavani.co.in

ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿದ ಸೆನ್ಸೆಕ್ಸ್, ನಿಫ್ಟಿ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಮಂಗಳವಾರದ ವಹಿವಾಟಿನಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡವು. ಬ್ಯಾಂಕಿಂಗ್, ಹಣಕಾಸು ಮತ್ತು ಲೋಹ ವಲಯದ ಕಂಪನಿಗಳ ಷೇರು ಖರೀದಿ ಉತ್ತಮವಾಗಿ ನಡೆದ ಕಾರಣ ದಾಖಲೆಯ ವಹಿವಾಟು ನಡೆಯಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕವು 403 ಅಂಶ ಏರಿಕೆಯಾಗಿ 55,958 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 128 ಅಂಶ ಹೆಚ್ಚಾಗಿ 16,624 ಅಂಶಗಳಲ್ಲಿ ವಹಿವಾಟು ಅಂತ್ಯವಾಗಿದೆ.

ಬಿಎಸ್‌ಇನಲ್ಲಿ ಬಜಾಜ್ ಫಿನ್‌ಸರ್ವ್ ಕಂಪನಿಯ ಷೇರು ಮೌಲ್ಯವು ಶೇ 7.91ರಷ್ಟು ಏರಿಕೆ ಆಗಿದೆ. ಕಂಪನಿಯು ಮ್ಯೂಚುವಲ್ ಫಂಡ್ ವಹಿವಾಟು ಆರಂಭಿಸಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ತಾತ್ವಿಕ ಒಪ್ಪಿಗೆ ನೀಡಿದೆ. ಇದರಿಂದಾಗಿ ಷೇರುಗಳ ಬೆಲೆ ಹೆಚ್ಚಾಗಿದೆ.

ಈಚಿನ ವಾರಗಳಲ್ಲಿ ಮಾರಾಟದ ಒತ್ತಡಕ್ಕೆ ಒಳಗಾಗಿದ್ದ ಮಿಡ್ ಮತ್ತು ಸ್ಮಾಲ್ ಕ್ಯಾಪ್ ಷೇರುಗಳು ಮಂಗಳವಾರ ಉತ್ತಮ ಚೇತರಿಕೆ ಕಂಡವು ಎಂದು ರಿಲಯನ್ಸ್ ಸೆಕ್ಯುರಿಟೀಸ್‌ನ ಯೋಜನಾ ಮುಖ್ಯಸ್ಥ ವಿನೋದ್ ಮೋದಿ ಹೇಳಿದ್ದಾರೆ.



ಮೂಲಸೌಕರ್ಯ ಯೋಜನೆಗಳಿಗೆ ಅನುದಾನ ಒದಗಿಸಲು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಆಸ್ತಿ ನಗದೀಕರಣ ಯೋಜನೆಯನ್ನು ಸೋಮವಾರ ಅನಾವರಣಗೊಳಿಸಿದ್ದಾರೆ. ಇದು ಷೇರುಪೇಟೆಯಲ್ಲಿ ಉತ್ತಮ ವಹಿವಾಟಿಗೆ ಕಾರಣವಾಯಿತು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಬಿಎಸ್‌ಇ ಲೋಹ, ತೈಲ ಮತ್ತು ಅನಿಲ, ಕೈಗಾರಿಕೆ ಮತ್ತು ಬಂಡವಾಳ ಸರಕುಗಳ ವಲಯಗಳು ಶೇ 2.76ರಷ್ಟು ಏರಿಕೆ ಕಂಡವು. ಐ.ಟಿ., ತಂತ್ರಜ್ಞಾನ ಮತ್ತು ಎಫ್‌ಎಂಸಿಜಿ ವಲಯಗಳು ಇಳಿಕೆ ಕಂಡಿವೆ.

ಇನ್ಫೊಸಿಸ್ ಲಿಮಿಟೆಡ್‌ನ ಮಾರುಕಟ್ಟೆ ಮೌಲ್ಯವು ಮಂಗಳವಾರ 100 ಬಿಲಿಯನ್ ಡಾಲರ್ (₹ 7.40 ಲಕ್ಷ ಕೋಟಿ) ತಲುಪಿದೆ. ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್), ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ನಂತರ ಈ ಸಾಧನೆ ಮಾಡಿದ ದೇಶದ ನಾಲ್ಕನೇ ಕಂಪನಿ ಆಗಿದೆ.

ಬಿಎಸ್‌ಇನಲ್ಲಿ ಬೆಳಗ್ಗಿನ ವಹಿವಾಟಿನಲ್ಲಿ ಕಂಪನಿ ಷೇರು ಮೌಲ್ಯ ₹ 1,755.6ಕ್ಕೆ ತಲುಪಿ 52 ವಾರಗಳ ಗರಿಷ್ಠ ಮಟ್ಟದಲ್ಲಿ ವಹಿವಾಟು ನಡೆಸುತ್ತಿದ್ದಾಗ ಈ ಮೈಲಿಗಲ್ಲು ತಲುಪಿತು. ಆದರೆ, ವಹಿವಾಟಿನ ಅಂತ್ಯದ ವೇಳೆಗೆ ಕಂಪನಿ ಷೇರು ಬೆಲೆಯು ₹ 1,720.75ಕ್ಕೆ ಇಳಿಕೆ ಆಯಿತು.

ಮಾರುಕಟ್ಟೆ ಮೌಲ್ಯದ ಲೆಕ್ಕದಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ₹ 13.7 ಲಕ್ಷ ಕೋಟಿಯೊಂದಿಗೆ ಮೊದಲ ಸ್ಥಾನದಲ್ಲಿದೆ.

ಸಂಕ್ಷಿಪ್ತ ಸುದ್ದಿ

ಸಿ.ಎಂ, ಆರೋಗ್ಯ ಸಚಿವರನ್ನು ಭೇಟಿಯಾದ ರಾಹುಲ್

ನವದೆಹಲಿ: ಛತ್ತೀಸ್‌ಗಡ ಕಾಂಗ್ರೆಸ್‌ನಲ್ಲಿನ ಆಂತರಿಕ ಭಿನ್ನಾಭಿಪ್ರಾಯ ಬಗೆಹರಿಸಲು ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮುಖ್ಯಮಂತ್ರಿ ಭೂಪೇಶ್ ಬಘೇಲ್ ಹಾಗೂ ಆರೋಗ್ಯ ಸಚಿವ ಟಿ.ಎಸ್. ಸಿಂಗ್ ದೇವ್ ಅವರೊಂದಿಗೆ ಮಂಗಳವಾರ ಸಭೆ ನಡೆಸಿದ್ದಾರೆ.

ರಾಹುಲ್ ಗಾಂಧಿ ಅವರ ಮನೆಯಲ್ಲಿ ನಡೆದ ಈ ಸಭೆಯಲ್ಲಿ ಛತ್ತೀಸ್‌ಗಡದ ಎಐಸಿಸಿ ಉಸ್ತುವಾರಿ ಪಿ.ಎಲ್. ಪುನಿಯಾ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಕೂಡಾ ಹಾಜರಿದ್ದರು.

ಒಟ್ಟು ಮೂರು ಗಂಟೆಗಳ ಕಾಲ ನಡೆದ ಸಭೆಯಲ್ಲಿ ಬಘೇಲ್ ಮತ್ತು ಸಿಂಗ್ ದೇವ್ ಇಬ್ಬರೂ ರಾಹುಲ್ ಜತೆ ಪ್ರತ್ಯೇಕವಾಗಿ ಸಭೆ ನಡೆಸಿದ್ದಾರೆ. ಇಬ್ಬರ ಮಾತುಗಳನ್ನು ರಾಹುಲ್ ತಾಳ್ಮೆಯಿಂದ ಆಲಿಸಿದರು. ಮುಂದಿನ ದಿನಗಳಲ್ಲಿ ಪಕ್ಷದ ಹಿರಿಯ ನಾಯಕರೊಂದಿಗೆ ಸಭೆಗಳು ನಡೆಯುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಪುನಿಯಾ ಅವರು, ‘ರಾಜ್ಯದ ಅಭಿವೃದ್ಧಿಯ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು’ ಎಂದು ಹೇಳಿದ್ದಾರೆ. ಪಕ್ಷದಲ್ಲಿನ ನಾಯಕತ್ವದ ಕುರಿತು ನಡೆದ ಚರ್ಚೆಯನ್ನು ಅವರು ಅಲ್ಲಗಳೆದಿದ್ದಾರೆ.

ಯುಎಇ: ಭಾರತದಿಂದ ಬರುವವರಿಗೆ ‘ಸ್ಥಳದಲ್ಲೇ ವೀಸಾ’ ತಾತ್ಕಾಲಿಕ ರದ್ದು

ದುಬೈ: ಭಾರತದಿಂದ ಬರುವ ಪ್ರಯಾಣಿಕರಿಗೆ ಅನ್ವಯಿಸುವಂತೆ ‘ಬಂದಿಳಿಯುತ್ತಿದ್ದಂತೆಯೇ ನೀಡುತ್ತಿದ್ದ ವೀಸಾ’ ಸೌಲಭ್ಯವನ್ನು (ವೀಸಾ ಆನ್ ಅರೈವಲ್) ಯುಎಇ ಸರ್ಕಾರ ತಾತ್ಕಾಲಿಕವಾಗಿ ರದ್ದುಗೊಳಿಸಿದೆ.

ಅಲ್ಲದೇ, ಕಳೆದ 14 ದಿನಗಳ ಅವಧಿಯಲ್ಲಿ ಭಾರತದಲ್ಲಿದ್ದ ಪ್ರಯಾಣಿಕರಿಗೂ ಈ ನಿಯಮ ಅನ್ವಯಿಸುತ್ತದೆ ಎಂದು ಎತಿಹಾದ್ ಏರ್‌ವೇಯ್ಸ್ ಟ್ವೀಟ್ ಮಾಡಿದೆ.

‘ವೀಸಾ ನಿಯಮಗಳಿಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿಯೊಂದಿಗೆ ವೆಬ್‌ಸೈಟ್ ಅನ್ನು ಅಪ್‌ಡೇಟ್ ಮಾಡಲು ಶ್ರಮಿಸುತ್ತಿರುವುದಾಗಿ’ ಸಹ ಅಬುಧಾಬಿ ಮೂಲದ ಈ ವಿಮಾನಯಾನ ಸಂಸ್ಥೆ ತಿಳಿಸಿದೆ.

ವಿಶೇಷಾಧಿಕಾರ ಮರುಸ್ಥಾಪನೆಗೆ ಪಿಎಜಿಡಿ ಆಗ್ರಹ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷಾಧಿಕಾರವನ್ನು ಮರುಸ್ಥಾಪಿಸಬೇಕು ಹಾಗೂ ಪರಿಪೂರ್ಣ ರಾಜ್ಯ ಸ್ಥಾನಮಾನವನ್ನು ಸಹ ನೀಡಬೇಕು ಎಂದು ಪೀಪಲ್ಸ್ ಅಲಯನ್ಸ್ ಫಾರ್ ಗುಪ್ಕರ್ ಡಿಕ್ಲರೇಷನ್ (ಪಿಎಜಿಡಿ) ಮಂಗಳವಾರ ಆಗ್ರಹಿಸಿದೆ.

ನ್ಯಾಷನಲ್ ಕಾನ್ಫರೆನ್ಸ್‌ನ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಅವರ ನಿವಾಸದಲ್ಲಿ ನಡೆದ ಸಭೆಯಲ್ಲಿ ಪಿಎಜಿಡಿ ಮುಖಂಡರು ಈ ಬೇಡಿಕೆಯನ್ನು ಪುನರುಚ್ಚರಿಸಿದರು. ಪಿಡಿಪಿ ಮುಖ್ಯಸ್ಥೆ ಮಹೆಬೂಬಾ ಮುಫ್ತಿ, ಸಿಪಿಎಂ ಮುಖಂಡ ಮೊಹಮ್ಮದ್ ಯೂಸುಫ್ ತಾರಿಗಾಮಿ ಹಾಗೂ ಇತರ ನಾಯಕರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಸಭೆಯಲ್ಲಿ ಮಾತನಾಡಿದ ಮೆಹಬೂಬಾ ಮುಫ್ತಿ, ‘370ನೇ ವಿಧಿ ಮರುಸ್ಥಾಪನೆ ಆಗುವುದಿಲ್ಲ ಎಂದು ಹೇಳುತ್ತಿರುವವರಿಗೆ ದೇವರಲ್ಲಿ ನಂಬಿಕೆ ಇಲ್ಲ ಎಂದರ್ಥ. ಈ ವಿಷಯದಲ್ಲಿ ನಾವು ಭರವಸೆಯನ್ನು ಕಳೆದುಕೊಳ್ಳಬಾರದು’ ಎಂದರು

ಎನ್‌ಕೌಂಟರ್‌ನಲ್ಲಿ ಮೂವರು ಉಗ್ರರು ಸಾವು

ಶ್ರೀನಗರ (ಪಿಟಿಐ): ‘ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ಸೊಪೋರ್‌ನಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಮೂವರು ಉಗ್ರರು ಮೃತಪಟ್ಟಿದ್ದಾರೆ’ ಎಂದು ಪೊಲೀಸರು ಮಂಗಳವಾರ ತಿಳಿಸಿದರು.

‘ಸೊಪೋರ್‌ನ ಪೇಟಸೀರಾದಲ್ಲಿ ಉಗ್ರರು ಅಡಗಿರುವ ಮಾಹಿತಿ ಮೇರೆಗೆ ಭದ್ರತಾ ಪಡೆಗಳು ಸೋಮವಾರ ತಡರಾತ್ರಿ ಶೋಧ ಕಾರ್ಯಾಚರಣೆ ನಡೆಸಿವೆ. ಆದರೆ ಮಂಗಳವಾರ ಮುಂಜಾನೆ ವೇಳೆ ಉಗ್ರರು ಮೊದಲು ಗುಂಡಿನ ದಾಳಿ ನಡೆಸಿದರು. ಇದಕ್ಕೆ ಪ್ರತಿಯಾಗಿ ಭದ್ರತಾ ಪಡೆಗಳು ನಡೆಸಿದ ದಾಳಿಯಲ್ಲಿ ಮೂವರು ಉಗ್ರರು ಹತರಾದರು’ ಎಂದು ಅವರು ಮಾಹಿತಿ ನೀಡಿದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	395-400
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-46000
ಹಳತು	42500-51000
ಚಿತ್ರದುರ್ಗ	
ಆಪಿ	47919-48329
ಬೆಟ್ಟೆ	37439-37879
ಕೆಂಪುಗೋಟು	31709-32110
ರಾಶಿ	47049-47889
ಪುತ್ತೂರು	
ಕೋಕ	10500-26000
ಹೊಸತು	31500-46000
ಸಿದ್ದಾಪುರ	
ಬಿಳಿಗೋಟು	27899-35299
ಚಾಲಿ	38501-41109
ಕೋಕ	23609-33899
ಕೆಂಪುಗೋಟು	30609-34490
ರಾಶಿ	42209-45109
ತಟ್ಟಿಬೆಟ್ಟೆ	33899-44219
ಶಿರಸಿ	
ಬೆಟ್ಟೆ	27699-41889
ಬಿಳಿಗೋಟು	16699-36696
ಚಾಲಿ	33719-41511
ರಾಶಿ	40199-44599
ಯಲ್ಲಾಪುರ	
ಬಿಳಿಗೋಟು	29299-36499
ಚಾಲಿ	36899-41399
ಕೋಕ	22612-33699
ಕೆಂಪುಗೋಟು	30199-34811
ರಾಶಿ	42419-47299
ತಟ್ಟಿಬೆಟ್ಟೆ	35699-42040
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	17009-36852
ರಾಶಿ	43009-47599
ಸಾಗರ	
ಬಿಳಿಗೋಟು	32949-35582
ಕೋಕ	36299-37801
ಚಾಲಿ	38099-39500
ಕೆಂಪುಗೋಟು	34299-35109
ರಾಶಿ	43009-46519
ಸಿಪ್ಪೆಗೋಟು	22892-23350

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13550	12500	12450	178.60 ಸೆಂಟ್ಸ್
ಎಸಿ	6150	4800	4950	
ಆರ್‌ಪಿ	6050	5900	6100	ಲಂಡನ್
ಆರ್‌ಸಿ	3485	3300	3500	1896 ಡಾಲರ್ಸ್

‘ಪಂಜಾಬ್ ಸಿ.ಎಂ ಬದಲಿಸಿ’

ಚಂಡೀಗಡ (ಪಿಟಿಐ): ರಾಜ್ಯ ಸಚಿವ ಸಂಪುಟದ ನಾಲ್ವರು ಸಚಿವರು ಮತ್ತು ಕಾಂಗ್ರೆಸ್‌ನ ಕೆಲವು ಶಾಸಕರು ಪಂಜಾಬ್ ಮುಖ್ಯಮಂತ್ರಿ ಅಮರೀಂದರ್ ಸಿಂಗ್ ಅವರನ್ನು ಬದಲಿಸುವಂತೆ ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿ ಅವರು 2017ರ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ನೀಡಿದ್ದ ಆಶ್ವಾಸನೆ ಈಡೇರಿಸದ ಕಾರಣ ಅವರಲ್ಲಿ ವಿಶ್ವಾಸ ಇಲ್ಲ ಎಂದಿದ್ದಾರೆ. ಸಚಿವರಾದ ತ್ರಿಪಟ್ ರಾಜಿಂದರ್ ಸಿಂಗ್ ಬಾಜ್ವಾ, ಸುಖ್‌ಬಿಂದರ್ ಸಿಂಗ್ ಸರ್ಕಾರಿಯಾ, ಸುಖ್ಜಿಂದರ್ ಸಿಂಗ್ ರಾನ್‌ಧ್ವಾ ಮತ್ತು ಚರಣಜಿತ್ ಸಿಂಗ್ ಹಾಗೂ 24 ಶಾಸಕರು ಬಾಜ್ವಾ ಅವರ ನಿವಾಸದಲ್ಲಿ ಸಭೆ ಸೇರಿದ್ದರು.

NATIONAL INSTITUTE OF TECHNOLOGY KARNATAKA
SURATHKAL, Mangaluru – 575 025, Karnataka, India.
Ph: 0824-2474000-2474023, Website: http://www.nitk.ac.in

Advertisement No. 1085/NITK/Estt./NTR-01/GB/2021/B2 Date:19.08.2021

Recruitment for Technical Assistant / Junior Engineer / SAS Assistant / Superintendent - Group B positions

Applications are invited from suitable Indian Nationals for **Technical Assistant / Junior Engineer / SAS Assistant / Superintendent-Group B positions** on direct recruitment in the Institute.

For details regarding the application, education qualifications, experience, other requirements and terms & conditions for these positions, please visit the Institute website: **www.nitk.ac.in.**

Sd/- Registrar

ಟೋಕಿಯೊ ಪ್ಯಾರಾಲಿಂಪಿಕ್ ಕ್ರೀಡಾಂಗಣದಲ್ಲಿ ಮಂಗಳವಾರ ಸುಡುಮದ್ದಿನ ಚಿತ್ತಾರದ ಬೆಳಕಲ್ಲಿ ಅರಳಿದ ಕಲಾವಿದರ ನೃತ್ಯ ಸಂಗೀತದ ಸಂಭ್ರಮ –ಎಎಫ್‌ಪಿ ಚಿತ್ರ

ಟೋಕಿಯೊ ಪ್ಯಾರಾಲಿಂಪಿಕ್ಸ್‌ಗೆ ರಂಗುರಂಗಿನ ಚಾಲನೆ

ನಮಗೆ ರೆಕ್ಕೆಗಳು ಇವೆ...

ಟೋಕಿಯೊ(ಪಿಟಿಐ): ‘ನಮಗೆ ರೆಕ್ಕೆಗಳಿವೆ. ಹಾರಬಲ್ಲೆವು, ಆಗಸವನ್ನೇ ಚುಂಬಿಸಬಲ್ಲೆವು. ದೂರ ದೂರ ಸಾಗುವ ಛಲವಂತರು ನಾವು..’

ಮಂಗಳವಾರ ಪ್ಯಾರಾಲಿಂಪಿಕ್ಸ್‌ನ ರಂಗು ರಂಗಿನ ಉದ್ಘಾಟನೆ ಸಮಾರಂಭದಲ್ಲಿ ಅನುರಣಿಸಿದ ಭಾವವಿದು. ಪ್ರವಾಹದ ವಿರುದ್ಧ ಈಜುವ ಛಲದಂಕಮಲ್ಲರ ಕ್ರೀಡಾ ಮೇಳವಿದು. ಅಂಗ ವೈಕಲ್ಯ ನೀಡಿದ ವಿಧಿಗೆ ಸೆಡ್ಡು ಹೊಡೆದು ಜಗದ ಮನ ಗೆಲ್ಲುವ ಕ್ರೀಡಾಪಟುಗಳ ಲೋಕ ಅನಾವರಣಗೊಂಡಿತು.

ಕೋವಿಡ್ ಕಾಲಘಟ್ಟದಲ್ಲಿ ಒಲಿಂಪಿಕ್ ಕೂಟ ಸಂಘಟಿಸಿ ಜಗ ಗೆದ್ದಿರುವ ಜಪಾನ್, ಇದೀಗ ಪ್ಯಾರಾಲಿಂಪಿಕ್‌ಗೆ ಚಾಲನೆ ನೀಡಿತು. ದೇಶದ ಚಕ್ರವರ್ತಿ ನರುಹಿಟೊ ಕೂಟಕ್ಕೆ ಚಾಲನೆ ನೀಡಿದರು. ಪ್ರೇಕ್ಷಕರಿಲ್ಲದ ಕ್ರೀಡಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಪ್ಯಾರಾಲಿಂಪಿಕ್ ಧ್ವಜವನ್ನು ಕ್ರೀಡಾಂಗಣದೊಳಗೆ ತರಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಅಂತರರಾಷ್ಟ್ರೀಯ ಪ್ಯಾರಾಲಿಂಪಿಕ್ ಕಮಿಟಿಯ ಅಧ್ಯಕ್ಷ ಆ್ಯಂಡ್ರ್ಯೂ ಪಾರ್ಸನ್ಸ್, ‘ಸುರಕ್ಷಿತ ಕ್ರೀಡಾಕೂಟ ನಡೆಯಲಿದೆ’ ಎಂದು ಭರವಸೆ ನೀಡಿದರು.

‘ಕೊನೆಗೂ ನಾವು ಇವತ್ತು ಇಲ್ಲಿದ್ದೇವೆ ಎಂದು ನಂಬಿಕೆಯೇ ಆಗುತ್ತಿಲ್ಲ. ಇಂತಹ ದುರಿತ ಕಾಲದಲ್ಲಿ ನಾವೆಲ್ಲರೂ ಇಲ್ಲಿ ಸೇರಿರುವುದು ಐತಿಹಾಸಿಕ ಸಂಗತಿ. ಇದಕ್ಕೆ ಕಾರಣರಾದ ಹಲವರಿಗೆ ನಾನು ಆಭಾರಿಯಾಗಿದ್ದೇವೆ’ ಎಂದರು.

ಪಥಸಂಚಲನದಲ್ಲಿ ಭಾರತ ತಂಡ –ಪಿಟಿಐ ಚಿತ್ರ

ಭಾರತ ಬ್ಯಾಡ್ಮಿಂಟನ್ ತಂಡ

ಇದೇ ಮೊದಲ ಸಲ ಪ್ಯಾರಾಲಿಂಪಿಕ್ಸ್‌ನಲ್ಲಿ ಬ್ಯಾಡ್ಮಿಂಟನ್ ಸೇರ್ಪಡೆಯಾಗಿದೆ. ಅದರಲ್ಲಿ ಭಾರತ ತಂಡವೂ ಕಣಕ್ಕಿಳಿಯಲಿದೆ.
ಪುರುಷರ ಸಿಂಗಲ್ಸ್: ಪ್ರಮೋದ್ ಭಗತ್, ಮನೋಜ್ ಸರ್ಕಾರ್, ಸುಹಾಸ್ ಯತಿರಾಜ್, ತರುಣ್ ದಿಲ್ಲೋನ್, ಕೃಷ್ಣಣನಗರ್. ಮಹಿಳಾ ಸಿಂಗಲ್ಸ್ ಮತ್ತು ಡಬಲ್ಸ್: ಪಾರುಲ್ ಪರ್ಮಾರ್, ಪಲಕ್ ಕೊಹ್ಲಿ. ಮಿಶ್ರ ಡಬಲ್ಸ್: ಪ್ರಮೋದ್ ಭಗತ್ ಮತ್ತು ಪಲಕ್ ಕೊಹ್ಲಿ

57 ವರ್ಷಗಳ ಹಿಂದೆ ಟೋಕಿಯೊದಲ್ಲಿ ಪ್ಯಾರಾಲಿಂಪಿಕ್ಸ್ ಆಯೋಜಿಸಲಾಗಿತ್ತು. ಇದೀಗ ಎರಡನೇ ಬಾರಿ ಆತಿಥ್ಯ ವಹಿಸಲಾಗುತ್ತಿದೆ. ವೈವಿಧ್ಯತೆ ಮತ್ತು ಒಳಗೊಳ್ಳುವಿಕೆಯ ಸಂಕೇತವಾಗಿ ರೂಪಿಸಲಾಗಿರುವ ಪ್ಯಾರಾ ಏರ್‌ಪೋರ್ಟ್‌ನಲ್ಲಿ ಉದ್ಘಾಟನೆ ಸಮಾರಂಭ ನಡೆಯಿತು. ಅಥ್ಲೀಟ್‌ಗಳ ಸಾಮರ್ಥ್ಯದ ಝಲಕ್‌ಗಳನ್ನು ತೋರಿಸುವ ವಿಡಿಯೊ ಗಮನ ಸೆಳೆಯಿತು. ಬೀಸುವ ತಂಗಾಳಿಯು ಕ್ರಮೇಣ ಸುಂಟರಗಾಳಿಯಂತೆ ಬೃಹದಾಕಾರವಾಗಿ ಸಾಗಿ ಕ್ರೀಡಾಂಗಣಕ್ಕೆ ಪ್ರವೇಶಿಸಿ ಆಟದಂಗಣದ ಮೂಲಕ ಸಾಗಿ ಹೋದ ದೃಶ್ಯ ರೋಮಾಂಚನಗೊಳಿಸಿತು. ಅದರ ಬೆನ್ನಲ್ಲೇ ಏರ್‌ಪೋರ್ಟ್ ಸಿಬ್ಬಂದಿ ವೇಷಧಾರಿಗಳು, ಕಲಾವಿದರ ನೃತ್ಯ ಮತ್ತು ಸುಡುಮದ್ದುಗಳ ಚಿತ್ತಾರ ಗಮನ ಸೆಳೆದವು. ಕಾರ್ಯಕ್ರಮದಲ್ಲಿ ಸಾಂಬ್ರೆ ಸಂಗೀತ ಮನಮಿಡಿಯಿತು. ರಂಗುರಂಗಿನ ಬಲೂನುಗಳು, ತಂಡಗಳ ಪಥಸಂಚಲನ ಕೂಡ ನಡೆಯಿತು.

ಟೇಕ್ ಚಂದ್ ಭಾರತ ಧ್ವಜಧಾರಿ

ಟೋಕಿಯೊ (ಪಿಟಿಐ): ಹೈಜಂಪ್ ಪಟು ಮಾರಿಯಪ್ಪನ್ ತಂಗವೇಲು ಅವರು ಕೊರೊನಾ ಸೋಂಕಿತ ವ್ಯಕ್ತಿಯೊಂದಿಗೆ ನಿಕಟ ಸಂಪರ್ಕ ಹೊಂದಿದ ಕಾರಣ ಪ್ಯಾರಾಲಿಂಪಿಕ್ಸ್‌ನ ಉದ್ಘಾಟನಾ ಸಮಾರಂಭದಲ್ಲಿ ಭಾರತದ ಧ್ವಜಧಾರಿಯಾಗುವ ಅವಕಾಶ ಕಳೆದುಕೊಂಡರು. ಅವರ ಬದಲಾಗಿ ಶಾಟ್‌ಪಟ್ ಪಟು ಟೇಕ್ ಚಂದ್ ಪಥಸಂಚಲನದಲ್ಲಿ ತಂಡವನ್ನು ಮುನ್ನಡೆಸಿದರು.

ಟೋಕಿಯೊಗೆ ವಿಮಾನದಲ್ಲಿ ತೆರಳುವ ವೇಳೆ ಮಾರಿಯಪ್ಪನ್, ಸೋಂಕಿತನ ಸಂಪರ್ಕಕ್ಕೆ ಬಂದಿದ್ದು, ಅವರೊಂದಿಗೆ ಇತರ ಐವರು ಅಥ್ಲೀಟ್‌ಗಳನ್ನು ಕ್ವಾರಂಟೈನ್ ಮಾಡಲಾಗಿದೆ. ಡಿಸ್ಕಸ್ ಥ್ರೊ ಪಟು ವಿನೋದ್ ಕುಮಾರ್ ಕೂಡ ಇದರಲ್ಲಿ ಸೇರಿದ್ದಾರೆ.

ಟೋಕಿಯೊದಲ್ಲಿ ಮಂಗಳವಾರ ಪ್ಯಾರಾಲಿಂಪಿಕ್ಸ್ ಉದ್ಘಾಟನೆ ಸಮಾರಂಭದ ಪಥಸಂಚಲನದಲ್ಲಿ ಭಾಗವಹಿಸಿದ ಭಾರತ ತಂಡವನ್ನು ಟಿವಿ ಮೂಲಕ ವೀಕ್ಷಿಸಿದ ಪ್ರಧಾನಿ ನರೇಂದ್ರ ಮೋದಿ –ಪಿಟಿಐ ಚಿತ್ರ

ಚೆಸ್: ಅರ್ಜುನ್‌ಗೆ ಪ್ರಶಸ್ತಿ

ಬ್ರೆಗಾನ್ಸಾ, ಪೋರ್ಚುಗಲ್ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಎರಿಗೈಸಿ ಅವರು ಇಲ್ಲಿ ನಡೆದ ಟೆರೆಸ್ ಡಿ ಟ್ರಾಸೊಸ್ ಮೊಂಟೆಸ್ ಓಪನ್ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದಾರೆ. ಭಾರತದವರೇ ಆದ ಡಿ.ಗುಕೇಶ್ ಎರಡನೇ ಸ್ಥಾನ ಗಳಿಸಿದರು.

17 ವರ್ಷದ ಅರ್ಜುನ್ (ಇಎಲ್‌ಒ 2597) ಅವರು ಒಂಬತ್ತು ಸುತ್ತುಗಳಿಂದ 8.5 ಪಾಯಿಂಟ್ಸ್ ಗಳಿಸಿದರು. ಎಂಟು ಸುತ್ತುಗಳಲ್ಲಿ ಜಯ ಸಾಧಿಸಿದ ಅವರು ಒಂದರಲ್ಲಿ ಡ್ರಾ ಮಾಡಿಕೊಂಡರು.

ಟೆಸ್ಟ್: ವೆಸ್ಟ್ ಇಂಡೀಸ್ ತಂಡಕ್ಕೆ ಸೋಲಿನ ಭೀತಿ

ಕಿಂಗ್‌ಸ್ಟನ್, (ಎಪಿ): ಪಾಕಿಸ್ತಾನ ತಂಡವು ಇಲ್ಲಿ ನಡೆಯುತ್ತಿರುವ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದ ಐದನೇ ದಿನ ವೆಸ್ಟ್ ಇಂಡೀಸ್ ತಂಡದ ವಿರುದ್ಧ ಬಿಗಿ ಹಿಡಿತ ಸಾಧಿಸಿತು.

ಆಟದಲ್ಲಿ ವೆಸ್ಟ್ ಇಂಡೀಸ್ ಮೊದಲ ಇನಿಂಗ್ಸ್‌ನಲ್ಲಿ 150 ರನ್ನಿಗೆ ಕುಸಿಯಿತು. ಪ್ರವಾಸಿ ಪಾಕ್ ತಂಡ 152 ರನ್‌ಗಳ ಮೊದಲ ಇನಿಂಗ್ಸ್ ಮುನ್ನಡೆ ಪಡೆಯಿತು.

ಪಾಕಿಸ್ತಾನ 2ನೇ ಇನಿಂಗ್ಸ್‌ನಲ್ಲಿ 6 ವಿಕೆಟ್‌ಗೆ 176 ರನ್ ಗಳಿಸಿದ್ದಾಗ ಡಿಕ್ಲೇರ್ ಮಾಡಿಕೊಂಡಿತು. ಮಂಗಳವಾರ ವಿಂಡೀಸ್ 2ನೇ ಇನಿಂಗ್ಸ್‌ನಲ್ಲಿ ಚಹಾ ವಿರಾಮದ ವೇಳೆಗೆ 7 ವಿಕೆಟ್ ಕಳೆದುಕೊಂಡು 159 ರನ್ ಗಳಿಸಿತ್ತು. ಗೆಲುವಿಗೆ ಇನ್ನೂ 170 ರನ್ ಬೇಕಿತ್ತು.

ಸ್ಕೋರುಗಳು: ಪಾಕಿಸ್ತಾನ: 9 ವಿಕೆಟ್‌ಗೆ 302 ಡಿಕ್ಲೇರ್ ಮತ್ತು 6 ವಿಕೆಟ್‌ಗೆ 176 ಡಿಕ್ಲೇರ್. ವೆಸ್ಟ್ ಇಂಡೀಸ್: 150 ಮತ್ತು 7 ವಿಕೆಟ್‌ಗೆ 159 (ಬ್ರಾಥ್‌ವೇಟ್ 39, ಕೈಲ್ ಮಯರ್ಸ್ 32, ಜರ್ಮೈನ್ ಬ್ಲಾಕ್‌ವುಡ್ 25, ಕೀರನ್ ಪೊವೆಲ್ 23; ಶಾಹೀನ್ ಶಾ ಆಫ್ರಿದಿ 27ಕ್ಕೆ 2, ಹಸನ್ ಅಲಿ 37ಕ್ಕೆ 2, ನೂಮಾನ್ ಅಲಿ 29ಕ್ಕೆ 2). ವಿವರ ಅಪೂರ್ಣ.

ಮೂರನೇ ಟೆಸ್ಟ್ ಇಂದಿನಿಂದ: ಲಯ ಕಂಡುಕೊಳ್ಳುವ ವಿಶ್ವಾಸದಲ್ಲಿ ಕೊಹ್ಲಿ

ಮತ್ತೊಂದು ಜಯದತ್ತ ಭಾರತ ಚಿತ್ತ

ಲೀಡ್ಸ್ (ಪಿಟಿಐ): ಆತ್ಮವಿಶ್ವಾಸದ ಉತ್ತುಂಗದಲ್ಲಿರುವ ವಿರಾಟ್ ಕೊಹ್ಲಿ ನಾಯಕತ್ವದ ಭಾರತ ಕ್ರಿಕೆಟ್ ತಂಡವು ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಯಲ್ಲಿ ಗೆಲುವಿನ ಓಟ ಮುಂದುವರಿಸುವ ಛಲದಲ್ಲಿದೆ.

ಬುಧವಾರ ಇಲ್ಲಿ ಆರಂಭವಾಗಲಿರುವ ಮೂರನೇ ಟೆಸ್ಟ್‌ನಲ್ಲಿ ಜಯಿಸಿದರೆ, ಐದು ಪಂದ್ಯಗಳ ಸರಣಿಯಲ್ಲಿ 2–0 ಮುನ್ನಡೆ ಲಭಿಸಲಿದೆ. ಮೊದಲ ಟೆಸ್ಟ್ ಡ್ರಾ ಆಗಿತ್ತು. ಎರಡನೇ ಪಂದ್ಯದಲ್ಲಿ ಕೆ.ಎಲ್. ರಾಹುಲ್ ಶತಕ, ಮೊಹಮ್ಮದ್ ಶಮಿ ಬ್ಯಾಟಿಂಗ್, ಮೊಹಮ್ಮದ್ ಸಿರಾಜ್ ಹಾಗೂ ಜಸ್‌ಪ್ರೀತ್ ಬೂಮ್ರಾ ಅಮೋಘ ಬೌಲಿಂಗ್‌ನಿಂದ ತಂಡವು ರೋಚಕ ಗೆಲುವು ಸಾಧಿಸಿತ್ತು. ಸರಣಿಯಲ್ಲಿ ಎರಡು ಶತಕ ಗಳಿಸಿರುವ ಜೋ ರೂಟ್ ನಾಯಕತ್ವದ ಬಳಗಕ್ಕೆ ಆಘಾತ ನೀಡಿತ್ತು.

ಆದರೆ, ಭಾರತ ತಂಡದ ನಾಯಕ ವಿರಾಟ್ ತಮ್ಮ ಬ್ಯಾಟಿಂಗ್ ಲಯ ಕಂಡುಕೊಳ್ಳಲು ಪರದಾಡುತ್ತಿರುವುದು ತುಸು ಚಿಂತೆಯ ವಿಷಯವೇ ಆಗಿದೆ. ಸುಮಾರು ಒಂದೂವರೆ ವರ್ಷದಿಂದ ಅವರು ಒಂದೂ ಶತಕ ದಾಖಲಿಸಿಲ್ಲ. ಅಲ್ಲದೇ ಚೇತೇಶ್ವರ್ ಪೂಜಾರ ಮತ್ತು ಅಜಿಂಕ್ಯ ರಹಾನೆ ಕೂಡ ಸ್ಥಿರ ಪ್ರದರ್ಶನ ನೀಡುತ್ತಿಲ್ಲ. ಇದರಿಂದಾಗಿ ಮಧ್ಯಮ ಕ್ರಮಾಂಕದಲ್ಲಿ ಬ್ಯಾಟಿಂಗ್ ದುರ್ಬಲವಾಗಿದೆ. ಆರಂಭಿಕ ಜೋಡಿ ರಾಹುಲ್ ಮತ್ತು ರೋಹಿತ್ ಲಯಕ್ಕೆ ಮರಳಿರುವುದು ಸಮಾಧಾನದ ವಿಷಯ. ಕೆಳಕ್ರಮಾಂಕದಲ್ಲಿ ರಿಷಭ್ ಪಂತ್, ರವೀಂದ್ರ ಜಡೇಜ ವಿಶ್ವಾಸ ಹೆಚ್ಚಿಸಿದ್ದಾರೆ.

ಕಳೆದ ಪಂದ್ಯದಲ್ಲಿ ಮೊಹಮ್ಮದ್ ಶಮಿ ಮತ್ತು ಜಸ್‌ಪ್ರೀತ್ ಬೂಮ್ರಾ ಅವರ ಜೊತೆಯಾಟವು ಗಮನ ಸೆಳೆದಿತ್ತು. ಭಾರತವು ಎದುರಾಳಿಗೆ ಸವಾಲಿ ಗುರಿ ನೀಡಲು ಅವರ ಆಟ ಕಾರಣವಾಗಿತ್ತು.

ಜೋ ರೂಟ್

ಆದರೆ, ಆ ಗೆಲುವಿನಲ್ಲಿ ಮೈಮರೆತರೆ ರೂಟ್ ಬಳಗ ತಿರುಗೇಟು ನೀಡುವುದು ಖಚಿತ. ಬ್ಯಾಟಿಂಗ್ ನಲ್ಲಿ ರೂಟ್ ಬಿಟ್ಟರೆ ಉಳಿದವರಿಂದ ನಿರೀಕ್ಷಿತ ಆಟ ಮೂಡಿಬರುತ್ತಿಲ್ಲ ಅದಕ್ಕಾಗಿಯೇ ಡಾಮ್ ಸಿಬ್ಲಿ ಸ್ಥಾನ ಕಳೆದುಕೊಂಡಿದ್ದಾರೆ. ಈ ಪಂದ್ಯದಲ್ಲಿ ಪ್ರತಿಭಾವಂತ ಬ್ಯಾಟ್ಸ್‌ಮನ್ ಡೇವಿಡ್ ಮಲಾನ್ ಕಣಕ್ಕಿಳಿಯುವುದು ಖಚಿತವಾಗಿದೆ. ರೋರಿ ಬರ್ನ್ಸ್, ಜೊಸ್ ಬಟ್ಲರ್, ಜಾನಿ ಬೆಸ್ಟೊ ಅವರು ಲಯಕ್ಕೆ ಮರಳಿದರೆ ಭಾರತದ ಬೌಲಿಂಗ್ ಪಡೆಗೆ ಕಠಿಣ ಸವಾಲಾಗಲಿದೆ.

ಇಂಗ್ಲೆಂಡ್ ಬೌಲಿಂಗ್ ಪಡೆ ಉತ್ತಮವಾಗಿದೆ. ಅನುಭವಿ ಜೇಮ್ಸ್ ಆ್ಯಂಡರ್ಸನ್, ಒಲಿ ರಾಬಿನ್ಸನ್ ಅವರು ಅಮೋಘ ಲಯದಲ್ಲಿದ್ದಾರೆ. ಆದರೆ, ಮಾರ್ಕ್ ವುಡ್ ಗಾಯಗೊಂಡಿದ್ದು ಈ ಪಂದ್ಯಕ್ಕೆ ಲಭ್ಯರಿಲ್ಲ. ಸ್ಯಾಮ್ ಕರನ್ ಮತ್ತು ಸ್ಪಿನ್ನರ್ ಮೋಯಿನ್ ಅಲಿ ಕೂಡ ಕಣದಲ್ಲಿದ್ದಾರೆ. ಇವರಿಗೆ ಭಾರತದ ಬ್ಯಾಟಿಂಗ್ ಪಡೆ ಯಾವ ರೀತಿ ಸವಾಲೊಡ್ಡಲಿದೆ ಎಂಬ ಕುತೂಹಲ ಕೆರಳಿದೆ.

ಶುಷ್ಕ ವಾತಾವರಣ: ಮೊದಲೆರಡು ಪಂದ್ಯಗಳಲ್ಲಿ ಮಳೆ ಕಾಡಿತ್ತು. ಲೀಡ್ಸ್‌ನಲ್ಲಿ 5 ದಿನಗಳ ಕಾಲ ಶುಷ್ಕ ವಾತಾವರಣವಿರುವ ಸಾಧ್ಯತೆ ಇರಲಿದೆ. ಮೋಡಗಳು ದಟ್ಟೈಸುವ ಸಾಧ್ಯತೆಯೂ ಇದೆ ಎಂದು ಹೇಳಲಾಗಿದೆ.

ಪಂದ್ಯ ಆರಂಭ: ಮಧ್ಯಾಹ್ನ 3.30

ನೇರ ಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

ವಿರಾಟ್ ಕೊಹ್ಲಿ

ಲೀಡ್ಸ್‌ನಲ್ಲಿ ಉಭಯ ತಂಡಗಳ ಮುಖಾಮುಖಿ

6 ಪಂದ್ಯ	3 ಇಂಗ್ಲೆಂಡ್ ಜಯ	2 ಭಾರತ ಜಯ	1 ಡ್ರಾ

- **63**: ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಮೂರು ಮಾದರಿಗಳು ಸೇರಿ 23 ಸಾವಿರ ರನ್ ಪೂರ್ಣಗೊಳಿಸಲು ಅಗತ್ಯವಿರುವ ಮೊತ್ತ.
- **2**: ಭಾರತದ ರವೀಂದ್ರ ಜಡೇಜ ಅವರಿಗೆ ಎಲ್ಲ ಮಾದರಿಗಳು ಸೇರಿ 450 ವಿಕೆಟ್ ಪೂರ್ಣಗೊಳಿಸಲು ಬೇಕಾದ ವಿಕೆಟ್‌ಗಳು.
- **5**: ಟೆಸ್ಟ್ ಕ್ರಿಕೆಟ್‌ನಲ್ಲಿ ಆರ್.ಅಶ್ವಿನ್ ಅವರಿಗೆ ಹರಭಜನ್ ಸಿಂಗ್ (417 ವಿಕೆಟ್) ಅವರ ದಾಖಲೆ ಅಳಿಸಿಹಾಕಲು ಬೇಕಾದ ವಿಕೆಟ್‌ಗಳು.
- **100**: ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 15 ಸಾವಿರ ರನ್ ಪೂರ್ಣಗೊಳಿಸಲು ಭಾರತದ ರೋಹಿತ್ ಶರ್ಮಾ ಅವರಿಗೆ ಅಗತ್ಯವಿರುವ ರನ್‌ಗಳು.
- **1**: ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದ ಭಾರತದ ಎರಡನೇ ವೇಗಿ ಎನಿಸಿಕೊಳ್ಳಲು ಇಶಾಂತ್ ಶರ್ಮಾ ಗಳಿಸಬೇಕಿರುವ ವಿಕೆಟ್ ಸಂಖ್ಯೆ. ಜಹೀರ್ ಖಾನ್ ಹಾಗೂ ಇಶಾಂತ್ ಸದ್ಯ ತಲಾ 311 ವಿಕೆಟ್ ಗಳಿಸಿದ್ದಾರೆ.
- **44**: ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 9 ಸಾವಿರ ರನ್ ಪೂರೈಸಲು ಇಂಗ್ಲೆಂಡ್ ಜಾನಿ ಬೆಸ್ಟೊ ಗಳಿಸಬೇಕಾದ ರನ್‌ಗಳು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಜಯಿಸಿದ್ದ ನೀರಜ್ ಚೋಪ್ರಾ ಅವರು ಪುಣೆಯಲ್ಲಿರುವ ಶಿರಸಿ ಮೂಲದ ಅಥ್ಲೆಟಿಕ್ ಕೋಚ್ ಕಾಶೀನಾಥ ನಾಯ್ಕ ಮನೆಗೆ ಭೇಟಿ ನೀಡಿದ್ದರು. ಕಾಶೀನಾಥ ಅವರ ಪತ್ನಿ ಚೈತ್ರಾ ನಾಯ್ಕ್, ಮಕ್ಕಳಾದ ದಕ್ಷ್ ಮತ್ತು ಲಕ್ಷ್ ಇದ್ದಾರೆ

ಕಾಶೀನಾಥ ಮನೆಗೆ ನೀರಜ್

ಪ್ರಜಾವಾಣಿ ವಾರ್ತೆ

ಶಿರಸಿ/ಬೆಂಗಳೂರು: ಟೋಕಿಯೊ ಒಲಿಂಪಿಕ್ಸ್‌ನ ಜಾವೆಲಿನ್ ಥ್ರೋ ಚಿನ್ನದ ಪದಕ ವಿಜೇತ ನೀರಜ್ ಚೋಪ್ರಾ ಅವರು ಈ ಹಿಂದೆ ಕೆಲಕಾಲ ತಮಗೆ ತರಬೇತಿ ನೀಡಿದ್ದ ಶಿರಸಿ ಮೂಲದ ಕಾಶೀನಾಥ ನಾಯ್ಕ ಅವರ ಪುಣೆಯ ನಿವಾಸಕ್ಕೆ ಮಂಗಳವಾರ ಭೇಟಿ ನೀಡಿದರು.

ನೀರಜ್ ಅವರನ್ನು ಕಾಶೀನಾಥ ಪತ್ನಿ ಚೈತ್ರಾ ನಾಯ್ಕ ಆರತಿ ಬೆಳಗಿ ಬರಮಾಡಿಕೊಂಡರು. ಬಳಿಕ ಕೆಲ ಹೊತ್ತು ಕಾಶಿನಾಥ ಅವರ ಮಕ್ಕಳೊಂದಿಗೆ ಕಾಲ ಕಳೆದ ನೀರಜ್, ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಖುಷಿಯ ಕ್ಷಣಗಳನ್ನು ಹಾಗೂ ಅನುಭವಗಳನ್ನು ಹಂಚಿಕೊಂಡರು.

‘ಎರಡು ದಿನಗಳ ಹಿಂದೆ ಪುಣೆಗೆ ಬಂದಿದ್ದ ನೀರಜ್‌ರನ್ನು ಮನೆಗೆ ಬರುವಂತೆ ಆಹ್ವಾನಿಸಿದ್ದೆ. ಈ ಹಿಂದೆ ನಮ್ಮ ಮನೆಗೆ ಹಲವಾರು ಬಾರಿ ಬಂದಿದ್ದಾರೆ. ಈ ಬಾರಿಯ ಅವರ ಭೇಟಿಯಿಂದ ಖುಷಿಯಾಯಿತು‘ ಎಂದು ಕಾಶೀನಾಥ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು. ಪುಣೆಯ ಆರ್ಮಿ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ಕಾಶಿನಾಥ ಕೋಚ್ ಅಗಿದ್ದಾರೆ.

‘ನನ್ನ ದೊಡ್ಡ ಮಗ ನೀರಜ್ ಅಭಿಮಾನಿ. ಅವರಂತೆಯೇ ಕೇಶವಿನ್ಯಾಸ ಮಾಡಿಕೊಂಡಿದ್ದಾನೆ’ ಎಂದು ಕಾಶಿನಾಥ ಹೇಳಿದರು.

ಬಿಎಫ್‌ಸಿಗೆ ಭರ್ಜರಿ ಜಯ

ಮಾಲೆ, ಮಾಲ್ಡೀವ್ಸ್: ಸಂಘಟಿತ ಆಟವಾಡಿದ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡವು ಎಎಫ್‌ಸಿ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಮಂಗಳವಾರ ಭರ್ಜರಿ ಜಯ ಸಾಧಿಸಿತು. ಡಿ ಗುಂಪಿನ ಪಂದ್ಯದಲ್ಲಿ 6–2ರಿಂದ ಮಜಿಯಾ ಸ್ಪೋರ್ಟ್ಸ್ ಆ್ಯಂಡ್ ರಿಕ್ರಿಯೇಷನ್ಸ್ ಕ್ಲಬ್ ತಂಡವನ್ನು ಮಣಿಸಿತು.

ಈಗಾಗಲೇ ನಾಕೌಟ್ ಸ್ಪರ್ಧೆಯಿಂದ ಹೊರಬಿದ್ದಿರುವ ಬಿಎಫ್‌ಸಿಗೆ ಇದು ಔಪಚಾರಿಕ ಪಂದ್ಯವಾಗಿತ್ತು. ತಂಡದ ಪರ ಉದಾಂತ್ ಸಿಂಗ್ (6ನೇ ನಿಮಿಷ), ಕ್ಲೇಟನ್ ಸಿಲ್ವಾ (19ನೇ ನಿ.), ಲಿಯೊನ್ ಅಗಸ್ಟಿನ್ (36ನೇ ನಿ.), ಶಿವಶಕ್ತಿ ನಾರಾಯಣ್ (70ನೇ ನಿ.) ಹಾಗೂ ವಿದ್ಯಾಸಾಗರ್ ಸಿಂಗ್ (85, 90+2ನೇ ನಿಮಿಷ) ಗೋಲು ದಾಖಲಿಸಿದರು.

ಮಜಿಯಾ ಪರ ಹಮ್ಜಾ ಮೊಹಮ್ಮದ್ (67ನೇ ನಿ.) ಮತ್ತು ಅಸಾದುಲ್ಲಾ ಅಬ್ದುಲ್ಲಾ (82ನೇ ನಿ.) ಕಾಲ್ಚಳಕ ತೋರಿದರು.

ಫುಟ್‌ಬಾಲ್: ಒಲಿಂಪಿಯನ್ ಒ. ಚಂದ್ರಶೇಖರ್ ಇನ್ನಿಲ್ಲ

ಕೊಚ್ಚಿ (ಪಿಟಿಐ): ಒಲಿಂಪಿಯನ್ ಫುಟ್‌ಬಾಲ್ ಆಟಗಾರ ಒ. ಚಂದ್ರಶೇಖರ್ (85) ಮಂಗಳವಾರ ತಮ್ಮ ನಿವಾಸದಲ್ಲಿ ನಿಧನರಾದರು. 1962ರ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನ ಗೆದ್ದ ಭಾರತ ತಂಡದಲ್ಲಿ ಅವರು ಆಡಿದ್ದರು.

ಅವರು ಕೆಲವು ದಿನಗಳಿಂದ ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಅವರಿಗೆ ಮೂವರು ಮಕ್ಕಳು ಇದ್ದಾರೆ.



ಒ. ಚಂದ್ರಶೇಖರ್

ಡಿಫೆಂಡರ್ ಆಗಿ ಗಮನ ಸೆಳೆದಿದ್ದ ಅವರು, 1960ರ ರೋಮ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದ ಭಾರತ ತಂಡದಲ್ಲಿ ಆಡಿದ್ದರು.